# ಅಂತರಾಷ್ಟ್ರೀಯ ಸಂಬಂಧಗಳ ಮೂಲ ಪರಿಕಲ್ಪನೆಗಳು

ಮತ್ತು

# ತೌಲನಿಕ ಸರ್ಕಾರ ಹಾಗೂ ರಾಜಕೀಯ

## BASIC CONCEPTS OF INTERNATIONAL RELATIONS AND COMPARATIVE GOVERNMENT AND POLITICS

- ರಮೇಶ ಸಂಕರಡ್ಡಿ



MAHANTAPPA S. HADAPAD
Department of political science

# ಅಂತರ್‌ರಾಷ್ಟ್ರೀಯ ಸಂಬಂಧಗಳ ಮೂಲ ಪರಿಕಲ್ಪನೆಗಳು ಮತ್ತು ತೌಲನಿಕ ಸರ್ಕಾರ ಹಾಗೂ ರಾಜಕೀಯ

## BASIC CONCEPTS OF INTERNATIONAL RELATIONS AND COMPARATIVE GOVERNMENT AND POLITICS

2021/22 ನೇ ಸಾಲಿನಿಂದ ಜಾರಿಗೊಂಡ ರಾಷ್ಟ್ರೀಯ ಶಿಕ್ಷಣ ನೀತಿಯಡಿ ಐದನೇ ಸೆಮಿಸ್ಟರಿನ ರಾಜ್ಯಶಾಸ್ತ್ರದ ವಿದ್ಯಾರ್ಥಿಗಳಿಗೆ ನಿಗಧಿಪಡಿಸಲಾದ ಪಠ್ಯಕ್ರಮಾನುಸಾರ ಕರ್ನಾಟಕದ ಎಲ್ಲ ವಿಶ್ವ ವಿದ್ಯಾಲಯಗಳಿಗೆ ಅನ್ವಯವಾಗುವಂತೆ ರಚಿಸಲಾದ ಕೃತಿ

ಲೇಖಕರು
ರಮೇಶ ಸಂಕರಡ್ಡಿ
ಸಹಾಯಕ ಪ್ರಾಧ್ಯಾಪಕರು,
ರಾಜ್ಯಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಜ್ಞಾನಧಾರಾ ಕ್ಯಾಂಪಸ್, ಕುಮಾರೇಶ್ವರ ನಗರ, ಧಾರವಾಡ

ಪ್ರಕಾಶಕರು,
ವೈಭವ ಪಬ್ಲಿಕೇಷನ್ಸ್, ಗದಗ

# BASIC CONCEPTS OF INTERNATIONAL RELATIONS AND COMPARATIVE GOVERNMENT AND POLITICS

Author : **Ramesh Sankaraddi**
Asst. Professor,
Dept. of Political Science,
Govt. First Grade College,
Jnanadhara Campus,
Kumareshwar Nagar, Dharwad
M : 9916313624

Publisher : **Vaibhav Publications, Gadag**
6677/5B, 5th Cross,
Vidyanagar,
Gadag-582101

Rights : Author's

ISBN No. : 978-93-92187-62-9

Pages : 336

Impression : First 2023

Price : Rs. 250/-

Printed at : J. P. Prints, Gadag
9886708168

## ಲೇಖಕರ ನುಡಿ....

ತನ್ನ ಸುತ್ತಲಿರುವ ಇತರರೊಡನೆ ಸಂಬಂಧ ಬೆಳೆಸಿಕೊಳ್ಳುವುದು ಮತ್ತು ಹೋಲಿಕೆ ಮಾಡಿಕೊಳ್ಳುವುದು ಮಾನವನ ಸ್ವಾಭಾವಿಕ ಗುಣ. ಈ ಗುಣದ ನೆರವಿನಿಂದ ರಾಜಕೀಯ ಜೀವಿಯಾದ ಮಾನವನು ಬಹು ಹಿಂದೆಯೇ ಇತರ ರಾಜಕೀಯ ವ್ಯವಸ್ಥೆಗಳೊಡನೆ ತನ್ನ ರಾಜಕೀಯ ವ್ಯವಸ್ಥೆಯನ್ನು ಬೆಸೆಯಲು ಮತ್ತು ಹೋಲಿಕೆ ಮಾಡಲು ಮುಂದಾದ. ಫಲವಾಗಿ ದೇಶಗಳ ನಡುವಿನ ಸಂಬಂಧ ಹಾಗೂ ಹೋಲಿಕೆಯ ಅಧ್ಯಯನವು ಜನ್ಮತಾಳಿತು. ಮುಂದುವರಿದು, ಅಂತರ್‌ರಾಷ್ಟ್ರೀಯ ಸಂಬಂಧಗಳು ಮತ್ತು ತೌಲನಿಕ ಸರ್ಕಾರ ಹಾಗೂ ರಾಜಕೀಯವೆಂಬ ಅಧ್ಯಯನ ಶಾಖೆಗಳು ರಾಜ್ಯಶಾಸ್ತ್ರದಲ್ಲಿ ಕ್ರಮೇಣ ಬೆಳವಣಿಗೆ ಹೊಂದಿದವು. ವಿವಿಧ ದೇಶಗಳ ನಡುವಿನ ಸಂಬಂಧವನ್ನು ಅರಿತುಕೊಳ್ಳಲು ಅಂತರ್‌ರಾಷ್ಟ್ರೀಯ ಸಂಬಂಧಗಳು ಮತ್ತು ಜಾಗತಿಕ ರಾಜಕೀಯವನ್ನು ತೌಲನಿಕವಾಗಿ ಅರಿತುಕೊಳ್ಳಲು ತೌಲನಿಕ ಸರ್ಕಾರ ಹಾಗೂ ರಾಜಕೀಯವೆಂಬ ಸ್ವತಂತ್ರ ಅಧ್ಯಯನ ವಿಷಯಗಳು ಪ್ರಸ್ತುತ ಅಸ್ತಿತ್ವದಲ್ಲಿವೆ.. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯ ಪಠ್ಯಕ್ರಮದಡಿ ಬಿ.ಎ. ಐದನೇ ಸೆಮಿಸ್ಟರಿನ ವಿದ್ಯಾರ್ಥಿಗಳ ಅಧ್ಯಯನಕ್ಕೆ ರಾಜ್ಯಶಾಸ್ತ್ರದ ಪರಿಪೂರ್ಣ ತಿಳುವಳಿಕೆಗಾಗಿ ಅಂತರ್‌ರಾಷ್ಟ್ರೀಯ ಸಂಬಂಧಗಳ ಮೂಲ ಪರಿಕಲ್ಪನೆಗಳು ಮತ್ತು ತೌಲನಿಕ ಸರ್ಕಾರ ಹಾಗೂ ರಾಜಕೀಯ (International Relations Basic Concept and Comparative Government and Politics) ಎಂಬ ಶೀರ್ಷಿಕೆಯುಳ್ಳ ಪ್ರತ್ಯೇಕ ಪತ್ರಿಕೆಗಳನ್ನು ನಿಗಧಿಪಡಿಸಲಾಗಿದೆ.

ಪ್ರಾಚೀನ ಕಾಲದಲ್ಲಿಯೇ ರಾಷ್ಟ್ರಗಳ ನಡುವಿನ ಅನೌಪಚಾರಿಕ ಸಂಬಂಧಗಳನ್ನು ಗುರುತಿಸಬಹುದು. ಆಧುನಿಕ ಯುಗದಲ್ಲಿ ರಾಷ್ಟ್ರ ರಾಜ್ಯಗಳ ಉದಯದೊಂದಿಗೆ ಔಪಚಾರಿಕವಾಗಿ ಜಗತ್ತಿನ ರಾಷ್ಟ್ರಗಳ ನಡುವೆ ಸಂಬಂಧಗಳು ಬಲಗೊಂಡವು. ನಾನಾ ಕಾರಣಗಳಿಂದ ಕಳೆದ ಶತಮಾನದಲ್ಲಿ ಅಂತರ್‌ರಾಷ್ಟ್ರೀಯ ಸಂಬಂಧಗಳು ವಿಶಾಲ ಮತ್ತು ಸಂಕೀರ್ಣ ಸ್ವರೂಪ ತಾಳಿದವಲ್ಲದೇ ಅವುಗಳ ವೈಜ್ಞಾನಿಕ ಅಧ್ಯಯನ ಆರಂಭವಾಯಿತು. ಫಲವಾಗಿ ಅಂತರ್‌ರಾಷ್ಟ್ರೀಯ ಸಂಬಂಧಗಳು ಎಂಬ ಸ್ವತಂತ್ರ ಅಧ್ಯಯನ ವಿಷಯ ಜನಪ್ರಿಯಗೊಂಡಿತು. ಅಂತೆಯೇ ಪ್ರಾಚೀನ ಕಾಲದಿಂದಲೂ ರಾಜಕೀಯದ ಅಧ್ಯಯನದಲ್ಲಿ ತೌಲನಿಕ ರಾಜಕೀಯವು ಹಾಸುಹೊಕ್ಕಾಗಿತ್ತು. ಆರಂಭದಲ್ಲಿ ಸರ್ಕಾರಗಳ ಅಧ್ಯಯನಕ್ಕೆ ಮಾತ್ರ ಸೀಮಿತವಾಗಿದ್ದ ಹೋಲಿಕಾ ರಾಜಕೀಯವು ಕಾಲಾನುಕ್ರಮದಲ್ಲಿ ದೇಶಗಳ ನಡುವಿನ ಸಮಗ್ರ ರಾಜಕೀಯ

ವಿದ್ಯಮಾನಗಳ ತೌಲನಿಕ ಅಧ್ಯಯನಕ್ಕೆ ವ್ಯಾಪಿಸಿತು. ಎರಡನೇ ಮಹಾ ಯುದ್ಧದ ಬಳಿಕ ಹೆಚ್ಚು ಜನಪ್ರಿಯತೆ ಪಡೆದಿರುವ ತೌಲನಿಕ ಸರ್ಕಾರ ಮತ್ತು ರಾಜಕೀಯವು ಸ್ವತಂತ್ರ ಅಧ್ಯಯನ ವಿಷಯವಾಗಿ ಪ್ರಸ್ತುತ ಪರಿಗಣಿಸಲ್ಪಟ್ಟಿದೆ. ವಿದ್ಯಾರ್ಥಿಗಳು ದೇಶಗಳ ನಡುವಿನ ಸಂಬಂಧ ಮತ್ತು ದೇಶಗಳಲ್ಲಿನ ರಾಜಕೀಯ ಸಂಸ್ಥೆ ಅಥವಾ ವ್ಯವಸ್ಥೆಗಳನ್ನು ತೌಲನಿಕವಾಗಿ ಅಧ್ಯಯಿಸಿ ತಮ್ಮ ರಾಜಕೀಯ ವ್ಯವಸ್ಥೆಯನ್ನು ಮನವರಿಕೆ ಮಾಡಿಕೊಳ್ಳಲು ಪ್ರಸಕ್ತ ಕೃತಿಯು ನೆರವಾಗಲಿದೆ.

ಎರಡು ಮಹತ್ವಪೂರ್ಣ ಸ್ವತಂತ್ರ ಅಧ್ಯಯನ ವಿಷಯಗಳ ಶೀರ್ಷಿಕೆಯುಳ್ಳ ಪ್ರಸ್ತುತ ಕೃತಿಯನ್ನು ರಚಿಸುವುದು ನನಗೆ ಸವಾಲಿನ ಸಂಗತಿಯಾಗಿದ್ದು ಸಾಧ್ಯವಾದಷ್ಟು ಸರಳ ವಿವರಣೆ ಮತ್ತು ಸುಲಭ ಭಾಷೆಯ ನೆರವಿನಿಂದ ಕೃತಿ ರಚನೆಗೆ ಪ್ರಯತ್ನಿಸಿದ್ದೇನೆ. (ಅಂತರ್‌ರಾಷ್ಟ್ರೀಯ ಸಂಬಂಧಗಳ ಮೂಲ ಪರಿಕಲ್ಪನೆಗಳು ಮತ್ತು ತೌಲನಿಕ ಸರ್ಕಾರ ಹಾಗೂ ರಾಜಕೀಯ) ಎಂಬ ಈ ಪುಸ್ತಕದ ರಚನೆಗೆ ಆಂಗ್ಲ ಭಾಷೆಯ ವಿವಿಧ ಬರಹಗಾರರ ಕೃತಿಗಳು ಮತ್ತು ಸಂಶೋಧನಾ ಲೇಖನಗಳು ಸಹಕಾರಿಯಾಗಿದ್ದು ಅವುಗಳ ರಚನಾಕಾರರಿಗೆ ನಾನು ಧನ್ಯವಾದಗಳನ್ನು ಸಲ್ಲಿಸುತ್ತೇನೆ. ವಸ್ತು ನಿಷ್ಠತೆಗೆ ಸಾಧ್ಯತೆಯುಳ್ಳ ಮತ್ತು ಪಠ್ಯಕ್ರಮದ ಆಶಯವನ್ನು ಆಧರಿಸಿರುವ ಕೃತಿಯನ್ನು ವಿಷಯ ಪರಿಣತಿಗೆ ದಕ್ಕುವಂತೆ ರಚಿಸಲು ನಾನು ಪ್ರಯತ್ನಿಸಿದ್ದೇನೆ. ಅಂತಿಮ ಪದವಿಯ ರಾಜ್ಯಶಾಸ್ತ್ರ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೇ ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧಗೊಳ್ಳುತ್ತಿರುವ ವಿದ್ಯಾರ್ಥಿಗಳಿಗೂ ನೆರವಾಗುವಂತಹ ವಿಷಯವನ್ನುಳ್ಳ ಈ ಕೃತಿಯನ್ನು ತಮ್ಮ ಅಧ್ಯಯನಕ್ಕೆ ಸಮರ್ಪಿಸಲು ಸಂತೋಷಿಸುತ್ತಾ ತಮ್ಮ ಸೂಕ್ತ ಸಲಹೆ ಮತ್ತು ಅಭಿಪ್ರಾಯಗಳನ್ನು ಅಪೇಕ್ಷಿಸುತ್ತೇನೆ. ಈ ಕೃತಿಯ ರಚನೆಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಸರ್ವರಿಗೂ ನಮನಗಳನ್ನು ಸಲ್ಲಿಸುತ್ತೇನೆ.

**ರಮೇಶ ಸಂಕರಡ್ಡಿ.**
ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ
ಸ. ಪ್ರ. ದ ಕಾಲೇಜು, ಜ್ಞಾನ ಧಾರಾ ಕ್ಯಾಂಪಸ್
ಕುಮಾರೇಶ್ವರ ನಗರ, ಧಾರವಾಡ.



## ಪರಿವಿಡಿ [Content]:

ಬಿ. ಎ. ಐದನೇ ಸೆಮಿಸ್ಟರಿನ ರಾಜ್ಯಶಾಸ್ತ್ರ ವಿಷಯದ
**ಅಂತರ್‌ರಾಷ್ಟ್ರೀಯ ಸಂಬಂಧಗಳ ಮೂಲ ಪರಿಕಲ್ಪನೆಗಳು**
[International Relations-Basic Concepts]
ಎಂಬ ಶೀರ್ಷಿಕೆಯುಳ್ಳ ಡಿ. ಎಸ್. ಸಿ. ಸಿ. 09 ಪತ್ರಿಕೆಯ ಪಠ್ಯ ವಸ್ತು:

**ಅಧ್ಯಾಯ 1: ಅಂತರರಾಷ್ಟ್ರೀಯ ಸಂಬಂಧಗಳು ಮತ್ತು ರಾಜಕೀಯ [International Relations and Politics]:**

[A.] ಅಂತರರಾಷ್ಟ್ರೀಯ ಸಂಬಂಧಗಳ ಅರ್ಥ.
[B.] ಅಂತರರಾಷ್ಟ್ರೀಯ ಸಂಬಂಧಗಳ ಸ್ವರೂಪ.
[C.] ಅಂತರರಾಷ್ಟ್ರೀಯ ಸಂಬಂಧಗಳ ವ್ಯಾಪ್ತಿ.
ಮಾದರಿ ಪ್ರಶ್ನೆಗಳು.

**ಅಧ್ಯಾಯ 2: ಅಂತರ್‌ರಾಷ್ಟ್ರೀಯ ಸಂಬಂಧಗಳ ವಿಕಾಸ [Evolution of International Relations]:**

A.] ಪ್ರಾಚೀನ ಗ್ರೀಕ್ ನಗರ ರಾಜ್ಯಗಳ ಅವಧಿ.
B.] ರೋಮನ್ ಸಾಮ್ರಾಜ್ಯದ ಅವಧಿ.
C.] ಮಧ್ಯ ಯುಗದ ಅವಧಿ.
D.] ಮಧ್ಯ ಯುಗಾಂತ್ಯದ ಅವಧಿ.
E.] ಆಧುನಿಕ ರಾಷ್ಟ್ರ ರಾಜ್ಯಗಳ ವ್ಯವಸ್ಥೆಯ ಅವಧಿ.
ಮಾದರಿ ಪ್ರಶ್ನೆಗಳು.

**ಅಧ್ಯಾಯ 3: ಒಂದು ಶೈಕ್ಷಣಿಕ ಶಾಸ್ತ್ರವಾಗಿ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಭಿವೃದ್ಧಿ [Development of International Relations as an Academic Discipline]:**

[A.] ರಾಯಭಾರಿಕ ಇತಿಹಾಸದ ಹಂತ.
[B.] ಪ್ರಚಲಿತ ಘಟನೆಗಳ ಹಂತ.
[C. ಕಾನೂನಾತ್ಮಕ ಹಾಗೂ ಸಾಂಸ್ಥಿಕ ಹಂತ.
[D.] ಮಹಾ ಯುದ್ಧೋತ್ತರ ಹಂತ.
ಮಾದರಿ ಪ್ರಶ್ನೆಗಳು.

ಅಧ್ಯಾಯ 4: ವಿಶ್ವ ಯುದ್ಧಗಳು [World Wars]:
[I.] ಮೊದಲ ವಿಶ್ವ ಯುದ್ಧ:
[A.] ಮೊದಲ ವಿಶ್ವ ಯುದ್ಧಕ್ಕೆ ಕಾರಣಗಳು.
[B.] ಮೊದಲ ವಿಶ್ವ ಯುದ್ಧದ ಪರಿಣಾಮಗಳು.
[II.] ದ್ವಿತೀಯ ವಿಶ್ವ ಯುದ್ಧ:
[A.] ದ್ವಿತೀಯ ವಿಶ್ವ ಯುದ್ಧಕ್ಕೆ ಕಾರಣಗಳು.
[B.] ದ್ವಿತೀಯ ವಿಶ್ವ ಯುದ್ಧದ ಪರಿಣಾಮಗಳು.
[III.] ಜಾಗತಿಕ ರಾಜಕೀಯದ ಮೇಲೆ ವಿಶ್ವ ಸಮರಗಳ ಪರಿಣಾಮ.
ಮಾದರಿ ಪ್ರಶ್ನೆಗಳು.
ಅಧ್ಯಾಯ 5: ಶೀತಲ ಸಮರ [Cold War]:
[A.] ಶೀತಲ ಸಮರದ ಅರ್ಥ.
[B.] ಶೀತಲ ಸಮರದ ಉಗಮ.
[C.] ಶೀತಲ ಸಮರದ ಕಾರಣಗಳು.
[D.] ಶೀತಲ ಸಮರದ ಪರಿಣಾಮಗಳು.
[E. ಶೀತಲ ಸಮರದ ಅಂತ್ಯ.
F.] ಸೋವಿಯತ್ ಒಕ್ಕೂಟದ ವಿಘಟನೆ.
ಮಾದರಿ ಪ್ರಶ್ನೆಗಳು.
ಅಧ್ಯಾಯ 6: ರಾಷ್ಟ್ರೀಯ ಹಿತಾಸಕ್ತಿ [National Interest]:
[A.] ರಾಷ್ಟ್ರೀಯ ಹಿತಾಸಕ್ತಿಯ ಅರ್ಥ.
[B.] ರಾಷ್ಟ್ರೀಯ ಹಿತಾಸಕ್ತಿಯ ಮೂಲಾಂಶಗಳು.
[C.] ರಾಷ್ಟ್ರೀಯ ಹಿತಾಸಕ್ತಿಯ ಬಗೆಗಳು.
[D.] ರಾಷ್ಟ್ರೀಯ ಹಿತಾಸಕ್ತಿಯನ್ನು ಉತ್ತೇಜಿಸುವ ಸಾಧನಗಳು.
ಮಾದರಿ ಪ್ರಶ್ನೆಗಳು.
ಅಧ್ಯಾಯ 7: ರಾಷ್ಟ್ರೀಯ ಶಕ್ತಿ [National Power]:
[A.] ರಾಷ್ಟ್ರೀಯ ಶಕ್ತಿಯ ಅರ್ಥ.
[B.] ರಾಷ್ಟ್ರೀಯ ಶಕ್ತಿಯ ಸ್ವರೂಪ.
[C.] ರಾಷ್ಟ್ರೀಯ ಶಕ್ತಿಯ ರೂಪಗಳು.



[D.] ರಾಷ್ಟ್ರೀಯ ಶಕ್ತಿಯ ಮೂಲಾಂಶಗಳು.
[E.] ರಾಷ್ಟ್ರೀಯ ಶಕ್ತಿಯ ಮಿತಿಗಳು.
F.] ರಾಷ್ಟ್ರೀಯ ಶಕ್ತಿಯ ಮೌಲ್ಯ ಮಾಪನ.
ಮಾದರಿ ಪ್ರಶ್ನೆಗಳು.
ಅಧ್ಯಾಯ 8: ಶಕ್ತಿ ಸಮತೋಲನ [Balance of Power]:
[A.] ಶಕ್ತಿ ಸಮತೋಲನದ ಅರ್ಥ.
[B.] ಶಕ್ತಿ ಸಮತೋಲನದ ಸ್ವರೂಪ.
[C.] ಶಕ್ತಿ ಸಮತೋಲನ ಕಾಪಾಡುವ ವಿಧಾನಗಳು.
[D.] ಆಧುನಿಕ ಯುಗದಲ್ಲಿ ಶಕ್ತಿ ಸಮತೋಲನದ ಪ್ರಸ್ತುತತೆ.
ಮಾದರಿ ಪ್ರಶ್ನೆಗಳು.
ಅಧ್ಯಾಯ 9: ಸಾಮೂಹಿಕ ಭದ್ರತೆ ಮತ್ತು ರಾಯಭಾರತ್ವ [Collective Security and Diplomacy]:
[I.] ಸಾಮೂಹಿಕ ಭದ್ರತೆ:
[A.] ಸಾಮೂಹಿಕ ಭದ್ರತೆಯ ಅರ್ಥ.
[B.] ಸಾಮೂಹಿಕ ಭದ್ರತೆಯ ಸ್ವರೂಪ.
[C.] ಶಕ್ತಿ ಸಮತೋಲನ ಮತ್ತು ಸಾಮೂಹಿಕ ಭದ್ರತೆಯ ನಡುವಿನ ವ್ಯತ್ಯಾಸಗಳು.
[D.] ವಿಶ್ವ ಸಂಸ್ಥೆ ಮತ್ತು ಸಾಮೂಹಿಕ ಭದ್ರತಾ ಕ್ರಮಗಳು.
[II.] ರಾಷ್ಟ್ರೀಯ ಭದ್ರತೆಯ ಪರಿಕಲ್ಪನೆ:
[A.] ರಾಷ್ಟ್ರೀಯ ಭದ್ರತೆಯ ಅರ್ಥ.
[B.] ರಾಷ್ಟ್ರೀಯ ಭದ್ರತೆಯ ಸವಾಲುಗಳು.
[III.] ರಾಯಭಾರತ್ವ:
[A.] ರಾಯಭಾರತ್ವದ ಅರ್ಥ.
[B.] ರಾಯಭಾರತ್ವದ ಸ್ವರೂಪ.
[C.] ಹಳೆಯ ಮತ್ತು ಹೊಸ ರಾಯಭಾರತ್ವ.
ಮಾದರಿ ಪ್ರಶ್ನೆಗಳು.
ಅಧ್ಯಾಯ 10: ಶಸ್ತ್ರಾಸ್ತ್ರ ಸ್ಪರ್ಧೆ ಮತ್ತು ನಿಶ್ಶಸ್ತ್ರೀಕರಣ [Arms Race and Disarmament]:

[I.] ಶಸ್ತ್ರಾಸ್ತ್ರ ಸ್ಪರ್ಧೆ:

[A.] ಶಸ್ತ್ರಾಸ್ತ್ರ ಸ್ಪರ್ಧೆಯ ಅರ್ಥ.

[B. ಶಸ್ತ್ರಾಸ್ತ್ರ ಸ್ಪರ್ಧೆಯ ಪರಿಣಾಮಗಳು.

[II.] ಶಸ್ತ್ರ ನಿಯಂತ್ರಣ ಮತ್ತು ನಿಶಸ್ತ್ರೀಕರಣ:

[A.] ಶಸ್ತ್ರಾಸ್ತ್ರ ನಿಯಂತ್ರಣದ ಅರ್ಥ.

[B.] ನಿಶ್ಯಸ್ತ್ರೀಕರಣದ ಅರ್ಥ.

[C. ಶಸ್ತ್ರ ನಿಯಂತ್ರಣ ಹಾಗೂ ನಿಶ್ಯಸ್ತ್ರೀಕರಣಗಳ ನಡುವಿನ ವ್ಯತ್ಯಾಸಗಳು ಮತ್ತು ಸಂಬಂಧ.

[D.] ಪರಮಾಣು ನಿಶ್ಯಸ್ತ್ರೀಕರಣ ಪ್ರಯತ್ನಗಳ ಇತಿಹಾಸ.

ಮಾದರಿ ಪ್ರಶ್ನೆಗಳು.

ಅಧ್ಯಾಯ 11: ವಿವಾದಗಳ ಶಾಂತಿಯುತ ಇತ್ಯರ್ಥ ಮತ್ತು ಸಂಘರ್ಷ ಪರಿಹಾರ ಸಿದ್ಧಾಂತಗಳು [Peaceful Settlement of Disputes and Theories of Conflict Resolution]:

[I.] ವಿವಾದಗಳ ಶಾಂತಿಯುತ ಇತ್ಯರ್ಥ:

[A.] ಅರ್ಥ.

[B.] ವಿಧಾನಗಳು.

[II.] ಸಂಘರ್ಷ ಪರಿಹಾರದ ಸಿದ್ಧಾಂತಗಳು:

[A.] ಸಂಘರ್ಷದ ಅರ್ಥ.

[B.] ಸಂಘರ್ಷ ಪರಿಹಾರದ ಸಿದ್ಧಾಂತಗಳು.

ಮಾದರಿ ಪ್ರಶ್ನೆಗಳು.

ಅಧ್ಯಾಯ 12: ಜಾಗತಿಕ ವ್ಯವಸ್ಥೆ [World System]:

[A.] ಏಕ ಧ್ರುವೀಯ ವ್ಯವಸ್ಥೆ.

[B.] ದ್ವಿ ಧ್ರುವೀಯ ವ್ಯವಸ್ಥೆ.

[C.] ಬಹು ಧ್ರುವೀಯ ವ್ಯವಸ್ಥೆ.

ಮಾದರಿ ಪ್ರಶ್ನೆಗಳು.



## ಅಧ್ಯಾಯ 1:

# ಅಂತರರಾಷ್ಟ್ರೀಯ ಸಂಬಂಧಗಳು ಮತ್ತು ರಾಜಕೀಯ

## [INTERNATIONAL RELATIONS AND POLITICS]

**ಪ್ರಸ್ತಾವನೆ [Introduction]:** ಅರಿಸ್ಟಾಟಲ್ ಅಭಿಪ್ರಾಯಪಟ್ಟಂತೆ ಮಾನವ ಸ್ವಭಾವತಃ ಸಂಘ ಜೀವಿ. ಸಂಘ ಜೀವಿಯಾದ ಮಾನವ ಒಂಟಿಯಾಗಿ ಬಾಳಲು ಸಾಧ್ಯವಾಗಲಿಲ್ಲ. ತನ್ನ ದೈನಂದಿನ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲು ಆತ ಇತರ ಮಾನವರನ್ನು ಅನಿವಾರ್ಯವಾಗಿ ಅವಲಂಬಿಸಬೇಕಾಯಿದ್ದು ಸಹಜವಾಗಿ ಮಾನವರ ನಡುವೆ ಸಂಬಂಧಗಳು ಮೂಡಿದವು. ಇದರೊಡನೆ ಭಾವನಾ ಜೀವಿಯಾದ ಮಾನವ ತನ್ನ ಸುಖ ಮತ್ತು ದುಃಖಗಳನ್ನು ಹಂಚಿಕೊಳ್ಳಲು ಇತರ ಮಾನವರೊಡನೆ ನಿರಂತರವಾಗಿ ಸಂಬಂಧ ಮುಂದುವರಿಸಿದನು. ಹೀಗೆ ಸ್ವಾವಲಂಬಿಯಲ್ಲದ ಮಾನವರು ತಮ್ಮ ಜೀವನದ ಪರಿಪೂರ್ಣತೆಗೆ ಕಾಲಾನುಕ್ರಮದಲ್ಲಿ ಇತರರೊಡನೆ ವೈವಿಧ್ಯಮಯ ಸಂಬಂಧಗಳನ್ನು ಬೆಳೆಸಿಕೊಳ್ಳಬೇಕಾಯಿತು. ಫಲವಾಗಿ ಮಾನವ ಸಮಾಜವನ್ನು ಸಮಾಜಶಾಸ್ತ್ರಜ್ಞರು ಸಂಬಂಧಗಳ ಬಲೆ ಎಂದು ಪರಿಗಣಿಸುವಂತಾಯಿತು.

ಮಾನವನಂತೆ ಮಾನವ ನಿರ್ಮಿತ ರಾಜಕೀಯ ಸಂಸ್ಥೆಯಾಗಿರುವ ರಾಷ್ಟ್ರಗಳೂ ಒಂಟಿಯಾಗಿರಲು ಸಾಧ್ಯವಿಲ್ಲ. ವ್ಯಕ್ತಿಯಂತೆ ಪ್ರತಿ ರಾಷ್ಟ್ರವು ತನ್ನ ವಿವಿಧ ಬೇಡಿಕೆಗಳನ್ನು ಪೂರೈಸಿಕೊಳ್ಳಲು ಸ್ವಾವಲಂಬಿಯಾಗಿರದ ಕಾರಣಕ್ಕೆ ಸಹಜವಾಗಿ ಜಗತ್ತಿನ ಇತರ ರಾಷ್ಟ್ರಗಳೊಡನೆ ವಿವಿಧ ಸಂಬಂಧಗಳನ್ನು ಮೈಗೂಡಿಸಿಕೊಂಡಿರುತ್ತವೆ. ಗಮನಾರ್ಹ ಅಂಶವೇನೆಂದರೆ ಅಂತರರಾಷ್ಟ್ರೀಯ ಸಂಬಂಧಗಳು ಪರಸ್ಪರ ಮಾನವರ ನಡುವಿನ ಸಂಬಂಧಗಳಾಗಿರದೇ ಮಾನವ ಸಮುದಾಯವನ್ನು ಪ್ರತಿನಿಧಿಸುವ ರಾಷ್ಟ್ರವೆಂಬ ರಾಜಕೀಯ ಸಂಸ್ಥೆಗಳ ನಡುವಿನ ಸಂಬಂಧಗಳಾಗಿವೆ. ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನವು ಆರಂಭದಲ್ಲಿ ರಾಜ್ಯಶಾಸ್ತ್ರದ ಭಾಗವಾಗಿ ಜರುಗುತ್ತಿತ್ತು. ಹೀಗಾಗಿ ಅಂತರ್‌ರಾಷ್ಟ್ರೀಯ ಸಂಬಂಧಗಳನ್ನು ಅಂತರ್‌ರಾಷ್ಟ್ರೀಯ ರಾಜಕೀಯವೆಂಬ ಶೀರ್ಷಿಕೆಯಿಂದಲೂ ಗುರುತಿಸಲಾಗುತ್ತದೆ. ಕಾಲಾನುಕ್ರಮದಲ್ಲಿ ಸ್ವತಂತ್ರ ಅಧ್ಯಯನ ವಿಷಯವಾಗಿ ಬೆಳೆದು ಬಂದಿರುವ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನವು ನೂತನ ಸಮಾಜ ವಿಜ್ಞಾನವಾಗಿ ಪ್ರಸ್ತುತ ಪರಿಗಣಿಸಲ್ಪಟ್ಟಿದೆ. ಪ್ರಸಕ್ತ ಅಧ್ಯಾಯದಲ್ಲಿ ಸಮಾನಾರ್ಥದಲ್ಲಿ

ಬಳಸಲ್ಪಡುವ ಅಂತರರಾಷ್ಟ್ರೀಯ ರಾಜಕೀಯ ಅಥವಾ ಅಂತರ್‌ರಾಷ್ಟ್ರೀಯ ಸಂಬಂಧಗಳ ಅರ್ಥ, ಸ್ವರೂಪ ಮತ್ತು ವ್ಯಾಪ್ತಿಯನ್ನು ಕುರಿತು ಬೆಳಕು ಚೆಲ್ಲಲಾಗಿದೆ.

## [A.] ಅಂತರರಾಷ್ಟ್ರೀಯ ಸಂಬಂಧಗಳ ಅರ್ಥ

## [Meaning of International Relations]:

ಸರಳಾರ್ಥದಲ್ಲಿ ರಾಷ್ಟ್ರಗಳ ನಡುವಿನ ಸಂಬಂಧಗಳನ್ನು ಅಧ್ಯಯನ ಮಾಡುವ ಶಾಸ್ತ್ರವನ್ನು ಅಂತರ್‌ರಾಷ್ಟ್ರೀಯ ಸಂಬಂಧಗಳು ಎನ್ನಲಾಗುತ್ತದೆ. ವಿಶಾಲಾರ್ಥದಲ್ಲಿ ಅಂತರ್‌ರಾಷ್ಟ್ರೀಯ ವ್ಯವಸ್ಥೆಯಲ್ಲಿನ ರಾಷ್ಟ್ರೀಯ ಮತ್ತು ರಾಷ್ಟ್ರೇತರ ಪಾತ್ರಧಾರಿಗಳು ತಮ್ಮ ನಡುವಿನ ವೈವಿಧ್ಯಮಯ ಸಂಬಂಧಗಳ ನಿರ್ವಹಣೆಯಲ್ಲಿ ತೋರುವ ವರ್ತನೆಗಳನ್ನು ಅಧ್ಯಯನ ನಡೆಸುವುದೇ ಅಂತರ್‌ರಾಷ್ಟ್ರೀಯ ಸಂಬಂಧಗಳು ಎನಿಸಿಕೊಳ್ಳುತ್ತದೆ. ರಾಷ್ಟ್ರಗಳ ನಡುವಿನ ಸಂಬಂಧಗಳ ರಾಜಕೀಯ ಆಯಾಮವನ್ನು ಕುರಿತಂತೆ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನವು ಬೆಳಕು ಚೆಲ್ಲುತ್ತದೆ. ರಾಷ್ಟ್ರಗಳ ನಡುವಿನ ರಾಜಕೀಯ ಸಂಬಂಧಗಳು ಸಹಜವಾಗಿ ರಾಷ್ಟ್ರಗಳ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಅಂಶಗಳಿಂದ ಪ್ರಭಾವಕ್ಕೊಳಗಾಗಿ ನಿರ್ಧರಿಸಲ್ಪಡುತ್ತವೆ. ಹೀಗಾಗಿ ರಾಷ್ಟ್ರಗಳ ನಡುವಿನ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ, ತಾಂತ್ರಿಕ, ಸೈನಿಕ ಸಂಬಂಧಗಳ ಅಧ್ಯಯನವು ಅಂತರ್‌ರಾಷ್ಟ್ರೀಯ ಸಂಬಂಧ ಎಂಬುದಾಗಿ ಗುರುತಿಸಲ್ಪಟ್ಟಿದೆ. ಅಂತರ್‌ರಾಷ್ಟ್ರೀಯ ರಾಜಕೀಯವೆಂದೂ ಕರೆಯಲ್ಪಡುವ ಅಂತರ್‌ರಾಷ್ಟ್ರೀಯ ಸಂಬಂಧಗಳ ಅರ್ಥವನ್ನು ಕುರಿತಂತೆ ಚಿಂತಕರಲ್ಲಿ ಏಕಾಭಿಪ್ರಾಯವಿಲ್ಲ. ಈ ಪರಿಕಲ್ಪನೆಯ ಪರಿಪೂರ್ಣ ತಿಳುವಳಿಕೆಗೆ ನೆರವಾಗಬಲ್ಲ ಚಿಂತಕರ ವಿವಿಧ ವ್ಯಾಖ್ಯಾನಗಳನ್ನು ಈ ಕೆಳಗೆ ನೀಡಲಾಗಿದೆ.

**ಹಾರ್ಟ್‌ಮನ್** ಪ್ರಕಾರ ದೇಶಗಳು ಇತರ ದೇಶಗಳಿಗೆ ಪೂರಕವಾಗುವಂತೆ ತಮ್ಮ ರಾಷ್ಟ್ರೀಯ ಹಿತಾಸಕ್ತಿಗಳನ್ನು ಹೊಂದಾಣಿಕೆ ಮಾಡಿಕೊಳ್ಳುವ ಪ್ರಕ್ರಿಯೆಗಳ ಅಧ್ಯಯನ ಕ್ಷೇತ್ರವೇ ಅಂತರ್‌ರಾಷ್ಟ್ರೀಯ ಸಂಬಂಧಗಳು.

**ಹಾನ್ಸ್ ಮಾರ್ಗೆಂತೊ** ಪ್ರಕಾರ ರಾಷ್ಟ್ರಗಳ ನಡುವಿನ ಅಧಿಕಾರದ ಗಳಿಕೆ ಮತ್ತು ಬಳಕೆಗಾಗಿ ಜರುಗುವ ಹೋರಾಟಗಳ ಅಧ್ಯಯನವೇ ಅಂತರ್‌ರಾಷ್ಟ್ರೀಯ ಸಂಬಂಧಗಳು.

**ಬರ್ಟನ್** ಪ್ರಕಾರ ಒಂದಕ್ಕಿಂತ ಹೆಚ್ಚು ರಾಷ್ಟ್ರಗಳನ್ನು ಬಾಧಿಸುವ ಘಟನೆ ಅಥವಾ ಸನ್ನಿವೇಶಗಳ ಅಧ್ಯಯನವೇ ಅಂತರ್‌ರಾಷ್ಟ್ರೀಯ ಸಂಬಂಧಗಳು.

**ಪೆಡಲ್ ಫೋರ್ಡ್** ಮತ್ತು **ಲಿಂಕನ್** ಪ್ರಕಾರ ಬದಲಾಗುತ್ತಿರುವ ಅಧಿಕಾರ ಸಂಬಂಧದ ಮಾದರಿಗೊಳಪಟ್ಟ ರಾಷ್ಟ್ರಗಳ ನಡುವಿನ ನೀತಿಗಳನ್ನು ಒಳಗೊಂಡಿರುವ ಅಧ್ಯಯನವೇ ಅಂತರ್‌ರಾಷ್ಟ್ರೀಯ ಸಂಬಂಧಗಳು.



**ಸ್ಪ್ರೌಟ್ ಮತ್ತು ಸ್ಪ್ರೌಟ್** ಅಭಿಪ್ರಾಯದಲ್ಲಿ ಸ್ವತಂತ್ರ ರಾಜಕೀಯ ಸಮುದಾಯಗಳ ನಡುವಿನ ಕೆಲವು ವಿರೋಧಾತ್ಮಕ, ಪ್ರತಿಭಟನಾತ್ಮಕ ಹಾಗೂ ಸಂಘರ್ಷಾತ್ಮಕ ಆಯಾಮದ ಮೂಲಾಂಶಗಳ ಅಧ್ಯಯನವೇ ಅಂತರ್‌ರಾಷ್ಟ್ರೀಯ ಸಂಬಂಧಗಳು.

ಈ ಮೇಲೆ ಪ್ರಸ್ತಾಪಿಸಲಾಗಿರುವ ಚಿಂತಕರ ವ್ಯಾಖ್ಯಾನಗಳಲ್ಲಿ ಅಂತರ್‌ರಾಷ್ಟ್ರೀಯ ಸಂಬಂಧ ಕುರಿತಂತೆ ಏಕಾಭಿಪ್ರಾಯವಿಲ್ಲದಿರುವುದು ಕಂಡು ಬರುತ್ತದೆ. ಕೆಲವು ಚಿಂತಕರು ರಾಷ್ಟ್ರಗಳ ನಡುವಿನ ಅಧಿಕಾರಯುತ ಸಂಬಂಧಗಳಿಗೆ ಮಾತ್ರ ಅಂತರರಾಷ್ಟ್ರೀಯ ಸಂಬಂಧವನ್ನು ಸೀಮಿತಗೊಳಿಸಿದರೆ ಇತರರು ರಾಷ್ಟ್ರಗಳ ನಡುವಿನ ವೈವಿಧ್ಯಮಯ ಸಂಬಂಧಗಳಿಗೆ ಅದನ್ನು ಅನ್ವಯಿಸಲು ಪ್ರಯತ್ನಿಸಿದ್ದಾರೆ. ಅಂತರ್‌ರಾಷ್ಟ್ರೀಯ ರಾಜಕೀಯವು ರಾಷ್ಟ್ರಗಳ ನಡುವಿನ ಸಂಕೀರ್ಣ ಮತ್ತು ಚಲನಶೀಲ ಸಂಬಂಧಗಳ ವ್ಯವಸ್ಥೆಯಾಗಿದ್ದು ವಿಶಾಲ ವ್ಯಾಪ್ತಿಯನ್ನು ಹೊಂದಿರುವ ಪರಿಕಲ್ಪನೆ. ಹೀಗಾಗಿ ಸರ್ವ ಸಮ್ಮತವಾದ ಅರ್ಥವನ್ನು ಒದಗಿಸುವುದು ಕಷ್ಟಸಾಧ್ಯ. ಒಟ್ಟಾರೆ ಪ್ರತಿಯೊಂದು ರಾಷ್ಟ್ರವು ತನ್ನ ರಾಷ್ಟ್ರೀಯ ಹಿತಾಸಕ್ತಿ ಸಾಧನೆಯ ಗುರಿಯೊಡನೆ ಅನ್ಯ ರಾಷ್ಟ್ರಗಳೊಡನೆ ಹೊಂದಿರುವ ಸಂಬಂಧಗಳನ್ನು ಅಭ್ಯಸಿಸುವುದನ್ನು ಅಂತರ್‌ರಾಷ್ಟ್ರೀಯ ಸಂಬಂಧಗಳು ಪ್ರತಿನಿಧಿಸುತ್ತವೆ.

ಆಸಕ್ತಿದಾಯಕ ಅಂಶವೇನೆಂದರೆ, ಅಂತರ್‌ರಾಷ್ಟ್ರೀಯ ಸಂಬಂಧಗಳು ಎಂಬ ಪದಕ್ಕೆ ಸಮಾನಾಂತರವಾಗಿ ಅಂತರ್‌ರಾಷ್ಟ್ರೀಯ ರಾಜಕೀಯ, ಅಂತರ್‌ರಾಷ್ಟ್ರೀಯ ವ್ಯವಹಾರಗಳು, ಜಾಗತಿಕ ರಾಜಕೀಯ, ಜಾಗತಿಕ ವ್ಯವಹಾರಗಳು, ವಿದೇಶಿ ವ್ಯವಹಾರಗಳು ಎಂಬ ಇತ್ಯಾದಿ ಪದಗಳನ್ನು ಬಳಸಲಾಗುತ್ತದೆ. ಆದರೆ, ಅಂತರ್‌ರಾಷ್ಟ್ರೀಯ ಸಂಬಂಧಗಳಿಗೆ ಸಮಾನಾಂತರವಾಗಿ ಅಂತರ್‌ರಾಷ್ಟ್ರೀಯ ರಾಜಕೀಯವೆಂಬ ಪದದ ಬಳಕೆ ಹೆಚ್ಚು ಜನಪ್ರಿಯವಾಗಿದೆ. ಅಂತರ್‌ರಾಷ್ಟ್ರೀಯ ರಾಜಕೀಯವು ಅಂತರ್‌ರಾಷ್ಟ್ರೀಯ ಸಂಬಂಧಗಳ ಅವಿಭಾಜ್ಯ ಅಂಗವಾದ್ದರಿಂದ ಹಾನ್ಸ್ ಮಾರ್ಗೆಂತೊ ಮತ್ತು ಕೆನೆತ್ ಥಾಮ್ಸನ್ ಅವೆರಡನ್ನೂ ಪರ್ಯಾಯವಾಗಿರುವ ಪದಗಳೆಂದು ಪ್ರತಿಪಾದಿಸಿ ಬಳಸಿರುವರು. ಬಹುತೇಕ ಚಿಂತಕರು ಅಂತರ್‌ರಾಷ್ಟ್ರೀಯ ರಾಜಕೀಯದ ಬದಲು ಅಂತರ್‌ರಾಷ್ಟ್ರೀಯ ಸಂಬಂಧಗಳು ಎಂಬ ಪದವನ್ನೇ ಬಳಸಲು ಮುಂದಾಗಿರುವುದು ಗಮನಾರ್ಹ. ಅವರ ಈ ನಿಲುವಿಗೆ ಅಂತರ್‌ರಾಷ್ಟ್ರೀಯ ರಾಜಕೀಯ ಮತ್ತು ಸಂಬಂಧಗಳ ನಡುವಿನ ಕೆಳಗಿನ ವ್ಯತ್ಯಾಸಗಳು ಪ್ರಮುಖ ಕಾರಣಗಳಾಗಿವೆ.

1. ಅಂತರ್‌ರಾಷ್ಟ್ರೀಯ ರಾಜಕೀಯವು ರಾಷ್ಟ್ರಗಳ ನಡುವಿನ ಸಂಬಂಧಗಳ ರಾಜಕೀಯ ಆಯಾಮವನ್ನು ಮಾತ್ರ ಪ್ರತಿನಿಧಿಸುತ್ತದೆ. ಆದರೆ, ಅಂತರ್‌ರಾಷ್ಟ್ರೀಯ ಸಂಬಂಧಗಳು ರಾಷ್ಟ್ರಗಳ ನಡುವಿನ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸಂಬಂಧಗಳೊಡನೆ ವ್ಯಾಪಾರ, ಶಿಕ್ಷಣ, ಪ್ರವಾಸ, ತಂತ್ರಜ್ಞಾನಗಳಂತಹ ಕ್ಷೇತ್ರಗಳ ಖಾಸಗಿ ಸಂಬಂಧಗಳನ್ನೂ ಬೆಂಬಲಿಸುತ್ತದೆ.

2. ಅಂತರ್‌ರಾಷ್ಟ್ರೀಯ ರಾಜಕೀಯವು ಸೀಮಿತ ವ್ಯಾಪ್ತಿಯನ್ನು ಪ್ರತಿನಿಧಿಸುತ್ತದೆ. ಆದರೆ, ಅಂತರ್‌ರಾಷ್ಟ್ರೀಯ ಸಂಬಂಧಗಳು ವಿಶಾಲ ವ್ಯಾಪ್ತಿಯನ್ನು ಮೈಗೂಡಿಸಿಕೊಂಡಿದೆ.
3. ಅಂತರ್‌ರಾಷ್ಟ್ರೀಯ ರಾಜಕೀಯದ ಅಧ್ಯಯನವು ವಿಶ್ಲೇಷಣಾತ್ಮಕ ವಿಧಾನವನ್ನು ಅವಲಂಬಿಸಿದೆ. ಆದರೆ, ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನವು ವಿವರಣಾತ್ಮಕ ವಿಧಾನವನ್ನು ಹೆಚ್ಚು ಆಧರಿಸಿದೆ.

## [B.] ಅಂತರ್‌ರಾಷ್ಟ್ರೀಯ ಸಂಬಂಧಗಳ ಸ್ವರೂಪ [Nature of International Relations]:

ಆರಂಭದಲ್ಲಿ ರಾಷ್ಟ್ರಗಳ ನಡುವಿನ ಸಂಬಂಧ ತೀರಾ ಸೀಮಿತವಾಗಿತ್ತು. ಮಾನವರ ಚಟುವಟಿಕೆಗಳಲ್ಲಿ ಬದಲಾವಣೆಯಾದಂತೆ ಕಾಲಾನುಕ್ರಮದಲ್ಲಿ ರಾಷ್ಟ್ರಗಳ ನಡುವಿನ ಸಂಬಂಧಗಳಲ್ಲಿಯೂ ಬದಲಾವಣೆಗಳು ಕಂಡು ಬರತೊಡಗಿದವು. ಇದರೊಡನೆ ಆಧುನಿಕ ಯುಗದಲ್ಲಿನ ರಾಷ್ಟ್ರ ರಾಜ್ಯಗಳ ಉದಯ, ತಾಂತ್ರಿಕ ಬೆಳವಣಿಗೆ, ಅಣ್ವಸ್ತ್ರಗಳ ಸಂಶೋಧನೆ, ರಾಷ್ಟ್ರಗಳ ಬಹು ಧ್ರುವೀಕರಣ, ರಾಷ್ಟ್ರೇತರ ಪಾತ್ರಧಾರಿಗಳ ಪ್ರಭಾವ, ಜಾಗತಿಕ ಸವಾಲುಗಳಿಂದ ಅಂತರ್‌ರಾಷ್ಟ್ರೀಯ ಸಂಬಂಧಗಳು ಬದಲಾವಣೆಗೊಳ್ಳುತ್ತಾ ಬಂದಿವೆ. ಚಲನಶೀಲ ಗುಣವುಳ್ಳ ಅಂತರ್‌ರಾಷ್ಟ್ರೀಯ ಸಂಬಂಧಗಳ ಸ್ವರೂಪವನ್ನು ಕಂಡುಕೊಳ್ಳುವುದು ಅತ್ಯಂತ ಸವಾಲಿನ ಸಂಗತಿ. ಆದ್ದಾಗ್ಯೂ ಅಂತರ್‌ರಾಷ್ಟ್ರೀಯ ಸಂಬಂಧಗಳ ಈ ಕೆಳಗಿನ ಪ್ರಮುಖ ಲಕ್ಷಣಗಳ ಬೆಳಕಿನಲ್ಲಿ ಅದರ ಸ್ವರೂಪವನ್ನು ಮನವರಿಕೆ ಮಾಡಿಕೊಳ್ಳಲು ಪ್ರಯತ್ನಿಸೋಣ.

1. **ಚಲನಶೀಲ ಜಾಗತಿಕ ರಾಜಕೀಯದ ಅಧ್ಯಯನ:** ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನದ ಕೇಂದ್ರಬಿಂದುವಾದ ರಾಷ್ಟ್ರಗಳ ನಡುವಿನ ಸಂಬಂಧಗಳು ಸ್ಥಿರವಾಗಿರದೇ ಚಲನಶೀಲ ಗುಣವನ್ನು ಹೊಂದಿರುತ್ತವೆ. ನಿರ್ದಿಷ್ಟ ರಾಷ್ಟ್ರಗಳ ಸಂಬಂಧವು ಕಾರಣಾಂತರದಿಂದ ಸಂಘರ್ಷದ ಬದಲು ಶಾಂತಿಯುತ ಅಥವಾ ಶಾಂತಿಯ ಬದಲು ಸಂಘರ್ಷಯುತ ಸಂಬಂಧಗಳಾಗಿ ಪರಿವರ್ತನೆಗೊಳ್ಳುತ್ತಿರುತ್ತವೆ. ಇದರೊಡನೆ ಆರಂಭದಲ್ಲಿನ ರಾಷ್ಟ್ರೀಯ ಪಾತ್ರಧಾರಿಗಳೊಡನೆ ಇತ್ತೀಚೆಗೆ ವೈವಿಧ್ಯಮಯ ರಾಷ್ಟ್ರೇತರ ಪಾತ್ರಧಾರಿಗಳು ರಾಷ್ಟ್ರಗಳ ನಡುವಿನ ಸಂಬಂಧವನ್ನು ಪ್ರಭಾವಿಸುತ್ತಿವೆ. ಹೀಗಾಗಿ ಅಂತರ್ ರಾಷ್ಟ್ರೀಯ ಸಂಬಂಧಗಳ ಅಧ್ಯಯನವು ಚಲನಶೀಲ ಸ್ವರೂಪವನ್ನು ಮೈಗೂಡಿಸಿಕೊಂಡಿದೆ.

2. **ಬಹುಶಾಸ್ತ್ರೀಯ ಅಧ್ಯಯನಕ್ಕೆ ಆಸ್ಪದ:** ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನವು ರಾಷ್ಟ್ರಗಳ ನಡುವಿನ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಸಂಬಂಧಗಳನ್ನು ಪ್ರತಿನಿಧಿಸುತ್ತದೆ. ಹೀಗಾಗಿ ಯುನೆಸ್ಕೊ ಸಂಸ್ಥೆಯು 1998 ರ ತನ್ನ ವರದಿಯಲ್ಲಿ ಅಂತರ್‌ರಾಷ್ಟ್ರೀಯ ಸಂಬಂಧಗಳನ್ನು ರಾಷ್ಟ್ರಗಳ ನಡುವಿನ ವೈವಿಧ್ಯಮಯ



ಸಂಬಂಧಗಳನ್ನು ರಾಜಕೀಯವಾಗಿ ಅಭ್ಯಸಿಸುವ ವಿಷಯವೆಂದು ಪ್ರತಿಪಾದಿಸಿತ್ತು. ಈ ಹಿನ್ನೆಲೆಯಲ್ಲಿ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನಕಾರರು ರಾಷ್ಟ್ರಗಳ ನಡುವಿನ ಸಂಬಂಧಗಳನ್ನು ಸಮರ್ಪಕವಾಗಿ ಅಭ್ಯಸಿಸಲು ಇತಿಹಾಸ, ಸಮಾಜಶಾಸ್ತ್ರ, ಭೂಗೋಳಶಾಸ್ತ್ರ, ಅರ್ಥಶಾಸ್ತ್ರದಂತಹ ಇತರ ಶಾಸ್ತ್ರಗಳ ತಿಳುವಳಿಕೆ ಹೊಂದಿರಬೇಕಾದದ್ದು ಅಗತ್ಯವೆನಿಸುತ್ತದೆ. ಈ ಹಿನ್ನೆಲೆಯಲ್ಲಿ ಅಂತರ್‌ರಾಷ್ಟ್ರೀಯ ಸಂಬಂಧಗಳು ಎಂಬ ವಿಷಯವು ಬಹುಶಾಸ್ತ್ರೀಯ ಸ್ವರೂಪವುಳ್ಳ ವಿಷಯವೆಂಬುದು ಸ್ಪಷ್ಟವಾಗುತ್ತದೆ.

3. **ರಾಷ್ಟ್ರಗಳ ಹಿತಾಸಕ್ತಿ ಮತ್ತು ಶಕ್ತಿಗೆ ಮಹತ್ವ:** ತನ್ನ ರಾಷ್ಟ್ರೀಯ ಹಿತಾಸಕ್ತಿಯನ್ನು ಪೂರೈಸಿಕೊಳ್ಳುವುದು ಪ್ರತಿಯೊಂದು ದೇಶದ ಗುರಿಯಾಗಿರುತ್ತದೆ. ಹಿತಾಸಕ್ತಿಗಳ ಈಡೇರಿಕೆಗೆ ತನ್ನ ಶಕ್ತಿಯನ್ನು ಆಯಾ ರಾಷ್ಟ್ರಗಳು ಅಂತರ್‌ರಾಷ್ಟ್ರೀಯ ಸಂಬಂಧಗಳ ವೇಳೆಯಲ್ಲಿ ಬಳಸಿಕೊಳ್ಳುತ್ತವೆ. ಆದ್ದರಿಂದ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನವು ರಾಷ್ಟ್ರಗಳ ಹಿತಾಸಕ್ತಿ ಮತ್ತು ಶಕ್ತಿಗೆ ಅಧಿಕ ಪ್ರಾಶಸ್ತ್ಯ ನೀಡುವ ವಿಷಯವಾಗಿ ಪರಿಗಣಿಸಲ್ಪಟ್ಟಿದೆ.

4. **ಜಾಗತಿಕ ಸವಾಲುಗಳಿಗೆ ಆದ್ಯತೆ:** ಅಂತರ್‌ರಾಷ್ಟ್ರೀಯ ಸಂಬಂಧಗಳು ರಾಷ್ಟ್ರೀಯ ಸವಾಲುಗಳಿಗಿಂತ ಜಾಗತಿಕ ಸವಾಲುಗಳಿಗೆ ಮಹತ್ವ ನೀಡುತ್ತವೆ. ತಮ್ಮನ್ನು ಬಾಧಿಸುವ ಸಮಾನ ಸವಾಲುಗಳನ್ನು ರಾಷ್ಟ್ರಗಳ ನಡುವಿನ ವಿವಿಧ ಸಂಬಂಧಗಳು ಆಧರಿಸಿರುತ್ತವೆ. ಆದ್ದರಿಂದಲೇ ಗೋಲ್ಡ್‌ಸ್ಟೈನ್ ಮತ್ತು ಪೆವ್‌ಹೌಸ್ ತಮ್ಮ ಅಂತರ್‌ರಾಷ್ಟ್ರೀಯ ಸಂಬಂಧಗಳು ಎಂಬ ಕೃತಿಯಲ್ಲಿ ರಾಷ್ಟ್ರೀಯ ಹಿತಾಸಕ್ತಿ ಮತ್ತು ಜಾಗತಿಕ ಸವಾಲುಗಳ ನಡುವೆ ಸಮತೋಲನ ತರುವುದೇ ಅಂತರ್‌ರಾಷ್ಟ್ರೀಯ ಸಂಬಂಧಗಳ ಉದ್ದೇಶವೆಂದು ಅಭಿಪ್ರಾಯಪಟ್ಟಿದ್ದಾರೆ. ಉದಾ: ಜಾಗತಿಕ ಸವಾಲಾಗಿರುವ ಭಯೋತ್ಪಾದನೆಯನ್ನು ನಿರ್ಮೂಲನೆಗೊಳಿಸಲು ರಾಷ್ಟ್ರಗಳು ಸಮ್ಮತಿಸಿದರೂ ತಮ್ಮ ಹಿತಾಸಕ್ತಿಗಾಗಿ ಭಯೋತ್ಪಾದನೆಯನ್ನು ಬೆಂಬಲಿಸಲು ಮುಂದಾಗುವ ನಡುವೆ ಸಮತೋಲನ ಸಾಧಿಸಲು ಅಂತರ್‌ರಾಷ್ಟ್ರೀಯ ಸಂಬಂಧಗಳು ನೆರವಾಗುವುದು.

5. **ವಿಶ್ಲೇಷಣಾತ್ಮಕ ಮತ್ತು ಪ್ರಾಯೋಗಿಕ ವಿಧಾನಗಳಿಗೆ ಒಲವು:** ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನವು ಹಲವಾರು ಸಿದ್ಧಾಂತಗಳಿಂದ ಕೂಡಿರುವ ಅಧ್ಯಯನ ವಿಷಯವೆನಿಸಿದೆ. ಈ ಪೈಕಿ ಆದರ್ಶವಾದ ಮತ್ತು ನವ ಉದಾರವಾದ ಸಿದ್ಧಾಂತಗಳು ಅಂತರ್‌ರಾಷ್ಟ್ರೀಯ ಸಂಬಂಧಗಳನ್ನು ಕುರಿತಾದ ವಿಶ್ಲೇಷಣಾತ್ಮಕ ಸಿದ್ಧಾಂತಗಳೆನಿಸಿದರೆ ವಾಸ್ತವಿಕ ಮತ್ತು ನವ ವಾಸ್ತವಿಕ ಸಿದ್ಧಾಂತಗಳು ಪ್ರಾಯೋಗಿಕ ವಿಧಾನವನ್ನು ಆಧರಿಸಿವೆ.

ಈ ಮೇಲೆ ಪ್ರಸ್ತಾಪಿಸಲಾದ ಅಂತರ್‌ರಾಷ್ಟ್ರೀಯ ಸಂಬಂಧಗಳ ಲಕ್ಷಣಗಳ ನೆರವಿನಿಂದ ಅದರ ಸ್ವರೂಪವನ್ನು ಸೂಚ್ಯವಾಗಿ ಮನವರಿಕೆ ಮಾಡಿಕೊಳ್ಳಬಹುದಾಗಿದೆ. ರಾಷ್ಟ್ರಗಳ ನಡುವೆ ಅಧಿಕಾರಕ್ಕಾಗಿ ಜರುಗುವ ನಿರಂತರ ಹೋರಾಟವೇ ಅಂತರ್‌ರಾಷ್ಟ್ರೀಯ

ಸಂಬಂಧಗಳ ಕಿರುಗಾಗಿದ್ದು ಅದರ ಸ್ವರೂಪ ದಿನದಿಂದ ದಿನಕ್ಕೆ ಬದಲಾಗುತ್ತಾ ಬಂದಿದೆ. ಹೀಗಾಗಿ ಅಂತರ್‌ರಾಷ್ಟ್ರೀಯ ಸಂಬಂಧಗಳ ವಿಷಯದ ಸ್ಪಷ್ಟ ಸ್ವರೂಪವನ್ನು ಮನವರಿಕೆ ಮಾಡಿಕೊಳ್ಳುವುದು ಕಷ್ಟಕರ ವಿಷಯವೆನಿಸಿದೆ.

## [C.] ಅಂತರ್‌ರಾಷ್ಟ್ರೀಯ ಸಂಬಂಧಗಳ ವ್ಯಾಪ್ತಿ

## [Scope of International Relations]:

ವ್ಯಾಪ್ತಿ ಎಂದರೆ ಪದಶಃ ಗಡಿ, ಸೀಮೆ, ಎಲ್ಲೆ ಎಂದಾಗುತ್ತದೆ. ಒಂದು ವಿಷಯದ ಅಧ್ಯಯನವು ಒಳಗೊಂಡಿರುವ ವಿಷಯ ವಸ್ತುವನ್ನು ಸೂಚಿಸಲು ವ್ಯಾಪ್ತಿ ಎಂಬ ಪದವನ್ನು ಬಳಸಲಾಗುತ್ತದೆ. ನಿರ್ದಿಷ್ಟ ವಿಷಯವೊಂದರ ಜ್ಞಾನದ ಗಡಿಯನ್ನು ಆ ವಿಷಯದ ವ್ಯಾಪ್ತಿಯು ನಿರ್ಧರಿಸುತ್ತದೆ. ಹೊಸದಾಗಿ ಇತ್ತೀಚೆಗೆ ಸಮಾಜ ವಿಜ್ಞಾನಗಳ ಕುಟುಂಬವನ್ನು ಸೇರಿರುವ ಅಂತರ್‌ರಾಷ್ಟ್ರೀಯ ಸಂಬಂಧಗಳು ಎಂಬ ವಿಷಯವು ತನ್ನದೇಯಾದ ಅಧ್ಯಯನ ವ್ಯಾಪ್ತಿಯನ್ನು ಹೊಂದಿದೆ. ಬೆಳವಣಿಗೆ ಹೊಂದುತ್ತಿರುವ ವಿಷಯವಾದ್ದರಿಂದ ಅಂತರ್‌ರಾಷ್ಟ್ರೀಯ ಸಂಬಂಧಗಳ ವ್ಯಾಪ್ತಿಯು ಚಲನಶೀಲವಾಗಿದ್ದು ಸ್ಥಿರವಾದ ಅಧ್ಯಯನ ವ್ಯಾಪ್ತಿಯನ್ನು ಹೊಂದಲು ಸಾಧ್ಯವಾಗಿಲ್ಲ. 1954 ರಲ್ಲಿ ಯುನೆಸ್ಕೋ ಸಂಸ್ಥೆ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನವನ್ನು ಸ್ವತಂತ್ರ ಅಧ್ಯಯನ ವಿಷಯವನ್ನಾಗಿ ಪರಿಗಣಿಸಿದ ಬಳಿಕ ಅನೇಕ ಚಿಂತಕರು ಇದರ ವ್ಯಾಪ್ತಿಯನ್ನು ಕುರಿತಂತೆ ಭಿನ್ನ ವಿಚಾರಗಳನ್ನು ಪ್ರತಿಪಾದಿಸಿದರು. ಉದಾ: ವಿನ್ಸೆಂಟ್ ಬೇಕರ್ ಏಳು ಕ್ಷೇತ್ರಗಳನ್ನು ಮತ್ತು ಎಫ್. ಎಸ್. ಡನ್ನ್ ಐದು ಕ್ಷೇತ್ರಗಳನ್ನು ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನ ವ್ಯಾಪ್ತಿ ಒಳಗೊಂಡಿದೆ ಎಂಬುದಾಗಿ ಪ್ರತಿಪಾದಿಸಿದುದು. ಕಾಲಾನುಕ್ರಮದಲ್ಲಿ ಬಹುಶಾಸ್ತ್ರೀಯ ಸ್ವರೂಪವನ್ನು ಮೈಗೂಡಿಸಿಕೊಂಡು ಬೆಳವಣಿಗೆ ಹೊಂದುತ್ತಿರುವ ಅಂತರ್‌ರಾಷ್ಟ್ರೀಯ ಸಂಬಂಧಗಳು ಎಂಬ ಅಧ್ಯಯನ ವಿಷಯವು ಪ್ರಸ್ತುತ ತನ್ನ ವ್ಯಾಪ್ತಿಯಲ್ಲಿ ಈ ಕೆಳಗಿನ ಅಂಶಗಳ ಅಧ್ಯಯನವನ್ನು ಹೊಂದಿದೆ.

**1. ರಾಷ್ಟ್ರ ರಾಜ್ಯಗಳ ವ್ಯವಸ್ಥೆ:** ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಜಗತ್ತಿನ ರಾಷ್ಟ್ರ ರಾಜ್ಯಗಳೇ ಪ್ರಧಾನ ಪಾತ್ರಧಾರಿಗಳು. ಜಗತ್ತಿನ ಪ್ರತಿ ರಾಷ್ಟ್ರ ರಾಜ್ಯವು ಭಿನ್ನ ಭೌಗೋಳಿಕತೆ, ಜನಸಂಖ್ಯೆ, ಸಂಪನ್ಮೂಲಗಳು, ನಾಯಕತ್ವ ಹೊಂದಿದ್ದು ತಮ್ಮ ಅನುಕೂಲಕ್ಕಾಗಿ ಅವುಗಳ ನೆರವಿನಿಂದ ಇತರ ರಾಷ್ಟ್ರ ರಾಜ್ಯಗಳೊಡನೆ ಸಂಬಂಧವೇರ್ಪಡಿಸಿಕೊಳ್ಳಲು ಮುಂದಾಗುತ್ತವೆ. ಫಲವಾಗಿ ರಾಷ್ಟ್ರ ರಾಜ್ಯಗಳ ನಡುವೆ ದ್ವಿಪಕ್ಷೀಯ ಅಥವಾ ಬಹುಪಕ್ಷೀಯ ಸಂಬಂಧಗಳು ರೂಪುಗೊಳ್ಳುತ್ತವೆ. ಇಂತಹ ರಾಷ್ಟ್ರ ರಾಜ್ಯಗಳ ನಡುವಿನ ಸಂಬಂಧಗಳ ಜಾಲವು ಸಹಜವಾಗಿ ಅಂತರರಾಷ್ಟ್ರೀಯ ರಾಜಕೀಯ ಅಧ್ಯಯನದ ವ್ಯಾಪ್ತಿಗೊಳಪಡುತ್ತವೆ.



**2. ರಾಷ್ಟ್ರೀಯ ಹಿತಾಸಕ್ತಿಗಳು:** ವ್ಯಕ್ತಿಯಂತೆ ಜಗತ್ತಿನ ಪ್ರತಿಯೊಂದು ರಾಷ್ಟ್ರ ತನ್ನದೇಯಾದ ಗುರಿಗಳನ್ನು ಮೈಗೂಡಿಸಿಕೊಂಡಿರುತ್ತವೆ. ರಾಷ್ಟ್ರಗಳ ಗುರಿಗಳ ಸಾಧನೆಯಲ್ಲಿ ಸಹಜವಾಗಿ ಅವುಗಳ ಹಿತಾಸಕ್ತಿ ಕಂಡು ಬರುತ್ತದೆ. ತನ್ನ ಆರ್ಥಿಕ, ಸೈನಿಕ, ಸಾಂಸ್ಕೃತಿಕ, ಸೈದ್ಧಾಂತಿಕ ಮುಂತಾದ ಹಿತಾಸಕ್ತಿಗಳ ರಕ್ಷಣೆಗೆ ರಾಷ್ಟ್ರಗಳು ಇತರ ರಾಷ್ಟ್ರಗಳೊಡನೆ ಶಾಂತಿಯುತ ಅಥವಾ ಸಂಘರ್ಷಮಯ ಸಂಬಂಧಗಳನ್ನು ಹೊಂದಿರುತ್ತವೆ. ಉದಾ: ತಮ್ಮ ಸೈದ್ಧಾಂತಿಕ ಹಿತಾಸಕ್ತಿಗಾಗಿ ಅಮೆರಿಕಾ ಮತ್ತು ರಷ್ಯಾದ ನಡುವೆ ಸಂಘರ್ಷಮಯ ಸಂಬಂಧ ಕಂಡು ಬರುತ್ತಿರುವುದು. ಇಂತಹ ರಾಷ್ಟ್ರಗಳ ಭಿನ್ನ ಹಿತಾಸಕ್ತಿಗಳ ಅಧ್ಯಯನವು ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನದ ವ್ಯಾಪ್ತಿಯಲ್ಲಿ ಕಂಡು ಬರುತ್ತವೆ.

**3. ರಾಷ್ಟ್ರೀಯ ಶಕ್ತಿ:** ರಾಷ್ಟ್ರವೊಂದು ತನ್ನ ಹಿತಾಸಕ್ತಿಗೆ ಪೂರಕವಾಗಿ ಇತರ ರಾಷ್ಟ್ರಗಳನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ರಾಷ್ಟ್ರ ಶಕ್ತಿ ಎನ್ನಲಾಗುತ್ತದೆ. ಪರಸ್ಪರ ಸಂಬಂಧಗಳನ್ನು ಹೊಂದಲು ಬಯಸುವ ರಾಷ್ಟ್ರಗಳ ಪ್ರಧಾನ ಉದ್ದೇಶ ತಮ್ಮ ರಾಷ್ಟ್ರೀಯ ಶಕ್ತಿಯನ್ನು ಸುಧಾರಿಸಿಕೊಳ್ಳುವುದೇ ಆಗಿರುತ್ತದೆ. ವಾಸ್ತವದಲ್ಲಿ ಅಂತರ್‌ರಾಷ್ಟ್ರೀಯ ಸಂಬಂಧಗಳು ರಾಷ್ಟ್ರಗಳ ನಡುವಿನ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ನಡೆಸುವ ಹೋರಾಟವೆಂದೇ ಪರಿಗಣಿಸಲ್ಪಟ್ಟಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರಗಳ ರಾಷ್ಟ್ರೀಯ ಶಕ್ತಿಯ ಅಧ್ಯಯನವು ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನದ ಪ್ರಧಾನ ವಸ್ತು ವಿಷಯವೆನಿಸಿದೆ.

**4. ವಿದೇಶಾಂಗ ನೀತಿ:** ಇತರ ರಾಷ್ಟ್ರ ಅಥವಾ ರಾಷ್ಟ್ರಗಳೊಡನೆ ವ್ಯವಹರಿಸುವಾಗ ರಾಷ್ಟ್ರವೊಂದರ ವರ್ತನೆಯನ್ನು ನಿರ್ದೇಶಿಸುವ ಅಥವಾ ನಿಯಂತ್ರಿಸುವ ತತ್ವಗಳನ್ನು ವಿದೇಶಾಂಗ ನೀತಿ ಎನ್ನಲಾಗುತ್ತದೆ. ರಾಷ್ಟ್ರೀಯ ಶಕ್ತಿಯನ್ನು ಆಧರಿಸಿ ರಚನೆಗೊಳ್ಳುವ ರಾಷ್ಟ್ರಗಳ ವಿದೇಶಾಂಗ ನೀತಿಯು ಆಯಾ ರಾಷ್ಟ್ರಗಳ ಹಿತಾಸಕ್ತಿಯನ್ನು ಸಂರಕ್ಷಿಸುವ ಗುರಿಯನ್ನು ಹೊಂದಿರುತ್ತದೆ. ವಿದೇಶಾಂಗ ನೀತಿಯ ಅಧ್ಯಯನವೊಂದರಿಂದಲೇ ಒಂದು ರಾಷ್ಟ್ರ ಇತರ ರಾಷ್ಟ್ರಗಳೊಡನೆ ಹೊಂದಿರುವ ಸಂಬಂಧಗಳ ಸ್ವರೂಪವನ್ನು ಸ್ಪಷ್ಟವಾಗಿ ಮನವರಿಕೆ ಮಾಡಿಕೊಳ್ಳಬಹುದಾಗಿದೆ. ಈ ಹಿನ್ನೆಲೆಯಲ್ಲಿ ವಿದೇಶಾಂಗ ನೀತಿಯ ಅಧ್ಯಯನವು ಅಂತರ್‌ರಾಷ್ಟ್ರೀಯ ಸಂಬಂಧಗಳ ಅವಿಭಾಜ್ಯ ಅಂಶವೆನಿಸಿದ್ದು ಅದರ ವ್ಯಾಪ್ತಿಯಲ್ಲಿ ಸ್ಥಾನ ಗಳಿಸಿಕೊಂಡಿದೆ.

**5. ಆರ್ಥಿಕ ಸಾಧನಗಳು:** ರಾಷ್ಟ್ರಗಳ ನಡುವಿನ ವೈವಿಧ್ಯಮಯ ಸಂಬಂಧಗಳ ಪೈಕಿ ಆರ್ಥಿಕ ಸಂಬಂಧಗಳು ಅಗ್ರ ಸ್ಥಾನ ಪಡೆದಿರುತ್ತವೆ. ರಾಷ್ಟ್ರಗಳ ನಡುವಣ ರಾಜಕೀಯ ಸಂಬಂಧಗಳನ್ನು ಆರ್ಥಿಕತೆಯು ಸ್ವಾಭಾವಿಕವಾಗಿ ನಿರ್ದೇಶಿಸುತ್ತವೆ. ವಿದೇಶಿ ನೆರವು, ಸಾಲ, ವ್ಯಾಪಾರ ಒಡಂಬಡಿಕೆಯಂತಹ ಆರ್ಥಿಕ ಸಾಧನಗಳು ಸಾಮಾನ್ಯವಾಗಿ ರಾಷ್ಟ್ರಗಳ ನಡುವಿನ ಸಂಬಂಧಗಳನ್ನು ಪ್ರಭಾವಿಸುತ್ತವೆ. ಉದಾ: ಚೀನಾ ಮತ್ತು ಪಾಕಿಸ್ತಾನದ ಸಂಬಂಧದಲ್ಲಿ

ಆರ್ಥಿಕ ಸಾಧನಗಳ ಪ್ರಭಾವವಿರುವುದು. ಹೀಗಾಗಿ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನವು ರಾಷ್ಟ್ರಗಳ ನಡುವಿನ ಸಂಬಂಧಗಳಲ್ಲಿ ಸ್ಥಾನ ಪಡೆದಿರುವ ಆರ್ಥಿಕ ಸಂಬಂಧಗಳನ್ನು ತನ್ನ ವಸ್ತು ವಿಷಯವನ್ನಾಗಿ ಹೊಂದುವಂತಾಗಿದೆ.

6. **ಜಾಗತಿಕ ಮತ್ತು ಪ್ರಾದೇಶಿಕ ಸಂಸ್ಥೆಗಳು:** ಸಮಕಾಲೀನ ಜಗತ್ತಿನಲ್ಲಿ ಅಂದರೆ ಎರಡನೇ ಮಹಾ ಯುದ್ಧದ ನಂತರದಲ್ಲಿ ರಾಷ್ಟ್ರಗಳ ನಡುವಿನ ಸಂಬಂಧಗಳಿಗೆ ಜಾಗತಿಕ ಮತ್ತು ಪ್ರಾದೇಶಿಕ ಸಂಸ್ಥೆಗಳು ಸಾಂಸ್ಥಿಕ ಆಯಾಮವನ್ನು ಒದಗಿಸಲು ಯಶಸ್ವಿಯಾಗಿವೆ. ಉದಾ: ವಿಶ್ವ ಸಂಸ್ಥೆ ಹಾಗೂ ಅದರ ಇತರ ಸಂಸ್ಥೆಗಳು ಜಾಗತಿಕ ಸ್ವರೂಪದ ಮತ್ತು ದಕ್ಷಿಣ ಏಷ್ಯಾ ರಾಷ್ಟ್ರಗಳ ಸಹಕಾರ ಸಂಸ್ಥೆ, ಆಗ್ನೇಯ ಏಷ್ಯಾದ ರಾಷ್ಟ್ರಗಳ ಸಂಘಟನೆ, ಪೆಟ್ರೋಲಿಯಂ ಉತ್ಪಾದಕ ರಾಷ್ಟ್ರಗಳ ಸಂಸ್ಥೆ ಮುಂತಾದವು ಪ್ರಾದೇಶಿಕ ಸ್ವರೂಪದ ರಾಷ್ಟ್ರಗಳ ನಡುವಣ ಸಂಬಂಧಗಳನ್ನು ನಿಯಂತ್ರಿಸುತ್ತಿರುವುದು. ವಿವಿಧ ಸಂಸ್ಥೆಗಳೊಡನೆ ಕೆಲವು ವ್ಯಾಪಾರಿ ವ್ಯವಸ್ಥೆಗಳು ಮತ್ತು ಸಮಾನ ಮನಸ್ಕ ರಾಷ್ಟ್ರಗಳ ಗುಂಪುಗಳು ಅಂತರ್‌ರಾಷ್ಟ್ರೀಯ ಸಂಬಂಧಗಳನ್ನು ಪ್ರಭಾವಿಸುತ್ತಿವೆ. ಉದಾ: ಜಿ -8, ಜಿ - 20, ಜಿ – 77 ಇತ್ಯಾದಿ. ರಾಷ್ಟ್ರಗಳ ನಡುವಿನ ಸಂಬಂಧಗಳನ್ನು ಪ್ರಭಾವಿಸುತ್ತಿರುವ ಈ ಬಗೆಯ ಸಾಂಸ್ಥಿಕ ವ್ಯವಸ್ಥೆಗಳು ಅಂತರ್ ರಾಷ್ಟ್ರೀಯ ಸಂಬಂಧಗಳ ವ್ಯಾಪ್ತಿಗೆ ಬರುತ್ತವೆ.

7. **ರಾಷ್ಟ್ರೇತರ ಪಾತ್ರಧಾರಿಗಳು:** ಸಮಕಾಲೀನ ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿ ರಾಷ್ಟ್ರೀಯ ಪಾತ್ರಧಾರಿಗಳೊಡನೆ ಅಂದರೆ ಸರ್ಕಾರದೊಡನೆ ರಾಷ್ಟ್ರೇತರ ಪಾತ್ರಧಾರಿಗಳೂ ಪ್ರಧಾನ ಪಾತ್ರವನ್ನು ನಿರ್ವಹಿಸುತ್ತಿವೆ. ಸ್ವಯಂ ಸೇವಾ ಸಂಸ್ಥೆಗಳು, ಬಹುರಾಷ್ಟ್ರೀಯ ಕಂಪನಿಗಳು, ಮಾನವ ಹಕ್ಕುಗಳ ಹೋರಾಟ ಸಂಸ್ಥೆಗಳು, ಶಾಂತಿ ಚಳುವಳಿಗಳು ಪ್ರಧಾನ ರಾಷ್ಟ್ರೇತರ ಪಾತ್ರಧಾರಿಗಳಾಗಿದ್ದು ನಾನಾ ಕ್ಷೇತ್ರದಲ್ಲಿ ರಾಷ್ಟ್ರಗಳ ನಡುವಿನ ಸಂಬಂಧಗಳನ್ನು ಪ್ರಭಾವಿಸುತ್ತಿವೆ. ಹೀಗಾಗಿ ರಾಷ್ಟ್ರೇತರ ಪಾತ್ರಧಾರಿಗಳ ಅಧ್ಯಯನವು ಅಂತರ್‌ರಾಷ್ಟ್ರೀಯ ಸಂಬಂಧಗಳ ವ್ಯಾಪ್ತಿಗೆ ಒಳಪಟ್ಟಿದೆ.

8. **ಸಿದ್ಧಾಂತಗಳು:** ಸಮಕಾಲೀನ ಜಗತ್ತಿನಲ್ಲಿ ರಾಷ್ಟ್ರಗಳ ಸಂಬಂಧಗಳನ್ನು ಕೆಲ ಸಿದ್ಧಾಂತಗಳು ಪ್ರಭಾವಿಸುತ್ತಿವೆ. ಉದಾ: ರಾಷ್ಟ್ರೀಯವಾದ, ವಸಾಹತುಶಾಹಿವಾದ, ಸಾಮ್ರಾಜ್ಯವಾದ, ನವ ವಸಾಹತುವಾದ ಸಿದ್ಧಾಂತಗಳು. ಈ ವಿವಿಧ ಸಿದ್ಧಾಂತಗಳು ರಾಷ್ಟ್ರಗಳ ನಡುವಿನ ಸಂಬಂಧಗಳನ್ನು ನಿರ್ಧರಿಸುವುದರಿಂದ ಸಿದ್ಧಾಂತಗಳ ಮನವರಿಕೆಯು ಸಂಬಂಧಗಳ ಪರಿಪೂರ್ಣ ತಿಳುವಳಿಕೆಗೆ ಸಹಕಾರಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಸೈದ್ಧಾಂತಿಕ ಅಧ್ಯಯನವು ಅಂತರ್‌ರಾಷ್ಟ್ರೀಯ ಸಂಬಂಧಗಳ ಪ್ರಧಾನ ವಸ್ತು ವಿಷಯವೆನಿಸಿದೆ.



9. **ಜಾಗತಿಕ ಸವಾಲುಗಳು:** ಪ್ರಸ್ತುತ ಜಗತ್ತು ವೈವಿಧ್ಯಮಯ ಜಾಗತಿಕ ಸವಾಲುಗಳನ್ನು ಎದುರಿಸುತ್ತಿದೆ. ಈ ಸವಾಲುಗಳ ನಿಯಂತ್ರಣವು ರಾಷ್ಟ್ರಗಳ ನಡುವೆ ಪರಸ್ಪರ ಸಂಬಂಧಗಳಿಗೆ ಕಾರಣವಾಗುತ್ತಿವೆ. ಉದಾ: ಭಯೋತ್ಪಾದನೆ, ಜಾಗತಿಕ ತಾಪಮಾನ, ಶಸ್ತ್ರಾಸ್ತ್ರ ಸ್ಪರ್ಧೆ, ಅಣ್ವಸ್ತ್ರಗಳ ಪರೀಕ್ಷೆ, ಮಾನವ ಹಕ್ಕುಗಳ ಉಲ್ಲಂಘನೆ ಮುಂತಾದವು. ಈ ಸವಾಲುಗಳು ರಾಷ್ಟ್ರಗಳ ಸಂಬಂಧವನ್ನು ನಿರ್ದೇಶಿಸುವ ಮತ್ತು ನಿಯಂತ್ರಿಸುವ ಮಟ್ಟಕ್ಕೆ ಬೆಳೆದಿವೆ. ಫಲವಾಗಿ ವಿವಿಧ ಸವಾಲುಗಳ ಅಧ್ಯಯನವು ಅಂತರ್‌ರಾಷ್ಟ್ರೀಯ ಸಂಬಂಧಗಳ ವ್ಯಾಪ್ತಿಯಲ್ಲಿ ಪರಿಗಣಿಸಲ್ಪಟ್ಟಿವೆ.

10. **ವಿವಿಧ ಪರಿಕಲ್ಪನೆಗಳು:** ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನವು ರಾಷ್ಟ್ರಗಳ ನಡುವಿನ ಸಂಬಂಧಗಳನ್ನು ಕುರಿತಾದ ಶಕ್ತಿ ಸಮತೋಲನ, ರಾಯಭಾರತ್ವ, ಸಾಮೂಹಿಕ ಭದ್ರತೆ, ವಿವಾದಗಳ ಶಾಂತಿಯುತ ಪರಿಹಾರ, ಯುದ್ಧ ಮುಂತಾದ ಹಲವು ಪರಿಕಲ್ಪನೆಗಳ ಅಧ್ಯಯನವನ್ನು ಒಳಗೊಳ್ಳುತ್ತದೆ.

ಈ ಮೇಲೆ ಪ್ರಸ್ತಾಪಿಸಲಾಗಿರುವ ಅಂಶಗಳು ಅಂತರ್‌ರಾಷ್ಟ್ರೀಯ ಸಂಬಂಧಗಳ ವ್ಯಾಪ್ತಿಯಲ್ಲಿನ ಪ್ರಧಾನ ವಸ್ತು ವಿಷಯವನ್ನು ಮನವರಿಕೆ ಮಾಡಿಕೊಡುತ್ತವೆ. ಗಮನಾರ್ಹ ಅಂಶವೇನೆಂದರೆ, ಅಂತರ್‌ರಾಷ್ಟ್ರೀಯ ಸಂಬಂಧಗಳು ಚಲನಶೀಲ ಸ್ವರೂಪ ಪಡೆದಿದ್ದು ಬೆಳವಣಿಗೆ ಹೊಂದುತ್ತಲೇ ಸಾಗಿವೆ. ಹೀಗಾಗಿ ಅಂತರ್‌ರಾಷ್ಟ್ರೀಯ ಸಂಬಂಧಗಳ ವ್ಯಾಪ್ತಿಯನ್ನು ಸ್ಪಷ್ಟವಾಗಿ ವಿವರಿಸಲು ಇಂದಿಗೂ ಸಾಧ್ಯವಾಗುತ್ತಿಲ್ಲ.

## ಮಾದರಿ ಪ್ರಶ್ನೆಗಳು [Model Questions]:

**[A.] ಎರಡು ಅಂಕದ ಪ್ರಶ್ನೆಗಳು:**

1. ರಾಷ್ಟ್ರಗಳಿಗೆ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಗತ್ಯವನ್ನು ಬರೆಯಿರಿ.
2. ಅಂತರ್‌ರಾಷ್ಟ್ರೀಯ ಸಂಬಂಧ ಎಂದರೇನು?
3. ಅಂತರ್‌ರಾಷ್ಟ್ರೀಯ ಸಂಬಂಧವನ್ನು ವ್ಯಾಖ್ಯಾನಿಸಿರಿ.
4. ಅಂತರ್‌ರಾಷ್ಟ್ರೀಯ ಸಂಬಂಧಗಳು ಎಂಬ ಪದಕ್ಕೆ ಸಮಾನವಾಗಿ ಬಳಸಲಾಗುವ ಪದಗಳನ್ನು ಹೆಸರಿಸಿರಿ.
5. ಅಂತರ್‌ರಾಷ್ಟ್ರೀಯ ರಾಜಕೀಯ ಮತ್ತು ಅಂತರ್‌ರಾಷ್ಟ್ರೀಯ ಸಂಬಂಧಗಳ ನಡುವಿನ ಎರಡು ವ್ಯತ್ಯಾಸಗಳನ್ನು ಬರೆಯಿರಿ.
6. ಅಂತರ್‌ರಾಷ್ಟ್ರೀಯ ಸಂಬಂಧಗಳ ಬದಲಾವಣೆಗೆ ಪ್ರಭಾವ ಬೀರುವ ನಾಲ್ಕು ಅಂಶಗಳನ್ನು ತಿಳಿಸಿರಿ.

7. ಅಂತರ್‌ರಾಷ್ಟ್ರೀಯ ಸಂಬಂಧಗಳ ಮೂರು ಲಕ್ಷಣಗಳನ್ನು ಬರೆಯಿರಿ.
8. ವ್ಯಾಪ್ತಿ ಎಂದರೇನು?
9. ರಾಷ್ಟ್ರೀಯ ಶಕ್ತಿಯ ಅರ್ಥವನ್ನು ಬರೆಯಿರಿ.
10. ವಿದೇಶಾಂಗ ನೀತಿ ಎಂದರೇನು?
11. ಯಾವುದಾದರೂ ಮೂರು ಪ್ರಾದೇಶಿಕ ಸಂಘಟನೆಗಳನ್ನು ಹೆಸರಿಸಿರಿ.
12. ಯಾವುದಾದರೂ ಮೂರು ರಾಷ್ಟ್ರೇತರ ಪಾತ್ರಧಾರಿಗಳನ್ನು ಬರೆಯಿರಿ.
13. ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನದ ಪ್ರಧಾನ ಪರಿಕಲ್ಪನೆಗಳನ್ನು ತಿಳಿಸಿರಿ.

[B.] ಐದು ಅಂಕದ ಪ್ರಶ್ನೆಗಳು:

1. ಅಂತರ್‌ರಾಷ್ಟ್ರೀಯ ರಾಜಕೀಯ ಮತ್ತು ಸಂಬಂಧಗಳನ್ನು ಕುರಿತು ಟಿಪ್ಪಣಿ ಬರೆಯಿರಿ.
2. ಅಂತರ್‌ರಾಷ್ಟ್ರೀಯ ಸಂಬಂಧಗಳ ಸ್ವರೂಪವನ್ನು ಪರಿಶೀಲಿಸಿರಿ.

[C.] ಹತ್ತು ಅಂಕದ ಪ್ರಶ್ನೆಗಳು:

1. ಅಂತರ್‌ರಾಷ್ಟ್ರೀಯ ಸಂಬಂಧಗಳ ವ್ಯಾಪ್ತಿಯನ್ನು ವಿವರಿಸಿರಿ.



ಅಧ್ಯಾಯ 2:

# ಅಂತರ್‌ರಾಷ್ಟ್ರೀಯ ಸಂಬಂಧಗಳ ವಿಕಾಸ

## [EVOLUTION OF INTERNATIONAL RELATIONS].

ಪ್ರಸ್ತಾವನೆ [Introduction]: ಭೂಮಿಯ ಮೇಲಿನ ಜೀವಿಗಳಲ್ಲಿ ಮಾನವ ಅತ್ಯಂತ ಬುದ್ಧಿವಂತ ಜೀವಿ. ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಂಗ ಜೀವಿಯಾದ ಮಾನವ ಇತರ ಮಾನವರೊಡನೆ ವೈವಿಧ್ಯಮಯ ಸಂಬಂಧಗಳನ್ನು ಬೆಳೆಸಿಕೊಂಡ. ಕಾಲಾನುಕ್ರಮದಲ್ಲಿ ಕುಟುಂಬ, ಗ್ರಾಮ, ಕುಲದಂತಹ ಸಾಂಸ್ಥಿಕ ವ್ಯವಸ್ಥೆ ರಚಿಸಿಕೊಂಡ ಮಾನವ ತನ್ನ ರಾಜಕೀಯ ಅಗತ್ಯಗಳನ್ನು ಪೂರೈಸಿಕೊಳ್ಳಲು ರಾಜ್ಯವೆಂಬ ಸಂಸ್ಥೆಯೊಂದನ್ನು ರಚಿಸಿಕೊಂಡ. ಕ್ರಮೇಣ ವ್ಯಕ್ತಿಗತ ಸಂಬಂಧಗಳು ಮಾನವ ನಿರ್ಮಿತ ಸಂಸ್ಥೆಗಳಿಗೂ ವ್ಯಾಪಿಸಿದವು. ಫಲವಾಗಿ ರಾಜ್ಯ ರಾಜ್ಯಗಳ ನಡುವೆ ಸಂಬಂಧಗಳು ಮೂಡಿ ಬಂದಿದ್ದು ಅವುಗಳೇ ಪ್ರಸ್ತುತ ಅಂತರ್‌ರಾಷ್ಟ್ರೀಯ ಸಂಬಂಧಗಳೆಂದು ಪರಿಗಣಿಸಲ್ಪಟ್ಟಿವೆ. ರಾಜ್ಯದಷ್ಟೇ ಪುರಾತನವಾದ ಅಂತರ್‌ರಾಷ್ಟ್ರೀಯ ಸಂಬಂಧಗಳು ಆರಂಭದಲ್ಲಿ ಸೀಮಿತ ಸ್ವರೂಪ ಹೊಂದಿದ್ದವು. ಅಂದು ಅಸ್ತಿತ್ವದಲ್ಲಿದ್ದ ವೈಯಕ್ತಿಕ, ಧಾರ್ಮಿಕ, ನಿರಂಕುಶ, ಅರಸೊತ್ತಿಗೆ ರಾಜ್ಯಗಳ ಸ್ವರೂಪವನ್ನಾಧರಿಸಿ ಅವುಗಳ ನಡುವಿನ ಸಂಬಂಧಗಳು ಜಾರಿಯಲ್ಲಿದ್ದವು. ವಿವಿಧ ಕ್ಷೇತ್ರಗಳಲ್ಲಿ ಮಾನವನ ಪ್ರಗತಿಯ ಪರಿಣಾಮ ಬದಲಾವಣೆಗೊಳಗಾಗುತ್ತಾ ಬಂದ ಅಂತರ್‌ರಾಷ್ಟ್ರೀಯ ಸಂಬಂಧಗಳು ಇಂದು ವಿಶಾಲ ವ್ಯಾಪ್ತಿಯನ್ನು ತಾಳಿವೆ.

ಸಮಕಾಲೀನ ಅಂತರ್‌ರಾಷ್ಟ್ರೀಯ ಸಂಬಂಧಗಳ ಮೂಲವನ್ನು ಪ್ರಾಚೀನ ಕಾಲದಲ್ಲಿಯೇ ಗುರುತಿಸಲಾಗುತ್ತದೆ. ರಾಜ್ಯ ಪರಿಕಲ್ಪನೆಯಷ್ಟೇ ಪುರಾತನವಾದ ಅಂತರ್ ರಾಷ್ಟ್ರೀಯ ಸಂಬಂಧಗಳು ಗ್ರೀಕ್ ಚಿಂತಕ ತೂಸಿಡೈಡಸ್‌ನ ಪೆಲೊಪೊನೇಷಿಯನ್ ಯುದ್ಧದ ಇತಿಹಾಸ ಮತ್ತು ಭಾರತದ ಚಿಂತಕನಾದ ಕೌಟಿಲ್ಯನ ಅರ್ಥಶಾಸ್ತ್ರ ಗ್ರಂಥಗಳಲ್ಲಿ ಪ್ರಸ್ತಾಪಿಸಲ್ಪಟ್ಟಿವೆ. ಅಂತರ್‌ರಾಷ್ಟ್ರೀಯ ಸಂಬಂಧಗಳನ್ನು ಪರಿಪೂರ್ಣವಾಗಿ ಮನವರಿಕೆ ಮಾಡಿಕೊಳ್ಳಲು ಅವುಗಳ ಐತಿಹಾಸಿಕ ಬೆಳವಣಿಗೆಯ ತಿಳುವಳಿಕೆಯು ಅತ್ಯಗತ್ಯ. ಆರಂಭದ ನಗರ ರಾಜ್ಯ ವ್ಯವಸ್ಥೆಯ ಬದಲು ರಾಷ್ಟ್ರ ರಾಜ್ಯಗಳ ವ್ಯವಸ್ಥೆ ಪ್ರಸ್ತುತ ಕಾರ್ಯಾಚರಿಸುತ್ತಿದ್ದು

ಅಂದಿನಿಂದ ಇಂದಿನವರೆಗಿನ ಅಂತರ್‌ರಾಷ್ಟ್ರೀಯ ಸಂಬಂಧಗಳ ವಿಕಸನವು ಅವುಗಳನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳಲು ಸಹಕಾರಿಯಾಗುತ್ತವೆ. ಹೀಗಾಗಿ ಅಂತರ್‌ರಾಷ್ಟ್ರೀಯ ಸಂಬಂಧಗಳ ವಿಕಾಸ ಎಂಬ ಪ್ರಸಕ್ತ ಅಧ್ಯಾಯದಲ್ಲಿ ಪ್ರಾಚೀನ ನಗರ ರಾಜ್ಯಗಳಿಂದ ಆಧುನಿಕ ರಾಷ್ಟ್ರ ರಾಜ್ಯಗಳ ವ್ಯವಸ್ಥೆಯವರೆಗಿನ ಅಂತರ್‌ರಾಷ್ಟ್ರೀಯ ಸಂಬಂಧಗಳ ಸಂಕ್ಷಿಪ್ತ ವಿವರಗಳನ್ನು ನೀಡಲು ಪ್ರಯತ್ನಿಸಲಾಗಿದೆ. ಅಧ್ಯಯನದ ಅನುಕೂಲಕ್ಕಾಗಿ ಧಾಕಲಿತ ಐತಿಹಾಸಿಕ ಕಾಲದಿಂದ ಆಧುನಿಕ ಯುಗದಲ್ಲಿ ರಾಷ್ಟ್ರರಾಜ್ಯಗಳ ವ್ಯವಸ್ಥೆ ಜಾರಿಗೊಳ್ಳುವವರೆಗಿನ ಅಂತರ್‌ರಾಷ್ಟ್ರೀಯ ಸಂಬಂಧಗಳನ್ನು ಕೆಲ ಪ್ರಮುಖ ಅವಧಿಗಳಾಗಿ ವಿಂಗಡಿಸಿ ಕೆಳಗೆ ವಿವರಿಸಲಾಗಿದೆ.

## [A.] ಪ್ರಾಚೀನ ಗ್ರೀಕ್ ನಗರ ರಾಜ್ಯಗಳ ಅವಧಿ [Period of Ancient Greec City States]:

ಪ್ರಾಚೀನ ಗ್ರೀಸ್ ರಾಜಕೀಯವಾಗಿ ಹಲವು ಪುಟ್ಟ ನಗರ ರಾಜ್ಯಗಳಿಂದ ಕೂಡಿತ್ತು. ಗ್ರೀಕ್ ನಗರ ರಾಜ್ಯಗಳ ನಡುವೆ ಶಾಂತಿಯುತ ಆರ್ಥಿಕ ಸಂಬಂಧಗಳು ಅಸ್ತಿತ್ವದಲ್ಲಿದ್ದವು. ಜೊತೆಗೆ ಸಾ. ಶ. ಪೂ. ಆರನೇ ಶತಮಾನದಲ್ಲಿಯೇ ಗ್ರೀಕ್ ನಗರ ರಾಜ್ಯಗಳು ಅಂಫಿಕ್ಟ್ಯಾನಿಕ್ ಲೀಗ್ (Amphictanic League) ರಚಿಸಿಕೊಂಡ ನಿದರ್ಶನವಿದೆ. ಅಂದಿನ ಗ್ರೀಕ್ ನಗರ ರಾಜ್ಯಗಳ ನಡುವೆ ನಿರಂತರವಾಗಿ ಹೋರಾಟ ನಡೆಯುತ್ತಿದ್ದುದು ಅವುಗಳ ನಡುವಿನ ದುರ್ಬಲ ರಾಜಕೀಯ ಸಂಬಂಧವನ್ನು ಸೂಚಿಸುತ್ತದೆ. ಇದರೊಡನೆ ಸ್ವತಂತ್ರವಾಗಿದ್ದ ನಗರ ರಾಜ್ಯಗಳು ಆಕ್ರಮಣದ ಭಯದಿಂದ ತಮ್ಮ ರಕ್ಷಣೆಗಾಗಿ ಮೈತ್ರಿಕೂಟ ರಚಿಸಿಕೊಳ್ಳುತ್ತಿದ್ದುದು ನಗರ ರಾಜ್ಯಗಳ ನಡುವಿನ ಸಂಬಂಧಗಳ ಉಪಸ್ಥಿತಿಯನ್ನು ಸ್ಪಷ್ಟಪಡಿಸುತ್ತದೆ.

ಸಾ. ಶ. ಪೂ. 499 ರ ಹೊತ್ತಿಗೆ ಪರ್ಷಿಯನ್ನರ ಆಕ್ರಮಣವನ್ನು ತಡೆಯಲು ಗ್ರೀಕ್ ನಗರ ರಾಜ್ಯಗಳು ಹೆಲೆನಿಕ್ ಲೀಗ್ (Hellenic League) ಎಂಬ ರಾಜ್ಯಗಳ ಒಕ್ಕೂಟವನ್ನು ಸ್ಥಾಪಿಸಿಕೊಳ್ಳಲು ಮುಂದಾಗಿದ್ದವು. ಪರ್ಷಿಯನ್ನರ ಆಕ್ರಮಣದ ಭೀತಿ ಮಾಯವಾದ ನಂತರ ಅಥೆನ್ಸ್ ನೇತೃತ್ವದಲ್ಲಿ ಡೆಲಿಯನ್ ಲೀಗ್ (Delian League) ಎಂಬ ಮೈತ್ರಿಕೂಟವನ್ನು ರಚಿಸಿಕೊಂಡ ಹಲವು ಗ್ರೀಕ್ ನಗರ ರಾಜ್ಯಗಳು ತಮ್ಮ ರಕ್ಷಣೆಗೆ ಪ್ರಯತ್ನಿಸಿದವು. ಅಂತೆಯೇ ಉಳಿದ ನಗರ ರಾಜ್ಯಗಳೊಡನೆ ಮೈತ್ರಿ ಮಾಡಿಕೊಂಡ ಸ್ಪಾರ್ಟಾ ಅಥೆನ್ಸಿನೊಡನೆ ಸ್ಪರ್ಧೆಗಿಳಿಯಿತು. ಅಂತಿಮವಾಗಿ ಸಾ. ಶ. ಪೂ. 431 ರ ಹೊತ್ತಿಗೆ ಸ್ಪಾರ್ಟಾ ಮತ್ತು ಅಥೆನ್ಸ್ ನಡುವೆ ಪೆಲೊಪೊನೇಶಿಯನ್ ಯುದ್ಧ ಆರಂಭವಾಯಿತು. ಈ ವೇಳೆಯಲ್ಲಿ ಪರ್ಷಿಯಾವು ಅಥೆನ್ಸಿನೊಡನೆ ಸೇರಿ ತನ್ನ ವಿರುದ್ಧವೇ ಹೋರಾಡಿದ್ದ ಸ್ಪಾರ್ಟಾಗೆ ಬೆಂಬಲಿಸಿತು. ಫಲವಾಗಿ ಸಾ. ಶ. ಪೂ. 404 ರ ಪೆಲಪೊನೇಷಿಯನ್ ಯುದ್ಧದಲ್ಲಿ ಸ್ಪಾರ್ಟಾದ ಎದುರು ಅಥೆನ್ಸ್ ಸೋಲುವಂತಾಯಿತು. ಈ ಬೆಳವಣಿಗೆಗಳು ಗ್ರೀಕ್ ನಗರ ರಾಜ್ಯಗಳ ನಡುವೆ ಅಸ್ತಿತ್ವದಲ್ಲಿದ್ದ ಸಂಬಂಧಗಳನ್ನು ಸ್ಪಷ್ಟಪಡಿಸುತ್ತವೆ. ಆಸಕ್ತಿದಾಯಕ



ಅಂಶವೇನೆಂದರೆ, ನಿರಂತರ ಹೋರಾಟದ ನಡುವೆ ಒಲಿಂಪಿಕ್ ಕ್ರೀಡಾಕೂಟದ ಅವಧಿಯಲ್ಲಿ ನಗರ ರಾಜ್ಯಗಳು ಹೋರಾಟಕ್ಕೆ ವಿರಾಮ ನೀಡುತ್ತಿದ್ದವು. ಈ ಬೆಳವಣಿಗೆಯು ಅಂದಿನ ನಗರ ರಾಜ್ಯಗಳ ನಡುವೆ ರಾಯಭಾರಕ ಸಂಬಂಧ ಅಸ್ತಿತ್ವದಲ್ಲಿರುವುದನ್ನು ಸೂಚಿಸುತ್ತದೆ. ಒಟ್ಟಿನಲ್ಲಿ ಪ್ರಾಚೀನ ನಗರ ರಾಜ್ಯಗಳ ನಡುವೆ ದುರ್ಬಲ ಸ್ವರೂಪದ ಸಂಬಂಧಗಳು ಅಸ್ತಿತ್ವದಲ್ಲಿದ್ದುದು ನಮಗೆ ಸ್ಪಷ್ಟವಾಗುತ್ತದೆ.

## [B.] ರೋಮನ್ ಸಾಮ್ರಾಜ್ಯದ ಅವಧಿ [Period of Roman Empire]:

ಬಹುತೇಕ ಗ್ರೀಕ್ ನಗರ ರಾಜ್ಯಗಳು ರೋಮನ್ ಚಕ್ರವರ್ತಿಗಳಿಂದ ಜಯಿಸಲ್ಪಟ್ಟವು. ಫಲವಾಗಿ ರೋಮನ್ ಸಾಮ್ರಾಜ್ಯವು ಗ್ರೀಕರಿಗಿಂತ ವಿಶಾಲ ರಾಜಕೀಯ ವ್ಯವಸ್ಥೆಯನ್ನು ರೂಪಿಸುವಲ್ಲಿ ಸಫಲವಾಯಿತು. ರೋಮನ್ ಸಾಮ್ರಾಟ ಅಗಸ್ಟಸ್‌ನು ತನ್ನ ಸಾಮರ್ಥ್ಯವನ್ನು ಬಳಸಿ ವಿಶಾಲ ಪ್ರದೇಶದ ಜನರಲ್ಲಿ ಏಕತೆಯನ್ನು ಉಂಟು ಮಾಡಿದನಲ್ಲದೇ ಆಡಳಿತಾತ್ಮಕ ಸ್ಥಿರತೆ ತಂದನು. ಫಲವಾಗಿ ಪ್ರಾಚೀನ ಭಾರತ ಮತ್ತು ಚೀನಾದೊಡನೆ ರೋಮನ್ನರು ನಿರಂತರ ವ್ಯಾಪಾರ ಸಂಬಂಧ ಹೊಂದಲು ಸಾಧ್ಯವಾಗಿತ್ತು. ಯುರೋಪಿನ ಬಹು ಭಾಗ, ಏಷ್ಯಾ, ಮಧ್ಯ ಪ್ರಾಚ್ಯ ಹಾಗೂ ಉತ್ತರ ಆಫ್ರಿಕಾದ ಆಡಳಿತ ಘಟಕಗಳನ್ನು ತಮ್ಮ ಪ್ರಭಾವಕ್ಕೊಳಪಡಿಸುವ ಮೂಲಕ ಅವುಗಳ ನಡುವಿನ ಸಂಬಂಧವನ್ನು ರೋಮನ್ನರು ಹೆಚ್ಚಿಸಿದರು.

ರೋಮನ್ನರು ತಾವು ಆಕ್ರಮಿಸಿದ ನೂತನ ರಾಜ್ಯಗಳ ಪ್ರತಿನಿಧಿಗಳೊಡನೆ ಒಪ್ಪಂದ ಮಾಡಿಕೊಂಡು ಸ್ವಯಂ ಆಳ್ವಿಕೆಗೆ ಅವಕಾಶ ಒದಗಿಸುತ್ತಿದ್ದರು. ವಿದೇಶಿ ವ್ಯವಹಾರ ಇಲಾಖೆಯಿದ್ದರೂ ರೋಮನ್ ಸೆನೆಟ್ ವಿದೇಶಿ ವ್ಯವಹಾರಗಳನ್ನು ನಿರ್ವಹಿಸುತ್ತಿತ್ತು. ಇದರೊಡನೆ ರೋಮನ್ ಸಾಮ್ರಾಜ್ಯವು ಲಿಖಿತ ಸೂಚನೆಯೊಡನೆ ತನ್ನ ರಾಯಭಾರಿಗಳನ್ನು ವಿದೇಶಗಳಿಗೆ ಕಳುಹಿಸುತ್ತಿತ್ತು. ವಿದೇಶಿ ರಾಯಭಾರಿಗಳನ್ನು ತನ್ನಲ್ಲಿಗೆ ಬರಮಾಡಿಕೊಂಡು ವಿವಿಧ ವಿನಾಯಿತಿಗಳನ್ನು ಕಲ್ಪಿಸಲಾಗುತ್ತಿತ್ತು. ಜೊತೆಗೆ ಆಧುನಿಕ ಯುರೋಪಿನ ರಾಜ್ಯಗಳ ನಡುವಿನ ಸಂಬಂಧಗಳಿಗೆ ಪೂರಕವಾದ ಹಲವು ಬೆಳವಣಿಗೆಗೆ ರೋಮನ್ ಸಾಮ್ರಾಜ್ಯವು ತಳಹದಿ ಒದಗಿಸಿತ್ತು.

## [C.] ಮಧ್ಯ ಯುಗದ ಅವಧಿ [Period of Middle Age]:

ಸಾ. ಶ. ಪೂ ಐದನೇ ಶತಮಾನದ ಕೊನೆಯಲ್ಲಿ ರೋಮನ್ ಸಾಮ್ರಾಜ್ಯವು ಪತನವಾದಾಗ ಯುರೋಪಿನಲ್ಲಿ ಅಧಿಕಾರದ ಕೇಂದ್ರೀಕರಣ ಮಾಯವಾಗಿ ವಿಕೇಂದ್ರೀಕರಣ ಕಂಡು ಬಂದಿತು. ರೋಮನ್ ಏಕಚಕ್ರಾಧಿಪತ್ಯ ಕೊನೆಗೊಂಡ ಫಲವಾಗಿ ಪ್ರವಾಸ, ವ್ಯಾಪಾರ,

ಸಂಪರ್ಕ ಚಟುವಟಿಕೆಗಳು ಬಲಗೊಳ್ಳತೊಡಗಿದವು. ಇದರೊಡನೆ ಅರಬ್ ನಾಗರಿಕತೆ, ಬೈಜಾಂಟಿಕ್ ಸಾಮ್ರಾಜ್ಯ ಮತ್ತು ಕೇಂದ್ರಿಕೃತ ಅಧಿಕಾರವಿಲ್ಲದ ಯುರೋಪ್ ನಾಗರಿಕತೆ ಅಸ್ತಿತ್ವಕ್ಕೆ ಬಂದವು. ಮಧ್ಯ ಯುಗದ ಯುರೋಪಿನಲ್ಲಿ ಊಳಿಗಮಾನ್ಯ ಪದ್ಧತಿ ಜಾರಿಗೊಂಡು ರಾಜ್ಯಗಳು ತಮ್ಮ ಪ್ರಾಮುಖ್ಯತೆ ಕಳೆದುಕೊಂಡವು. ಹೀಗಾಗಿ ರಾಜ್ಯಗಳ ನಡುವಿನ ಸಂಬಂಧ ವ್ಯಾಪಕತೆಯನ್ನು ಪಡೆಯಲು ಸಾಧ್ಯವಾಗದಾಯಿತು. ಚರ್ಚಿನ ನಿಯಂತ್ರಣ ಮಧ್ಯ ಯುಗದಲ್ಲಿ ಹೆಚ್ಚಾಗಿ ರಾಜ್ಯಗಳನ್ನು ಬೆಸೆಯುವ ಸಾಧನವಾಗಿ ಅದು ರೂಪುಗೊಂಡಿತು. ಮಧ್ಯ ಯುಗದಲ್ಲಿ ಅಧಿಕಾರವು ಊಳಿಗಮಾನ್ಯ ದೊರೆಗಳು ಮತ್ತು ಧಾರ್ಮಿಕ ಮುಖಂಡರಿಂದ ಒಂದೆಡೆ ನಿಯಂತ್ರಿಸಲ್ಪಟ್ಟರೆ ಮತ್ತೊಂದೆಡೆ ವ್ಯಾಪಾರ, ಪ್ರವಾಸ, ಸಂಪರ್ಕ ಚಟುವಟಿಕೆಗಳು ಅಧಿಕಗೊಂಡವು. ಇದರಿಂದಾಗಿ ಮಧ್ಯ ಯುಗವು ವಿಕೇಂದ್ರಿಕರಣ ಹಾಗೂ ಕೇಂದ್ರಿಕರಣಗಳನ್ನು ಕಾಣುವಂತಾಗಿ ಅಂತರ್‌ರಾಜ್ಯ ಸಂಬಂಧಗಳು ತೃಪ್ತಿಕರ ಪ್ರಗತಿಯನ್ನು ಹೊಂದಲಿಲ್ಲ.

## [D.] ಮಧ್ಯ ಯುಗಾಂತ್ಯದ ಅವಧಿ [Period of Late Middle Age]:

ಸಾ. ಶ. ಒಂದು ಸಾವಿರದ ನಂತರದ ಕಾಲದಲ್ಲಿ ಯುರೋಪಿನ ಊಳಿಗಮಾನ್ಯ ಪದ್ಧತಿ ಮತ್ತು ಕ್ರಿಶ್ಚಿಯನ್ನರ ಸಾರ್ವತ್ರಿಕತೆ ಶಿಥಿಲಗೊಳ್ಳತೊಡಗಿದವು. ವಿವಿಧ ರಾಜ್ಯಗಳ ನಡುವೆ ವ್ಯಾಪಾರ ಚಟುವಟಿಕೆಗಳು ವಿಸ್ತರಣೆಗೊಂಡವು. ಜೊತೆಗೆ ಹಲವು ಕ್ಷೇತ್ರಗಳಲ್ಲಿ ತಾಂತ್ರಿಕತೆ ಬಲಗೊಂಡಿತು. ಉತ್ತರ ಇಟಲಿಯ ನಗರಗಳು ವ್ಯಾಪಾರ ಸಂಬಂಧವನ್ನು ಬೆಳೆಸಿಕೊಂಡವು. ಅನ್ವೇಷಕರು ಮತ್ತು ವಲಸಿಗರು ನೂತನ ಭಾಗಗಳನ್ನು ತಲುಪಿದರು. ಆರ್ಥಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿನ ಬದಲಾವಣೆಯು ಜನರ ದೈನಂದಿನ ಜೀವನವನ್ನು ಸರಳಗೊಳಿಸಿ ಸಾಮಾಜಿಕ ಸಂಬಂಧಗಳನ್ನು ಪರಿವರ್ತಿಸಿದವು. ವ್ಯಾಪಾರಿ ಸಮುದಾಯವು ಸ್ಥಳೀಯ ಲಭ್ಯತೆಗಿಂತ ಭಿನ್ನವಾದ ವಸ್ತುಗಳ ಬಳಕೆಗೆ ಒಲವು ತೋರಿದವು. ಬರಹಗಾರರು ಸಾಂಪ್ರದಾಯಿಕ ಗ್ರೀಕ್ ಮತ್ತು ರೋಮನ್ ವಿಚಾರಗಳನ್ನು ಸಂಶೋಧಿಸಲು ಮುಂದಾದರು. ಈ ಎಲ್ಲ ಬೆಳವಣಿಗೆಗಳ ಪರಿಣಾಮ ಅಂತರ್‌ರಾಷ್ಟ್ರೀಯ ಸಂಬಂಧಗಳು ಗರಿಗೆದರಲು ಸಾಧ್ಯವಾಯಿತು.

## [E.] ಆಧುನಿಕ ರಾಷ್ಟ್ರ ರಾಜ್ಯಗಳ ವ್ಯವಸ್ಥೆಯ ಅವಧಿ [Period of Modern Nation States Systom]:

16 ನೇ ಶತಮಾನದ ಸುಧಾರಣಾ ಮತ್ತು ಪ್ರತಿ ಸುಧಾರಣಾ ಚಳುವಳಿಗಳು ಜರ್ಮನಿಯನ್ನು ಪ್ರೊಟೆಸ್ಟಂಟ್ ಮತ್ತು ಕ್ಯಾಥೊಲಿಕ್ ಗುಂಪುಗಳಾಗಿ ವಿಂಗಡಿಸಿದ್ದವು. ಜರ್ಮನಿಯ ಈ ಎರಡೂ ಗುಂಪುಗಳು ತಮ್ಮ ಪ್ರಾಬಲ್ಯಕ್ಕಾಗಿ ವಿದೇಶಿ ಬೆಂಬಲವನ್ನು



ಗಳಿಸಲು ಹವಣಿಸುತ್ತಿದ್ದವು. 1618 ರ ಹೊತ್ತಿಗೆ ಪವಿತ್ರ ರೋಮನ್ ಚಕ್ರವರ್ತಿ ಫರ್ಡಿನಾಂಡ್ II. ಎಂಬಾತ ಬೊಹಿಮಿಯಾದ ಪ್ರೊಟೆಸ್ಟಂಟ್ ಪಂಥದವರ ಮೇಲೆ ಕ್ಯಾಥೊಲಿಕ್ ಪಂಥವನ್ನು ಹೇರಲು ಮುಂದಾದನು. ಈ ಬೆಳವಣಿಗೆಯು ಯುರೋಪ್ ಇತಿಹಾಸದಲ್ಲಿಯೇ ಘೋರವಾದ ಯುದ್ಧಕ್ಕೆ ಕಾರಣವಾಯಿತು. ಯುರೋಪಿನ ಶಕ್ತಿಶಾಲಿ ರಾಷ್ಟ್ರಗಳಾಗಿದ್ದ ಆಸ್ಟ್ರಿಯಾ, ಸ್ಪೇನ್, ಫ್ರಾನ್ಸ್‌ಗಳು ಈ ಮೂವತ್ತು ವರ್ಷಗಳ ಯುದ್ಧದಲ್ಲಿ ಭಾಗಿಯಾಗಿದ್ದವು. ಧಾರ್ಮಿಕ ಹಿತಾಸಕ್ತಿಯೊಡನೆ ವ್ಯಾಪಾರಿ ವರ್ಗಗಳ ಹಿತಾಸಕ್ತಿಗಳೂ ಯುದ್ಧದ ಮುಂದುವರಿಕೆಗೆ ಕಾರಣವಾಗಿದ್ದವು. ಜರ್ಮನಿಯನ್ನು ಹೆಚ್ಚಾಗಿ ಆವರಿಸಿದ್ದ ಯುದ್ಧದಲ್ಲಿ ಗಡಿಗಳಿಗಾಗಲಿ, ಆದೇಶಗಳಿಗಾಗಲಿ ಅಥವಾ ರಕ್ಷಣೆಗಾಗಲಿ ಮಹತ್ವವಿರಲಿಲ್ಲ. ಅಂತಿಮವಾಗಿ 1648 ರ ವೆಸ್ಟ್ ಫೇಲಿಯಾ ಒಪ್ಪಂದವು 30 ವರ್ಷಗಳ ಈ ಯುದ್ಧವನ್ನು ಕೊನೆಗೊಳಿಸಲು ಯಶಸ್ವಿಯಾಯಿತು.

ವಿವಿಧ ರಾಜ್ಯಗಳ ಸುಮಾರು 179 ಪ್ರತಿನಿಧಿಗಳು ಸಹಮತ ಸೂಚಿಸಿ ವೆಸ್ಟ್ ಫೇಲಿಯಾ ಶಾಂತಿ ಒಪ್ಪಂದಕ್ಕೆ ಮುಂದಾದರು. ಬಹುತೇಕ ಅಂತರ್‌ರಾಷ್ಟ್ರೀಯ ಸಂಬಂಧಗಳ ಚಿಂತಕರು ಆಧುನಿಕ ರಾಷ್ಟ್ರ ರಾಜ್ಯಗಳ ವ್ಯವಸ್ಥೆಯನ್ನು 1648 ರ ವೆಸ್ಟ್ ಫೇಲಿಯಾ ಒಪ್ಪಂದದಿಂದಲೇ ಗುರುತಿಸುತ್ತಾರೆ. ಆಧುನಿಕ ರಾಷ್ಟ್ರ ರಾಜ್ಯಗಳ ವ್ಯವಸ್ಥೆಗೆ ಮತ್ತು ಔಪಚಾರಿಕ ಅಂತರ್‌ರಾಷ್ಟ್ರೀಯ ಸಂಬಂಧಗಳಿಗೆ ಚಾಲನೆ ನೀಡಿದ ವೆಸ್ಟ್ ಫೇಲಿಯಾ ಶಾಂತಿ ಒಪ್ಪಂದದ ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

1. ರೋಮನ್ ಕ್ಯಾಥೊಲಿಕ್ ಪಂಥದ ಏಕಸ್ವಾಮ್ಯದ ಕನಸು ಭಗ್ನವಾಗಿ ಪ್ರಪಂಚದಲ್ಲಿ ಪ್ರೊಟೆಸ್ಟಂಟ್ ಪಂಥವೂ ಉಳಿದುಕೊಳ್ಳಲು ಅವಕಾಶ ದೊರಕಿತು.
2. ಧಾರ್ಮಿಕ ಆಡಳಿತವನ್ನು ಅಂತ್ಯಗೊಳಿಸಿ ಜಾತ್ಯಾತೀತ ಆಡಳಿತವನ್ನು ಅಳವಡಿಸಿಕೊಳ್ಳಲು ಆಸ್ಪದ ಒದಗಿಸಲಾಯಿತು. ಫಲವಾಗಿ ರಾಷ್ಟ್ರಗಳು ಧಾರ್ಮಿಕ ಮುಖಂಡರ ಹಿಡಿತದಿಂದ ಮುಕ್ತವಾದವಲ್ಲದೇ ತಮಗಿಷ್ಟವಾದ ಧರ್ಮವನ್ನು ಅನುಸರಿಸಲು ಸ್ವತಂತ್ರಗೊಂಡವು.
3. ರಾಜ್ಯಗಳ ಸಾರ್ವಭೌಮತ್ವವನ್ನು ಎತ್ತಿ ಹಿಡಿಯುವ ಮೂಲಕ ರಾಜ್ಯಗಳ ಸ್ವತಂತ್ರ ಕಾರ್ಯಾಚರಣೆಗೆ ಆಸ್ಪದ ಮಾಡಿಕೊಡಲಾಯಿತು.
4. ಸಾರ್ವಭೌಮ ರಾಷ್ಟ್ರಗಳಿಗೆ ಪೂರಕವಾದ ಸಾಮಾನ್ಯ ತಿಳುವಳಿಕೆಯ ಆಧಾರದ ರಾಯಭಾರತ್ವ ಮತ್ತು ವಿದೇಶಿ ನೀತಿಗಳಿಗೆ ಪ್ರಾಶಸ್ತ್ಯ ಒದಗಿಸಲಾಯಿತು.
5. ರಾಷ್ಟ್ರ ರಾಜ್ಯಗಳು ಉನ್ನತ ಸರ್ಕಾರವೆನಿಸಿಕೊಂಡವಲ್ಲದೇ ಅಕಾರಣಿಕವಾಗಿ ಯುದ್ಧಕ್ಕೆ ಮುಂದಾಗುವ ಬದಲು ತಮ್ಮ ಅಸ್ತಿತ್ವಕ್ಕೆ ಅಭದ್ರತೆ ಉಂಟಾದಾಗ ಮಾತ್ರ ಯುದ್ಧ ಕೈಗೊಳ್ಳಲು ಅನುಮತಿಸಲ್ಪಟ್ಟವು.

ಹೀಗೆ ಪ್ರಸ್ತಾಪಿತ ವಿನೂತನ ಲಕ್ಷಣಗಳ ಆಧಾರದಲ್ಲಿ ವೆಸ್ಟ್ ಫೇಲಿಯಾ ಶಾಂತಿ ಒಪ್ಪಂದವು ಅಂತರ್‌ರಾಷ್ಟ್ರೀಯ ಸಂಬಂಧಗಳ ವಿಚಾರದಲ್ಲಿ ಮಹತ್ವದ ಮೈಲಿಗಲ್ಲೆಂದು ಪರಿಗಣಿಸಲ್ಪಟ್ಟಿತು. ಪ್ರಪಂಚದಲ್ಲಿ 1648 ರಿಂದ 1914 ರವರೆಗೆ ಯುದ್ಧಗಳು ಜರುಗದಂತೆ ಆಧುನಿಕ ರಾಷ್ಟ್ರ ರಾಜ್ಯ ವ್ಯವಸ್ಥೆಯನ್ನು ಸ್ಥಾಪಿಸುವಲ್ಲಿ ಜಯಶಾಲಿಯಾದ ವೆಸ್ಟ್ ಫೇಲಿಯಾ ಒಪ್ಪಂದವು ಅಂತರ್‌ರಾಷ್ಟ್ರೀಯ ಸಂಬಂಧಗಳ ವಿಕಾಸದಲ್ಲಿ ಮಹತ್ವದ ಸ್ಥಾನ ಪಡೆದಿದೆ. ಈ ನಡುವೆ ರಾಷ್ಟ್ರೀಯವಾದ ಮತ್ತು ರಾಷ್ಟ್ರೀಯ ಸಾರ್ವಭೌಮತ್ವ ಪರಿಕಲ್ಪನೆಗಳು ಬಲಗೊಂಡು ಆಧುನಿಕ ರಾಷ್ಟ್ರ ರಾಜ್ಯ ವ್ಯವಸ್ಥೆಯನ್ನು ಮುಂದುವರಿಸುವಲ್ಲಿ ಸಹಕಾರಿಯಾದವು. ಉದಾ: ಫ್ರೆಂಚ್ ಕ್ರಾಂತಿಯು ಅರಸೊತ್ತಿಗೆಯಿಂದ ಅಧಿಕಾರವನ್ನು ಜನರಿಗೆ ವರ್ಗಾಯಿಸುವಲ್ಲಿ ರಾಷ್ಟ್ರೀಯವಾದದ ಪ್ರಭಾವ ಮತ್ತು ಅಮೇರಿಕಾ ಕ್ರಾಂತಿಯ ಮೂಲಕ ರಾಷ್ಟ್ರೀಯ ಸಾರ್ವಭೌಮತ್ವದ ಉಪಯುಕ್ತತೆಯನ್ನು ಅಮೇರಿಕನ್ನರು ವ್ಯಕ್ತಪಡಿಸಿದುದು.

ಸಾಮಾನ್ಯ ಭಾಷೆ, ಸಂಸ್ಕೃತಿ, ಜನಾಂಗ, ಧರ್ಮಗಳಿಗೆ ಸೇರಿದ ಪ್ರಜೆಗಳೆಲ್ಲ ಒಂದುಗೂಡಿರುವ ಮತ್ತು ರಾಜಕೀಯವಾಗಿ ಸಾರ್ವಭೌಮ ಅಧಿಕಾರವುಳ್ಳ ರಾಜ್ಯವು ರಾಷ್ಟ್ರ ರಾಜ್ಯವೆನಿಸಿಕೊಳ್ಳುತ್ತದೆ. ವೆಸ್ಟ್ ಫೇಲಿಯಾ ಒಪ್ಪಂದವು ಆಧುನಿಕ ರಾಷ್ಟ್ರ ರಾಜ್ಯಗಳ ವ್ಯವಸ್ಥೆಯ ಬೆಳವಣಿಗೆಗೆ ತಳಹದಿ ಒದಗಿಸಿತು. ಈ ರಾಷ್ಟ್ರ ರಾಜ್ಯಗಳು ತಮ್ಮ ಹಿತಾಸಕ್ತಿಗಳ ಈಡೇರಿಕೆಗಾಗಿ ಪರಸ್ಪರ ಸಂಬಂಧ ಬೆಳೆಸಿಕೊಳ್ಳಲು ಮುಂದಾಗುತ್ತವೆ. ಇದರಿಂದ ಅಂತರ್‌ರಾಷ್ಟ್ರೀಯ ಸಂಬಂಧಗಳು ಪ್ರಾಮುಖ್ಯತೆ ಪಡೆದುಕೊಂಡವು. ಆಸಕ್ತಿದಾಯಕ ಅಂಶವೇನೆಂದರೆ, 1914 ರಲ್ಲಿ ಮೊದಲ ಮಹಾ ಯುದ್ಧ ಆರಂಭಗೊಳ್ಳುವವರೆಗೆ ಪ್ರಜೆಗಳು ಅಂತರ್‌ರಾಷ್ಟ್ರೀಯ ಸಂಬಂಧಗಳ ಅನುಕೂಲ ಮತ್ತು ಅನಾನುಕೂಲಗಳ ಬಗೆಗೆ ಹೆಚ್ಚು ಆಸಕ್ತರಾಗಿರಲಿಲ್ಲ. ಆದರೆ, ಯುದ್ಧದ ಬಳಿಕ ಜನಸಾಮಾನ್ಯರೂ ಈ ಅಂತರ್‌ರಾಷ್ಟ್ರೀಯ ಸಂಬಂಧಗಳನ್ನು ಕುರಿತು ಆಸಕ್ತಿ ಬೆಳೆಸಿಕೊಳ್ಳಲು ಮುಂದಾಗಿರುವರು. ಫಲವಾಗಿ ಅಂತರ್‌ರಾಷ್ಟ್ರೀಯ ಸಂಬಂಧಗಳು ಸ್ವತಂತ್ರ ಅಧ್ಯಯನ ಶಾಸ್ತ್ರವಾಗಿ ಗುರುತಿಸಿಕೊಳ್ಳಲು ಸಾಧ್ಯವಾಗಿದ್ದು ಆ ಕುರಿತಾದ ಬೆಳವಣಿಗೆಗಳನ್ನು ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

## ಮಾದರಿ ಪ್ರಶ್ನೆಗಳು [Model Questions]:

**[A.] ಎರಡು ಅಂಕದ ಪ್ರಶ್ನೆಗಳು:**

1. ಅಂತರ್‌ರಾಷ್ಟ್ರೀಯ ಸಂಬಂಧಗಳು ಪ್ರಸ್ತಾಪಿಸಲ್ಪಟ್ಟ ಎರಡು ಪ್ರಾಚೀನ ಗ್ರಂಥಗಳನ್ನು ಹೆಸರಿಸಿರಿ.
2. ನಗರ ರಾಜ್ಯಗಳಿಂದ ಆಧುನಿಕ ರಾಷ್ಟ್ರ ರಾಜ್ಯಗಳ ವ್ಯವಸ್ಥೆಯ ನಡುವಿನ ಅಂತರ್‌ರಾಷ್ಟ್ರೀಯ ಸಂಬಂಧಗಳ ಅವಧಿಗಳನ್ನು ಬರೆಯಿರಿ.



3. ಗ್ರೀಕ್ ನಗರ ರಾಜ್ಯಗಳು ರಚಿಸಿಕೊಂಡಿದ್ದ ಯಾವುದಾದರೂ ಎರಡು ರಾಜ್ಯಗಳ ಒಕ್ಕೂಟಗಳನ್ನು ತಿಳಿಸಿರಿ.
4. ಗ್ರೀಕ್ ನಗರ ರಾಜ್ಯವಾಗಿದ್ದ ಅಥೆನ್ಸ್ ಯಾವಾಗ ಮತ್ತು ಏಕೆ ಸೋಲಲ್ಪಟ್ಟಿತು?
5. ಗ್ರೀಕ್ ನಗರ ರಾಜ್ಯಗಳಲ್ಲಿ ಅಂತರ್‌ರಾಷ್ಟ್ರೀಯ ಸಂಬಂಧಗಳು ಜಾರಿಯಲ್ಲಿದ್ದುದನ್ನು ಸ್ಪಷ್ಟಪಡಿಸುವ ಎರಡು ಬೆಳವಣಿಗೆಗಳನ್ನು ಬರೆಯಿರಿ.
6. ರೋಮನ್ ಸಾಮ್ರಾಜ್ಯದ ಅವಧಿಯಲ್ಲಿ ಅಂತರ್‌ರಾಷ್ಟ್ರೀಯ ಸಂಬಂಧಗಳು ಅಸ್ತಿತ್ವದಲ್ಲಿದ್ದವೆಂದು ಹೇಗೆ ಹೇಳುವಿರಿ?
7. ರೋಮನ್ ಸಾಮ್ರಾಜ್ಯವು ಜಗತ್ತಿನ ಯಾವ ಯಾವ ಪ್ರದೇಶಗಳ ಮೇಲೆ ಪ್ರಭಾವ ಹೊಂದಿತ್ತು?
8. ಮಧ್ಯ ಯುಗದಲ್ಲಿ ಅಸ್ತಿತ್ವಕ್ಕೆ ಬಂದ ಮೂರು ನಾಗರಿಕತೆಗಳನ್ನು ಹೆಸರಿಸಿರಿ.
9. ಮಧ್ಯ ಯುಗದಲ್ಲಿ ಅಂತರ್‌ರಾಷ್ಟ್ರೀಯ ಸಂಬಂಧಗಳು ತೃಪ್ತಿಕರ ಪ್ರಗತಿ ಹೊಂದದಿರಲು ಎರಡು ಕಾರಣಗಳಾವುವು?
10. ಮಧ್ಯ ಯುಗಾಂತ್ಯದ ಅವಧಿಯಲ್ಲಿ ಅಂತರ್‌ರಾಷ್ಟ್ರೀಯ ಸಂಬಂಧಗಳಿಗೆ ಚಾಲನೆ ದೊರಕಲು ಕಾರಣಗಳಾವುವು?
11. ಯುರೋಪಿನಲ್ಲಿ 30 ವರ್ಷಗಳ ಯುದ್ಧವು ಏಕೆ ಜರುಗಿತು?
12. ವೆಸ್ಟ್ ಫೇಲಿಯಾ ಒಪ್ಪಂದದ ಮೂರು ಅಂಶಗಳನ್ನು ಬರೆಯಿರಿ.
13. ರಾಷ್ಟ್ರ ರಾಜ್ಯ ಎಂದರೇನು?

**[B.] ಐದು ಅಂಕದ ಪ್ರಶ್ನೆಗಳು:**

1. ಪ್ರಾಚೀನ ಗ್ರೀಕ್ ನಗರ ರಾಜ್ಯಗಳ ಅವಧಿಯಲ್ಲಿನ ಅಂತರ್‌ರಾಷ್ಟ್ರೀಯ ಸಂಬಂಧ ಕುರಿತು ಟಿಪ್ಪಣಿ ಬರೆಯಿರಿ.
2. ಮಧ್ಯ ಯುಗಾಂತ್ಯದ ಅವಧಿಯಲ್ಲಿ ಅಂತರ್‌ರಾಷ್ಟ್ರೀಯ ಸಂಬಂಧಗಳ ಬಲವರ್ಧನೆಗೆ ಕಾರಣವಾದ ಅಂಶಗಳನ್ನು ವಿವರಿಸಿರಿ.
3. ವೆಸ್ಟ್ ಫೇಲಿಯಾ ಒಪ್ಪಂದದ ಮುಖ್ಯಾಂಶಗಳನ್ನು ಚರ್ಚಿಸಿರಿ.

**[C.] ಹತ್ತು ಅಂಕದ ಪ್ರಶ್ನೆಗಳು:**

1. ಪ್ರಾಚೀನ ನಗರ ರಾಜ್ಯಗಳಿಂದ ಆಧುನಿಕ ರಾಷ್ಟ್ರ ರಾಜ್ಯಗಳ ನಡುವಿನ ಅಂತರ್‌ರಾಷ್ಟ್ರೀಯ ಸಂಬಂಧಗಳ ವಿಕಾಸವನ್ನು ಪರಿಶೀಲಿಸಿರಿ.

ಅಧ್ಯಾಯ 3:

# ಒಂದು ಶೈಕ್ಷಣಿಕ ಶಾಸ್ತ್ರವಾಗಿ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಭಿವೃದ್ಧಿ

## [DEVELOPMENT OF INTERNATIONAL RELATIONS AS AN ACADEMIC DISCIPLINE].

ಪ್ರಸ್ತಾವನೆ **[Introduction]:** ಯಾವುದೇ ಒಂದು ಅಧ್ಯಯನ ಶಾಸ್ತ್ರವಾಗಲಿ ಆರಂಭದಿಂದ ಸ್ವತಂತ್ರ ಅಸ್ತಿತ್ವವನ್ನು ಪಡೆದಿರುವುದಿಲ್ಲ. ಮೊದಲು ತನ್ನೊಡನೆ ಸಂಪರ್ಕ ಹೊಂದಿರುವ ಶಾಸ್ತ್ರವೊಂದರ ಶಾಖೆಯಾಗಿ ಗುರುತಿಸಿಕೊಳ್ಳುವ ಒಂದು ಅಧ್ಯಯನ ವಿಷಯವು ಕಾಲಾನುಕ್ರಮದಲ್ಲಿ ಅಭಿವೃದ್ಧಿಗೊಂಡು ಸ್ವತಂತ್ರ ಅಸ್ತಿತ್ವವನ್ನು ಹೊಂದುತ್ತದೆ. ಈ ತತ್ವಕ್ಕನುಗುಣವಾಗಿ ವಿವಿಧ ಸಮಾಜ ವಿಜ್ಞಾನಗಳು ತಮ್ಮ ಸ್ವತಂತ್ರ ಅಸ್ತಿತ್ವ ಪಡೆದಿರುವ ಕೆಲ ನಿದರ್ಶನಗಳಿವೆ. ಅಂತರ್‌ರಾಷ್ಟ್ರೀಯ ಸಂಬಂಧಗಳು ಎಂಬ ಅಧ್ಯಯನ ಶಾಸ್ತ್ರವೂ ಸಹ ವಿವಿಧ ಅಧ್ಯಯನ ಶಾಸ್ತ್ರಗಳ ಭಾಗವಾಗಿ ಗುರುತಿಸಿಕೊಂಡು ಕಾಲಾನುಕ್ರಮದಲ್ಲಿ ಸ್ವತಂತ್ರ ಅಧ್ಯಯನ ಶಾಸ್ತ್ರವಾಗಿ ಅಭಿವೃದ್ಧಿ ಹೊಂದಿರುವ ನೂತನ ಸಮಾಜ ವಿಜ್ಞಾನವಾಗಿದೆ. ರಾಜ್ಯದ ಪರಿಕಲ್ಪನೆಯಷ್ಟೇ ಪುರಾತನವಾದ ಅಂತರ್‌ರಾಷ್ಟ್ರೀಯ ಸಂಬಂಧಗಳು ಸ್ವತಂತ್ರ ಅಧ್ಯಯನ ಶಾಸ್ತ್ರವಾಗಿ ಇತ್ತೀಚೆಗೆ ಅಂದರೆ 20 ನೇ ಶತಮಾನದ ಆರಂಭದಿಂದ ಗುರುತಿಸಿಕೊಂಡಿದೆ. ಆದ್ದರಿಂದ ಅಂತರ್‌ರಾಷ್ಟ್ರೀಯ ಸಂಬಂಧಗಳು ಎಂಬ ಶೈಕ್ಷಣಿಕ ಶಾಸ್ತ್ರವು ಸಮಾಜ ವಿಜ್ಞಾನಗಳ ಕುಟುಂಬದಲ್ಲಿನ ಅತ್ಯಂತ ಕಿರಿಯ ಸಮಾಜ ವಿಜ್ಞಾನವೆನಿಸಿದೆ.

ರಾಜ್ಯಗಳ ನಡುವಿನ ಪರಸ್ಪರ ಸಂಬಂಧ, ಸಂಘರ್ಷ ಅಥವಾ ಪ್ರಭಾವಗಳ ಅಧ್ಯಯನದ ರೂಪದಲ್ಲಿ ಪ್ರಾಚೀನ ಕಾಲದಿಂದಲೇ ಇತಿಹಾಸ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರಗಳ ಭಾಗವಾಗಿ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನವು ಜಾರಿಯಲ್ಲಿತ್ತು. ಫಲವಾಗಿ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನಕ್ಕೆ ಸ್ವತಂತ್ರ ಅಸ್ತಿತ್ವವಿರಲಿಲ್ಲ. ಮುಂದೆ 1648 ರ ವೆಸ್ಟ್ ಫೇಲಿಯಾ ಶಾಂತಿ ಒಪ್ಪಂದದ ಬಳಿಕ ಅಸ್ತಿತ್ವಕ್ಕೆ ಬಂದ ಆಧುನಿಕ ರಾಷ್ಟ್ರ ರಾಜ್ಯಗಳ ವ್ಯವಸ್ಥೆಯು ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನಕ್ಕೆ ಇಂಬು ನೀಡಿತು. 20 ನೇ ಶತಮಾನದ ಆರಂಭದಿಂದ ಅಂತರ್‌ರಾಷ್ಟ್ರೀಯ



ಸಂಬಂಧಗಳು ಕ್ರಾಂತಿಕಾರಕ ವಿಕಾಸವನ್ನು ಹೊಂದಲಾರಂಭಿಸಿದವು. ಮೊದಲ ಮಹಾ ಯುದ್ಧದೊಡನೆ ಅಂತರ್‌ರಾಷ್ಟ್ರೀಯ ಸಂಬಂಧಗಳ ಸ್ವತಂತ್ರ ಅಧ್ಯಯನವು ಚಾಲನೆ ಪಡೆದು ಅಭಿವೃದ್ಧಿಗೊಳ್ಳುತ್ತಾ ಸಾಗಿ ಒಂದು ಶೈಕ್ಷಣಿಕ ಶಾಸ್ತ್ರವಾಗಿ ಇಂದು ಪರಿಗಣಿಸಲ್ಪಡುತ್ತಿದೆ. ಪ್ರಸ್ತುತ ಅಧ್ಯಾಯದಲ್ಲಿ ಅಂತರ್‌ರಾಷ್ಟ್ರೀಯ ಸಂಬಂಧಗಳು ಹೆಸರಿನ ವಿಷಯವೊಂದು ಹೇಗೆ ಒಂದು ಶೈಕ್ಷಣಿಕ ಶಾಸ್ತ್ರವಾಗಿ ಅಭಿವೃದ್ಧಿಗೊಂಡಿತೆಂಬ ವಿವರಗಳನ್ನು ಸಂಕ್ಷೇಪ್ತವಾಗಿ ಚರ್ಚಿಸಲಾಗಿದೆ.

20 ನೇ ಶತಮಾನದ ಆರಂಭದಲ್ಲಿನ ರಾಷ್ಟ್ರಗಳ ಸಂಬಂಧಗಳ ಅಧ್ಯಯನವನ್ನು ಕುರಿತಾದ ಅಗತ್ಯ ಮತ್ತು ಜಾಗೃತಿಯ ಫಲವಾಗಿ ನಾಲ್ಕು ಭಿನ್ನ ಹಂತಗಳಲ್ಲಿ ಅಂತರ್ ರಾಷ್ಟ್ರೀಯ ಸಂಬಂಧಗಳು ಕ್ರಾಂತಿಕಾರಕ ಬದಲಾವಣೆ ಹೊಂದಿದವು. ಕೆನೆತ್ ಡಬ್ಲ್ಯೂ. ಥಾಂಪ್ಸನ್ ಗುರುತಿಸಿರುವ ಅಂತರ್‌ರಾಷ್ಟ್ರೀಯ ಸಂಬಂಧಗಳ ಬೆಳವಣಿಗೆಯ ನಾಲ್ಕು ಹಂತಗಳ ಮನವರಿಕೆಯು ಒಂದು ಶೈಕ್ಷಣಿಕ ಶಾಸ್ತ್ರವಾಗಿ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಭಿವೃದ್ಧಿಯನ್ನು ಅರಿತುಕೊಳ್ಳಲು ಸಹಾಯಕವಾಗಿದ್ದು ಈ ಕೆಳಗೆ ಆ ನಾಲ್ಕು ಹಂತಗಳ ವಿವರಣೆಯನ್ನು ನೀಡಲಾಗಿದೆ.

### [A.] ರಾಯಭಾರಕ ಇತಿಹಾಸದ ಹಂತ
### [The Diplomatic History Stage]:

ರಾಯಭಾರಕ ಇತಿಹಾಸದ ಹಂತವು ಒಂದು ಶೈಕ್ಷಣಿಕ ಶಾಸ್ತ್ರವಾಗಿ ಅಂತರ್ ರಾಷ್ಟ್ರೀಯ ಸಂಬಂಧಗಳ ಅಭಿವೃದ್ಧಿಯಲ್ಲಿ ಮೊದಲ ಹಂತವಾಗಿದೆ. ಈ ಹಂತವು 20 ನೇ ಶತಮಾನದ ಆರಂಭದಿಂದ ಅಂದರೆ 1900 ರಿಂದ ಮೊದಲ ಮಹಾ ಯುದ್ಧದ ಕೊನೆಯವರೆಗೆ ಅಂದರೆ 1918 ರವರೆಗೆ ಗುರುತಿಸಲ್ಪಟ್ಟಿದೆ. ಈ ಹಂತದಲ್ಲಿ ಇತಿಹಾಸಕಾರರು ರಾಷ್ಟ್ರಗಳ ನಡುವಿನ ರಾಯಭಾರಕ ಸಂಬಂಧಗಳ ಕಾಲಾನುಕ್ರಮಣಿಕೆಯನ್ನು ವಿವರಿಸುವ ಮೂಲಕ ರಾಷ್ಟ್ರಗಳ ನಡುವಿನ ಸಂಬಂಧಗಳನ್ನು ಅಧ್ಯಯನ ಮಾಡುತ್ತಿದ್ದರು. ಅಮೇರಿಕಾದ ಅಥವಾ ಇನ್ನಿತರ ಯಾವುದೇ ದೇಶಗಳ ವಿಶ್ವ ವಿದ್ಯಾನಿಲಯಗಳಲ್ಲಿ ಮೊದಲ ಮಹಾ ಯುದ್ಧದ ಮುನ್ನ ಅಂತರ್‌ರಾಷ್ಟ್ರೀಯ ಸಂಬಂಧಗಳ ವ್ಯವಸ್ಥಿತ ಅಧ್ಯಯನ ಜರುಗುತ್ತಿರಲಿಲ್ಲ. ಆದ್ದರಿಂದಲೇ ಇತಿಹಾಸಕಾರ ಆಲ್‌ಫ್ರೆಡ್ ಜಿಮ್ಮರ್ನ್ 'ಮೊದಲ ಮಹಾ ಯುದ್ಧದ ಮುನ್ನ ಅಂತರ್‌ರಾಷ್ಟ್ರೀಯ ಸಂಬಂಧಗಳ ಬೋಧನೆ ಅಸ್ತಿತ್ವದಲ್ಲಿರಲಿಲ್ಲ' ಎಂಬುದಾಗಿ ಅಭಿಪ್ರಾಯಪಟ್ಟಿದ್ದರು.

ಪೌಲ್ ಎಸ್. ರೈನಿಶ್ಟ್ ಎಂಬಾತ ಜಾಗತಿಕ ರಾಜಕೀಯ ಕುರಿತು ವಿಸ್ಕಾನ್ಸಿನ್ ವಿಶ್ವ ವಿದ್ಯಾಲಯದಲ್ಲಿ ಉಪನ್ಯಾಸವನ್ನು ಈ ಮೊದಲ ಅವಧಿಯಲ್ಲಿ ನೀಡಿದ್ದನು. ಜೊತೆಗೆ ಅಂತರ್‌ರಾಷ್ಟ್ರೀಯ ಸಂಬಂಧಗಳನ್ನು ವಿವಿಧ ಕೋರ್ಸುಗಳಡಿ ವಿಸ್ಕಾನ್ಸಿನ್ ವಿಶ್ವ ವಿದ್ಯಾಲಯಗಳಲ್ಲಿ ಅಭ್ಯಸಿಸಲಾಗುತ್ತಿತ್ತು. ಆದರೆ, ಅಂತರ್‌ರಾಷ್ಟ್ರೀಯ ಸಂಬಂಧಗಳ ವ್ಯವಸ್ಥಿತ

ಅಧ್ಯಯನ ಜರುಗುತ್ತಿರಲಿಲ್ಲ. ಕೆಲವೊಮ್ಮೆ ಅವಶ್ಯಕತೆಗಿಂತ ಅಧಿಕ ಮಹತ್ವವನ್ನು ಅಂತರ ರಾಷ್ಟ್ರೀಯ ಬೆಳವಣಿಗೆಗಳಿಗೆ ನೀಡಿ ಸಂಬಂಧಗಳನ್ನು ನಿರ್ಲಕ್ಷಿಸಲಾಗುತ್ತಿತ್ತು. 1914 ರಲ್ಲಿ ಆರಂಭವಾದ ಮೊದಲ ಜಾಗತಿಕ ಯುದ್ಧವು ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನ ಮತ್ತು ಬೋಧನೆಯ ಮೇಲೆ ಗಾಢವಾದ ಪ್ರಭಾವ ಬೀರಿತು. ಅನೇಕ ಚಿಂತಕರು ರಾಷ್ಟ್ರಗಳ ನಡುವಿನ ಸಂಬಂಧಗಳ ಅಧ್ಯಯನದ ಅಗತ್ಯವನ್ನು ಮನಗಂಡು ಅವುಗಳಿಗೆ ತಮ್ಮ ಅಧ್ಯಯನದಲ್ಲಿ ಮಹತ್ವವನ್ನು ನೀಡತೊಡಗಿದರು. ಫಲವಾಗಿ ವಿವಿಧ ವಿಶ್ವ ವಿದ್ಯಾಲಯಗಳಲ್ಲಿ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನಕ್ಕೆ ನೂತನ ಅಧ್ಯಯನ ಪೀಠಗಳನ್ನು ಸ್ಥಾಪಿಸಲು ಚರ್ಚೆಗಳಾರಂಭವಾದವು. ಈ ನಿಟ್ಟಿನಲ್ಲಿ ಇಂಗ್ಲೆಂಡಿನ ವೇಲ್ಸ್ ವಿಶ್ವ ವಿದ್ಯಾಲಯವು ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನಕ್ಕಾಗಿ ವಿಶ್ವದ ಮೊದಲ ಅಧ್ಯಯನ ಪೀಠವನ್ನು 1919 ರಲ್ಲಿ ಸ್ಥಾಪಿಸಿತು. ಆಲ್‌ಫ್ರೆಡ್ ಜಿಮ್ಮರ್ನ್ ಈ ಅಂತರ ರಾಷ್ಟ್ರೀಯ ಸಂಬಂಧಗಳ ಮೊದಲ ಅಧ್ಯಯನ ಪೀಠದ ಮುಖ್ಯಸ್ಥರಾಗಿ ನೇಮಕಗೊಂಡರು. ಕಾಲಾನುಕ್ರಮದಲ್ಲಿ ವುಡ್ರೊ ವಿಲ್ಸನ್ ಪೀಠವೆಂದು ಗುರುತಿಸಲ್ಪಟ್ಟ ಈ ಪೀಠದ ಮುಖ್ಯಸ್ಥರಾಗಿ ಸಿ. ಕೆ. ವೆಬ್‌ಸ್ಟರ್ ಮತ್ತು ಇ. ಎಚ್. ಕಾರ್ ಕಾರ್ಯಾಚರಿಸಿದರು. ಹೀಗೆ ಅಂತರ್‌ರಾಷ್ಟ್ರೀಯ ಸಂಬಂಧಗಳ ವ್ಯವಸ್ಥಿತ ಅಧ್ಯಯನವು ಚಾಲನೆಗೊಂಡು ಶೈಕ್ಷಣಿಕ ಶಾಸ್ತ್ರವಾಗಿ ಗುರುತಿಸಿಕೊಳ್ಳಲು ಮೊದಲ ಹಂತದಲ್ಲಿ ಚಾಲನೆ ದೊರಕಿತು.

ಆರಂಭದಲ್ಲಿ ರಾಯಭಾರಿ ಇತಿಹಾಸಕಾರರು ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನಕ್ಕೆ ಕೈಹಾಕಿದ್ದರಿಂದ ರಾಷ್ಟ್ರಗಳ ನಡುವಿನ ರಾಯಭಾರಿ ಸಂಬಂಧಗಳ ಇತಿಹಾಸಕ್ಕೆ ಮಾತ್ರ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನವು ಸೀಮಿತವಾಗಿತ್ತು. ಈ ಬೆಳವಣಿಗೆಗೆ ಅಂದು ರಾಷ್ಟ್ರಗಳ ನಡುವಿನ ಸಂಬಂಧ ರಾಯಭಾರಿ ಸಂಬಂಧವನ್ನು ಆಧರಿಸಿದ್ದುದು ಪ್ರಮುಖ ಕಾರಣವಾಗಿತ್ತು. ಆದುದರಿಂದ ರಾಷ್ಟ್ರಗಳ ನಡುವಿನ ರಾಜಕೀಯ ಮತ್ತು ರಾಯಭಾರಿ ಸಂಬಂಧಗಳ ಐತಿಹಾಸಿಕ ಅಧ್ಯಯನಕ್ಕೆ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನವು ಅಂಟಿಕೊಂಡಿತ್ತು. ಹೀಗಾಗಿ ಚಿಂತಕರು ರಾಷ್ಟ್ರಗಳ ನಡುವಿನ ರಾಯಭಾರಿ ಸಂಬಂಧಗಳ ಕಾಲಾನುಕ್ರಮಣಿಕೆಯ ವಿವರಗಳ ಅಧ್ಯಯನದಲ್ಲಿ ಮಹತ್ವ ನೀಡಿದರೇ ಹೊರತು, ಸೈದ್ಧಾಂತಿಕವಾಗಿ ರಾಷ್ಟ್ರಗಳ ಸಂಬಂಧಕ್ಕೆ [illegible] ಮಾದರಿಯನ್ನು ಪ್ರಭಾವಿಸುವ [illegible] ಅಧ್ಯಯನಕ್ಕೆ ಆಸ್ಥೆ ತೋರಲಿಲ್ಲ. ಜೊತೆಗೆ ಅಂದಿನ ವರ್ತಮಾನದ ಅಗತ್ಯಗಳಿಗೆ [illegible] ಬೆಳವಣಿಗೆಗಳನ್ನು ಜೋಡಿಸಲು ರಾಯಭಾರಿ ಸಂಬಂಧಗಳ ಐತಿಹಾಸಿಕ ಅಧ್ಯಯನವು ವಿಫಲಗೊಂಡಿತು. ಇದರೊಡನೆ ವಿವರಣಾತ್ಮಕ ಹಾಗೂ ಕಾಲಾನುಕ್ರಮಣಿಕೆಯ ರಾಯಭಾರಿ ಇತಿಹಾಸಕಾರರ ಅಧ್ಯಯನವು ಅಂತರ್‌ರಾಷ್ಟ್ರೀಯ ಸಂಬಂಧಗಳ ಭವಿಷ್ಯದ ಬಗೆಗೆ ಮೌನವಾಗಿ ಉಳಿದುಕೊಂಡಿತ್ತು.



ಒಟ್ಟಿನಲ್ಲಿ ಮೊದಲ ಹಂತದ ರಾಯಭಾರಿ ಇತಿಹಾಸಕಾರರ ಅವಧಿಯಲ್ಲಿ ಅಂತರ್ ರಾಷ್ಟ್ರೀಯ ಅಧ್ಯಯನವು ರಾಷ್ಟ್ರಗಳ ನಡುವಿನ ಕೆಲ ವಾಸ್ತವಿಕ ಸಂಗತಿಗಳನ್ನು ವಿವರಿಸಿತೇ ಹೊರತು ವರ್ತಮಾನದ ಅಗತ್ಯಗಳನ್ನಾಗಲಿ, ಭವಿಷ್ಯದ ಚಿಂತನೆಯನ್ನಾಗಲಿ ಅಥವಾ ಅಂತರ್‌ರಾಷ್ಟ್ರೀಯ ಸಂಬಂಧಗಳ ಸೈದ್ಧಾಂತಿಕ ತಳಹದಿಯನ್ನಾಗಲಿ ಪ್ರತಿಪಾದಿಸುವಲ್ಲಿ ವಿಫಲವಾಯಿತು. ಒಂದು ಶೈಕ್ಷಣಿಕ ಶಾಸ್ತ್ರವಾಗಿ ಚಾಲನೆ ಪಡೆದರೂ ಅರ್ಥಪೂರ್ಣ ಅಧ್ಯಯನ ಜರುಗದೇ ಮೊದಲ ಹಂತದಲ್ಲಿ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನವು ತೃಪ್ತಿಕರ ಅಭಿವೃದ್ಧಿಯನ್ನು ತಾಳಲು ಸಾಧ್ಯವಾಗಲಿಲ್ಲ.

### [B.] ಪ್ರಚಲಿತ ಘಟನೆಗಳ ಹಂತ [The Current Events Stage]:

1914 ರಿಂದ 1918 ರವರೆಗೆ ಜರುಗಿದ ಮೊದಲ ಜಾಗತಿಕ ಯುದ್ಧದ ಸಮಯದಲ್ಲಿನ ರಾಷ್ಟ್ರಗಳ ನಡುವಿನ ಸಂಬಂಧಗಳು ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನಕ್ಕೆ ನೂತನ ತಿರುವು ನೀಡಿದವು. ವಿಶ್ವದ ರಾಷ್ಟ್ರಗಳ ನಡುವಿನ ಪ್ರಚಲಿತ ಘಟನೆಗಳು ಮತ್ತು ಸವಾಲುಗಳ ಬೆಳಕಿನಲ್ಲಿ ವೇಲ್ಸ್ ವಿಶ್ವ ವಿದ್ಯಾಲಯದಲ್ಲಿ ಸ್ಥಾಪನೆಗೊಂಡಿದ್ದ ವುಡ್ರೊ ವಿಲ್ಸನ್ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನ ಪೀಠವು ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನಕ್ಕೆ ಮುಂದಾಯಿತು. ರಾಷ್ಟ್ರಗಳ ನಡುವಿನ ಘಟನೆ ಅಥವಾ ಸವಾಲುಗಳನ್ನು ಆಧರಿಸಿದ ಪತ್ರಿಕೆಗಳ ವರದಿಗಳು, ಸಂಶೋಧನಾ ಲೇಖನಗಳು, ಪ್ರಬಂಧಗಳಂತಹ ಪ್ರಚಲಿತ ಸಾಹಿತ್ಯವನ್ನು ಪರಾಮರ್ಶಿಸಿ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನಕ್ಕೆ ಆದ್ಯತೆಯನ್ನು ನೀಡಲಾಯಿತು. ಜೊತೆಗೆ ಐತಿಹಾಸಿಕ ಅವಲಂಬನೆಯನ್ನು ಕೈಬಿಟ್ಟು ಮೊದಲ ಹಂತದ ದೋಷಗಳಿಂದ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನವನ್ನು ಮುಕ್ತಗೊಳಿಸಲು ಈ ಹಂತದಲ್ಲಿ ಚಿಂತಕರು ಪ್ರಯತ್ನಿಸಿದರು.

ಗಮನಾರ್ಹ ಅಂಶವೇನೆಂದರೆ, ಪ್ರಚಲಿತ ಘಟನೆಗಳ ಎರಡನೇ ಹಂತವೂ ಸಹ ಹಲವು ದೋಷಗಳಿಂದ ಮುಕ್ತವಾಗಿರಲಿಲ್ಲ. ರಾಷ್ಟ್ರಗಳ ನಡುವಿನ ಪ್ರಚಲಿತ ಘಟನೆ ಅಥವಾ ಸವಾಲುಗಳಿಗೆ ಮಹತ್ವ ನೀಡುವ ಭರದಲ್ಲಿ ಈ ಹಂತದ ಚಿಂತಕರು ನಿರ್ದಿಷ್ಟ ಘಟನೆ ಅಥವಾ ಸವಾಲೊಂದರ ಬೇರುಗಳುಳ್ಳ ಐತಿಹಾಸವನ್ನೇ ಕಡೆಗಣಿಸಿದರು. ಜೊತೆಗೆ ಮೊದಲ ಹಂತದಂತೆ ಎರಡನೇ ಹಂತವೂ ಸಹ ಅಂತರ್‌ರಾಷ್ಟ್ರೀಯ ಸಂಬಂಧಗಳ ಭವಿಷ್ಯದ ಸಾಧ್ಯತೆಗಳನ್ನು ನಿರ್ಲಕ್ಷಿಸಿತು. ಇದರೊಡನೆ ಸೈದ್ಧಾಂತಿಕ ತಳಹದಿಯನ್ನು ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನಕ್ಕೆ ಒದಗಿಸುವಲ್ಲಿ ಎರಡನೇ ಹಂತವು ಸಫಲಗೊಳ್ಳಲಿಲ್ಲ. ಭವಿಷ್ಯವನ್ನು ವಿಶ್ಲೇಷಿಸಲು ನೆರವಾಗುವಂತೆ ವರ್ತಮಾನವನ್ನು ಭೂತ ಕಾಲದೊಡನೆ ಸಂಪರ್ಕಿಸಲು ವಿಫಲಗೊಂಡು ಅಲ್ಪ ಕಾಲಾವಧಿಯಲ್ಲಿಯೇ ಎರಡನೇ ಹಂತವು ಅಂದರೆ ಪ್ರಚಲಿತ ಘಟನೆಗಳ ಹಂತವು ಕೊನೆಗೊಂಡಿತು.

## [C. ಕಾನೂನಾತ್ಮಕ ಹಾಗೂ ಸಾಂಸ್ಥಿಕ ಹಂತ [Leagle and Institutional Stage]:

ಒಂದು ಶೈಕ್ಷಣಿಕ ಶಾಸ್ತ್ರವಾಗಿ ಅಂತರರಾಷ್ಟ್ರೀಯ ಸಂಬಂಧಗಳ ಅಭಿವೃದ್ಧಿಯಲ್ಲಿ ಕಾನೂನಾತ್ಮಕ ಮತ್ತು ಸಾಂಸ್ಥಿಕ ಹಂತವು ಮೂರನೇ ಹಂತವೆನಿಸಿದೆ. ಎರಡನೇ ಹಂತದೊಡನೆ ಸಾಗಿದ ಈ ಮೂರನೇ ಹಂತವು ರಾಷ್ಟ್ರಗಳ ನಡುವಿನ ಸಂಬಂಧಗಳ ಸ್ವರೂಪ ಮತ್ತು ವಸ್ತು ವಿಷಯವನ್ನು ಸುಧಾರಿಸುವ ಮೂಲಕ ಅಂತರರಾಷ್ಟ್ರೀಯ ಕಾನೂನು ಮತ್ತು ಸಂಸ್ಥೆಗಳ ಅಭಿವೃದ್ಧಿಯೊಡನೆ ಅಂತರರಾಷ್ಟ್ರೀಯ ಸಂಬಂಧಗಳ ಭವಿಷ್ಯತ್ತಿಗೆ ಶ್ರಮಿಸಿತು. ಆದರ್ಶವಾದಿ ವಿಧಾನವನ್ನು ಅನುಸರಿಸಿದ ಈ ಹಂತದಲ್ಲಿನ ಚಿಂತಕರು ಮೊದಲ ಜಾಗತಿಕ ಯುದ್ಧ ನಂತರದ ವುಡ್ರೊ ವಿಲ್ಸನ್‌ರ 14 ಅಂಶಗಳ ಸೂತ್ರ, ರಾಷ್ಟ್ರಗಳ ಸಂಘ, ಪ್ಯಾರಿಸ್ ಶಾಂತಿ ಒಪ್ಪಂದಗಳಿಂದ ಪ್ರಭಾವಿತರಾಗಿದ್ದರು. ಹೀಗಾಗಿ ಅಂತರರಾಷ್ಟ್ರೀಯ ಕಾನೂನುಗಳ ಕ್ರೋಢೀಕರಣದ ಮೂಲಕ ಅಧ್ಯಯನಕ್ಕೆ ಮುಂದಾದ ಈ ಹಂತದ ಚಿಂತಕರು ಅಂತರರಾಷ್ಟ್ರೀಯ ಕಾನೂನು ಮತ್ತು ಸಂಸ್ಥೆಗಳ ನೆರವಿನಿಂದ ಅಂತರರಾಷ್ಟ್ರೀಯ ಸಂಬಂಧಗಳನ್ನು ವ್ಯವಸ್ಥಿತವಾಗಿ ಅಧ್ಯಯಿಸಲು ಸಾಧ್ಯವೆಂದು ನಂಬಿದ್ದರು. ಜೊತೆಗೆ ಅಂತರರಾಷ್ಟ್ರೀಯ ಸಂಬಂಧಗಳ ಕಾನೂನಾತ್ಮಕ ಮತ್ತು ಸಾಂಸ್ಥಿಕ ಅಧ್ಯಯನವು ಯುದ್ಧಗಳ ನಿಯಂತ್ರಣ, ಶಾಂತಿ, ಅಸಮಾನತೆಗಳನ್ನು ಹೋಗಲಾಡಿಸಿ, ಮನುಕುಲವನ್ನು ರಕ್ಷಿಸಬಲ್ಲದೆಂದು ಪ್ರತಿಪಾದಿಸಿದ್ದರು. ಜೊತೆಗೆ ಈ ಕೆಳಗಿನ ಮೂರು ಪರ್ಯಾಯಗಳನ್ನು ಮೂರನೇ ಹಂತದ ಚಿಂತಕರು ಪ್ರಸ್ತಾಪಿಸಿದ್ದರು.

1. ಜಗತ್ತಿನಲ್ಲಿ ಶಾಂತಿ ಮತ್ತು ಭದ್ರತೆಯನ್ನು ನೆಲೆಗೊಳಿಸಲು ಅಗತ್ಯ ನಿರ್ದೇಶನ ನೀಡುವ ರಾಷ್ಟ್ರಗಳಿಂತ ಉನ್ನತವಾದ ಸಂಸ್ಥೆಯೊಂದನ್ನು ಸ್ಥಾಪಿಸುವುದು.
2. ಅಂತರರಾಷ್ಟ್ರೀಯ ಕಾನೂನುಗಳನ್ನು ರಚಿಸಿ ರಾಷ್ಟ್ರಗಳ ನಡುವಿನ ಯುದ್ಧಗಳಿಗೆ ಕಾನೂನಾತ್ಮಕ ನಿಯಂತ್ರಣ ಹೇರುವುದು.
3. ಜಾಗತಿಕ ನಿಶ್ಶಸ್ತ್ರೀಕರಣ ಅಥವಾ ಶಸ್ತ್ರ ನಿಯಂತ್ರಣ ಜಾರಿಗೊಳಿಸಿ ಶಾಂತಿಯನ್ನು ನೆಲೆಗೊಳಿಸುವುದು.

ಮಾನವಕುಲದ ಒಳಿತನ್ನು ಕೇಂದ್ರಬಿಂದುವಾಗಿ ಹೊಂದಿದ್ದ ಈ ಹಂತದ ಅಂತರರಾಷ್ಟ್ರೀಯ ಸಂಬಂಧಗಳ ಅಧ್ಯಯನವು ಯುದ್ಧಗಳನ್ನು ತಡೆಯಲೆಂದು ಬಯಸಿತು. ಜೊತೆಗೆ ಅಂತರರಾಷ್ಟ್ರೀಯ ಸಂಬಂಧಗಳನ್ನು ಕಾನೂನಾತ್ಮಕ ಮತ್ತು ಸಾಂಸ್ಥಿಕ ಚೌಕಟ್ಟಿನೊಳಗಿರಿಸಲು ಪ್ರಯತ್ನಿಸಿತು. ಆದ್ದರಿಂದ ಜಗತ್ತಿನ ಎಲ್ಲ ಸಮಸ್ಯೆಗಳಿಗೆ ಕಾನೂನುಗಳನ್ನು, ಸಾಂಸ್ಥಿಕರಣಗೊಳಿಸುವ ಮೂಲಕ ಪರಿಹಾರ ಕಂಡುಕೊಳ್ಳಬಹುದೆಂದು ಈ ಹಂತದ ಚಿಂತಕರು ನಂಬಿದ್ದರು. ಆದರೆ ಮಾನವ ಸ್ವಭಾವದಲ್ಲಿ ಯುದ್ಧ, ಹಿಂಸೆ,



ಅಸಮಾನತೆಗಳಿಂದ ಮುಕ್ತವಾದ ಆದರ್ಶ ವಿಶ್ವವನ್ನು ಈ ಹಂತ ಕಲ್ಪಿಸಿಕೊಂಡಿತು. ಆದರೆ, ಅಂತರರಾಷ್ಟ್ರೀಯ ಸಂಬಂಧಗಳ ಭವಿಷ್ಯಕ್ಕೆ ಮಹತ್ವ ನೀಡಿ ಪ್ರಚಲಿತ ಹಾಗೂ ಭೂತ ಕಾಲದ ವಾಸ್ತವಿಕತೆಗಳನ್ನು ಕಡೆಗಣಿಸಿತೆಂದು ಈ ಹಂತವು ಟೀಕಿಸಲ್ಪಟ್ಟಿತು. ಜೊತೆಗೆ ಆದರ್ಶವಾದಕ್ಕೆ ಅತಿಯಾದ ಆದ್ಯತೆ ನೀಡಲಾಯಿತೆಂಬ ವಿಮರ್ಶೆಗೂ ಮೂರನೇ ಹಂತ ಗುರಿಯಾಯಿತು. 1939 ರಲ್ಲಿ ಎರಡನೇ ಜಾಗತಿಕ ಯುದ್ಧ ಆರಂಭಗೊಳ್ಳುವ ಮೂಲಕ ಈ ಹಂತದ ವೈಫಲ್ಯ ಸ್ಪಷ್ಟವಾಯಿತು.

## [D.] ಮಹಾ ಯುದ್ಧೋತ್ತರ ಹಂತ [Post World War Stage]:

1939 ರಿಂದ 1945 ರವರೆಗೆ ಜರುಗಿದ ಎರಡನೇ ಜಾಗತಿಕ ಯುದ್ಧದ ನಂತರದ ಕಾಲವನ್ನು ಸಮಕಾಲೀನ ಜಗತ್ತು ಎನ್ನಲಾಗುತ್ತದೆ. ಈ ಮಹಾ ಯುದ್ಧೋತ್ತರ ಕಾಲವು ಒಂದು ಶೈಕ್ಷಣಿಕ ಶಾಸ್ತ್ರವಾಗಿ ಅಂತರರಾಷ್ಟ್ರೀಯ ಸಂಬಂಧಗಳ ಅಭಿವೃದ್ಧಿಯಲ್ಲಿ ನಾಲ್ಕನೇ ಮತ್ತು ಕೊನೆಯ ಹಂತವಾಗಿದೆ. ವರ್ತನಾ ಚಳುವಳಿಯಿಂದ ಪ್ರಭಾವಿತಗೊಂಡ ಅಂತರರಾಷ್ಟ್ರೀಯ ಸಂಬಂಧಗಳ ಅಧ್ಯಯನವು ಕ್ರಾಂತಿಕಾರಕ ಅಭಿವೃದ್ಧಿಯನ್ನು ಹೊಂದಲು ಈ ಹಂತವು ಕಾರಣವಾಯಿತು. ಸಂಕೀರ್ಣ ಅಂತರರಾಷ್ಟ್ರೀಯ ಬೆಳವಣಿಗೆಗಳಿಂದ ಕೂಡಿರುವ ನಾಲ್ಕನೇ ಹಂತದಲ್ಲಿ ಅಂತರರಾಷ್ಟ್ರೀಯ ಸಂಬಂಧಗಳು ಒಂದು ಸ್ವತಂತ್ರ ಶೈಕ್ಷಣಿಕ ವಿಷಯವಾಗಿ ಗುರುತಿಸಿಕೊಳ್ಳಲು ಈ ಕೆಳಗಿನ ಅಂಶಗಳು ಕಾರಣವಾಗಿದ್ದು ಅವುಗಳ ಸಂಕ್ಷಿಪ್ತ ವಿವರಣೆಯನ್ನು ಒದಗಿಸಲಾಗಿದೆ.

**1. ಸೈದ್ಧಾಂತಿಕ ವಿಧಾನಗಳಿಗೆ ಮಹತ್ವ:** ಎರಡನೇ ಮಹಾ ಯುದ್ಧ ಆರಂಭಗೊಳ್ಳುವ ಮೂಲಕ ಜಗತ್ತಿನ ರಾಷ್ಟ್ರಗಳ ಸಂಬಂಧಗಳು ಹಳಸಿದವು. ಯುದ್ಧದ ವೇಳೆಯಲ್ಲಿನ ರಾಷ್ಟ್ರಗಳ ಸಂಬಂಧವನ್ನು ಅರ್ಥೈಸಿಕೊಳ್ಳಲು ಸಾಂಪ್ರದಾಯಿಕ ವಿಧಾನಗಳು ವಿಫಲಗೊಂಡವು. ಯುದ್ಧೋತ್ತರ ವೇಳೆಯಲ್ಲಿ ರಾಷ್ಟ್ರಗಳ ನಡುವಿನ ಶಕ್ತಿ ಬಣಗಳ ರಚನೆಯನ್ನು ಪರಿಶೀಲಿಸಿ ವಿವರಿಸಲು ನೂತನ ವಿಧಾನಗಳ ಅಗತ್ಯತೆ ಕಂಡು ಬಂದಿತು. ಈ ಸಮಯದಲ್ಲಿ ಅಂತರರಾಷ್ಟ್ರೀಯ ಸಂಬಂಧಗಳ ಚಿಂತಕರು ನೂತನ ಸೈದ್ಧಾಂತಿಕ ವಿಧಾನಗಳನ್ನು ಬಳಸಲು ಮುಂದಾದರು. ಉದಾ: ವ್ಯವಸ್ಥಾ ವಿಧಾನ, ವರ್ತನಾ ವಿಧಾನ, ಕ್ರೀಡಾ ವಿಧಾನ, ನಿರ್ಧಾರ ಕೈಗೊಳ್ಳುವ ವಿಧಾನ ಮುಂತಾದ ಸೈದ್ಧಾಂತಿಕ ವಿಧಾನಗಳ ಪ್ರತಿಪಾದನೆ. ಈ ಬೆಳವಣಿಗೆಯಿಂದ ಅಂತರರಾಷ್ಟ್ರೀಯ ಸಂಬಂಧಗಳ ಅಧ್ಯಯನಕ್ಕೆ ಸೈದ್ಧಾಂತಿಕ ನೆಲೆ ದೊರೆತು ಅದು ಪರಿಪೂರ್ಣ ಶೈಕ್ಷಣಿಕ ಶಾಸ್ತ್ರವಾಗಿ ಅಭಿವೃದ್ಧಿ ಹೊಂದಲು ಸಾಧ್ಯವಾಯಿತು.

**2. ಸಮಗ್ರ ಅಂಶಗಳ ಅಧ್ಯಯನಕ್ಕೆ ಒತ್ತು:** ನಾಲ್ಕನೇ ಹಂತದಲ್ಲಿ ಅಂತರರಾಷ್ಟ್ರೀಯ ಸಂಬಂಧಗಳು ಕೇವಲ ಕಾನೂನಾತ್ಮಕ ಅಥವಾ ಸಾಂಸ್ಥಿಕ ಅಂಶಗಳ ಅಧ್ಯಯನದ ಬದಲು ರಾಷ್ಟ್ರಗಳ ನಡುವಿನ ಸಮಗ್ರ ಅಂಶಗಳ ಅಧ್ಯಯನಕ್ಕೆ ಒತ್ತು ಹೊಂದಿದವು. ಇದರಿಂದ

ರಾಷ್ಟ್ರಗಳ ನಡುವಿನ ಎಲ್ಲ ರಂಗಗಳ ಅಂದರೆ ಸೈನಿಕ, ಆರ್ಥಿಕ, ಸಾಂಸ್ಕೃತಿಕ, ವಿದೇಶಾಂಗ ಸಂಬಂಧಗಳು ಅಂತರ್‌ರಾಷ್ಟ್ರೀಯ ಸಂಬಂಧಗಳಡಿ ಅಭ್ಯಸಿಸಲ್ಪಡತೊಡಗಿದವು. ಫಲವಾಗಿ ಅಂತರ್‌ರಾಷ್ಟ್ರೀಯ ಸಂಬಂಧಗಳ ವ್ಯಾಪ್ತಿ ವಿಶಾಲಗೊಂಡು ಅದೊಂದು ಪರಿಪೂರ್ಣ ಶೈಕ್ಷಣಿಕ ಶಾಸ್ತ್ರವಾಗಿ ಗುರುತಿಸಿಕೊಳ್ಳುವಂತಾಯಿತು.

**3. ವಿವಿಧ ಕಾಳಜಿಗಳಿಗೆ ಪ್ರಾಶಸ್ತ್ಯ:** ನಾಲ್ಕನೇ ಹಂತದಲ್ಲಿ ಅಂದರೆ 1945 ರಿಂದ 2000 ದವರೆಗಿನ ಕಾಲಾವಧಿಯಲ್ಲಿ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನವು ಕೆಲ ಜಾಗತಿಕ ಕಾಳಜಿಗಳಿಗೆ ಮಹತ್ವ ನೀಡಿತು. ನಿಶಸ್ತ್ರೀಕರಣ, ಶಸ್ತ್ರ ನಿಯಂತ್ರಣ, ಶಕ್ತಿ ಸಮತೋಲನ, ವಿವಾದಗಳ ಶಾಂತಿಯುತ ಪರಿಹಾರದಂತಹ ಕಾಳಜಿಗಳಿಗೆ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನವು ಅವಕಾಶ ಒದಗಿಸಿತು. ಫಲವಾಗಿ ಅನೇಕ ಸಿದ್ಧಾಂತ ಅಥವಾ ವಿಧಾನಗಳು ಪ್ರತಿಪಾದಿಸಲ್ಪಟ್ಟವು. ಆದರೆ, ಜಾಗತಿಕ ಕಾಳಜಿ ಕುರಿತಾದ ಹಲವು ಪ್ರಶ್ನೆಗಳಿಗೆ ಉತ್ತರ ಒದಗಿಸಲು ಜಾರಿಯಲ್ಲಿದ್ದ ಸಿದ್ಧಾಂತಗಳು ಅಸಮರ್ಥವಾದವು. ಆಗ ವೈಜ್ಞಾನಿಕ ಮತ್ತು ಪ್ರಾಯೋಗಿಕ ಅಂಶಗಳಿಗೆ ಮಹತ್ವ ದೊರಕಿತು. ಇದರಿಂದ ಪ್ರತ್ಯೇಕ ಅಧ್ಯಯನ ಶಾಸ್ತ್ರವಾಗಿ ಅಂತರ್‌ರಾಷ್ಟ್ರೀಯ ಸಂಬಂಧಗಳು ಅಭಿವೃದ್ಧಿ ಹೊಂದಲು ಸುಲಭವಾಯಿತು.

**4. ವರ್ತನಾ ವಿಧಾನಕ್ಕೆ ಆದ್ಯತೆ:** ಮಾನವರ ರಾಜಕೀಯ ವರ್ತನೆಗಳನ್ನು ಮನವರಿಕೆ ಮಾಡಿಕೊಳ್ಳಲು ಜನ್ಮ ತಾಳಿದ ವರ್ತನಾ ವಿಧಾನವನ್ನು ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನದಲ್ಲಿಯೂ ಬಳಸಿಕೊಳ್ಳಲಾಯಿತು. ಇದರಿಂದ ಅಂತರ್‌ರಾಷ್ಟ್ರೀಯ ಸಂಬಂಧಗಳು ಬಹುಶಾಸ್ತ್ರೀಯ ಆಯಾಮವನ್ನು ತಾಳಿ ವೈಜ್ಞಾನಿಕ ಅಧ್ಯಯನವು ಸಾಧ್ಯವಾಯಿತು. ಜೊತೆಗೆ ಅಂತರ್‌ರಾಷ್ಟ್ರೀಯ ಸಂಬಂಧಗಳ ಪರಿಪೂರ್ಣ ಶೈಕ್ಷಣಿಕ ಶಾಸ್ತ್ರವಾಗಿ ಗುರುತಿಸಿಕೊಳ್ಳುವಂತಾಯಿತು.

ಒಟ್ಟಿನಲ್ಲಿ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನವು ಮೊದಲ ಹಂತದಿಂದ ನಾಲ್ಕನೇ ಹಂತದವರೆಗೆ ಆಮೂಲಾಗ್ರ ಬದಲಾವಣೆಯನ್ನು ಮೈಗೂಡಿಸಿಕೊಂಡು ಪ್ರಸ್ತುತ ಸ್ವತಂತ್ರ ಶೈಕ್ಷಣಿಕ ವಿಷಯವಾಗಿ ಬೆಳೆದು ನಿಂತಿದೆ. ನೂತನ ಪರಿಕಲ್ಪನೆಗಳು ಮತ್ತು ವಿಧಾನಗಳು ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನವನ್ನು ಪ್ರಸ್ತುತ ವ್ಯವಸ್ಥಿತ ಅಧ್ಯಯನ ಶಾಸ್ತ್ರವಾಗಿ ಪರಿಗಣಿಸಲ್ಪಡುವಂತೆ ಮಾಡಿದುದು ಸುಸ್ಪಷ್ಟ. ಇಂದು ವಿಶಾಲ ಮತ್ತು ಸಂಕೀರ್ಣ ಅಧ್ಯಯನ ವಿಷಯವೆನಿಸಿರುವ ಅಂತರ್‌ರಾಷ್ಟ್ರೀಯ ಸಂಬಂಧಗಳು ಸಾರ್ವತ್ರಿಕ ಮಾನ್ಯತೆಯುಳ್ಳ ಸಿದ್ಧಾಂತಗಳ ಅಥವಾ ವಿಧಾನಗಳ ಮಿತಿಗೊಳಪಟ್ಟಿರುವುದು ಗಮನಾರ್ಹ ಸಂಗತಿ. ಆದ್ದರಿಂದಲೇ ಇಂದಿಗೂ ಚಿಂತಕರಲ್ಲಿ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನವು ಸ್ವತಂತ್ರ ಅಧ್ಯಯನ ಶಾಸ್ತ್ರವೇ ಎಂಬಂಶ ಕುರಿತಂತೆ ಜಿಜ್ಞಾಸೆ ಮುಂದುವರೆದಿದೆ.



## ಮಾದರಿ ಪ್ರಶ್ನೆಗಳು [Model Questions]:

[A.] ಎರಡು ಅಂಕದ ಪ್ರಶ್ನೆಗಳು:

1. ಆರಂಭದಲ್ಲಿ ಅಂತರ್‌ರಾಷ್ಟ್ರೀಯ ಸಂಬಂಧಗಳು ಯಾವ ಸಮಾಜ ವಿಜ್ಞಾನಗಳ ಭಾಗವಾಗಿ ಅಭ್ಯಸಿಸಲ್ಪಡುತ್ತಿದ್ದವು?
2. ಕೆನೆತ್ ಡಬ್ಲ್ಯೂ. ಥಾಂಪ್ಸನ್ ಪ್ರತಿಪಾದಿಸಿರುವ ಅಂತರ್‌ರಾಷ್ಟ್ರೀಯ ಸಂಬಂಧಗಳ ನಾಲ್ಕು ಹಂತಗಳನ್ನು ಹೆಸರಿಸಿರಿ.
3. ಅಂತರ್‌ರಾಷ್ಟ್ರೀಯ ಸಂಬಂಧಗಳ ಮೊದಲ ಅಧ್ಯಯನ ಪೀಠವು ಎಲ್ಲಿ ಮತ್ತು ಯಾವಾಗ ಸ್ಥಾಪಿಸಲ್ಪಟ್ಟಿತು?
4. ಅಂತರ್‌ರಾಷ್ಟ್ರೀಯ ಸಂಬಂಧಗಳ ವುಡ್ರೊ ವಿಲ್ಸನ್ ಪೀಠದ ಮುಖ್ಯಸ್ಥರಾಗಿದ್ದ ಮೂವರನ್ನು ಹೆಸರಿಸಿರಿ.
5. ರಾಯಭಾರಕ ಇತಿಹಾಸದ ಅವಧಿಯಲ್ಲಿನ ಎರಡು ದೋಷಗಳನ್ನು ಬರೆಯಿರಿ.
6. ಅಂತರ್‌ರಾಷ್ಟ್ರೀಯ ಸಂಬಂಧಗಳ ಕಾನೂನಾತ್ಮಕ ಮತ್ತು ಸಾಂಸ್ಥಿಕ ಹಂತದ ಚಿಂತಕರು ಪ್ರತಿಪಾದಿಸಿದ್ದ ಮೂರು ಪರ್ಯಾಯಗಳನ್ನು ಬರೆಯಿರಿ.
7. ಅಂತರ್‌ರಾಷ್ಟ್ರೀಯ ಸಂಬಂಧಗಳ ಮೂರನೇ ಹಂತದ ಎರಡು ಕೊರತೆಗಳನ್ನು ತಿಳಿಸಿರಿ.
8. ಅಂತರ್‌ರಾಷ್ಟ್ರೀಯ ಸಂಬಂಧಗಳ ಅಧ್ಯಯನದ ಯಾವುದಾದರೂ ಮೂರು ವಿಧಾನಗಳನ್ನು ಹೆಸರಿಸಿರಿ.
9. ನಾಲ್ಕನೇ ಹಂತದಲ್ಲಿ ಪ್ರತಿಪಾದಿಸಲ್ಪಟ್ಟ ಜಾಗತಿಕ ಕಾಳಜಿಗಳನ್ನು ಬರೆಯಿರಿ.
10. ಒಂದು ಶೈಕ್ಷಣಿಕ ಶಾಸ್ತ್ರವಾಗಿ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಭಿವೃದ್ಧಿಗೆ ನಾಲ್ಕನೇ ಹಂತದಲ್ಲಿ ಕಾರಣವಾದ ಅಂಶಗಳನ್ನು ತಿಳಿಸಿರಿ.

[B.] ಐದು ಅಂಕದ ಪ್ರಶ್ನೆಗಳು:

1. ಒಂದು ಶೈಕ್ಷಣಿಕ ಶಾಸ್ತ್ರವಾಗಿ ಅಂತರ್‌ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಮೊದಲ ಹಂತದ ಪಾತ್ರವನ್ನು ವಿವರಿಸಿರಿ
2. ಒಂದು ಶೈಕ್ಷಣಿಕ ಶಾಸ್ತ್ರವಾಗಿ ಅಂತರ್‌ರಾಷ್ಟ್ರೀಯ ಸಂಬಂಧಗಳ ನಾಲ್ಕನೇ ಹಂತವನ್ನು ಪರಿಶೀಲಿಸಿರಿ.

[C.] ಹತ್ತು ಅಂಕದ ಪ್ರಶ್ನೆಗಳು:

1. ಒಂದು ಶೈಕ್ಷಣಿಕ ಶಾಸ್ತ್ರವಾಗಿ ಅಂತರ್‌ರಾಷ್ಟ್ರೀಯ ಸಂಬಂಧಗಳ ಅಭಿವೃದ್ಧಿಯನ್ನು ಸಂಕ್ಷೇಪ್ತವಾಗಿ ವಿವರಿಸಿರಿ.

ಅಧ್ಯಾಯ 4:

# ವಿಶ್ವ ಯುದ್ಧಗಳು

## [WORLD WARS]

ಪ್ರಸ್ತಾವನೆ [Introduction]: ಯುದ್ಧಗಳು ಮಾನವ ಇತಿಹಾಸದಲ್ಲಿ ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿವೆ. ಸಾಮಾನ್ಯವಾಗಿ ಎರಡು ರಾಷ್ಟ್ರಗಳು ಅಥವಾ ಇಬ್ಬರು ಆಡಳಿತಗಾರರ ನಡುವಿನ ಹೋರಾಟವನ್ನು ಯುದ್ಧ ಎನ್ನಲಾಗುತ್ತದೆ. ಆದರೆ, ಯುದ್ಧ ಜರುಗಿದ ಅವಧಿ, ಆಕ್ರಮಿಸಿದ ಪ್ರದೇಶ ಹಾಗೂ ಭಾಗವಹಿಸಿದವರ ಪ್ರಮಾಣವನ್ನು ಆಧರಿಸಿ 20 ನೇ ಶತಮಾನದಲ್ಲಿ ಜರುಗಿದ ಎರಡು ಯುದ್ಧಗಳನ್ನು ಮಹಾ ಯುದ್ಧ ಎನ್ನಲಾಗುತ್ತದೆ. ಉಳಿದ ಐತಿಹಾಸಿಕ ಯುದ್ಧಗಳಿಗಿಂತ ವಿಶ್ವ ಯುದ್ಧಗಳು ಅತ್ಯಂತ ಭಿನ್ನವಾಗಿದ್ದು ಅವುಗಳ ಕಾರಣ ಮತ್ತು ಪರಿಣಾಮಗಳು ವಿಶಾಲ ಸ್ವರೂಪ ಹೊಂದಿರುತ್ತವೆ. ಅಂತರ್‌ರಾಷ್ಟ್ರೀಯ ಸಂಬಂಧಗಳ ಮೇಲೆ ವಿಶ್ವ ಯುದ್ಧಗಳ ಪ್ರಭಾವ ಅಧಿಕವಾಗಿದ್ದು ಅವುಗಳ ಮನವರಿಕೆಯು ರಾಷ್ಟ್ರಗಳ ಸಂಬಂಧಗಳನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳಲು ನೆರವಾಗುತ್ತದೆ. ಈ ಹಿನ್ನೆಲೆಯಲ್ಲಿ ವಿಶ್ವ ಯುದ್ಧಗಳು ಎಂಬ ಪ್ರಸ್ತುತ ಅಧ್ಯಾಯದಲ್ಲಿ ಮೊದಲ ಮತ್ತು ಎರಡನೇ ವಿಶ್ವ ಯುದ್ಧದ ಕಾರಣ ಮತ್ತು ಪರಿಣಾಮಗಳ ಮೇಲೆ ಐತಿಹಾಸಿಕ ದೃಷ್ಟಿಕೋನದ ಬದಲಿಗೆ ರಾಜಕೀಯ ದೃಷ್ಟಿಕೋನದಿಂದ ಮಾತ್ರ ಬೆಳಕು ಚೆಲ್ಲಲಾಗಿದೆ.

### [I.] ಮೊದಲ ವಿಶ್ವ ಯುದ್ಧ [World War I.]:

18ನೇ ಶತಮಾನದಲ್ಲಿ ಉಂಟಾದ ಕೈಗಾರಿಕಾ ಕ್ರಾಂತಿಯ ಪರಿಣಾಮ ಯುರೋಪಿನ ಕೆಲ ದೇಶಗಳು ಪ್ರಗತಿ ಹೊಂದಿದವು. ಇದರಿಂದಾಗಿ ಜಗತ್ತಿನ ವಿವಿಧ ಭಾಗಗಳಲ್ಲಿ ವಸಾಹತುಗಳನ್ನು ಸ್ಥಾಪಿಸಿ ಮತ್ತಷ್ಟು ಪ್ರಬಲಗೊಳ್ಳಲು ಯುರೋಪಿನ ದೇಶಗಳು ಸ್ಪರ್ಧಿಗಿಳಿದವು. ಈ ಬೆಳವಣಿಗೆಯಿಂದ ಪ್ರತಿಯೊಂದು ದೇಶದಲ್ಲಿ ರಾಷ್ಟ್ರೀಯತೆ ಬಲಗೊಂಡು ದೇಶಗಳ ನಡುವೆ ಪರಸ್ಪರ ಸ್ಪರ್ಧೆ ಅಧಿಕಗೊಂಡಿತು. ತಮ್ಮ ನಡುವಿನ ಆರ್ಥಿಕ, ಸೈನಿಕ, ತಾಂತ್ರಿಕ ಪೈಪೋಟಿಯಲ್ಲಿ ಮೇಲುಗೈ ಸಾಧಿಸಲು ರಾಷ್ಟ್ರಗಳು ಸದಾ ಹವಣಿಸತೊಡಗಿದವು. ಪರಿಣಾಮ 19 ನೇ ಶತಮಾನದ ಅಂತ್ಯದ ಹೊತ್ತಿಗೆ ಜಗತ್ತಿನ



ರಾಷ್ಟ್ರಗಳ ನಡುವಿನ ಸಂಬಂಧಗಳು ಹಳಸಿದವು. ಮುಂದೆ 20 ನೇ ಶತಮಾನದಲ್ಲಿ ಜಗತ್ತು ಮನುಕುಲಕ್ಕೆ ಮಾರಕವಾದ ಎರಡು ವಿಶ್ವ ಯುದ್ಧಗಳನ್ನು ಕಾಣುವಂತಾಯಿತು. ಪ್ರಸ್ತುತ 1914 ರಿಂದ 1918 ರವರೆಗೆ ಜರುಗಿದ ಮೊದಲ ವಿಶ್ವ ಯುದ್ಧದ ಕಾರಣ ಮತ್ತು ಪರಿಣಾಮಗಳನ್ನು ಕೆಳಗೆ ವಿವರಿಸಲಾಗಿದೆ.

### [A.] ಮೊದಲ ವಿಶ್ವ ಯುದ್ಧಕ್ಕೆ ಕಾರಣಗಳು [Causes for First World War]:

ಮೊದಲ ಮಹಾ ಯುದ್ಧ ಎಂದೇ ಜನಪ್ರಿಯವಾಗಿರುವ ಪ್ರಥಮ ವಿಶ್ವ ಯುದ್ಧವು ತನ್ನದೇಯಾದ ವೈವಿಧ್ಯಮಯ ಕಾರಣಗಳಿಂದ ಜರುಗಿತು. ಈ ಕೆಳಗೆ ರಾಜಕೀಯವಾಗಿ ಮಹಾ ಯುದ್ಧಕ್ಕೆ ಕಾರಣವಾದ ಅಂಶಗಳನ್ನು ಮಾತ್ರ ಸಂಕ್ಷೇಪ್ತವಾಗಿ ವಿವರಿಸಲಾಗಿದೆ.

**1. ಆಕ್ರಮಣಕಾರಿ ರಾಷ್ಟ್ರೀಯತೆ:** ದೇಶವೊಂದರ ಜನರು ತಮ್ಮ ಜನಾಂಗ, ಭಾಷೆ, ಸಂಸ್ಕೃತಿ ಕುರಿತಂತೆ ಹೊಂದಿರುವ ಅತಿಯಾದ ಪ್ರೇಮವನ್ನು ರಾಷ್ಟ್ರೀಯತೆ ಎನ್ನಲಾಗುತ್ತದೆ. ಈ ರಾಷ್ಟ್ರೀಯತೆಯ ಭಾವನೆಯು ಆಯಾ ದೇಶದ ಜನರಲ್ಲಿ ಸಂಕುಚಿತ ಮನೋಭಾವವನ್ನು ಅಂದರೆ ಸ್ವದೇಶದ ಬಗೆಗೆ ಹೆಮ್ಮೆಯನ್ನು ಹಾಗೂ ಅನ್ಯ ದೇಶಗಳ ಬಗೆಗೆ ಕೀಳರಿಮೆಯನ್ನು ಮೂಡಿಸುತ್ತದೆ. 19 ನೇ ಶತಮಾನದ ಕೊನೆಯ ಹೊತ್ತಿಗೆ ಯುರೋಪಿನ ಪ್ರಬಲ ದೇಶಗಳಲ್ಲಿ ರಾಷ್ಟ್ರೀಯತೆ ಉದಯಗೊಂಡು ಅವುಗಳ ನಡುವೆ ದ್ವೇಷಮಯ ವಾತಾವರಣ ಕಂಡು ಬರತೊಡಗಿತು. ಉದಾ: ಫ್ರೆಂಚರು ಜರ್ಮನಿಯರನ್ನು, ಆಸ್ಟ್ರಿಯನ್ನರು ಟರ್ಕರನ್ನು, ಜರ್ಮನಿಯರು ಆಸ್ಟ್ರಿಯನ್ನರನ್ನು ದ್ವೇಷಿಸುತ್ತಿದ್ದುದು. ರಾಷ್ಟ್ರೀಯತೆಯ ಪರಿಣಾಮ ಜರ್ಮನಿಯ ದೊರೆ ಎರಡನೇ ಕೈಸರ್ ವಿಲಿಯಂ ದೇವರು ಪ್ರಪಂಚವನ್ನು ನಾಗರಿಕರನ್ನಾಗಿಸಲು ಜರ್ಮನಿಯರನ್ನು ಕಳುಹಿಸಿದ್ದಾನೆ ಎಂದು ಪ್ರತಿಪಾದಿಸಿ ಜರ್ಮನಿಯರಲ್ಲಿ ತಮ್ಮ ಬಗೆಗೆ ಹೆಮ್ಮೆ ಹಾಗೂ ಅನ್ಯ ದೇಶಿಯರ ಬಗೆಗೆ ದ್ವೇಷವನ್ನು ಬಿತ್ತಿದನು. ಅಂತೆಯೇ ಇಂಗ್ಲಿಷರು ತಮ್ಮದು ಸೂರ್ಯ ಮುಳುಗದ ಸಾಮ್ರಾಜ್ಯವೆಂದು ಹೆಮ್ಮೆ ಪಡುತ್ತಾ ರಾಷ್ಟ್ರೀಯತೆಯಡಿ ಇತರ ದೇಶಗಳನ್ನು ಕೀಳರಿಮೆಯಿಂದ ಕಂಡರು. ಇದರೊಡನೆ ತಮ್ಮನ್ನು ಸೋಲಿಸಿದ ಜರ್ಮನಿಯರನ್ನು ಫ್ರೆಂಚರು ರಾಷ್ಟ್ರೀಯತೆಯ ಹಿನ್ನೆಲೆಯಲ್ಲಿ ದ್ವೇಷಿಸಲಾರಂಭಿಸಿದರು. ಹೀಗೆ ಯುರೋಪಿನ ಪ್ರಬಲ ರಾಷ್ಟ್ರಗಳಲ್ಲಿ ಕಂಡು ಬಂದ ಆಕ್ರಮಣಕಾರಿ ರಾಷ್ಟ್ರೀಯತೆಯು ಮೊದಲ ವಿಶ್ವ ಯುದ್ಧಕ್ಕೆ ಕಾರಣವೆನಿಸಿತು.

**2. ವಸಾಹತು ಪೈಪೋಟಿ:** ಕೈಗಾರಿಕಾ ಕ್ರಾಂತಿಯ ಬಳಿಕ ಯುರೋಪಿನ ದೇಶಗಳಿಗೆ ಕಚ್ಚಾ ವಸ್ತುಗಳನ್ನು ಪೂರೈಸುವ ಮತ್ತು ತಮ್ಮ ಸಿದ್ಧ ವಸ್ತುಗಳಿಗೆ ಮಾರುಕಟ್ಟೆಯಾಗುವ ವಸಾಹತುಗಳ ಅಗತ್ಯ ಉಂಟಾಯಿತು. ಹೀಗಾಗಿ ಪೋರ್ಚುಗಲ್, ಸ್ಪೇನ್, ಫ್ರಾನ್ಸ್, ಬ್ರಿಟನ್ ಮೊದಲಾದ ಯುರೋಪಿಯನ್ ದೇಶಗಳು ವಲಸೆ ನಾಡುಗಳನ್ನು ಅಂದರೆ ವಸಾಹತುಗಳನ್ನು ಹೊಂದಲು ಪರಸ್ಪರ ಸ್ಪರ್ಧಿಸತೊಡಗಿದವು. ಈ ಮಧ್ಯೆ

ಏಕೀಕರಣಗೊಂಡ ಜರ್ಮನಿ ವಸಾಹತುಗಳನ್ನು ಹೊಂದಲಾಗದೇ ಇತರ ದೇಶಗಳನ್ನು ಶಪಿಸತೊಡಗಿತು. ದಕ್ಷಿಣ ಅಮೇರಿಕಾದಲ್ಲಿ ಜರ್ಮನಿಯು ತನ್ನ ಉತ್ಪನ್ನಗಳನ್ನು ಅಗ್ಗದ ಬೆಲೆಗೆ ಮಾರಲು ಮುಂದಾದಾಗ ಬ್ರಿಟನ್ ಮತ್ತು ಜರ್ಮನಿಯ ನಡುವೆ ದ್ವೇಷ ಬೆಳೆಯಿತು. ಇದರೊಡನೆ ವಸಾಹತು ಸ್ಥಾಪನೆಯ ವಿಚಾರದಲ್ಲಿ ಬ್ರಿಟನ್ ಮತ್ತು ಫ್ರಾನ್ಸ್ ಪರಸ್ಪರ ದ್ವೇಷಿಸುವಂತಾಗಿತ್ತು. 19 ನೇ ಶತಮಾನದ ಕೊನೆಯ ಹೊತ್ತಿಗೆ ಯುರೋಪಿನ ಪ್ರಬಲ ದೇಶಗಳ ನಡುವೆ ವಾಣಿಜ್ಯ ಹಿತಾಸಕ್ತಿಗಾಗಿ ವಸಾಹತುಗಳ ಸ್ಥಾಪನೆಯ ವಿಚಾರದಲ್ಲಿ ಪೈಪೋಟಿ ಉಂಟಾಗಿ ಶತ್ರುತ್ವ ಬೆಳೆಯಿತು. ರಾಷ್ಟ್ರಗಳ ನಡುವಿನ ಈ ಶತ್ರುತ್ವ ಭಾವನೆಯು ಮೊದಲ ವಿಶ್ವ ಯುದ್ಧಕ್ಕೆ ಪ್ರಧಾನ ಭೂಮಿಕೆಯನ್ನು ಕಾಲಾನುಕ್ರಮದಲ್ಲಿ ಒದಗಿಸಿತು.

3. ಜರ್ಮನಿಯ ಮಹತ್ವಾಕಾಂಕ್ಷೆ: 1871 ರ ವೇಳೆಗೆ ಬಿಸ್ಮಾರ್ಕ್‌ನ ನೇತೃತ್ವದಲ್ಲಿ ಜರ್ಮನಿ ಏಕೀಕರಣಗೊಂಡಿತು. ಈ ಸಮಯದಲ್ಲಿ ಜರ್ಮನಿಯು ಹಲವು ದೇಶಗಳೊಡನೆ ಯುದ್ಧ ಕೈಗೊಂಡು ಜಯಶಾಲಿಯಾಯಿತು. ಸೋತ ದೇಶಗಳ ಪ್ರದೇಶಗಳನ್ನು ಜರ್ಮನಿ ಆಕ್ರಮಿಸಲು ನಿರ್ಧರಿಸಿತು. ಉದಾ: ಸೋತ ಫ್ರಾನ್ಸ್‌ನಿಂದ ಆಲ್ಸಿಸ್ ಹಾಗೂ ಲೊರೈನ್ ಆಕ್ರಮಿಸಿದುದು. ಜರ್ಮನಿಯ ಮಹತ್ವಾಕಾಂಕ್ಷೆಯು ಇಂತಹ ಹಲವು ಆಕ್ರಮಣಗಳಿಗೆ ಕಾರಣವಾಗಿ ಪ್ರದೇಶಗಳನ್ನು ಕಳೆದುಕೊಂಡ ದೇಶಗಳು ಜರ್ಮನಿಯನ್ನು ದ್ವೇಷಿಸತೊಡಗಿದವು. ಇದರೊಡನೆ ಉತ್ತರ ಆಫ್ರಿಕಾದ ಮೊರಾಕ್ಕೊ ನಿಯಂತ್ರಣವನ್ನು ಕುರಿತಂತೆ 1905 ರಿಂದ 1911 ರ ನಡುವೆ ಫ್ರಾನ್ಸ್ ಮತ್ತು ಜರ್ಮನಿ ನಡುವೆ ವಿವಾದ ತಲೆದೋರಿತು. ತಾನು ಮೊದಲು ಪ್ರವೇಶಿಸಿದ ಮೊರಾಕ್ಕೊವು ತನಗೆ ಸೇರಿದ ನೆಲೆ ಎಂಬುದಾಗಿ ಫ್ರಾನ್ಸ್ ಪ್ರತಿಪಾದಿಸಿದರೆ ಜರ್ಮನಿಯು ಮೊರಾಕ್ಕೊದ ಸ್ವಾತಂತ್ರ್ಯವನ್ನು ಗೌರವಿಸಿ ಯುರೋಪಿನ ಎಲ್ಲ ದೇಶಗಳಿಗೆ ಅದನ್ನು ಪ್ರವೇಶಿಸಲು ಅವಕಾಶವಿರಬೇಕೆಂದು ವಾದಿಸಿತು. ಉಭಯ ರಾಷ್ಟ್ರಗಳ ನಡುವೆ ಒಪ್ಪಂದವಾಗಿ ವಿವಾದ ಪರಿಹಾರವಾದ ಬೆನ್ನಲ್ಲೇ ಮೊರಾಕ್ಕೊದಲ್ಲಿ ಆಡಳಿತ ವ್ಯವಸ್ಥೆ ಕುಸಿದಿದೆ ಎಂಬ ಕಾರಣಕ್ಕೆ ಫ್ರಾನ್ಸ್ ಮೊರಾಕ್ಕೊವನ್ನು ಪ್ರವೇಶಿಸಿತು. ಆಗ ಜರ್ಮನಿ ಮೊರಾಕ್ಕೊದ ಸ್ವಾತಂತ್ರ್ಯದ ಪರವಾಗಿ ಫ್ರಾನ್ಸ್‌ನೊಡನೆ ಘರ್ಷಣೆಗೆ ಮುಂದಾಯಿತು. ಈ ವೇಳೆಯಲ್ಲಿ ಫ್ರಾನ್ಸ್‌ನ ಸಹಾಯಕ್ಕೆ ಇಂಗ್ಲೆಂಡ್ ಧಾವಿಸಿತು. ಹೀಗೆ ಜರ್ಮನಿಯ ಮಹತ್ವಾಕಾಂಕ್ಷೆಯಿಂದ ಉಂಟಾದ ಹಲವು ವಿವಾದಗಳು ಯುರೋಪಿನ ಪ್ರಬಲ ರಾಷ್ಟ್ರಗಳಲ್ಲಿ ಶತ್ರುತ್ವವನ್ನು ಉಂಟು ಮಾಡುವ ಮೂಲಕ ಮೊದಲ ವಿಶ್ವ ಯುದ್ಧಕ್ಕೆ ಪರೋಕ್ಷ ಕಾರಣವೆನಿಸಿತು.

4. **ಗಡಿ ವಿವಾದಗಳು:** ಯುರೋಪಿನ ಹಲವು ದೇಶಗಳ ನಡುವೆ ಅಸ್ತಿತ್ವದಲ್ಲಿದ್ದ ಗಡಿಗಳ ಗೊಂದಲಗಳು ರಾಷ್ಟ್ರಗಳ ನಡುವೆ ಬಿಕ್ಕಟ್ಟನ್ನು ಮೂಡಿಸಿದವು. ಈ ಗಡಿಗಳ ಬಿಕ್ಕಟ್ಟು ರಾಷ್ಟ್ರೀಯತೆಯ ಬೆಂಬಲದೊಡನೆ ರಾಷ್ಟ್ರಗಳ ನಡುವ ಶತ್ರುತ್ವವನ್ನು ಪೋಷಿಸಿತು. ಪ್ರತಿಯೊಂದು ದೇಶ ತನ್ನ ಗಡಿಗಳನ್ನು ಕುರಿತಂತೆ ಭಿನ್ನಾಭಿಪ್ರಾಯ ತಾಳಿದ ದೇಶವನ್ನು



ದ್ವೇಷಿಸುವಂತಾಯಿತು. ಫ್ರಾನ್ಸ್ ಮತ್ತು ಜರ್ಮನಿ, ಇಟಲಿ ಮತ್ತು ಆಸ್ಟ್ರಿಯಾ, ಗ್ರೀಸ್ ಮತ್ತು ಸರ್ಬಿಯಾ, ಬಲ್ಗೇರಿಯಾ ಮತ್ತು ರೊಮೇನಿಯಾಗಳ ನಡುವಿನ ಗಡಿ ವಿವಾದಗಳು ಪರೋಕ್ಷವಾಗಿ ಮೊದಲ ವಿಶ್ವ ಯುದ್ಧಕ್ಕೆ ಮುಂದೆ ಕಾರಣವೆನಿಸಿದವು.

**5. ಗುಪ್ತ ಮೈತ್ರಿ ಕೂಟಗಳು:** ಅನೇಕ ದೇಶಗಳೊಡನೆ ಯುದ್ಧ ಮಾಡಿದ ಬಿಸ್ಮಾರ್ಕ್ 1871 ರಲ್ಲಿ ಜರ್ಮನಿಯನ್ನು ಏಕೀಕರಣಗೊಳಿಸಲು ಯಶಸ್ವಿಯಾದ. ಸೋತ ದೇಶಗಳು ಸುಮ್ಮನಿರುವುದಿಲ್ಲ ಎಂಬುದನ್ನು ಮನಗಂಡ ಜರ್ಮನಿ ಸೋತ ಪ್ರಬಲ ದೇಶವಾದ ಫ್ರಾನ್ಸನ್ನು ಏಕಾಂಗಿಗೊಳಿಸಲು ಗುಪ್ತ ಒಪ್ಪಂದಗಳಿಗೆ ಮುಂದಾಯಿತು. ಫಲವಾಗಿ 1882 ರ ವೇಳೆಗೆ ಆಸ್ಟ್ರಿಯಾ ಮತ್ತು ಇಟಲಿಯೊಡನೆ ಒಪ್ಪಂದ ಮಾಡಿಕೊಂಡ ಜರ್ಮನಿ ಟ್ರಿಪಲ್ ಅಲ್ಲೈಯನ್ಸ್ ರಚಿಸಿಕೊಂಡಿತು. ಇನ್ನೊಂದೆಡೆ ಫ್ರಾನ್ಸ್ 1907 ರ ಹೊತ್ತಿಗೆ ಇಂಗ್ಲೆಂಡ್ ಮತ್ತು ರಷ್ಯಾದೊಡನೆ ಗುಪ್ತ ಒಪ್ಪಂದ ಮಾಡಿಕೊಂಡು ಟ್ರಿಪಲ್ ಅಂಟೆಂಟೆ ಸ್ಥಾಪಿಸಿಕೊಂಡಿತು. ಹೀಗೆ ಪರಸ್ಪರ ವಿರೋಧಿ ದೇಶಗಳು ಗುಪ್ತ ಒಪ್ಪಂದದ ಮೂಲಕ ಜಗತ್ತಿನಲ್ಲಿ ಎರಡು ಬಣಗಳ ರಚನೆಗೆ ಕಾರಣವಾದವು. ಈ ಗುಪ್ತ ಒಪ್ಪಂದದ ಕೂಟಗಳ ನಡುವೆ ಮತ್ಸರ, ಪೈಪೋಟಿ, ಹಗೆತನ ಅಧಿಕಗೊಂಡಿದುದು ಮೊದಲ ವಿಶ್ವ ಯುದ್ಧಕ್ಕೆ ಕಾರಣವೆನಿಸಿತು.

6. ಶಸ್ತ್ರಾಸ್ತ್ರ ಸ್ಪರ್ಧೆ: ಜಗತ್ತಿನ ಪ್ರಬಲ ದೇಶಗಳು ಮೈತ್ರಿ ಕೂಟಗಳ ರಚನೆಯೊಡನೆ ಪರಸ್ಪರ ಸಂಶಯ, ದ್ವೇಷ, ಅಸಹನೆ ಬೆಳೆಸಿಕೊಂಡವು. ಇದರೊಡನೆ ತಮ್ಮ ಪ್ರಾಬಲ್ಯವನ್ನು ಉಳಿಸಿಕೊಳ್ಳಲು ಎಲ್ಲ ರಾಷ್ಟ್ರಗಳು ಶಸ್ತ್ರಾಸ್ತ್ರ ಸ್ಪರ್ಧೆಗೆ ಮುಂದಾದವು. ಎದುರಾಳಿ ರಾಷ್ಟ್ರ ಅಥವಾ ಕೂಟದ ಶಕ್ತಿಯ ಸಮತೋಲನಕ್ಕಾಗಿ ಅಪಾರ ಹಣವನ್ನು ಶಸ್ತ್ರಾಸ್ತ್ರಗಳ ಸಂಶೋಧನೆ ಮತ್ತು ಸಂಗ್ರಹಕ್ಕೆ ಉಪಯೋಗಿಸಲಾರಂಭಿಸಿದವು. ಸೈನಿಕ ಬಲವಿಲ್ಲದ ರಾಜಕೀಯ ವ್ಯವಹಾರವು ವಾದ್ಯವಿಲ್ಲದ ಸಂಗೀತದಂತೆ ಎಂದು ವ್ಯಾಖ್ಯಾನಿಸಿದ ಜರ್ಮನಿ ತನ್ನ ವರಮಾನದ ಶೇಕಡಾ 85 ರಷ್ಟು ಹಣವನ್ನು ಇಂಗ್ಲೆಂಡಿನೊಡನೆ ಶಸ್ತ್ರಾಸ್ತ್ರ ಸ್ಪರ್ಧೆಗೆ ಮೀಸಲಿಟ್ಟಿತು. ಫ್ರಾನ್ಸ್ ಸೈನಿಕ ಸೇವೆಯನ್ನು ತನ್ನ ಪ್ರಜೆಗಳಿಗೆ ಕಡ್ಡಾಯಗೊಳಿಸಿದರೆ ರಷ್ಯಾವು ವಾರ್ಷಿಕ ಸೇನಾ ವೆಚ್ಚವನ್ನು ದುಪ್ಪಟ್ಟುಗೊಳಿಸಿತು. ಯುರೋಪಿನ ಎಲ್ಲ ದೇಶಗಳು ಜಲಾಂತರ್ಗಾಮಿ ಹಡಗು, ಯುದ್ಧ ವಿಮಾನ, ಯಂತ್ರಚಾಲಿತ ಬಂದೂಕುಗಳನ್ನು ಹೊಂದಲು ಪ್ರಯತ್ನಿಸಿದವು. ಈ ಶಸ್ತ್ರಾಸ್ತ್ರ ಪೈಪೋಟಿಯು ಯುದ್ಧದ ಪ್ರಧಾನ ಕಾರಣವಾಗಿ ಗುರುತಿಸಿಕೊಂಡಿತು.

**7. ಅಂತರ್‌ರಾಷ್ಟ್ರೀಯ ಸಂಘಟನೆಯೊಂದರ ಕೊರತೆ:** ಜಗತ್ತಿನ ಅಥವಾ ಯುರೋಪಿನ ದೇಶಗಳನ್ನು ನಿಯಂತ್ರಿಸುವ ಒಂದು ಪ್ರಬಲ ಅಂತರ್‌ರಾಷ್ಟ್ರೀಯ ಸಂಸ್ಥೆ 20 ನೇ ಶತಮಾನದ ಆರಂಭದವರೆಗೆ ಅಸ್ತಿತ್ವದಲ್ಲಿರಲಿಲ್ಲ. ಹೀಗಾಗಿ ದೇಶಗಳು ಆಕ್ರಮಣಕಾರತ್ವ ಬೆಳೆಸಿಕೊಂಡು ಪರಸ್ಪರ ಹಗೆತನ ಮೈಗೂಡಿಸಿಕೊಳ್ಳುವಂತಾಯಿತು. ಮೊದಲ ಮತ್ತು ಎರಡನೇ ಹೇಗ್ ಸಮ್ಮೇಳನಗಳು ರಾಷ್ಟ್ರಗಳನ್ನು ನಿಯಂತ್ರಿಸುವ ಸಂಸ್ಥೆಯೊಂದರ ರಚನೆಗೆ

ಯಶಸ್ವಿಯಾಗಲಿಲ್ಲ. ನಿಯಂತ್ರಣಾ ಶಕ್ತಿಯೇ ಇಲ್ಲದ ಕಾರಣ ರಾಷ್ಟ್ರಗಳು ತಮ್ಮ ಇಚ್ಛಾನುಸಾರ ವರ್ತಿಸಲು ಮುಂದಾದುದು ವಿಶ್ವ ಯುದ್ಧಕ್ಕೆ ದಾರಿ ಮಾಡಿಕೊಟ್ಟಿತು.

8. **ತತಕ್ಷಣದ ಕಾರಣ:** ಆಸ್ಟ್ರಿಯಾದ ಉತ್ತರಾಧಿಕಾರಿ ಆರ್ಚ್ ಡ್ಯೂಕ್ ಫ್ರಾನ್ಸಿಸ್ ಫರ್ಡಿನಾಂಡ್ ಬೊಸ್ನಿಯಾದ ಸರಜೇವೊ ನಗರಕ್ಕೆ ಭೇಟಿ ಕೊಟ್ಟಿದ್ದ. ಈ ವೇಳೆ ಸರ್ಬಿಯಾದ ರಾಷ್ಟ್ರೀಯವಾದಿ ಗ್ಯಾವ್ರಿಲೊ ಪ್ರಿನ್ಸಿಪ್ ಎಂಬಾತ ಫ್ರಾನ್ಸಿಸ್ ಫರ್ಡಿನಾಂಡ್ ಮತ್ತು ಆತನ ಪತ್ನಿಯನ್ನು ಜೂನ್ 28, 1914 ರಂದು ಕೊಲೆಗೈದನು. ಇದರಿಂದ ಕೆರಳಿದ ಆಸ್ಟ್ರಿಯಾವು ತನ್ನ ಉತ್ತರಾಧಿಕಾರಿಯನ್ನು ಕೊಲೆಗೈದ ವ್ಯಕ್ತಿಯನ್ನು ತನಗೆ ಒಪ್ಪಿಸಿ ಸೂಕ್ತ ವಿವರಣೆ ನೀಡಲು ಸರ್ಬಿಯಾಗೆ ಸೂಚಿಸಿತು. ಆದರೆ, ಸರ್ಬಿಯಾವು ಆಸ್ಟ್ರಿಯಾದ ಸೂಚನೆಯನ್ನು ನಿರಾಕರಿಸಿ ರಷ್ಯಾದ ಬೆಂಬಲವನ್ನು ಗಳಿಸಲು ಪ್ರಯತ್ನಿಸಿತು. ತನ್ನ ಬೇಡಿಕೆಯನ್ನು ಕಡೆಗಣಿಸಿದ ಸರ್ಬಿಯಾದ ವಿರುದ್ಧ ಹೋರಾಡಲು ಜರ್ಮನಿಯ ಬೆಂಬಲವನ್ನು ಪಡೆದುಕೊಂಡ ಆಸ್ಟ್ರಿಯಾವು ಜುಲೈ 28, 1914 ರಂದು ಸರ್ಬಿಯಾದ ವಿರುದ್ಧ ಯುದ್ಧ ಘೋಷಿಸಿತು. ಈ ಮೂಲಕ ಮೊದಲ ವಿಶ್ವ ಯುದ್ಧಕ್ಕೆ ಜಗತ್ತು ಸಾಕ್ಷಿಯಾಯಿತು.

## [B.] ಮೊದಲ ವಿಶ್ವ ಯುದ್ಧದ ಪರಿಣಾಮಗಳು

## [Consequences of First World War]:

ಜುಲೈ 28, 1914 ರಿಂದ ನವೆಂಬರ್ 11, 1918 ರವರೆಗೆ ಜರುಗಿದ ಮೊದಲ ವಿಶ್ವ ಯುದ್ಧವು ಸೆಂಟ್ರಲ್ ಪವರ್ಸ್ ಮತ್ತು ಅಲೈಡ್ ಪವರ್ಸ್ ಎಂಬ ರಾಷ್ಟ್ರಗಳ ಬಣಗಳ ನಡುವೆ ಜರುಗಿತು. ಎರಡೂ ಬಣಗಳ ನಡುವೆ ವಿವಿಧ ಕದನಗಳಾದರೂ ಸೆಂಟ್ರಲ್ ಪವರ್ಸ್ ಬಣದಲ್ಲಿದ್ದ ಜರ್ಮನಿ ಬಹುಕಾಲ ಅಜಯವಾಗಿ ಉಳಿದುಕೊಂಡಿತ್ತು. ಈ ಮಧ್ಯೆ ಜರ್ಮನಿಯ ಜಲಾಂತರ್ಗಾಮಿ ಲುಸಿತೇನಿಯಾ ಹಡಗನ್ನು ನಾಶಗೊಳಿಸಿದಾಗ ಅಮೇರಿಕಾದ ಪ್ರಜೆಗಳು ಹತರಾದರು. ಫಲವಾಗಿ ಅದುವರೆಗೆ ತಟಸ್ಥವಾಗಿದ್ದ ಅಮೇರಿಕಾವು 1917 ರಲ್ಲಿ ಅಲೈಡ್ ಪವರ್ಸ್ ಬಣವನ್ನು ಸೇರಿ ಜರ್ಮನಿ ವಿರುದ್ಧ ಯುದ್ಧ ಸಾರಿತು. ಅಂತಿಮವಾಗಿ ಜರ್ಮನಿಯ ದೊರೆ ಎರಡನೇ ಕೈಸರ್ ವಿಲಿಯಂ ಹಾಲೆಂಡಿಗೆ ಪಲಾಯನವಾಗುವ ಮೂಲಕ ಮೊದಲ ವಿಶ್ವ ಯುದ್ಧ ಕೊನೆಗೊಂಡಿತು. ಜೂನ್ 28, 1919 ರಂದು ಜರುಗಿದ ವರ್ಸೈಲ್ಸ್ ಒಪ್ಪಂದವು ಯುದ್ಧಕ್ಕೆ ಔಪಚಾರಿಕ ವಿರಾಮವನ್ನು ಸೂಚಿಸಿತು. ಆದರೆ, ಜಗತ್ತಿನ ವಿವಿಧ ಕ್ಷೇತ್ರಗಳ ಮೇಲೆ ಮಹಾ ಯುದ್ಧ ಗಾಢ ಪರಿಣಾಮಗಳನ್ನು ಉಂಟು ಮಾಡಿತು. ವಿಶ್ವ ಯುದ್ಧದ ವಿಶಾಲ ಪರಿಣಾಮಗಳನ್ನು ಅಧ್ಯಯನದ ಅನುಕೂಲಕ್ಕಾಗಿ ಸಾಮಾಜಿಕ, ಆರ್ಥಿಕ, ರಾಜಕೀಯ, ಸೈನಿಕ ಪರಿಣಾಮಗಳೆಂದು ವಿಂಗಡಿಸಿ ಸಂಕ್ಷಿಪ್ತವಾಗಿ ಈ ಕೆಳಗೆ ವಿವರಿಸಲಾಗಿದೆ.



1. **ರಾಜಕೀಯ ಪರಿಣಾಮಗಳು:** ಮೊದಲ ವಿಶ್ವ ಯುದ್ಧವು ರಾಜಕೀಯವಾಗಿ ವಿವಿಧ ಪರಿಣಾಮಗಳನ್ನು ಉಂಟು ಮಾಡಿತು. ಯುದ್ಧದ ಮೊದಲಿನ ರಾಜಕೀಯ ಪರಿಸ್ಥಿತಿ ಸಾಕಷ್ಟು ಬದಲಾವಣೆಗೊಂಡು ಜಗತ್ತು ರಾಜಕೀಯವಾಗಿ ನೂತನ ಆಯಾಮ ಹೊಂದುವಂತಾಯಿತು. ಈ ಕೆಳಗೆ ವಿಶ್ವ ಯುದ್ಧದ ಪ್ರಧಾನ ರಾಜಕೀಯ ಪರಿಣಾಮಗಳನ್ನು ಮಾತ್ರ ನೀಡಲಾಗಿದೆ.

**ಅ. ರಾಜ ಪ್ರಭುತ್ವಗಳ ಅಂತ್ಯ:** ಮೊದಲ ವಿಶ್ವ ಯುದ್ಧದ ಪರಿಣಾಮ ಜಗತ್ತಿನ ಪ್ರಬಲ ದೇಶಗಳಲ್ಲಿ ಜಾರಿಯಲ್ಲಿದ್ದ ರಾಜ ಪ್ರಭುತ್ವ ಅಂದರೆ ಅರಸೊತ್ತಿಗೆ ಕೊನೆಗೊಂಡಿತು. ರಷ್ಯಾದ ಜಾರ್ ಎರಡನೇ ನಿಕೋಲಸ್, ಜರ್ಮನಿಯ ಕೈಸರ್ ವಿಲಿಯಂ, ಆಸ್ಟ್ರಿಯಾದ ಚಾರ್ಲ್ಸ್ ಹಾಗೂ ಟರ್ಕಿಯ ಸುಲ್ತಾನರು ಅಧಿಕಾರ ಕಳೆದುಕೊಂಡರು. ರಾಜ ಪ್ರಭುತ್ವ ರದ್ದುಗೊಂಡ ದೇಶಗಳಲ್ಲಿ ಹೊಸ ರಾಜಕೀಯ ವ್ಯವಸ್ಥೆ ಕಂಡು ಬರುವಂತಾಯಿತು.

**ಆ. ಹೊಸ ರಾಷ್ಟ್ರಗಳ ಉದಯ:** ಯುದ್ಧದ ಮೊದಲು ಅಸ್ತಿತ್ವದಲ್ಲಿದ್ದ ಸಾಮ್ರಾಜ್ಯಗಳು ಯುದ್ಧೋತ್ತರ ಕಾಲದಲ್ಲಿ ವಿಭಜನೆಗೊಂಡವು. ಆಸ್ಟ್ರೊ ಹಂಗೇರಿಸ್ ಸಾಮ್ರಾಜ್ಯದ ವಿಭಜನೆಯ ಫಲವಾಗಿ ಜಕೊಸ್ಲೊವಾಕಿಯಾ, ಯುಗೋಸ್ಲೊವಾಕಿಯಾ, ಹಂಗೇರಿ, ಆಸ್ಟ್ರಿಯಾ ಮುಂತಾದ ಹೊಸ ದೇಶಗಳು ಉದಯಗೊಂಡವು. ರಷ್ಯಾ ಸಾಮ್ರಾಜ್ಯದ ಭಾಗವಾಗಿದ್ದ ಈಶಾನ್ಯ ಯುರೋಪಿನ ಎಸ್ಟೋನಿಯಾ, ಫಿನ್‌ಲ್ಯಾಂಡ್, ಲಾಟ್ವಿಯಾ, ಲಿತುವೇನಿಯಾ ಸ್ವತಂತ್ರಗೊಂಡು ನೂತನ ದೇಶಗಳಾದವು. ಅಂತೆಯೇ ಜರ್ಮನಿ ಹಾಗೂ ರಷ್ಯಾದಿಂದ ಪಡೆದ ಪ್ರದೇಶವುಳ್ಳ ಪೋಲೆಂಡ್ ಉದಯಗೊಂಡಿತು. ಉಳಿದಂತೆ ಹಲವು ಪ್ರದೇಶಗಳು ಅಲೈಡ್ ಪವರ್ಸ್ ರಾಷ್ಟ್ರಗಳ ಮೇಲ್ವಿಚಾರಣೆಗೊಳಪಟ್ಟವು.

**ಇ. ವಿಶ್ವ ಶಕ್ತಿಯಾಗಿ ಅಮೇರಿಕಾ:** ಅಮೇರಿಕಾವು ಯುದ್ಧದಲ್ಲಿ ಮಿತ್ರಕೂಟವನ್ನು ಅಂದರೆ ಅಲೈಡ್ ಪವರ್ಸ್ ರಾಷ್ಟ್ರಗಳೊಡನೆ ಸೇರಿ ಜಯಶಾಲಿಯಾಯಿತು. ಆದರೆ, ತನ್ನ ನೆಲದಲ್ಲಿ ಯುದ್ಧಕ್ಕೆ ಅವಕಾಶವನ್ನೇ ನೀಡಿರಲಿಲ್ಲ. ಅಂತೆಯೇ ವರ್ಸೈಲ್ಸ್ ಒಪ್ಪಂದಕ್ಕೆ ಅಮೇರಿಕಾ ಸಹಿ ಹಾಕದೇ ಜಗತ್ತಿನ ಉಳಿದ ರಾಷ್ಟ್ರಗಳು ತಾನು ಸೂಚಿಸಿದ ನಿಯಮಾವಳಿಗಳಿಗೆ ಬಂಧನಕಾರಿಯಾಗುವಂತೆ ಮಾಡಿತು. ಈ ಮೂಲಕ ವಿಶ್ವದ ಶಕ್ತಿಶಾಲಿ ರಾಷ್ಟ್ರವಾಗಿ ಅಮೇರಿಕಾ ಗುರುತಿಸಲ್ಪಟ್ಟಿತು.

**ಈ. ರಾಷ್ಟ್ರಗಳ ಸಂಘದ ಸ್ಥಾಪನೆ:** ಮೊದಲ ವಿಶ್ವ ಯುದ್ಧದ ಬಳಿಕ ಭವಿಷ್ಯದಲ್ಲಿ ಯುದ್ಧಗಳನ್ನು ತಡೆಯಲು ಅಗತ್ಯವಾಗಿದ್ದ ಜಾಗತಿಕ ಸಂಸ್ಥೆಯೊಂದು ಜನ್ಮ ತಾಳಿದ್ದು ಅದನ್ನು ರಾಷ್ಟ್ರಗಳ ಸಂಘ ಎನ್ನಲಾಗುತ್ತದೆ. ಈ ಸಂಸ್ಥೆಯು ಜನೇವರಿ 10, 1920 ರಂದು ಕಾರ್ಯಾರಂಭ ಮಾಡಿ ಎರಡು ದಶಕಗಳವರೆಗೆ ಅಂದರೆ 1939 ರಲ್ಲಿ ಎರಡನೇ ವಿಶ್ವ ಯುದ್ಧ ಪ್ರಾರಂಭವಾಗುವವರೆಗೆ ಜಗತ್ತಿನ ರಾಷ್ಟ್ರಗಳನ್ನು ನಿಯಂತ್ರಿಸಲು ಶ್ರಮಿಸಿತು.

2. **ಸಾಮಾಜಿಕ ಪರಿಣಾಮಗಳು:** ಮೊದಲ ವಿಶ್ವ ಯುದ್ಧವು ಪ್ರಪಂಚದ ಸಾಮಾಜಿಕ

ರಂಗಗಳಲ್ಲಿಯೂ ಪ್ರಭಾವ ಬೀರಿತ್ತು. ಯುದ್ಧೋತ್ತರ ಅವಧಿಯಲ್ಲಿ ಸಮಾಜದ ಹಲವು ಬದಲಾವಣೆಗೆ ಯುದ್ಧ ಕಾರಣವಾಗಿತ್ತು. ಈ ಕೆಳಗೆ ಯುದ್ಧದ ಸಾಮಾಜಿಕ ಪರಿಣಾಮಗಳನ್ನು ನೀಡಲಾಗಿದೆ.

ಅ. ಲಕ್ಷಾಂತರ ಯುವಕರು ಯುದ್ಧದಲ್ಲಿ ಮಡಿದ ಮತ್ತು ಅಂಗಹೀನರಾದ ಕಾರಣಕ್ಕೆ ಜಗತ್ತಿನ ಜನನ ದರದಲ್ಲಿ ಇಳಿಮುಖವಾಯಿತು.

ಆ. ಅನಾಥರು, ವಿಧವೆಯರು, ವೃದ್ಧರು, ಅಂಗವಿಕಲರಿಂದ ಕೂಡಿದ ದುರ್ಬಲ ಸಮಾಜ ಸೃಷ್ಟಿಸಲ್ಪಟ್ಟಿತು.

ಇ. ಮೇಲ್ವರ್ಗದವರು ಸಮಾಜದಲ್ಲಿ ತಮ್ಮ ಮುಂಚಿನ ಸ್ಥಾನಮಾನ ಕಳೆದುಕೊಳ್ಳುವಂತಾಯಿತು.

ಈ. ಪುರುಷರ ಕೊರತೆಯಿಂದ ಮಹಿಳೆಯರಿಗೆ ಕೈಗಾರಿಕೆ ಮತ್ತು ಕಚೇರಿಗಳಲ್ಲಿ ಉದ್ಯೋಗವಕಾಶ ದೊರಕಿದವು. ಜೊತೆಗೆ ಮತದಾನದ ಹಕ್ಕನ್ನು ಗಳಿಸಿದ ಮಹಿಳಾ ಸಮುದಾಯದ ಪರಿಸ್ಥಿತಿ ಯುದ್ಧೋತ್ತರ ಸುಧಾರಿಸಲ್ಪಟ್ಟಿತು.

**3. ಆರ್ಥಿಕ ಪರಿಣಾಮಗಳು:** ಮೊದಲ ವಿಶ್ವ ಯುದ್ಧವು ಆರ್ಥಿಕವಾಗಿ ಪ್ರಪಂಚವನ್ನು ಪ್ರಭಾವಿಸಿತು. ಈ ಕೆಳಗಿನ ಅಂಶಗಳಲ್ಲಿ ಮಹಾ ಯುದ್ಧದ ಆರ್ಥಿಕ ಪರಿಣಾಮಗಳನ್ನು ಕಾಣಬಹುದಾಗಿದೆ.

ಅ. ರಾಷ್ಟ್ರಗಳು ತಮ್ಮ ಆದಾಯದ ಬಹು ಭಾಗವನ್ನು ಮಿಲಿಟರಿ ವೆಚ್ಚಗಳಿಗೆ ಕಾಯ್ದಿರಿಸಿ ಅಭಿವೃದ್ಧಿ ಕಾರ್ಯಗಳು ಕುಂಟಿತಗೊಂಡವು. ಉದಾ: ಜರ್ಮನಿ ಮತ್ತು ಇಂಗ್ಲೆಂಡ್ ತಮ್ಮ ರಾಷ್ಟ್ರೀಯ ವರಮಾನದ ಶೇಕಡಾ 60 ನ್ನು ಮಿಲಿಟರಿಗೆ ಬಳಸಿದವು.

ಆ. ಆರ್ಥಿಕ ಅಗತ್ಯಗಳನ್ನು ಸರಿದೂಗಿಸಲು ದೇಶಗಳು ತಮ್ಮ ಪ್ರಜೆಗಳ ಮೇಲೆ ಭಾರವಾದ ತೆರಿಗೆಗಳನ್ನು ಹೇರಿದವಲ್ಲದೇ ಲೇವಣಿಗಳನ್ನು ಸಂಗ್ರಹಿಸಿದವು.

ಇ. ಮಿಲಿಟರಿ ವೆಚ್ಚಕ್ಕಾಗಿ ಅಧಿಕ ಹಣ ಮುದ್ರಿಸಿದ್ದರಿಂದ ವಿವಿಧ ದೇಶಗಳು ಯುದ್ಧೋತ್ತರ ಕಾಲದಲ್ಲಿ ಆರ್ಥಿಕ ಮುಗ್ಗಟ್ಟನ್ನು ಎದುರಿಸಬೇಕಾಯಿತು.

ಈ. ಸೈನಿಕ ಸೇವೆ ಒದಗಿಸಲು ಕಾರ್ಮಿಕರು ಕಂಪನಿಗಳನ್ನು ತೊರೆದಾಗ ಅವುಗಳು ಸ್ಥಗಿತಗೊಂಡವು. ಯುದ್ಧೋತ್ತರ ಸಮಯದಲ್ಲಿ ಕಂಪನಿಗಳಲ್ಲಿ ಉದ್ಯೋಗವಿರದೇ ಜನರು ನಿರುದ್ಯೋಗ ಅನುಭವಿಸಬೇಕಾಯಿತು.

ಉ. ಯುದ್ಧದ ವೇಳೆ ರಸ್ತೆ, ಸೇತುವೆ, ಕೈಗಾರಿಕೆಗಳು ನಾಶವಾಗಿದ್ದರಿಂದ ಅವುಗಳ ಪುನರ್ ರಚನೆಗೆ ದೇಶಗಳು ಶ್ರಮಿಸಬೇಕಾಯಿತು.



ಈ ಮೇಲೆ ಸಂಕ್ಷೇಪ್ತವಾಗಿ ಚರ್ಚಿಸಲಾಗಿರುವ ಅಂಶಗಳ ನೆರವಿನಿಂದ ಮೊದಲ ವಿಶ್ವ ಯುದ್ಧದ ಪರಿಣಾಮಗಳನ್ನು ಮನವರಿಕೆ ಮಾಡಿಕೊಳ್ಳಬಹುದಾಗಿದೆ. ಪ್ರಸ್ತಾಪಿತ ಕ್ಷೇತ್ರಗಳಲ್ಲದೇ ತಾಂತ್ರಿಕ, ಸೈನಿಕ, ವೈದ್ಯಕೀಯ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಹಾ ಯುದ್ಧದ ಪರಿಣಾಮ ಗುರುತಿಸಬಹುದಾಗಿದೆ. ಸಾಮ್ರಾಜ್ಯಗಳನ್ನು ನಾಶಗೊಳಿಸಲು ಸಫಲವಾದ ಮೊದಲ ವಿಶ್ವ ಯುದ್ಧವು ರಾಷ್ಟ್ರಗಳ ನಡುವಿನ ಸಂಬಂಧಗಳ ನೂತನ ಆಯಾಮಕ್ಕೆ ಕಾರಣವಾಯಿತು.

## [II.] ದ್ವಿತೀಯ ವಿಶ್ವ ಯುದ್ಧ [World War II.]:

ಮೊದಲ ವಿಶ್ವ ಯುದ್ಧ ಮುಕ್ತಾಯಗೊಂಡ ಎರಡು ದಶಕಗಳಲ್ಲಿಯೇ ಪ್ರಪಂಚವು ಮತ್ತೊಂದು ಮಹಾ ಯುದ್ಧವನ್ನು ಅಂದರೆ ದ್ವಿತೀಯ ವಿಶ್ವ ಯುದ್ಧವನ್ನು ಎದುರಿಸಬೇಕಾಯಿತು. ಮೊದಲ ಯುದ್ಧಕ್ಕಿಂತ ಘೋರವಾಗಿದ್ದ ಎರಡನೇ ಮಹಾ ಯುದ್ಧವು ಮನುಕುಲಕ್ಕೆ ವಿನಾಶಕಾರಿಯಾದ ಅಣು ಬಾಂಬ್‌ಗಳ ಪ್ರಯೋಗಕ್ಕೆ ಕಾರಣವಾಯಿತು. ಮೊದಲ ವಿಶ್ವ ಯುದ್ಧದ ಶಾಂತಿ ಒಪ್ಪಂದದಲ್ಲಿನ ದೋಷಗಳೇ ದ್ವಿತೀಯ ವಿಶ್ವ ಯುದ್ಧದ ಬೀಜಾಂಕುರಕ್ಕೆ ದಾರಿ ಮಾಡಿಕೊಟ್ಟಿದ್ದುದು ದುರಾದೃಷ್ಟಕರ. 1939 ರಿಂದ 1945 ರವರೆಗೆ ಜರುಗಿದ ದ್ವಿತೀಯ ವಿಶ್ವ ಯುದ್ಧವು ಮೊದಲ ವಿಶ್ವ ಯುದ್ಧಕ್ಕೆ ಹೋಲಿಸಿದರೆ ವಿಶಾಲ, ವೈವಿಧ್ಯಮಯ ಹಾಗೂ ಸುದೀರ್ಘ ಯುದ್ಧವೆನಿಸಿಕೊಂಡಿತ್ತು. ಈ ಕೆಳಗೆ ಎರಡನೇ ವಿಶ್ವ ಯುದ್ಧದ ಕಾರಣ ಮತ್ತು ಪರಿಣಾಮಗಳನ್ನು ಸಂಕ್ಷೇಪ್ತವಾಗಿ ಚರ್ಚಿಸಲಾಗಿದೆ.

### [A.] ದ್ವಿತೀಯ ವಿಶ್ವ ಯುದ್ಧಕ್ಕೆ ಕಾರಣಗಳು

### [Causes for Second World War]:

ದ್ವಿತೀಯ ವಿಶ್ವ ಯುದ್ಧವು ಅಸಂಖ್ಯಾ ಕಾರಣಗಳನ್ನು ಹೊಂದಿದೆ. ಆ ಪೈಕಿ ಪ್ರಧಾನ ರಾಜಕೀಯ ಕಾರಣಗಳನ್ನು ಕುರಿತಂತೆ ಮಾತ್ರ ಈ ಕೆಳಗೆ ಬೆಳಕು ಚೆಲ್ಲಲಾಗಿದೆ.

**1. ವರ್ಸೈಲ್ಸ್ ಒಪ್ಪಂದದ ದೋಷಗಳು:** ಮೊದಲ ವಿಶ್ವ ಯುದ್ಧದ ಕೊನೆಗೆ ಜೂನ್ 28, 1919 ರಂದು ಸೋತ ಸೆಂಟ್ರಲ್ ಪವರ್ಸ್ ಮತ್ತು ಗೆದ್ದ ಅಲೈಡ್ ಪವರ್ಸ್ ಬಣಗಳ ನಡುವೆ ವರ್ಸೈಲ್ಸ್ ಒಪ್ಪಂದವಾಯಿತು. ಈ ಒಪ್ಪಂದವು ಸೋತ ರಾಷ್ಟ್ರಗಳ ಅಭಿಪ್ರಾಯವನ್ನು ಆಲಿಸದೇ ಜಯಶಾಲಿಯಾದ ರಾಷ್ಟ್ರಗಳು ಏಕಪಕ್ಷೀಯವಾಗಿ ಮಾಡಿಕೊಂಡ ಒಪ್ಪಂದವೆನಿಸಿತು. ಈ ಒಪ್ಪಂದದಂತೆ ಜರ್ಮನಿ ಯುದ್ಧದ ಹೊಣೆಹೊತ್ತು ಅದರ ನಷ್ಟವನ್ನು ಭರಿಸಬೇಕಾಯಿತು. ಜೊತೆಗೆ ಜರ್ಮನಿಯು ತನ್ನ ವಸಾಹತುಗಳನ್ನು ಜಯಶಾಲಿ ರಾಷ್ಟ್ರಗಳಿಗೆ ಬಿಟ್ಟುಕೊಡಬೇಕಾಯಿತು. ಇದರೊಡನೆ ಒಪ್ಪಂದದಂತೆ ಜರ್ಮನಿ ನಿಶ್ಶಸ್ತ್ರೀಕರಣಕ್ಕೊಳಪಟ್ಟು ಬೃಹತ್ ಸೈನ್ಯವನ್ನು ಹೊಂದದಂತಾಯಿತು. ಇದರಿಂದ

ಜರ್ಮನಿಯರು ಮೊದಲ ವಿಶ್ವ ಯುದ್ಧದ ಸೋಲು ಮತ್ತು ವರ್ಸೈಲ್ಸ್ ಒಪ್ಪಂದದ ನಿಬಂಧನೆಗಳಿಂದ ಅವಮಾನಿತಗೊಂಡು ಹಿಟ್ಲರ್‌ನ ನಾಯಕತ್ವದಲ್ಲಿ ಪ್ರತಿಕಾರಕ್ಕೆ ಮುಂದಾದರು. ಅಂತೆಯೇ ವರ್ಸೈಲ್ಸ್ ಒಪ್ಪಂದದಡಿ ಇಟಲಿಯು ತಾನು ನಿರೀಕ್ಷಿಸಿದಷ್ಟು ಅನುಕೂಲಗಳನ್ನು ಪಡೆಯದಾಯಿತು. ಫಲವಾಗಿ ಮುಸಲೋನಿ ನೇತೃತ್ವದಲ್ಲಿ ಆಕ್ರಮಣಶೀಲತೆಯನ್ನು ಇಟಲಿ ಮೈಗೂಡಿಸಿಕೊಂಡಿತು. ಹೀಗೆ ಏಕಪಕ್ಷೀಯ, ಅಸಹಜ, ಅವಮಾನಕಾರಿ ವರ್ಸೈಲ್ಸ್ ಒಪ್ಪಂದವು ದ್ವಿತೀಯ ವಿಶ್ವ ಯುದ್ಧಕ್ಕೆ ನಾಂದಿ ಹಾಡಿತು.

**2. ರಾಷ್ಟ್ರಗಳ ಸಂಘದ ವೈಫಲ್ಯತೆ:** ಮೊದಲ ವಿಶ್ವ ಯುದ್ಧದ ಕೊನೆಯಲ್ಲಿ ಅಂದರೆ 1919 ರ ವರ್ಸೈಲ್ಸ್ ಒಪ್ಪಂದದಂತೆ ಜಗತ್ತಿನಲ್ಲಿ ಶಾಂತಿ ನೆಲೆಸಲು ರಾಷ್ಟ್ರಗಳ ಸಂಘ ಅಥವಾ ಲೀಗ್ ಆಫ್ ನೇಷನ್ಸ್ ಎಂಬ ಅಂತರ್‌ರಾಷ್ಟ್ರೀಯ ಸಂಸ್ಥೆ ರಚನೆಗೊಂಡಿತು. ಜಗತ್ತಿನ ಎಲ್ಲ ರಾಷ್ಟ್ರಗಳ ಸದಸ್ಯತ್ವ ಹೊಂದುವುದು ಮತ್ತು ಸದಸ್ಯರ ನಡುವಿನ ವಿವಾದಗಳನ್ನು ಬಲ ಪ್ರಯೋಗದ ಅಂದರೆ ಯುದ್ಧ ಕೈಗೊಳ್ಳುವ ಬದಲು ಶಾಂತಿಯುತ ಮಾತುಕತೆಯ ಮೂಲಕ ಪರಿಹರಿಸಿಕೊಳ್ಳುವುದು ಲೀಗ್ ಸ್ಥಾಪನೆಯ ಉದ್ದೇಶವಾಗಿತ್ತು. ಆದರೆ, ಜಗತ್ತಿನ ಕೆಲವು ಪ್ರಬಲ ದೇಶಗಳೇ ರಾಷ್ಟ್ರಗಳ ಸಂಘದ ಸದಸ್ಯತ್ವ ಪಡೆಯಲು ಹಿಂದೇಟು ಹಾಕಿದವು. ಉದಾ: ಅಮೇರಿಕಾವು ಲೀಗ್‌ನ ಸದಸ್ಯತ್ವ ಪಡೆಯದಿರುವುದು. ಇದರೊಡನೆ ಸದಸ್ಯ ರಾಷ್ಟ್ರಗಳ ನಡುವಿನ ಘರ್ಷಣೆ ಅಂದರೆ ಯುದ್ಧಗಳನ್ನು ತಡೆಯಲು ಸ್ವಂತ ಸೈನ್ಯವನ್ನು ಲೀಗ್ ಹೊಂದಿರಲಿಲ್ಲ. ಫಲವಾಗಿ ಇಥಿಯೋಪಿಯಾದ ಮೇಲೆ ಇಟಲಿ ಹಾಗೂ ಚೀನಾದ ಮಂಚೂರಿಯಾದ ಮೇಲೆ ಜಪಾನ್ ಆಕ್ರಮಣ ನಡೆಸಿದಾಗ ಲೀಗ್ ಅಸಹಾಯಕ ವಾಗಿತ್ತು. ಹೀಗೆ ರಾಷ್ಟ್ರಗಳ ಸಂಘದ ದೌರ್ಬಲ್ಯ ಅಥವಾ ವೈಫಲ್ಯ ಎರಡನೇ ವಿಶ್ವ ಯುದ್ಧಕ್ಕೆ ದಾರಿ ಮಾಡಿಕೊಟ್ಟಿತು.

**3. ಸರ್ವಾಧಿಕಾರಿಗಳ ಏಳಿಗೆ:** ಮೊದಲ ವಿಶ್ವ ಯುದ್ಧದ ಸೋಲು ಮತ್ತು ವರ್ಸೈಲ್ಸ್ ಒಪ್ಪಂದದ ಫಲವಾಗಿ ಜರ್ಮನಿ ಹಾಗೂ ಇಟಲಿಗಳಲ್ಲಿ ಆರ್ಥಿಕ ಮುಗ್ಗಟ್ಟು ಎದುರಾಯಿತು. ಇದರಿಂದ ಆ ದೇಶಗಳಲ್ಲಿ ನಿರುದ್ಯೋಗ, ಬಡತನ, ಹಸಿವು ಅಧಿಕಗೊಂಡಿತು. ಈ ವೇಳೆ ಯುದ್ಧ ಮತ್ತು ಆಕ್ರಮಣದಲ್ಲಿ ನಂಬಿಕೆ ಹೊಂದಿದ ಸರ್ವಾಧಿಕಾರಿಗಳು ಏಳಿಗೆ ಕಂಡರು. ಜರ್ಮನಿಯ ಭೂಭಾಗಗಳನ್ನು ಏಕೀಕರಿಸುವ ಭರವಸೆಯನ್ನು ನೀಡಿ ಹಿಟ್ಲರ್ ಜರ್ಮನಿಯ ಸರ್ವಾಧಿಕಾರಿಯಾದ. ಅಂತೆಯೇ ಇಟಲಿಯ ಸಮಸ್ಯೆಗಳನ್ನು ನಿರ್ಮೂಲನೆಗೊಳಿಸಿ ರೋಮನ್ ಸಾಮ್ರಾಜ್ಯದ ವೈಭವವನ್ನು ಸ್ಥಾಪಿಸುವ ಕನಸನ್ನು ಜನರಲ್ಲಿ ಬಿತ್ತುವ ಮೂಲಕ ಮುಸಲೋನಿ ಇಟಲಿಯ ಸರ್ವಾಧಿಕಾರಿಯಾದ. ಇದರೊಡನೆ ಜಪಾನಿನ ಟೋಟೊ ಆಕ್ರಮಣಕಾರಿ ಧೋರಣೆ ಬೆಳೆಸಿಕೊಂಡು ಜಪಾನಿನ ಸರ್ವಾಧಿಕಾರಿಯಾಗಿ ಗುರುತಿಸಿಕೊಂಡ. ಈ ಮೂವರೂ ಸರ್ವಾಧಿಕಾರಿಗಳು1937 ರಲ್ಲಿ ರೋಂ, ಬರ್ಲಿನ್, ಟೋಕಿಯೋ ಒಪ್ಪಂದ ಮಾಡಿಕೊಳ್ಳುವ ಮೂಲಕ ಎರಡನೇ ವಿಶ್ವ ಯುದ್ಧಕ್ಕೆ ಕಾರಣರಾದರು.



**4. ಸಾಮ್ರಾಜ್ಯ ವಿಸ್ತರಣಾ ದಾಹ:** ಮೊದಲ ವಿಶ್ವ ಯುದ್ಧದ ಕೊನೆಗೆ ವುಡ್ರೊ ವಿಲ್ಸನ್ ತನ್ನ 14 ಅಂಶಗಳನ್ನು ಮಂಡಿಸಿ ಜಾಗತಿಕ ಶಾಂತಿಗೆ ಎಲ್ಲ ರಾಷ್ಟ್ರಗಳ ನಿಶ್ಶಸ್ತ್ರೀಕರಣ ಅತ್ಯಗತ್ಯ ಎಂದು ಪ್ರತಿಪಾದಿಸಿದ್ದ. ಆದರೆ, ಮೊದಲ ಯುದ್ಧದ ಬಳಿಕ ಬ್ರಿಟನ್ ಮತ್ತು ಫ್ರಾನ್ಸ್ ಆ ಸೂಚನೆಯನ್ನು ಮರೆತು ತಮ್ಮ ಸಾಮ್ರಾಜ್ಯ ವಿಸ್ತರಿಸಿಕೊಳ್ಳಲು ಗಮನ ನೀಡಿದವು. ಇನ್ನೊಂದೆಡೆ ಸರ್ವಾಧಿಕಾರಿಗಳು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಲು ಮುಂದಾಗಿ ಜಕೊಸ್ಲೋವಾಕಿಯಾವನ್ನು ಜರ್ಮನಿ, ಅಬಿಸೀನಿಯಾವನ್ನು ಇಟಲಿ, ಮಂಚೂರಿಯಾವನ್ನು ಜಪಾನ್, ಫಿನ್‌ಲ್ಯಾಂಡನ್ನು ರಷ್ಯಾ ಆಕ್ರಮಿಸಿಕೊಂಡವು. ರಾಷ್ಟ್ರಗಳ ಸಂಘದ ಭಯವಿಲ್ಲದೇ ತಮ್ಮ ಸಾಮ್ರಾಜ್ಯ ವಿಸ್ತರಣೆಗೆ ವಿವಿಧ ದೇಶಗಳು ಮುಂದಾದುದು ಕಾಲಾನಂತರ ದ್ವಿತೀಯ ವಿಶ್ವ ಯುದ್ಧಕ್ಕೆ ಕಾರಣವಾಯಿತು.

**5. ಸೈದ್ಧಾಂತಿಕ ಹೋರಾಟಗಳು:** ಬ್ರಿಟನ್, ಫ್ರಾನ್ಸ್, ಅಮೇರಿಕಾಗಳ ಗುಂಪು ಪ್ರಜಾಪ್ರಭುತ್ವ ಸಿದ್ಧಾಂತಕ್ಕೆ ಬದ್ಧವಾಗಿತ್ತು. ಆದರೆ, ಜರ್ಮನಿ, ಇಟಲಿ, ಜಪಾನ್‌ಗಳ ಗುಂಪು ನಿರಂಕುಶತ್ವ ಸಿದ್ಧಾಂತದಲ್ಲಿ ನಂಬಿಕೆ ಹೊಂದಿತ್ತು. ಪ್ರಜಾಪ್ರಭುತ್ವವು ಶಾಂತಿಯನ್ನು ಬೆಂಬಲಿಸಿದರೆ ನಿರಂಕುಶತ್ವವು ಯುದ್ಧ ಹಾಗೂ ಆಕ್ರಮಣವನ್ನು ಪ್ರಚೋದಿಸಿತು. ತಮ್ಮ ಸೈದ್ಧಾಂತಿಕ ಬಲವರ್ಧನೆಗೆ ಈ ಎರಡೂ ರಾಷ್ಟ್ರಗಳ ಗುಂಪು ಹೋರಾಡುತ್ತಿದ್ದುದು ಪರೋಕ್ಷವಾಗಿ ಯುದ್ಧಕ್ಕೆ ಹಾದಿ ಮಾಡಿಕೊಟ್ಟಿತು. ಆಸಕ್ತಿದಾಯಕ ಅಂಶವೇನೆಂದರೆ, ರಷ್ಯಾದ ಸಮತಾವಾದವನ್ನು ನಿಯಂತ್ರಿಸಲು ಅದರ ವಿರೋಧಿಗಳಾಗಿದ್ದ ಸರ್ವಾಧಿಕಾರಿ ಗಳನ್ನು ಕುರಿತಂತೆ ಪ್ರಜಾಪ್ರಭುತ್ವ ಬೆಂಬಲಿಸುತ್ತಿದ್ದ ರಷ್ಯಾದ ಮಿತ್ರ ರಾಷ್ಟ್ರಗಳು ತುಷ್ಟಿಕರಣ ನೀತಿಯನ್ನು ಅನುಸರಿಸಿದವು. ಹೀಗೆ ಸೈದ್ಧಾಂತಿಕ ಹೋರಾಟವು ದ್ವಿತೀಯ ವಿಶ್ವ ಯುದ್ಧಕ್ಕೆ ಕಾರಣವಾಯಿತು.

**6. ಅಮೇರಿಕಾದ ತಾಟಸ್ಥ್ಯ:** ಮೊದಲ ವಿಶ್ವ ಯುದ್ಧದ ಬಳಿಕ ಅಮೇರಿಕಾವು ಯುರೋಪಿನ ರಾಜಕಾರಣದಿಂದ ದೂರವೇ ಉಳಿಯಿತು. ಜಾಗತಿಕ ಶಾಂತಿಗಾಗಿ ಸ್ಥಾಪನೆಗೊಂಡ ರಾಷ್ಟ್ರಗಳ ಸಂಘದ ಸದಸ್ಯತ್ವವನ್ನೂ ಪಡೆದುಕೊಳ್ಳಲಿಲ್ಲ. ಶಕ್ತಿಶಾಲಿ ರಾಷ್ಟ್ರವಾಗಿದ್ದ ಅಮೇರಿಕಾವು ತಟಸ್ತವಾದ್ದರಿಂದ ರಾಷ್ಟ್ರಗಳ ಸಂಘವು ಸಮರ್ಪಕವಾಗಿ ಯುರೋಪಿನ ಬೆಳವಣಿಗೆಗಳನ್ನು ನಿರ್ವಹಿಸಲಾಗಲಿಲ್ಲ. ಜೊತೆಗೆ ಹಿಟ್ಲರ್ ಮತ್ತು ಮುಸಲೋನಿ ಯಾವ ಮಿತಿಗಳಿಲ್ಲದೇ ಆಕ್ರಮಣ ಧೋರಣೆ ಅನುಸರಿಸುವಂತಾಯಿತು. ಶಕ್ತಿಶಾಲಿ ರಾಷ್ಟ್ರವಾಗಿದ್ದ ಅಮೇರಿಕಾವು ಸಕ್ರಿಯವಾಗಿದ್ದರೆ ರಾಷ್ಟ್ರಗಳ ಸಂಘ ಸಂಭವನೀಯ ಯುದ್ಧವನ್ನು ತಡೆಯಬಲ್ಲ ಮತ್ತು ಸರ್ವಾಧಿಕಾರಿಗಳ ಆಕ್ರಮಣವನ್ನು ಹತ್ತಿಕ್ಕಬಲ್ಲ ಅವಕಾಶವಿರುತ್ತಿತ್ತು. ಆದ್ದರಿಂದ ಅಮೇರಿಕಾದ ತಾಟಸ್ಥ್ಯ ನೀತಿಯು ಪರೋಕ್ಷವಾಗಿ ದ್ವಿತೀಯ ವಿಶ್ವ ಯುದ್ಧಕ್ಕೆ ಕಾರಣವೆನಿಸಿತು.

**7. ತತಕ್ಷಣದ ಕಾರಣ:** ಅದಾಗಲೇ ಆಕ್ರಮಣಕಾರಿ ಧೋರಣೆ ಮೈಗೂಡಿಸಿಕೊಂಡಿದ್ದ ಹಿಟ್ಲರ್ ಪೋಲೆಂಡಿನ ಪ್ರದೇಶವನ್ನು ತನಗೆ ಬಿಟ್ಟುಕೊಡಲು

ಒತ್ತಾಯಿಸಿದನು. ಪೋಲೆಂಡ್ ತನ್ನ ಭೂಭಾಗವನ್ನು ಬಿಟ್ಟುಕೊಡಲು ಸಮ್ಮತಿಸದಿದ್ದಾಗ ಸೆಪ್ಟಂಬರ್ 1, 1939 ರಂದು ಹಿಟ್ಲರ್‌ನ ಜರ್ಮನಿ ಪೋಲೆಂಡಿನ ಮೇಲೆ ಆಕ್ರಮಣ ನಡೆಸಿತು. ಆಗ ಬ್ರಿಟನ್ ಮತ್ತು ಫ್ರಾನ್ಸ್ ಜರ್ಮನಿ ತನ್ನ ಸೈನ್ಯವನ್ನು ಪೋಲೆಂಡಿನಿಂದ ಹಿಂದಕ್ಕೆ ಕರೆಯಿಸಿಕೊಳ್ಳಬೇಕೆಂದು ಒತ್ತಾಯಿಸಿದವು. ಇದಕ್ಕೆ ಜರ್ಮನಿ ಒಪ್ಪದಿದ್ದಾಗ ಎರಡು ದಿನಗಳಲ್ಲಿಯೇ ಅವು ಜರ್ಮನಿ ವಿರುದ್ಧ ಪೋಲೆಂಡಿನ ಪರವಾಗಿ ಯುದ್ಧ ಘೋಷಿಸಿದವು. ಇನ್ನೊಂದೆಡೆ ಜರ್ಮನಿಯ ಪರವಾಗಿ ಇಟಲಿ ಮತ್ತು ಜಪಾನ್ ಯುದ್ಧಕ್ಕೆ ಮುಂದಾದವು. ಹೀಗೆ ದ್ವಿತೀಯ ವಿಶ್ವ ಯುದ್ಧಕ್ಕೆ ಜರ್ಮನಿಯ ಪೋಲೆಂಡ್ ಆಕ್ರಮಣವು ತತಕ್ಷಣದ ಕಾರಣವೆನಿಸಿಕೊಂಡಿತು.

ಈ ಮೇಲೆ ಪ್ರಸ್ತಾಪಿಸಲಾದ ಹಲವು ರಾಜಕೀಯ ಕಾರಣಗಳಲ್ಲದೇ ಅಲ್ಪಸಂಖ್ಯಾತರ ಜನಾಂಗೀಯ, ಆರ್ಥಿಕ, ಐತಿಹಾಸಿಕ ಅಂಶಗಳು ದ್ವಿತೀಯ ವಿಶ್ವ ಯುದ್ಧಕ್ಕೆ ಕಾರಣವಾಗಿವೆ. 1941 ರಲ್ಲಿ ಪರ್ಲ್ ಹಾರ್ಬರ್ ಹೆಸರಿನ ತನ್ನ ನೌಕಾ ನೆಲೆಗೆ ಜಪಾನಿನಿಂದ ಹಾನಿಯಾದಾಗ ಅಮೇರಿಕಾವು ಯುದ್ಧವನ್ನು ಪ್ರವೇಶಿಸಿತು. ಪರಿಣಾಮ ಯುದ್ಧದ ತೀವ್ರತೆ ಅಧಿಕಗೊಂಡು ಅಣು ಬಾಂಬುಗಳ ಪ್ರಯೋಗದೊಡನೆ ಎರಡನೇ ವಿಶ್ವ ಯುದ್ಧ 1945 ರಲ್ಲಿ ಮುಕ್ತಾಯಗೊಂಡಿತು.

## [B.] ದ್ವಿತೀಯ ವಿಶ್ವ ಯುದ್ಧದ ಪರಿಣಾಮಗಳು
## [Consequences of Second World War]:

ದ್ವಿತೀಯ ವಿಶ್ವ ಯುದ್ಧವು 1939 ರಿಂದ 1945 ರವರೆಗೆ ಆರು ವರ್ಷಗಳ ಕಾಲ ನಿರಂತರವಾಗಿ ಜರುಗಿತು. ಆಗಸ್ಟ್ 6 ಮತ್ತು 9, 1945 ರಂದು ಜಪಾನಿನ ಹಿರೊಶಿಮಾ ಮತ್ತು ನಾಗಾಸಾಕಿಗಳ ಮೇಲೆ ಅಮೇರಿಕಾವು ಅಣು ಬಾಂಬ್ ಪ್ರಯೋಗಿಸುವ ಮೂಲಕ ಯುದ್ಧವನ್ನು ಅಂತ್ಯಗೊಳಿಸಿತು. ಮಾನವ ಇತಿಹಾಸದಲ್ಲಿಯೇ ಬೃಹತ್ ಯುದ್ಧವೆನಿಸಿರುವ ದ್ವಿತೀಯ ವಿಶ್ವ ಯುದ್ಧವು ಮಾನವ ಜೀವನದ ಹಲವು ರಂಗಗಳ ಮೇಲೆ ತನ್ನದೇಯಾದ ಪರಿಣಾಮಗಳನ್ನು ಉಂಟು ಮಾಡಿತು. ಆಕ್ಸಿಸ್ ರಾಷ್ಟ್ರಗಳು ಸೋತು ಮಿತ್ರ ರಾಷ್ಟ್ರಗಳು ಜಯಶಾಲಿಯಾದ ಈ ಯುದ್ಧವು ಅಂದಿನ ರಾಜಕೀಯ ಕ್ಷೇತ್ರದಲ್ಲಿಯೂ ಅನೇಕ ಪರಿಣಾಮಗಳನ್ನು ಬೀರಿತು. ಈ ಕೆಳಗೆ ಎರಡನೇ ವಿಶ್ವ ಯುದ್ಧದ ಪ್ರಧಾನ ರಾಜಕೀಯ ಪರಿಣಾಮಗಳನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

**1. ಅಪಾರ ಜೀವ ಮತ್ತು ಆಸ್ತಿಯ ನಾಶ:** ದ್ವಿತೀಯ ವಿಶ್ವ ಯುದ್ಧದ ವೇಳೆಯಲ್ಲಿ ಇಟಲಿಯ ಫ್ಯಾಸಿಸ್ಟರು ಮತ್ತು ಜರ್ಮನಿಯ ನಾಜಿಗಳು ಯುರೋಪನ್ನು ಸ್ಮಶಾನವಾಗಿ ಪರಿವರ್ತಿಸಿದರು. ಯುದ್ಧದಲ್ಲಿ ಸುಮಾರು 15 ಮಿಲಿಯನ್ ಅಂದರೆ ಒಂದುವರೆ ಕೋಟಿಯಷ್ಟು ಜನರು ತಮ್ಮ ಜೀವ ಕಳೆದುಕೊಂಡರು. ಜೊತೆಗೆ 2 ಕೋಟಿಗೂ ಹೆಚ್ಚು



ಸೈನಿಕರು ಹಾಗೂ ನಾಗರಿಕರು ಗಾಯಗೊಂಡರು. ಇದರೊಡನೆ ರಸ್ತೆ, ಸೇತುವೆ, ಕೈಗಾರಿಕೆ, ತಂತಿಯಂತಹ ವ್ಯವಸ್ಥೆಗಳು ಯುದ್ಧದಿಂದ ನಾಶವಾಗಿದ್ದು ಅವುಗಳ ಪುನರ್‌ನಿರ್ಮಾಣಕ್ಕೆ ರಾಷ್ಟ್ರಗಳು ಶ್ರಮಿಸಬೇಕಾಯಿತು. ಯುದ್ಧದಿಂದ ಉಂಟಾದ ಬಡತನ, ನಿರುದ್ಯೋಗ, ಹಸಿವಿನಂತಹ ಸವಾಲನ್ನು ಸಮರ್ಥವಾಗಿ ಸರ್ಕಾರಗಳು ನಿರ್ವಹಿಸಬೇಕಾಯಿತು. ಇದರೊಡನೆ ಹದಗೆಟ್ಟ ಆರ್ಥಿಕ ಸ್ಥಿತಿಯನ್ನು ಸುಧಾರಿಸಬೇಕಾದ ಸವಾಲೂ ಸಹ ಆಳುವ ಸರ್ಕಾರಗಳ ಹೆಗಲೇರಿತು. ಹೀಗೆ ಎರಡನೇ ವಿಶ್ವ ಯುದ್ಧದಿಂದಾದ ಜೀವ ಮತ್ತು ಆಸ್ತಿ ನಾಶದಿಂದ ಹಲವು ಆಡಳಿತಾತ್ಮಕ ಸವಾಲುಗಳಿಗೆ ಆಳುವ ಸರ್ಕಾರಗಳು ತುತ್ತಾಗಬೇಕಾಯಿತು.

**2. ನಿರಂಕುಶ ಆಳ್ವಿಕೆಯ ಅಂತ್ಯ:** ದ್ವಿತೀಯ ವಿಶ್ವ ಯುದ್ಧಕ್ಕೆ ಕಾರಣವಾಗಿದ್ದ ಜರ್ಮನಿ, ಇಟಲಿ, ಜಪಾನಿನ ನಿರಂಕುಶ ಆಳ್ವಿಕೆ ಅಂತ್ಯಗೊಂಡಿತು. ಯುದ್ಧದಲ್ಲಿ ಸೋತ ಜರ್ಮನಿಯನ್ನು ಪಶ್ಚಿಮ ಜರ್ಮನಿ ಮತ್ತು ಪೂರ್ವ ಜರ್ಮನಿ ಎಂದು ವಿಭಜಿಸಿ ಬ್ರಿಟನ್, ಫ್ರಾನ್ಸ್ ಮತ್ತು ಅಮೇರಿಕಾಗಳು ಪಶ್ಚಿಮ ಜರ್ಮನಿಯ ಮೇಲ್ವಿಚಾರಣೆಯನ್ನು ಮತ್ತು ಪೂರ್ವ ಜರ್ಮನಿಯ ಮೇಲ್ವಿಚಾರಣೆಯನ್ನು ರಷ್ಯಾ ನೋಡಿಕೊಂಡಿತು. ಅಂತೆಯೇ ಜಪಾನನ್ನು ಅಮೇರಿಕಾದ ಮೇಲ್ವಿಚಾರಣೆಗೆ ನೀಡಿ ಅಲ್ಲಿ ಪ್ರಜಾಪ್ರಭುತ್ವ ಸ್ಥಾಪಿಸಲು ಶ್ರಮಿಸಲಾಯಿತು. ಹೀಗೆ ಎರಡನೇ ಮಹಾ ಯುದ್ಧದ ಬಳಿಕ ಮಿತ್ರ ರಾಷ್ಟ್ರಗಳು ನಿರಂಕುಶತ್ವವನ್ನು ಕಿತ್ತೊಗೆದು ಪ್ರಜಾಪ್ರಭುತ್ವವನ್ನು ಹರಡಲು ಪ್ರಯತ್ನಿಸಿದವು.

**3. ವಸಾಹತು ಅಥವಾ ಸಾಮ್ರಾಜ್ಯಶಾಹಿತ್ವದ ನಾಶ:** ಜಗತ್ತಿನ ಎರಡು ಮಹಾ ಯುದ್ಧಗಳಿಗೆ ಕಾರಣವಾಗಿದ್ದ ವಸಾಹತು ಅಥವಾ ಸಾಮ್ರಾಜ್ಯಶಾಹಿ ನೀತಿಯನ್ನು ದ್ವಿತೀಯ ವಿಶ್ವ ಸಮರದ ಬಳಿಕ ಯುರೋಪಿನ ರಾಷ್ಟ್ರಗಳು ಕೈಬಿಟ್ಟವು. ಈ ಬೆಳವಣಿಗೆಗೆ ಯುದ್ಧದ ಪರಿಣಾಮ ಯುರೋಪಿನ ರಾಷ್ಟ್ರಗಳು ರಾಜಕೀಯವಾಗಿ ಮತ್ತು ಆರ್ಥಿಕವಾಗಿ ದುರ್ಬಲಗೊಂಡಿದುದು ಪ್ರಧಾನ ಕಾರಣವಾಗಿತ್ತು. ಇದರೊಡನೆ ಜಗತ್ತಿಗೆ ನಾಯಕತ್ವ ನೀಡಿದ್ದ ಬ್ರಿಟನ್ ತಾನು ಈಗಾಗಲೇ ಹೊಂದಿದ್ದ ವಸಾಹತುಗಳಿಗೆ ಸ್ವಯಂ ಪ್ರೇರಣೆಯಿಂದ ಸ್ವಾತಂತ್ರ್ಯ ಘೋಷಿಸಲು ಮುಂದಾಯಿತು. ಉದಾ: ಭಾರತಕ್ಕೆ ಬ್ರಿಟಿಷರು 1947 ರಲ್ಲಿ ಸ್ವಾತಂತ್ರ್ಯ ಘೋಷಿಸಿದುದು.

**4. ರಾಷ್ಟ್ರೀಯ ಚಳುವಳಿಗಳ ಬಲವರ್ಧನೆ:** ದ್ವಿತೀಯ ವಿಶ್ವ ಸಮರದ ಬಳಿಕ ಏಷ್ಯಾ ಮತ್ತು ಆಫ್ರಿಕಾದ ದೇಶಗಳಲ್ಲಿನ ರಾಷ್ಟ್ರೀಯ ಚಳುವಳಿಗಳು ತೀವ್ರಗೊಂಡವು. ಮಯನ್ಮಾರ್, ಈಜಿಪ್ಟ, ಶ್ರೀಲಂಕಾಗಳಲ್ಲಿ ಬ್ರಿಟಿಷರ ವಿರುದ್ಧ, ಫಿಲಿಪೀನ್ಸ್ ಅಮೇರಿಕಾದ ವಿರುದ್ಧ, ಇಂಡೊ ಚೈನಾ ಫ್ರಾನ್ಸಿನ ವಿರುದ್ಧ, ಇಂಡೊನೇಷ್ಯಾ ಡಚ್ಚರ ವಿರುದ್ಧ ಹೋರಾಟವನ್ನು ತೀವ್ರಗೊಳಿಸಿದವು.

**5. ಶೀತಲ ಸಮರದ ಉದಯ:** ದ್ವಿತೀಯ ಮಹಾ ಯುದ್ಧದಲ್ಲಿ ಬಳಕೆಯಾದ ವಿನೂತನ ಶಸ್ತ್ರಾಸ್ತ್ರಗಳು ಮಿತ್ರ ರಾಷ್ಟ್ರಗಳಲ್ಲಿ ಪರಸ್ಪರ ಅಪನಂಬಿಕೆಯನ್ನು ಮೂಡಿಸಿದವು. ಬ್ರಿಟನ್, ರಷ್ಯಾ, ಫ್ರಾನ್ಸ್ ಮೊದಲಾದ ದೇಶಗಳು ಅಮೇರಿಕಾದಂತೆ ಅಣು ಪರೀಕ್ಷೆ ಕೈಗೊಂಡು

ತಮ್ಮ ಶಸ್ತ್ರ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಮುಂದಾದವು. ಇನ್ನೊಂದೆಡೆ ವಿಶ್ವ ನಾಯಕನ ಪಟ್ಟಕ್ಕಾಗಿ ಯುರೋಪೇತರ ಸ್ಪರ್ಧೆ ಆರಂಭವಾದಾಗ ರಷ್ಯಾ ಮತ್ತು ಅಮೇರಿಕಾಗಳ ನಡುವೆ ತೆರೆ ಮರೆಯ ಸ್ಪರ್ಧೆ ಉಂಟಾಯಿತು. ಈ ಸ್ಪರ್ಧೆಯೇ ಭವಿಷ್ಯದಲ್ಲಿ ಶೀತಲ ಸಮರಕ್ಕೆ ದಾರಿ ಮಾಡಿಕೊಟ್ಟಿತು. ಹೀಗೆ ಎರಡನೇ ಮಹಾ ಯುದ್ಧವು ರಷ್ಯಾ ಮತ್ತು ಅಮೇರಿಕಾಗಳ ನಡುವಿನ ಶೀತಲ ಸಮರಕ್ಕೆ ಅಂದರೆ ಶಸ್ತ್ರರಹಿತ ಸೈದ್ಧಾಂತಿಕ ಯುದ್ಧಕ್ಕೆ ತಳಹದಿ ಒದಗಿಸಿತು.

6. ವಿಶ್ವ ಸಂಸ್ಥೆಯ ಸ್ಥಾಪನೆ: ದ್ವಿತೀಯ ವಿಶ್ವ ಸಮರದ ಗಂಭೀರ ಪರಿಣಾಮಗಳು ಜಗತ್ತಿನ ರಾಷ್ಟ್ರಗಳನ್ನು ಜಾಗೃತಗೊಳಿಸಿತು. ಪರಸ್ಪರ ಸಹಕಾರವಿಲ್ಲದೇ ಜಾಗತಿಕ ಶಾಂತಿ ಅಸಾಧ್ಯವೆಂಬ ಸತ್ಯವನ್ನು ಎಲ್ಲ ರಾಷ್ಟ್ರಗಳು ಮನವರಿಕೆ ಮಾಡಿಕೊಂಡವು. ಯಾವುದೇ ವಿವಾದಕ್ಕಾಗಲಿ ಯುದ್ಧ ಪರಿಹಾರವಲ್ಲವೆಂಬ ನಿಲುವಿಗೆ ರಾಷ್ಟ್ರಗಳು ಬಂದವು. ಫಲವಾಗಿ ರಾಷ್ಟ್ರಗಳ ಸಂಘವನ್ನು ಹೋಲುವ ಮತ್ತು ಅದಕ್ಕಿಂತ ಪರಿಣಾಮಕಾರಿಯಾದ ಸಂಘಟನೆಯೊಂದರ ಅಗತ್ಯತೆ ಉಂಟಾಯಿತು. ಆಗ ವಿಶ್ವ ಸಂಸ್ಥೆ ಎಂಬ ಸಂಘಟನೆಯನ್ನು ಸ್ಥಾಪಿಸಲು ಎಲ್ಲ ರಾಷ್ಟ್ರಗಳು ಮುಂದಾದವು. ಅಕ್ಟೋಬರ್ 24, 1945 ರಂದು ವಿಶ್ವ ಸಂಸ್ಥೆಯು ಸ್ಥಾಪನೆಗೊಂಡಿತು. ಅಂತರ್‌ರಾಷ್ಟ್ರೀಯ ಶಾಂತಿ ಹಾಗೂ ಭದ್ರತೆಯನ್ನು ಕಾಪಾಡುವುದು ಮತ್ತು ರಾಷ್ಟ್ರಗಳ ನಡುವಿನ ಸೌಹಾರ್ದಯುತ ಸಂಬಂಧಗಳಿಗಾಗಿ ಅಂತರ್‌ರಾಷ್ಟ್ರೀಯ ಸಹಕಾರವನ್ನು ನೆಲೆಗೊಳಿಸುವುದು ವಿಶ್ವ ಸಂಸ್ಥೆಯ ಗುರಿಯಾಯಿತು.

### [III.] ಜಾಗತಿಕ ರಾಜಕೀಯದ ಮೇಲೆ ವಿಶ್ವ ಯುದ್ಧಗಳ ಪರಿಣಾಮ [World Wars Impact on World Politics]:

20 ನೇ ಶತಮಾನದ ಪೂರ್ವಾರ್ಧದಲ್ಲಿ ಜರುಗಿದ ಎರಡು ವಿಶ್ವ ಯುದ್ಧಗಳು ಜಗತ್ತಿನ ಮಾನುಕುಲದ ಮೇಲೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರಭಾವ ಬೀರಿದವು. ಪ್ರಪಂಚದ ಪ್ರತಿ ದೇಶದ ವಿವಿಧ ಕ್ಷೇತ್ರಗಳು ವಿಶ್ವ ಯುದ್ಧಗಳ ಪರಿಣಾಮವನ್ನು ಅನುಭವಿಸಿದವು. ಈ ಹಿನ್ನೆಲೆಯಲ್ಲಿ ಅಂತರ್‌ರಾಷ್ಟ್ರೀಯ ರಾಜಕಾರಣವು ಉಳಿದೆಲ್ಲ ರಂಗಗಳಿಗಿಂತ ವ್ಯಾಪಕ ಪರಿಣಾಮಗಳನ್ನು ಎದುರಿಸಿತು. ಈ ಕೆಳಗೆ ಜಾಗತಿಕ ರಾಜಕೀಯದ ಮೇಲೆ ವಿಶ್ವ ಯುದ್ಧಗಳ ಪರಿಣಾಮಗಳನ್ನು ಕೇವಲ ಪಟ್ಟಿ ಮಾಡಲಾಗಿದ್ದು ಅದರ ವಿವರಗಳು ಇದೇ ಪತ್ರಿಕೆಯ ವಿವಿಧ ಅಧ್ಯಾಯಗಳಲ್ಲಿ ಕಂಡು ಬರುತ್ತವೆ.

1. ಯುರೋಪ್ ಕೇಂದ್ರಿತ ಜಾಗತಿಕ ಶಕ್ತಿ ರಚನೆಯ ಅಂತರ್‌ಯುದ್ಧಗಳ ಪರಿಣಾಮ ಜರ್ಮನಿ ಹಾಗೂ ಇಟಲಿ ದುರ್ಬಲವಾದದ್ದು, ಸೋವಿಯತ್ ಒಕ್ಕೂಟ ಹಾಗೂ ಅಮೇರಿಕಾಗಳು ಪ್ರಬಲಗೊಂಡಿದುದು, ನೂತನ ರಾಷ್ಟ್ರಗಳ ಉದಯ ಈ ಬೆಳವಣಿಗೆಗೆ ಕಾರಣವಾದವು.
2. ಅಮೇರಿಕಾ ಮತ್ತು ಸೋವಿಯತ್ ಒಕ್ಕೂಟಗಳ ನಡುವೆ ಶೀತಲ ಸಮರದ ಉದಯ.



3. ಜಾಗತಿಕ ವ್ಯವಸ್ಥೆಯು ದ್ವಿ ಧ್ರುವಿಯ ಶಕ್ತಿ ಬಣಗಳಾಗಿ ರೂಪುಗೊಂಡಿತು.
4. ಏಷ್ಯಾ ಮತ್ತು ಆಫ್ರಿಕಾಗಳಲ್ಲಿ ನೂತನ ಸಾರ್ವಭೌಮ ರಾಷ್ಟ್ರಗಳ ಉದಯ.
5. ಅಲಿಪ್ತ ಚಳುವಳಿಗೆ ಚಾಲನೆ.
6. ರಾಯಭಾರತ್ವದಲ್ಲಿ ಬದಲಾವಣೆ ಮತ್ತು ಪ್ರಜಾಸತ್ತಾತ್ಮಕ ವಿದೇಶಾಂಗ ನೀತಿಯ ಅನುಸರಣೆ.
7. ಶಕ್ತಿ ಸಮತೋಲನದ ಪ್ರಸ್ತುತತೆಯಲ್ಲಿ ಇಳಿಮುಖ.
8. ಪರಮಾಣು ಶಸ್ತ್ರಾಸ್ತ್ರಗಳ ಯುಗದ ಆರಂಭ.
9. ಶಕ್ತಿ ಸಮತೋಲನದ ಬದಲು ಭಯೋತ್ಪಾದನೆಯ ಸಮತೋಲನಕ್ಕೆ ಮಹತ್ವ.
10. ಜಾಗತಿಕ ಮತ್ತು ಪ್ರಾದೇಶಿಕ ಸಂಘಟನೆಗಳಿಗೆ ಒಲವು.
11. ವಿಶ್ವ ಶಾಂತಿಗೆ ಚಳುವಳಿ.
12. ರಾಷ್ಟ್ರಗಳ ನಡುವೆ ಪರಸ್ಪರ ಅವಲಂಬನೆ ಮತ್ತು ಸಹಕಾರಗಳ ಬಲವರ್ಧನೆ.

## ಮಾದರಿ ಪ್ರಶ್ನೆಗಳು [Model Questions]:

### [A.] ಎರಡು ಅಂಕದ ಪ್ರಶ್ನೆಗಳು:

1. ಮಹಾ ಯುದ್ಧಗಳ ಹಿನ್ನೆಲೆಯನ್ನು ತಿಳಿಸಿರಿ.
2. ರಾಷ್ಟ್ರೀಯತೆ ಎಂದರೇನು?
3. ವಸಾಹತು ಪೈಪೋಟಿಗೆ ಮುಂದಾಗಿದ್ದ ಯುರೋಪಿನ ನಾಲ್ಕು ದೇಶಗಳನ್ನು ಹೆಸರಿಸಿರಿ.
4. ಮೊದಲ ವಿಶ್ವ ಸಮರದ ಆರಂಭದಲ್ಲಿದ್ದ ರಾಷ್ಟ್ರಗಳ ಎರಡು ಬಣಗಳನ್ನು ಬರೆಯಿರಿ.
5. ಮೊದಲ ವಿಶ್ವ ಯುದ್ಧದ ತತಕ್ಷಣದ ಕಾರಣವೇನು?
6. ಮೊದಲ ವಿಶ್ವ ಯುದ್ಧದ ವೇಳೆ ಅಮೇರಿಕಾವು ಶಕ್ತಿಶಾಲಿ ರಾಷ್ಟ್ರವಾಗಲು ಕಾರಣವೇನು?
7. ಮೊದಲ ವಿಶ್ವ ಯುದ್ಧದ ಮೂರು ರಾಜಕೀಯ ಪರಿಣಾಮಗಳನ್ನು ಬರೆಯಿರಿ.
8. ಮೊದಲ ವಿಶ್ವ ಸಮರದ ಆರ್ಥಿಕ ಪರಿಣಾಮಗಳನ್ನು ಪಟ್ಟಿ ಮಾಡಿರಿ.
9. ಮೊದಲ ವಿಶ್ವ ಯುದ್ಧವು ದ್ವಿತೀಯ ವಿಶ್ವ ಯುದ್ಧಕ್ಕಿಂತ ಭಿನ್ನ. ಹೇಗೆ?
10. ವರ್ಸೈಲ್ಸ್ ಒಪ್ಪಂದದ ವಿರುದ್ಧ ಹಿಟ್ಲರ್‌ನ ನೇತೃತ್ವದಲ್ಲಿ ಜರ್ಮನಿಯರು ಅಸಮಧಾನಗೊಳ್ಳಲು ಕಾರಣವೇನು?
11. ರಾಷ್ಟ್ರಗಳ ಸಂಘದ ವಿಫಲತೆಗೆ ಎರಡು ಕಾರಣಗಳಾವುವು?

12. ರೋಂ, ಬರ್ಲಿನ್, ಟೋಕಿಯೊ ಒಪ್ಪಂದಕ್ಕೆ ಮುಂದಾದ ಸರ್ವಾಧಿಕಾರಿಗಳನ್ನು ಹೆಸರಿಸಿರಿ.
13. ದ್ವಿತೀಯ ವಿಶ್ವ ಯುದ್ಧದ ಮೂರು ಪರಿಣಾಮಗಳನ್ನು ಬರೆಯಿರಿ.
14. ಶೀತಲ ಸಮರದ ಉದಯಕ್ಕೆ ಕಾರಣವೇನು?
15. ವಿಶ್ವ ಸಂಸ್ಥೆಯ ಗುರಿಗಳನ್ನು ಬರೆಯಿರಿ.

[B.] ಐದು ಅಂಕದ ಪ್ರಶ್ನೆಗಳು:

1. ಮೊದಲ ವಿಶ್ವ ಯುದ್ಧದ ಕಾರಣಗಳನ್ನು ಚರ್ಚಿಸಿರಿ.
2. ಮೊದಲ ವಿಶ್ವ ಯುದ್ಧದ ಪರಿಣಾಮಗಳನ್ನು ವಿವರಿಸಿರಿ.
3. ದ್ವಿತೀಯ ವಿಶ್ವ ಯುದ್ಧದ ಕಾರಣಗಳನ್ನು ಪರಿಶೀಲಿಸಿರಿ.
4. ದ್ವಿತೀಯ ವಿಶ್ವ ಯುದ್ಧದ ಪರಿಣಾಮಗಳನ್ನು ವಿವರಿಸಿರಿ.

[C.] ಹತ್ತು ಅಂಕದ ಪ್ರಶ್ನೆಗಳು:

1. ಮೊದಲ ವಿಶ್ವ ಯುದ್ಧದ ಕಾರಣ ಮತ್ತು ಪರಿಣಾಮಗಳನ್ನು ಪರಿಶೀಲಿಸಿರಿ.
2. ದ್ವಿತೀಯ ವಿಶ್ವ ಯುದ್ಧದ ಕಾರಣ ಮತ್ತು ಪರಿಣಾಮಗಳನ್ನು ಚರ್ಚಿಸಿರಿ.
3. ಜಾಗತಿಕ ರಾಜಕೀಯದ ಮೇಲೆ ವಿಶ್ವ ಯುದ್ಧಗಳ ಪರಿಣಾಮಗಳನ್ನು ಪಟ್ಟಿ ಮಾಡಿರಿ.



ಅಧ್ಯಾಯ 5:

# ಶೀತಲ ಸಮರ

## [COLD WAR]

**ಪ್ರಸ್ತಾವನೆ [Introduction]:** 20 ನೇ ಶತಮಾನದ ಪೂರ್ವಾರ್ಧದಲ್ಲಿ ಜರುಗಿದ ಎರಡು ವಿಶ್ವ ಸಮರಗಳು ಮನುಕುಲದ ಇತಿಹಾಸದಲ್ಲಿ ದುರಂತ ಘಟನೆಗಳೆನಿಸಿದವು. 1945 ರಲ್ಲಿ ಎರಡನೇ ವಿಶ್ವ ಯುದ್ಧವು ಕೊನೆಗೊಂಡಾಗ ಪ್ರಪಂಚದಲ್ಲಿ ಶಾಂತಿ ಸ್ಥಾಪನೆಗೊಂಡರೂ ಮೂರನೇ ಮಹಾ ಯುದ್ಧದ ಸಾಧ್ಯತೆಯ ಆತಂಕ ಮರೆಯಾಗಲಿಲ್ಲ. ಇದಕ್ಕೆ ಜಗತ್ತಿನ ನಾಯಕತ್ವಕ್ಕಾಗಿ ಎರಡು ಪ್ರಬಲ ರಾಷ್ಟ್ರಗಳಾದ ಅಮೇರಿಕಾ ಸಂಯುಕ್ತ ಸಂಸ್ಥಾನಗಳು (U. S. A.) ಮತ್ತು ಸೋವಿಯತ್ ಒಕ್ಕೂಟ (U. S. S. R.) ಗಳ ನಡುವಿನ ಯುದ್ಧೋತ್ತರ ಸ್ಪರ್ಧೆಯು ಪ್ರಧಾನ ಕಾರಣವಾಗಿತ್ತು. ದ್ವಿತೀಯ ವಿಶ್ವ ಯುದ್ಧದಿಂದ ನಲುಗಿದ ಬ್ರಿಟನ್ ಜಾಗತಿಕ ಶಕ್ತಿಯಾಗಿ ಮುಂದುವರೆಯುವ ಸ್ಥಿತಿಯಲ್ಲಿರಲಿಲ್ಲ. ಅಂತೆಯೇ ಯುದ್ಧದಲ್ಲಿ ಸೋತ ಜರ್ಮನಿ ವಿಭಜನೆಗೊಂಡು ಮಿತ್ರ ರಾಷ್ಟ್ರಗಳ ಮೇಲ್ವಿಚಾರಣೆಗೆ ಒಳಪಟ್ಟಿತು. ಇದರೊಡನೆ ಜಪಾನ್ ಯುದ್ಧದ ಕೊನೆಯಲ್ಲಿ ಅಣು ಬಾಂಬ್‌ಗಳ ದಾಳಿಗೊಳಗಾಗಿ ದುರ್ಬಲಗೊಂಡಿತು. ಹೀಗಾಗಿ ಎರಡನೇ ಮಹಾ ಯುದ್ಧೋತ್ತರ ಪ್ರಪಂಚದ ಶಕ್ತಿಶಾಲಿ ದೇಶಗಳೆನಿಸಿಕೊಂಡ ಅಮೇರಿಕಾ ಮತ್ತು ಸೋವಿಯತ್ ರಷ್ಯಾ ವಿಶ್ವದ ನಾಯಕತ್ವಕ್ಕೆ ಪೈಪೋಟಿಗಿಳಿದವು. ಎರಡೂ ರಾಷ್ಟ್ರಗಳು ತಮ್ಮ ನೀತಿ, ನಿರ್ಧಾರ ಹಾಗೂ ನಡವಳಿಕೆಯಲ್ಲಿ ಪರಸ್ಪರರ ಶಕ್ತಿಯನ್ನು ಕುಗ್ಗಿಸಲು ಪ್ರಯತ್ನಿಸತೊಡಗಿದವು. ಇವೆರಡರ ನಡುವೆ ಉದ್ವಿಗ್ನಕಾರಿ ಸಂಬಂಧ ದಿನದಿಂದ ದಿನಕ್ಕೆ ಹೆಚ್ಚಳವಾಯಿತು. ಇದರೊಡನೆ ಮೈತ್ರಿಕೂಟಗಳ ರಾಜಕೀಯ ಮತ್ತು ಸೈದ್ಧಾಂತಿಕ ಭಿನ್ನತೆ ಅಧಿಕಗೊಂಡು ಅಮೇರಿಕಾ ಮತ್ತು ರಷ್ಯಾದ ಸಂಬಂಧ ಹಳಸಿತು. ದ್ವಿತೀಯ ವಿಶ್ವ ಯುದ್ಧೋತ್ತರ ಅಮೇರಿಕಾ ಮತ್ತು ಸೋವಿಯತ್ ರಷ್ಯಾಗಳ ನಡುವಿನ ಈ ಅನಾರೋಗ್ಯಕರ ಸಂಬಂಧವು ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿ ಶೀತಲ ಸಮರ ಎಂಬ ಪರಿಕಲ್ಪನೆಯ ಉಗಮಕ್ಕೆ ಕಾರಣವಾಯಿತು. ಪ್ರಸ್ತುತ ಅಧ್ಯಾಯದಲ್ಲಿ ಶೀತಲ ಸಮರದ ಅರ್ಥ, ಉಗಮ, ಕಾರಣಗಳು, ಪರಿಣಾಮಗಳು, ಅಂತ್ಯ ಮತ್ತು ಸೋವಿಯತ್ ಒಕ್ಕೂಟದ ವಿಘಟನೆಯನ್ನು ಕುರಿತಂತೆ ಬೆಳಕು ಚೆಲ್ಲಲಾಗಿದೆ.

## [A.] ಶೀತಲ ಸಮರದ ಅರ್ಥ [Meaning of Cold War]:

ದ್ವಿತೀಯ ವಿಶ್ವ ಯುದ್ಧದ ಬಳಿಕ ಅಮೇರಿಕಾ ಮತ್ತು ಸೋವಿಯತ್ ರಷ್ಯಾ ದೇಶಗಳ ನಡುವಿನ ಉದ್ವಿಗ್ನಮಯ ಹಾಗೂ ಅಪರಿಚಿತ ಸಂಬಂಧಗಳನ್ನು ಕುರಿತಂತೆ ಅಮೇರಿಕಾದ ಬರ್ನಾರ್ಡ್ ಬರೂಚ್ ಮೊಟ್ಟ ಮೊದಲು ಶೀತಲ ಸಮರವೆಂಬ ಪದವನ್ನು ಬಳಸಿದರು. ಈ ಪದವನ್ನು ಪ್ರಸಿದ್ಧ ಅಂಕಣಕಾರ ವಾಲ್ಟರ್ ಲಿಪ್ಮನ್ ನಿರಂತರವಾಗಿ ಬಳಸುವ ಮೂಲಕ ಜನಪ್ರಿಯಗೊಳಿಸಿದರು. ಅಮೇರಿಕಾ ಮತ್ತು ರಷ್ಯಾದ ನಡುವೆ ನಿಜಾರ್ಥದಲ್ಲಿ ಯುದ್ಧ ಜರುಗದಿದ್ದರೂ ಕಂಡು ಬರುತ್ತಿದ್ದ ರಣೋತ್ಸಾಹವನ್ನು ವಿವರಿಸಲು ಬರೂಚ್ ಶೀತಲ ಸಮರವೆಂಬ ಪದವನ್ನು ಬಳಸಿದ್ದು 1947 ರ ಬಳಿಕ ವ್ಯಾಪಕವಾಗಿ ಆ ಪದವು ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿ ಬಳಕೆಯಾಯಿತು.

ಶಸ್ತ್ರ ರಹಿತ ಯುದ್ಧವು ಪದಶಃ ಶೀತಲ ಸಮರವೆನಿಸುತ್ತದೆ.. ಸರಳಾರ್ಥದಲ್ಲಿ ಶಾಂತಿ ಕಾಲದ ಶಸ್ತ್ರರಹಿತ ಯುದ್ಧ ಸನ್ನಿವೇಶವನ್ನು ಶೀತಲ ಸಮರವೆನ್ನಬಹುದು. ಇದು ಸೈದ್ಧಾಂತಿಕ ದ್ವೇಷ ಮತ್ತು ರಾಜಕೀಯ ಅಪನಂಬಿಕೆಯನ್ನು ಸಾಮಾನ್ಯವಾಗಿ ಆಧರಿಸಿರುತ್ತದೆ. ವಿಶಾಲಾರ್ಥದಲ್ಲಿ ಭಿನ್ನ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಪರಸ್ಪರರ ಸಾಮಾಜಿಕ ಹಾಗೂ ಆರ್ಥಿಕ ನೀತಿ, ನಿರ್ಧಾರ ಅಥವಾ ನಡವಳಿಕೆಗಳನ್ನು ನಿಯಂತ್ರಿಸುವ ಮೂಲಕ ರಾಷ್ಟ್ರಗಳು ತಮ್ಮ ಪ್ರಭಾವವನ್ನು ಉಳಿಸಿಕೊಳ್ಳಲು ಪ್ರಯತ್ನಿಸುವುದು ಶೀತಲ ಸಮರವೆನಿಸುತ್ತದೆ. ಶೀತಲ ಸಮರದಲ್ಲಿ ವಿರೋಧಿಗಳನ್ನು ಶಸ್ತ್ರಾಸ್ತ್ರಗಳ ನೆರವಿನಿಂದ ದುರ್ಬಲಗೊಳಿಸುವ ಬದಲು ಏಕಾಂಗಿಗೊಳಿಸುವ ಮೂಲಕ ಮಾನಸಿಕವಾಗಿ ಕುಗ್ಗಿಸಲು ಪ್ರಯತ್ನಿಸಲಾಗುತ್ತದೆ. ಆದ್ದರಿಂದಲೇ ಫ್ಲೆಮಿಂಗ್ ರಣರಂಗದ ಬದಲು ವ್ಯಕ್ತಿಗಳ ಮನಸ್ಸಿನಲ್ಲಿ ಜರುಗುವ ಯುದ್ಧವೇ ಶೀತಲ ಸಮರವೆಂದಿರುವರು. ಶೀತಲ ಸಮರವು ಎರಡು ಶಕ್ತಿ ಬಣಗಳ ನಡುವೆ ಯುದ್ಧ ಜರುಗದೇ ಯುದ್ಧದಂತಹ ಸನ್ನಿವೇಶವನ್ನು ಸೃಷ್ಟಿಸುವ ಪರಿಕಲ್ಪನೆಯಾಗಿದೆ. ರಾಯಭಾರಿಕ ಸಂಬಂಧ ಜಾರಿಯಲ್ಲಿದ್ದರೂ ಶೀತಲ ಸಮರಕ್ಕೆ ಮುಂದಾಗುವ ರಾಷ್ಟ್ರಗಳ ನಡುವೆ ನಿರಂತರ ಶಸ್ತ್ರಾಸ್ತ್ರ ಪೈಪೋಟಿ ಮತ್ತು ಗೂಢಾಚಾರಿಕೆ ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ಲೂಯಿಸ್ ಹಾಲ್ 'ಶೀತಲ ಸಮರವು ಶಕ್ತಿ ಬಣಗಳ ನಡುವೆ ಉದ್ವಿಗ್ನತೆಯನ್ನು ನಿರಂತರವಾಗಿ ಉಂಟು ಮಾಡುವುದರಿಂದ ಶಸ್ತ್ರಸಹಿತ 'ಯುದ್ಧಕ್ಕಿಂತ ಅಪಾಯಕಾರಿ' ಎಂದಿರುವರು. ಒಟ್ಟಾರೆ ಶತ್ರುವಿನ ಪ್ರಭಾವವನ್ನು ಮಿತಿಗೊಳಪಡಿಸಿ ತಮ್ಮ ಬಣದ ಪ್ರಭಾವವನ್ನು ಹೆಚ್ಚಿಸಿಕೊಳ್ಳಲು ರಾಷ್ಟ್ರಗಳು ಸೃಷ್ಟಿಸುವ ಮಾನಸಿಕ ಯುದ್ಧ ಸನ್ನಿವೇಶವನ್ನು ಶೀತಲ ಸಮರವೆನ್ನಬಹುದಾಗಿದೆ.



## [B.] ಶೀತಲ ಸಮರದ ಉಗಮ [Origin of Cold War]:

ಚಿಂತಕರಲ್ಲಿ ಶೀತಲ ಸಮರದ ಉಗಮವನ್ನು ಕುರಿತಂತೆ ಏಕಾಭಿಪ್ರಾಯವಿಲ್ಲ. ಬಹುತೇಕರು ಎರಡನೇ ವಿಶ್ವ ಯುದ್ಧದ ನಂತರ 1945 ರಿಂದ 1947 ರ ನಡುವೆ ಶೀತಲ ಸಮರದ ಉಗಮವನ್ನು ಸಮ್ಮತಿಸುತ್ತಾರೆ. ಆದರೆ, ಕೆಲ ಚಿಂತಕರು ಶೀತಲ ಸಮರದ ಉಗಮವನ್ನು 1917 ರ ರಷ್ಯಾ ಕ್ರಾಂತಿಯಲ್ಲಿ ಗುರುತಿಸುತ್ತಾರೆ. ಇದಕ್ಕೆ ಕ್ರಾಂತಿಯ ಬಳಿಕ ಅಸ್ತಿತ್ವಕ್ಕೆ ಬಂದ ಬೋಲ್ಶವಿಕ್ ರಷ್ಯಾಗೆ ಪಾಶ್ಚಿಮಾತ್ಯ ರಾಷ್ಟ್ರಗಳು ಮಾನ್ಯತೆ ನೀಡಲು ಹಿಂದೇಟು ಹಾಕಿದುದು ಪ್ರಧಾನ ಕಾರಣವೆನಿಸಿದೆ. ಜೊತೆಗೆ ಎರಡು ವಿಶ್ವ ಯುದ್ಧಗಳ ನಡುವಿನ ಕಾಲದಲ್ಲಿ ಜರ್ಮನಿ ಕುರಿತಂತೆ ಪಾಶ್ಚಿಮಾತ್ಯ ರಾಷ್ಟ್ರಗಳು ಅನುಸರಿಸಿದ ತುಷ್ಟೀಕರಣ ನೀತಿಯಿಂದ ಸೋವಿಯತ್ ರಷ್ಯಾ ಅತೃಪ್ತಿಗೊಂಡಿತ್ತು. ಈ ಹಿನ್ನೆಲೆಯಲ್ಲಿ ಫೆಡರಿಕ್ ಎಲ್. ಶೂಮ್ಯಾನ್ 1945 ರ ಮೊದಲೇ ಅಂದರೆ ರಷ್ಯಾ ಕ್ರಾಂತಿಯ ವೇಳೆಯೇ ಶೀತಲ ಸಮರವು ಆರಂಭಗೊಂಡಿತೆಂದು ಪ್ರತಿಪಾದಿಸಿದ್ದರು. ಇದರೊಡನೆ ಮಾರ್ಚ್ 5, 1946 ರಂದು ಇಂಗ್ಲೆಂಡಿನ ಚರ್ಚಿಲ್ ಮಾಡಿದ ಫಲ್ಟನ್ ಭಾಷಣದಲ್ಲಿ ಶೀತಲ ಸಮರದ ಉಗಮವನ್ನು ಸೋವಿಯತ್ ರಷ್ಯಾದ ಬಣವು ಗುರುತಿಸುತ್ತದೆ. ಈ ಭಾಷಣದಲ್ಲಿ ಪಾಶ್ಚಿಮಾತ್ಯ ಪ್ರಜಾಪ್ರಭುತ್ವ ದೇಶಗಳು ಒಗ್ಗಟ್ಟಿನಿಂದ ವಿಶ್ವ ಸಂಸ್ಥೆಯ ಪ್ರಣಾಳಿಕೆಗೆ ವಿಧೇಯವಾಗಿ ನಡೆದರೆ ಅದರ ತತ್ವಗಳ ಪ್ರಭಾವದ ಮುಂದುವರಿಕೆಯನ್ನು ಯಾವುದೇ ಶಕ್ತಿ ನಾಶಗೊಳಿಸಲಾರದು ಎಂಬುದಾಗಿ ಚರ್ಚಿಲ್ ವಾದಿಸಿದ್ದರು. ಇದರಿಂದ ಸಮತಾವಾದ ಸಿದ್ಧಾಂತವನ್ನು ಬೆಂಬಲಿಸುವ ಸೋವಿಯತ್ ರಷ್ಯಾಗೆ ಅಭದ್ರತೆ ಮೂಡಿತ್ತು. ಮುಂದೆ ಸಮತಾವಾದವನ್ನು ಬೆಂಬಲಿಸುವ ಸೋವಿಯತ್ ರಷ್ಯಾ ಹಾಗೂ ಪ್ರಜಾಪ್ರಭುತ್ವವನ್ನು ಬೆಂಬಲಿಸುವ ಅಮೇರಿಕಾ ಬಣಗಳ ನಡುವೆ ಶೀತಲ ಸಮರವು ಅಧಿಕಗೊಂಡಿತು. ಎರಡನೇ ವಿಶ್ವ ಯುದ್ಧೋತ್ತರ ಕಾಲದಲ್ಲಿ ಪ್ರಾದೇಶಿಕವಾಗಿ ಪೂರ್ವ ಹಾಗೂ ಪಶ್ಚಿಮ, ಸೈದ್ಧಾಂತಿಕವಾಗಿ ಸಮತಾವಾದ ಹಾಗೂ ಪ್ರಜಾಪ್ರಭುತ್ವ, ವ್ಯವಸ್ಥೆಯಾಗಿ ಗಣ್ಯರ ಪ್ರಜಾಪ್ರಭುತ್ವ ಹಾಗೂ ಕಾರ್ಮಿಕ ಸರ್ವಾಧಿಕಾರತ್ವ, ವ್ಯಕ್ತಿಗತವಾಗಿ ಜಾನ್ ಫಾಸ್ಟರ್ ಡಲ್ಲಸ್ ಹಾಗೂ ಸ್ಟಾಲಿನ್ ನಡುವಿನ ಸೋವಿಯತ್ ರಷ್ಯಾ ಮತ್ತು ಅಮೇರಿಕಾದ ಸಂಬಂಧಗಳಲ್ಲಿ ಶೀತಲ ಸಮರವೆಂಬ ಪರಿಕಲ್ಪನೆಯ ಉಗಮದ ಬೇರುಗಳನ್ನು ಕಾಣಬಹುದಾಗಿದೆ.

ಆಸಕ್ತಿದಾಯಕ ಅಂಶವೇನೆಂದರೆ, ಶೀತಲ ಸಮರಕ್ಕೆ ಯಾವ ಬಣ ಜವಾಬ್ದಾರಿ?, ಎರಡನೇ ಮಹಾ ಯುದ್ಧೋತ್ತರ ಯಾವ ಬಣವು ಹೆಚ್ಚು ಸಕ್ರಿಯವಾಗಿತ್ತು? ಮತ್ತು ಶೀತಲ ಸಮರಕ್ಕೆ ಪ್ರಾಥಮಿಕ ಪ್ರೇರಣೆಗಳಾವುವು? ಎಂಬ ಪ್ರಶ್ನೆಗಳನ್ನು ಆಧರಿಸಿ ಶೀತಲ ಸಮರದ ಉಗಮವನ್ನು ಪ್ರತಿಪಾದಿಸುವ ಚಿಂತಕರ ಮೂರು ಭಿನ್ನ ಗುಂಪುಗಳನ್ನು ಕಾಣಬಹುದಾಗಿದೆ. ಅವುಗಳೆಂದರೆ ಸಾಂಪ್ರದಾಯವಾದಿಗಳ ಗುಂಪು, ಪರಿಷ್ಕರಣಾವಾದಿಗಳ ಗುಂಪು ಮತ್ತು ಉತ್ತರ ಪರಿಷ್ಕರಣಾವಾದಿಗಳ ಗುಂಪು. ಈ ಪೈಕಿ ಸಾಂಪ್ರದಾಯವಾದಿಗಳ ಗುಂಪು ಶೀತಲ

ಸಮರದ ಉಗಮಕ್ಕೆ ಸೋವಿಯತ್ ರಷ್ಯಾ ಕಾರಣವೆಂದರೆ ಪರಿಷ್ಕರಣಾವಾದಿ ಹಾಗೂ ಉತ್ತರ ಪರಿಷ್ಕರಣಾವಾದಿಗಳ ಗುಂಪು ಅಮೇರಿಕಾವು ಅನುಸರಿಸಿದ ನೀತಿಗಳೇ ಶೀತಲ ಸಮರಕ್ಕೆ ಕಾರಣವೆಂದು ಪ್ರತಿಪಾದಿಸಿವೆ.

## [C.] ಶೀತಲ ಸಮರದ ಕಾರಣಗಳು [Causesof the Cold War]:

ಸೋವಿಯತ್ ರಷ್ಯಾ ಮತ್ತು ಅಮೇರಿಕಾದ ನಡುವಿನ ಶೀತಲ ಸಮರಕ್ಕೆ ಅಸಂಖ್ಯ ಕಾರಣಗಳನ್ನು ಗುರುತಿಸಲಾಗುತ್ತದೆ. ಎರಡೂ ಬಣಗಳ ನಡುವಿನ ಪರಸ್ಪರ ಆರೋಪಗಳಲ್ಲಿ ಶೀತಲ ಸಮರದ ಹಲವು ಕಾರಣಗಳು ಸ್ಪಷ್ಟವಾಗುತ್ತವೆ. ಇದರೊಡನೆ ಕೆಲ ಸಾಮಾನ್ಯ ಕಾರಣಗಳೂ ಸಹ ಶೀತಲ ಸಮರದ ತೀವ್ರತೆ ಹೆಚ್ಚಿಸುವಲ್ಲಿ ಪ್ರಚೋದನೆಯನ್ನು ಬೀರಿರುವುದು ಕಂಡು ಬರುತ್ತದೆ. ಈ ಕೆಳಗೆ ಶೀತಲ ಸಮರದ ಪ್ರಧಾನ ಕಾರಣಗಳನ್ನು ಕುರಿತಂತೆ ಮಾತ್ರ ಬೆಳಕು ಚೆಲ್ಲಲಾಗಿದೆ.

**1. ಸೈದ್ಧಾಂತಿಕ ಸಂಘರ್ಷ:** ಕಾರ್ಮಿಕರ ಕ್ರಾಂತಿಯ ಮೂಲಕ ಬಂಡವಾಳ ಶಾಹಿಗಳನ್ನು ನಿರ್ಮೂಲನೆಗೊಳಿಸಿ ಸಮಾಜದಲ್ಲಿ ಸಮಾನತೆಯನ್ನು ಸ್ಥಾಪಿಸುವುದು ಸಮತಾವಾದ ಸಿದ್ಧಾಂತದ ತಿರುಳು. ಸೋವಿಯತ್ ಒಕ್ಕೂಟವು ಸಮತಾವಾದಿ ತತ್ವಗಳಲ್ಲಿ ನಂಬಿಕೆ ಹೊಂದಿ ಸಮಾಜವಾದಿ ರಾಷ್ಟ್ರವೆನಿಸಿತ್ತು. ಇನ್ನೊಂದೆಡೆ ಅಮೇರಿಕಾವು ಉದಾರವಾದಿ ಪ್ರಜಾಪ್ರಭುತ್ವ ಸಿದ್ಧಾಂತವನ್ನು ಆಧರಿಸಿದ ಬಂಡವಾಳಶಾಹಿ ರಾಷ್ಟ್ರವೆನಿಸಿತ್ತು. ಸಮತಾವಾದವು ಸ್ವಾತಂತ್ರ್ಯ ಮತ್ತು ಪ್ರಗತಿಯಂತಹ ಮಾನವಿಯ ಮೌಲ್ಯಗಳನ್ನು ನಾಶಗೊಳಿಸುವ ಸಿದ್ಧಾಂತವೆಂದು ನಂಬಿದ ಬಂಡವಾಳಶಾಹಿತ್ವ ಬೆಂಬಲಿಸುತ್ತಿದ್ದ ಅಮೇರಿಕಾವು ಸಮಾಜವಾದದ ವಿಸ್ತರಣೆಯನ್ನು ಸಹಿಸದಾಗಿತ್ತು. ತನ್ನ ಸಮತಾವಾದಿ ಸೈದ್ಧಾಂತಿಕ ತತ್ವಕ್ಕೆ ವಿರುದ್ಧವಾದ ಬಂಡವಾಳಶಾಹಿತ್ವವನ್ನು ಅಮೇರಿಕಾ ಪ್ರೋತ್ಸಾಹಿಸುವುದೆಂದು ಸೋವಿಯತ್ ರಷ್ಯಾ ಭಾವಿಸಿತ್ತು. ಅಂತೆಯೇ ಸ್ವಾತಂತ್ರ್ಯವನ್ನು ಆಧರಿಸಿರುವ ಬಂಡವಾಳಶಾಹಿತ್ವವನ್ನು ವಿರೋಧಿಸುವ ರಷ್ಯಾದ ನೀತಿಗಳು ತನ್ನ ಸೈದ್ಧಾಂತಿಕ ನಂಬಿಕೆಗೆ ಮಾರಕವೆಂಬ ನಿಲುವನ್ನು ಅಮೇರಿಕಾವು ತಾಳಿತ್ತು. ಈ ಮಧ್ಯೆ ಯುರೋಪಿನಲ್ಲಿ ಅಮೇರಿಕಾದ ಪ್ರಭಾವವನ್ನು ರಷ್ಯಾ ಸಮ್ಮತಿಸದಾಯಿತು. ಹೀಗೆ ಪರಸ್ಪರ ವಿರುದ್ಧವಾದ ತಮ್ಮ ಸೈದ್ಧಾಂತಿಕ ತತ್ವಗಳ ಸಂರಕ್ಷಣೆಗಾಗಿ ಅಮೇರಿಕಾ ಮತ್ತು ಸೋವಿಯತ್ ಒಕ್ಕೂಟಗಳು ಪ್ರಯತ್ನಿಸತೊಡಗಿದ್ದರಿಂದ ಅವುಗಳ ನಡುವೆ ಕಾಲಾನುಕ್ರಮದಲ್ಲಿ ಶೀತಲ ಸಮರ ಕಾಣಿಸಿಕೊಂಡಿತು.

**2. ಶಸ್ತ್ರಾಸ್ತ್ರ ಸ್ಪರ್ಧೆ:** ಎರಡನೇ ವಿಶ್ವ ಯುದ್ಧದ ಹೊತ್ತಿಗೆ ಸೋವಿಯತ್ ರಷ್ಯಾವು ಬೃಹತ್ ಸೈನ್ಯವನ್ನು ಹೊಂದಿತ್ತು. ರಷ್ಯಾದ ಸೈನಿಕ ಶಕ್ತಿಯು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಅದರಲ್ಲೂ ಅಮೇರಿಕಾಗೆ ಆತಂಕ ಮೂಡಿಸಿತ್ತು. ಫಲವಾಗಿ ಅಮೇರಿಕಾವು ಅಣು ಬಾಂಬ್ ಗಳ ಸಾಮರ್ಥ್ಯದೊಡನೆ ಶಕ್ತಿ ಸಮತೋಲನಕ್ಕೆ ಮುಂದಾಯಿತು. ಮುಂದೆ 1949 ರಲ್ಲಿ ಸೋವಿಯತ್ ಒಕ್ಕೂಟವು ಅಣ್ವಸ್ತ್ರ ಉತ್ಪಾದನೆಯಲ್ಲಿ ತೊಡಗಿ ಯಶಸ್ವಿಯಾಯಿತು. ಉಭಯ



ಬಣಗಳ ನಡುವೆ ಶಸ್ತ್ರಾಸ್ತ್ರ ಸಮತೋಲನಕ್ಕಾಗಿ ಸ್ಪರ್ಧೆ ಏರ್ಪಟ್ಟು ಮಾರಕ ಕ್ಷಿಪಣಿಗಳು, ಯುದ್ಧ ವಿಮಾನಗಳು, ವಿನಾಶಕಾರಿ ಅಸ್ತ್ರಗಳು ಉತ್ಪಾದಿಸಲ್ಪಟ್ಟವು. ಹೀಗೆ ಉಭಯ ರಾಷ್ಟ್ರಗಳ ಶಸ್ತ್ರಾಸ್ತ್ರ ಸ್ಪರ್ಧೆಯು ಶೀತಲ ಸಮರದ ತೀವ್ರತೆಯನ್ನು ಅಧಿಕಗೊಳಿಸಲು ಕಾರಣವಾಯಿತು.

**3. ಪರಸ್ಪರ ಸಂಶಯ:** ಎರಡನೇ ವಿಶ್ವ ಯುದ್ಧದಲ್ಲಿ ಮಿತ್ರ ರಾಷ್ಟ್ರಗಳ ಬಣದಲ್ಲಿದ್ದ ಅಮೇರಿಕಾ ಮತ್ತು ಸೋವಿಯತ್ ರಷ್ಯಾ ಜೊತೆಗೂಡಿ ಆಕ್ಸಿಸ್ ಬಣದಲ್ಲಿದ್ದ ಜರ್ಮನಿಯನ್ನು ಸೋಲಿಸಲು ಶ್ರಮಿಸಿದವು. ಆದರೆ, ಅಭದ್ರತೆ ಮತ್ತು ಅಪನಂಬಿಕೆಗಳಿಂದಾಗಿ ಇವೆರಡರ ನಡುವೆ ನಿಜಾರ್ಥದಲ್ಲಿ ಸ್ನೇಹವಿರಲಿಲ್ಲ. 1944 ರಿಂದ 1947 ರ ನಡುವೆ ಅಮೇರಿಕಾ ಮತ್ತು ಕೆನಡಾಗಳಲ್ಲಿ ಕಮ್ಯುನಿಸ್ಟ್ ಚಟುವಟಿಕೆಗಳು ಅಧಿಕಗೊಂಡಾಗ ಅಮೇರಿಕಾವು ಅವುಗಳ ಹಿಂದೆ ಸೋವಿಯತ್ ರಷ್ಯಾದ ಕೈವಾಡವಿರಬಹುದೆಂದು ಸಂಶಯಿಸಿತು. ಜೊತೆಗೆ ಅಮೇರಿಕಾದ ಪಾಶ್ಚಿಮಾತ್ಯ ಮಿತ್ರ ರಾಷ್ಟ್ರಗಳಲ್ಲಿ ರಷ್ಯಾವು ಗೂಢಾಚಾರಿಕೆ ನಡೆಸುತ್ತಿರುವ ಕುರಿತು ಅಮೇರಿಕಾ ಸಂಶಯಗೊಂಡಿತ್ತು. ಅಂತೆಯೇ ರಷ್ಯಾವು ಇಟಲಿಯಲ್ಲಿ ಫ್ಯಾಸಿಸ್ಟ್ ಬಲವರ್ಧನೆಗೆ ಅಮೇರಿಕಾದ ಬೆಂಬಲವೇ ಕಾರಣವೆಂದು ಭಾವಿಸಿತ್ತು. ಯುದ್ಧದ ವೇಳೆಯಲ್ಲಿ ಅಗತ್ಯವಿದ್ದಷ್ಟು ಆರ್ಥಿಕ ಮತ್ತು ಸೈನಿಕ ನೆರವು ತನಗೆ ದೊರಕದಿರಲು ತನ್ನನ್ನು ಅಂತರ್ ರಾಷ್ಟ್ರೀಯವಾಗಿ ನಾಶಗೊಳಿಸುವ ಅಮೇರಿಕಾದ ತಂತ್ರಗಾರಿಕೆ ಎಂದು ಸೋವಿಯತ್ ರಷ್ಯಾ ನಂಬಿತ್ತು. ಇದರೊಡನೆ ಅಮೇರಿಕಾದ ಅಣು ಸಾಮರ್ಥ್ಯದ ಗೌಪ್ಯತೆ ಮತ್ತು ಅಣು ಬಾಂಬ್ ಗಳನ್ನು ಜಪಾನಿನ ಮೇಲೆ ಪ್ರಯೋಗಿಸುವಾಗ ತೋರಿದ ನಿರ್ಲಕ್ಷ್ಯಗಳು ತನ್ನನ್ನು ದುರ್ಬಲಗೊಳಿಸುವ ಕ್ರಮಗಳೆಂದು ರಷ್ಯಾ ಪರಿಗಣಿಸಿತ್ತು. ಹೀಗೆ ಉಭಯ ರಾಷ್ಟ್ರಗಳ ನಡುವಿನ ಪರಸ್ಪರ ಸಂಶಯವು ಶೀತಲ ಸಮರವನ್ನು ಬಲಗೊಳಿಸಲು ಪ್ರಧಾನ ಕಾರಣವೆನಿಸಿತು.

**4. ಯಾಲ್ಟಾ ಸಮ್ಮೇಳನದ ತತ್ವಗಳ ಉಲ್ಲಂಘನೆ:** ಎರಡನೇ ವಿಶ್ವ ಸಮರದ ಕೊನೆಯಲ್ಲಿ ಯಾಲ್ಟಾ ಸಮ್ಮೇಳನದಲ್ಲಿ ಅಮೇರಿಕಾ ಮತ್ತು ಸೋವಿಯತ್ ರಷ್ಯಾ ಸೇರಿದಂತೆ ಮಿತ್ರ ರಾಷ್ಟ್ರಗಳು ಭಾಗಿಯಾಗಿದ್ದವು. ಈ ಸಮ್ಮೇಳನದಲ್ಲಿ ಯುದ್ಧ ಸಮಯದಲ್ಲಿ ಪೂರ್ವ ಮತ್ತು ಕೇಂದ್ರ ಯುರೋಪಿನ ಜವಾಬ್ದಾರಿಯನ್ನು ಅಮೇರಿಕಾ ಸೇರಿದಂತೆ ಪಾಶ್ಚಿಮಾತ್ಯ ರಾಷ್ಟ್ರಗಳು ಸೋವಿಯತ್ ರಷ್ಯಾದ ಮೇಲ್ವಿಚಾರಣೆಗೆ ನೀಡಿದ್ದವು. ಇದಕ್ಕೆ ಪ್ರತಿಯಾಗಿ ರಷ್ಯಾವು ಯುದ್ಧೋತ್ತರ ಅವಧಿಯಲ್ಲಿ ಸ್ವತಂತ್ರಗೊಂಡ ದೇಶಗಳಲ್ಲಿ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಜಾರಿಗೊಳಿಸಬೇಕಿತ್ತು. ಆದರೆ, ಸೋವಿಯತ್ ರಷ್ಯಾವು ಕಾಲಾಂತರದಲ್ಲಿ ಯಾಲ್ಟಾದ ತತ್ವಗಳನ್ನು ಪಾಲಿಸದೇ ಸ್ವತಂತ್ರಗೊಂಡ ಪೂರ್ವ ಮತ್ತು ಕೇಂದ್ರ ಯುರೋಪಿನ ರಾಷ್ಟ್ರಗಳಲ್ಲಿ ಕಮ್ಯುನಿಸ್ಟ್ ಸರ್ಕಾರಗಳನ್ನು ಬೆಂಬಲಿಸಿತು. ಈ ಬೆಳವಣಿಗೆಯಿಂದ ಕ್ರೋಧಗೊಂಡ ಅಮೇರಿಕಾವು ರಷ್ಯಾ ಕುರಿತಂತೆ ಅಸಮಧಾನಗೊಂಡಿತು. ಫಲವಾಗಿ ಅವೆರಡೂ ದೇಶಗಳ ನಡುವೆ ಶೀತಲ ಸಮರ ಮತ್ತಷ್ಟು ತೀವ್ರಗೊಳ್ಳತೊಡಗಿತು.

**5. ಪರಸ್ಪರ ವಿರೋಧಾತ್ಮಕ ಪ್ರಚಾರ:** ಸೋವಿಯತ್ ರಷ್ಯಾವು ಮಿತ್ರ ರಾಷ್ಟ್ರಗಳ ಕೂಟದ ಭಾಗವಾಗಿದ್ದರೂ ಪಾಶ್ಚಿಮಾತ್ಯ ಪತ್ರಿಕೆ ಮತ್ತು ನಾಯಕತ್ವ ಸಮತಾವಾದ ಹಾಗೂ ಸೋವಿಯತ್ ರಷ್ಯಾದ ನೀತಿಗಳ  ವಿರುದ್ಧದ ಪ್ರಚಾರದಲ್ಲಿ ತೊಡಗಿದ್ದವು. ಸೋವಿಯತ್ ರಷ್ಯಾವು ಪ್ರಪಂಚವನ್ನು ಸಮತಾವಾದಿ ಪ್ರಪಂಚವಾಗಿ ಪರಿವರ್ತಿಸುವ ಹುನ್ನಾರ ಹೊಂದಿದೆ ಎಂಬುದಾಗಿ ಪಾಶ್ಚಿಮಾತ್ಯರು ಪ್ರಚಾರ ಮಾಡಿದರು. ಅಂತೆಯೇ ಎರಡನೇ ವಿಶ್ವ ಸಮರದ ಬಳಿಕ ಸೋವಿಯತ್ ರಷ್ಯಾವೂ ಸಹ ಅಮೇರಿಕಾ ಮತ್ತು ಪ್ರಜಾಪ್ರಭುತ್ವ ವಿರೋಧಿ ಪ್ರಚಾರದಲ್ಲಿ ತೊಡಗಿಕೊಂಡಿತು. ಈ ಪರಸ್ಪರ ವಿರೋಧಿ ಪ್ರಚಾರವು ಶೀತಲ ಸಮರವೆಂಬ ದೆಂಕಿಗೆ ತುಪ್ಪ ಸುರಿದಂತಾಯಿತು.

**6. ಸೋವಿಯತ್ ರಷ್ಯಾದಿಂದ ನಿರಂತರ ವಿಟೋ ಅಧಿಕಾರದ ಬಳಕೆ:** ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಅಮೇರಿಕಾದೊಡನೆ ಸೋವಿಯತ್ ರಷ್ಯಾ ಸಹ ಸದಸ್ಯತ್ವ ಪಡೆದಿತ್ತು. ಎರಡನೇ ವಿಶ್ವ ಸಮರದ ಬಳಿಕ ಅಮೇರಿಕಾ ನೇತೃತ್ವದ ಯಾವುದೇ ಪಾಶ್ಚಿಮಾತ್ಯರ ಠರಾವುಗಳು ಜಾರಿಗೊಳ್ಳದಂತೆ ಅಂದರೆ ಅವರ ಬಲ ಅಧಿಕಗೊಳ್ಳದಂತೆ ರಷ್ಯಾವು ನಿರಂತರವಾಗಿ ವಿಟೋ ಅಧಿಕಾರ ಚಲಾಯಿಸುವ ಮೂಲಕ ಅಮೇರಿಕಾಗೆ ಅಡ್ಡಿಯುಂಟು ಮಾಡುತ್ತಿತ್ತು. ರಷ್ಯಾದ ಈ ವರ್ತನೆಯು ಶೀತಲ ಸಮರದ ತೀವ್ರತೆಯನ್ನು ಪರಸ್ಪರರಲ್ಲಿ ಅಧಿಕಗೊಳಿಸಿತೆನ್ನಬಹುದಾಗಿದೆ.

**7. ಟ್ರೂಮನ್ ಯೋಜನೆಯ ಜಾರಿ:** ಎರಡನೇ ವಿಶ್ವ ಯುದ್ಧೋತ್ತರ ಸೋವಿಯತ್ ರಷ್ಯಾವು ಗ್ರೀಸ್‌ನಲ್ಲಿ ಎಡ ಪಂಥೀಯ ಕಮ್ಯುನಿಸ್ಟ್ ಸರ್ಕಾರವನ್ನು ರಚಿಸಲು ಪ್ರಯತ್ನಿಸಿತು. ಜೊತೆಗೆ ಟರ್ಕಿಯಲ್ಲಿ ಸೈನಿಕ ನೆಲೆ ಸ್ಥಾಪಿಸಿ ತನ್ನ ಪ್ರಭಾವ ಹೆಚ್ಚಿಸಿಕೊಳ್ಳಲು ಮುಂದಾಯಿತು. ಇದನ್ನರಿತ ಅಮೇರಿಕಾದಧ್ಯಕ್ಷ ಹ್ಯಾರಿ ಎಸ್. ಟ್ರೂಮನ್ ಮಾರ್ಚ್ 12, 1947 ರಂದು ಯೋಜನೆಯೊಂದನ್ನು ಪ್ರಕಟಿಸಿದ. ಈ ಯೋಜನೆಯು ಸೋವಿಯತ್ ರಷ್ಯಾದ ಸಮತಾವಾದಿ ಮತ್ತು ಸಾಮ್ರಾಜ್ಯಶಾಹಿ ನೀತಿಗಳ ವಿಸ್ತರಣೆಯನ್ನು ನಿಯಂತ್ರಿಸಲು ಅಮೇರಿಕಾ ಕೈಗೊಂಡ ನೀತಿಯಾಗಿತ್ತು. ಟ್ರೂಮನ್ ಯೋಜನೆಯಡಿ ಗ್ರೀಕ್ ಮತ್ತು ಟರ್ಕಿಗೆ ಆರ್ಥಿಕ ಹಾಗೂ ಸೈನಿಕ ಸಹಾಯ ಒದಗಿಸಲು ಅಮೇರಿಕಾ ಮುಂದಾಯಿತು. ಈ ಬೆಳವಣಿಗೆಯು ಅಮೇರಿಕಾ ಮತ್ತು ಸೋವಿಯತ್ ರಷ್ಯಾದ ನಡುವೆ ಔಪಚಾರಿಕವಾಗಿ ಶೀತಲ ಸಮರಕ್ಕೆ ಚಾಲನೆ ನೀಡಿತೆಂದು ಇತಿಹಾಸಕಾರರು ನಂಬುತ್ತಾರೆ.

ಈ ಮೇಲೆ ಚರ್ಚಿಸಲಾದ ಹಲವು ಪ್ರಧಾನ ಕಾರಣಗಳಲ್ಲದೇ ಅಮೇರಿಕಾ ಮತ್ತು ಸೋವಿಯತ್ ರಷ್ಯಾದ ನಡುವಿನ ಶೀತಲ ಸಮರಕ್ಕೆ ಇನ್ನಿತರ ಕಾರಣಗಳೂ ಪ್ರಭಾವ ಬೀರಿವೆ. ಯುದ್ಧ ಕಾಲದ ಮತ್ತು ಯುದ್ಧೋತ್ತರ ಕಾಲದ ವೈವಿಧ್ಯಮಯ ಅಂಶಗಳು ರಷ್ಯಾ ಮತ್ತು ಅಮೇರಿಕಾಗಳ ನಡುವಿನ ಶೀತಲ ಸಮರಕ್ಕೆ ನೀರೆರೆದು ಬೆಳೆಸಿವೆ. ಗಮನಾರ್ಹ ಅಂಶವೇನೆಂದರೆ, ಮೊದಲ ವಿಶ್ವ ಯುದ್ಧದ ವೇಳೆಯಲ್ಲಿ ಜರುಗಿದ ಅಂದರೆ 1917 ರ



ಸೋವಿಯತ್ ರಷ್ಯಾ ಕ್ರಾಂತಿಯಲ್ಲಿಯೇ ಈ ಶೀತಲ ಸಮರದ ಬೇರುಗಳನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಎರಡು ಮಹಾ ಯುದ್ಧಗಳ ನಡುವಿನ ಕಾಲದಲ್ಲಿ ಎಲೆ ಮರೆಯ ಕಾಯಿಯಂತಿದ್ದ ಶೀತಲ ಸಮರವು 1947 ರಿಂದ ಮೂರ್ತ ಸ್ವರೂಪವನ್ನು ತಾಳಿತೆಂದರೆ ತಪ್ಪಾಗಲಾರದು.

### [D.] ಶೀತಳ ಸಮರದ ಪರಿಣಾಮಗಳು [Effects of Cold War]:

ಎರಡನೇ ವಿಶ್ವ ಯುದ್ಧದ ನಂತರ ಅಸ್ತಿತ್ವದಲ್ಲಿದ್ದ ಶೀತಲ ಸಮರವು ಅಂತರ್ ರಾಷ್ಟ್ರೀಯ ಸಂಬಂಧಗಳ ಮೇಲೆ ದೂರಗಾಮಿ ಪ್ರಭಾವವನ್ನು ಬೀರಿತ್ತು. ವಾಸ್ತವದಲ್ಲಿ ಶೀತಲ ಸಮರವು ಸೋವಿಯತ್ ರಷ್ಯಾ ಮತ್ತು ಅಮೇರಿಕಾಗಳ ನಡುವೆ ಜರುಗಿದ್ದರೂ ಅದರ ಪರಿಣಾಮಗಳು ಜಗತ್ತಿನಾದ್ಯಂತ ವ್ಯಾಪಿಸಿದ್ದವು. ರಾಜಕೀಯ ಆಯಾಮದ ಶೀತಲ ಸಮರವು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ ಮುಂತಾದ ರಂಗಗಳ ಮೇಲೆ ತನ್ನದೇಯಾದ ಪರಿಣಾಮಗಳನ್ನು ಉಂಟು ಮಾಡಿತ್ತು. ಈ ಕೆಳಗೆ ಸಂಕ್ಷೇಪ್ತವಾಗಿ ಶೀತಲ ಸಮರದ ರಾಜಕೀಯ ಪರಿಣಾಮಗಳನ್ನು ಕುರಿತಂತೆ ಮಾತ್ರ ಬೆಳಕು ಚೆಲ್ಲಲಾಗಿದೆ.

**1. ಎರಡು ಶಕ್ತಿ ಬಣಗಳ ಸೃಷ್ಟಿ:** ಶೀತಲ ಸಮರವು ಸೋವಿಯತ್ ರಷ್ಯಾ ಮತ್ತು ಅಮೇರಿಕಾಗಳ ನಡುವೆ ಅಸ್ತಿತ್ವಕ್ಕೆ ಬಂದಿದ್ದ ನವೀನ ಯುದ್ಧ. ತಮ್ಮ ಪ್ರಭಾವವನ್ನು ಬಲಗೊಳಿಸಿಕೊಳ್ಳಲು ರಷ್ಯಾ ಮತ್ತು ಅಮೇರಿಕಾಗಳು ಸೈದ್ಧಾಂತಿಕ ತಳಹದಿಯಲ್ಲಿ ವಿಶ್ವದ ರಾಷ್ಟ್ರಗಳನ್ನು ತಮ್ಮೊಡನೆ ಗುರುತಿಸಿಕೊಳ್ಳಲು ಮುಂದಾದವು. ಫಲವಾಗಿ ಜಗತ್ತು ಸೋವಿಯತ್ ರಷ್ಯಾದ ಸಮತಾವಾದಿ ಬಣ ಮತ್ತು ಅಮೇರಿಕಾ ನೇತೃತ್ವದ ಬಂಡವಾಳಶಾಹಿ ಬಣವಾಗಿ ವಿಭಜನೆಗೊಂಡಿತು. ಹೀಗೆ ಶೀತಲ ಸಮರದ ಪರಿಣಾಮ ಜಗತ್ತಿನಲ್ಲಿ  ಎರಡು ಶಕ್ತಿ ಬಣಗಳು ಸೃಷ್ಟಿಸಲ್ಪಟ್ಟವು.

**2. ಮಿಲಿಟರಿ ಕೂಟಗಳ ರಚನೆ:** ಶೀತಲ ಸಮರದಲ್ಲಿ ತೊಡಗಿದ ಸೋವಿಯತ್ ರಷ್ಯಾ ಮತ್ತು ಅಮೇರಿಕಾಗಳು ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಳ್ಳಲು ಸದಾ ಹವಣಿಸುತ್ತಿದ್ದವು. ಪರಸ್ಪರ ಅಭದ್ರತೆ ಮತ್ತು ಸಂಶಯ ಬೆಳೆಸಿಕೊಂಡಿದ್ದ ಉಭಯ ರಾಷ್ಟ್ರಗಳು ತಮ್ಮ ಹಿತಾಸಕ್ತಿಗಾಗಿ ಸಮಾನ ಮನಸ್ಕ ರಾಷ್ಟ್ರಗಳೊಡನೆ ಮಿಲಿಟರಿ ಕೂಟಗಳನ್ನು ರಚಿಸಿಕೊಳ್ಳಲು ಮುಂದಾದವು. ಈ ಪೈಕಿ ಸೋವಿಯತ್ ರಷ್ಯಾ ಕೋಮಿನ್ ಫಾರಂ ಹೆಸರಿನ ಕೂಟವನ್ನು ರಚಿಸಿಕೊಂಡಿತು. ಇದಕ್ಕೆ ಪ್ರತಿಯಾಗಿ ಅಮೇರಿಕಾವು ಏಪ್ರಿಲ್ 1949 ರಲ್ಲಿ ನ್ಯಾಟೊವನ್ನು ರಚಿಸಿಕೊಂಡಿತು. ಇದರೊಡನೆ ಅಮೇರಿಕಾವು 1955 ರಲ್ಲಿ ಸೆಂಟೊ (CENTO) ಮತ್ತು ಸೀಟೊ (SEATO) ಮೈತ್ರಿಕೂಟಗಳನ್ನು ರಚಿಸಿಕೊಳ್ಳಲು ಯಶಸ್ವಿಯಾಯಿತು. ಈ ನಡುವೆ ಮೇ 14, 1955 ರಂದು ರಷ್ಯಾವು ವಾರ್ಸಾ ಪ್ಯಾಕ್ಟ್‌ಗೆ

NATO - North Atlantic treaty Organization 1967
CENTO. Central Treaty organization HQ - Brussels - → 1955
SEATO - South East - Asia - Treaty organization. Sept - 8 1954 () 19

ಮುಂದಾಯಿತು. ಹೀಗೆ ಶೀತಲ ಸಮರದ ಪರಿಣಾಮ ರಷ್ಯಾ ಮತ್ತು ಅಮೇರಿಕಾ ನೇತೃತ್ವದ ಬಣಗಳು ತಮ್ಮ ಶಕ್ತಿ ಸಮತೋಲನಕ್ಕಾಗಿ ಹಲವು ಮಿಲಿಟರಿ ಕೂಟಗಳನ್ನು ರಚಿಸಿಕೊಂಡವು.

3. **ಅಲಿಪ್ತ ಚಳುವಳಿಯ ಉದಯ:** ಶೀತಲ ಸಮರದ ಕಾರಣದಿಂದ ಜಗತ್ತಿನ ಎರಡು ಶಕ್ತಿ ಬಣಗಳ ನಡುವೆ ಮೈತ್ರಿಕೂಟಗಳ ರಚನೆಗೆ ಪೈಪೋಟಿ ಉಂಟಾಯಿತು. ಪ್ರಪಂಚದ ವಿವಿಧ ದೇಶಗಳನ್ನು ತಮ್ಮ ಬಣಕ್ಕೆ ಸೇರಿಸಿಕೊಳ್ಳಲು ಮೈತ್ರಿ ಕೂಟಗಳನ್ನು ರಷ್ಯಾ ಮತ್ತು ಅಮೇರಿಕಾಗಳು ಸಾಧನವನ್ನಾಗಿ ಮಾಡಿಕೊಂಡಿದ್ದವು. ಆದರೆ, ಎರಡನೇ ವಿಶ್ವ ಯುದ್ಧದ ಬಳಿಕ ಸ್ವತಂತ್ರಗೊಂಡ ಹಲವು ಏಷ್ಯಾ ಮತ್ತು ಆಫ್ರಿಕಾದ ನೂತನ ದೇಶಗಳು ಯಾವುದೇ ಶಕ್ತಿ ಬಣದೊಡನೆ ಮೈತ್ರಿ ಕೂಟದ ಮೂಲಕ ಗುರುತಿಸಿಕೊಳ್ಳದಿರಲು ನಿರ್ಧರಿಸಿದವು. ಫಲವಾಗಿ ಶಕ್ತಿ ಬಣಕ್ಕೆ ಸೇರಿ ಅನುಯಾಯಿ ರಾಷ್ಟ್ರವಾಗುವ ಬದಲು ಸ್ವತಂತ್ರವಾಗಿದ್ದು ಎರಡೂ ಬಣಗಳ ಸಹಕಾರ ಪಡೆಯಲು ಮುಂದಾದ ರಾಷ್ಟ್ರಗಳ ಗುಂಪು ಜಗತ್ತಿನಲ್ಲಿ ಕಾಣಿಸಿಕೊಂಡಿತು. ನಿರ್ದಿಷ್ಟ ಶಕ್ತಿ ಬಣದೊಡನೆ ಸೇರಿಕೊಳ್ಳದೇ ಸ್ವತಂತ್ರವಾಗಿರುವ ರಾಷ್ಟ್ರಗಳು ಅನುಸರಿಸಿದ ನೀತಿಯನ್ನು ಅಲಿಪ್ತ ಚಳುವಳಿ ಎನ್ನಲಾಗುತ್ತದೆ. ಹೀಗೆ ಶೀತಲ ಸಮರದ ಪರಿಣಾಮ ವಿಶ್ವದಲ್ಲಿ ಪೈಪೋಟಿಯ ಬದಲು ಸಹಕಾರ ಬಯಸುವ ವಿಭಿನ್ನ ಅಲಿಪ್ತ ಚಳುವಳಿ ಉದಯಗೊಂಡಿತು.

4. **ವಿಶ್ವ ಸಂಸ್ಥೆಯ ಕಾರ್ಯಾಚರಣೆಗೆ ಧಕ್ಕೆ:** ಶೀತಲ ಸಮರದ ಪರಿಣಾಮ ರಷ್ಯಾ ಮತ್ತು ಅಮೇರಿಕಾ ಪರಸ್ಪರ ಅಸಹಿಷ್ಣುತೆಯನ್ನು ಬೆಳೆಸಿಕೊಂಡಿದ್ದವು. ಇದರಿಂದ ಜಾಗತಿಕ ಶಾಂತಿಗೆ ಶ್ರಮಿಸುವ ವಿಶ್ವ ಸಂಸ್ಥೆಯು ಕೈಗೊಂಡ ಕ್ರಮಗಳನ್ನು ಸಂಶಯದಿಂದ ಕಂಡು ಅವುಗಳ ಅನುಷ್ಠಾನಕ್ಕೆ ಉಭಯ ರಾಷ್ಟ್ರಗಳು ಅಡ್ಡಿಯುಂಟು ಮಾಡುತ್ತಿದ್ದವು. ಉದಾ: ರಷ್ಯಾದ ಬೆಂಬಲಿಗನೆಂಬ ಕಾರಣಕ್ಕೆ ಕೆಂಪು ರಾಷ್ಟ್ರ ಚೀನಾಕ್ಕೆ ಭದ್ರತಾ ಮಂಡಳಿಯ ಸದಸ್ಯತ್ವ ನೀಡುವ ನಿಲುವಿಗೆ ಅಮೇರಿಕಾ ಅಡ್ಡಿಯಾದದ್ದು ಮತ್ತು ಅಮೇರಿಕಾ ಬೆಂಬಲಿತ ನಿರ್ಧಾರಗಳ ವಿರುದ್ಧ ರಷ್ಯಾ ವಿಟೊ ಅಧಿಕಾರವನ್ನು ನಿರಂತರವಾಗಿ ಬಳಸಿದ್ದುದು. ಹೀಗೆ ವಿಶ್ವ ಸಂಸ್ಥೆಯು ಸಾರ್ವತ್ರಿಕ ಸ್ವರೂಪವನ್ನು ಮೈಗೂಡಿಸಿಕೊಂಡು ಜಾಗತಿಕ ಶಾಂತಿಯನ್ನು ಪರಿಪೂರ್ಣವಾಗಿ ಸಾಧಿಸದಿರಲು ಶೀತಲ ಸಮರದ ಪ್ರಭಾವ ಕಂಡು ಬರುತ್ತದೆ.

5. **ಶಸ್ತ್ರ ನಿಯಂತ್ರಣ ಹಾಗೂ ನಿಶ್ಯಸ್ತ್ರೀಕರಣದ ವೈಫಲ್ಯ:** ಶೀತಲ ಸಮರದ ಪರಿಣಾಮ ವಿಶ್ವದ ಎರಡು ಶಕ್ತಿ ಬಣಗಳ ನಡುವೆ ಪರಸ್ಪರ ಅಭದ್ರತೆ ಮತ್ತು ಸಂಶಯ ಬೇರೂರಿದ್ದವು. ಫಲವಾಗಿ ಉಭಯ ಬಣಗಳು ಪರಸ್ಪರರ ಶಕ್ತಿ ಸಮತೋಲನಕ್ಕಾಗಿ ಸುಧಾರಿತ ಶಸ್ತ್ರಾಸ್ತ್ರಗಳ ಉತ್ಪಾದನೆಗೆ ಮುಂದಾದವು. ಅಣು ಬಾಂಬ್‌ಗಳ ತಯಾರಿಕೆ, ಖಂಡಾಂತರ ಕ್ಷಿಪಣಿಗಳ ಉತ್ಪಾದನೆ, ಜೈವಿಕ ಶಸ್ತ್ರಗಳ ಸಂಶೋಧನೆ ಪರಸ್ಪರ ಬಣಗಳಲ್ಲಿ ಅಧಿಕಗೊಂಡಿತು. ಹೀಗಾಗಿ ಮನುಕುಲಕ್ಕೆ ಮಾರಕವಾದ ಹಾಗೂ ಮೂರನೇ ವಿಶ್ವ ಯುದ್ಧಕ್ಕೆ ಕಾರಣವಾಗುವ ಶಸ್ತ್ರ ನಿಯಂತ್ರಣ ಅಥವಾ ನಿಶ್ಯಸ್ತ್ರೀಕರಣದ ಕೂಗಿಗೆ ಶಕ್ತಿ ಬಣಗಳು



ಕಿವಿಗೊಡದಾದವು. ಇದರಿಂದ ಸೈನಿಕ ವೆಚ್ಚ ಅಧಿಕಗೊಂಡು ಅಭಿವೃದ್ಧಿ ಮಾಯವಾಗಿ ಜನರ ಜೀವನ ಮಟ್ಟ ಸುಧಾರಣೆಗೊಳ್ಳದಾಯಿತು. ಅಂತೆಯೇ ನಿಶಸ್ತ್ರೀಕರಣದ ಕನಸು ನನಸಾಗದೇ ಕನಸಾಗಿಯೇ ಉಳಿಯುವಂತಾಯಿತು.

6. ರಾಷ್ಟ್ರಗಳ ವಿದೇಶಾಂಗ ನೀತಿಯಲ್ಲಿ ಆರ್ಥಿಕ ಅಂಶಗಳಿಗೆ ಅಂದರೆ ವಿದೇಶಿ ಸಾಲ, ಆರ್ಥಿಕ ಅನುದಾನ, ವ್ಯಾಪಾರ ವಿನಾಯಿತಿಯಂತಹ ಅಂಶಗಳು ಶೀತಲ ಸಮರದ ಪರಿಣಾಮ ಮಹತ್ವ ಪಡೆದುಕೊಂಡವು.

7. ವಿಶ್ವ ಸಂಸ್ಥೆಯ ಆಶಯದಂತೆ ಸಾಮೂಹಿಕ ಭದ್ರತೆಯು ಶೀತಲ ಸಮರದ ಪರಿಣಾಮ ಪರಿಪೂರ್ಣ ಯಶಸ್ಸು ಗಳಿಸಲಾಗಲಿಲ್ಲ.

8. ಶೀತಲ ಸಮರದ ಪರಿಣಾಮ ರಾಷ್ಟ್ರಗಳ ವಿದೇಶಾಂಗ ನೀತಿಯಲ್ಲಿ ಪ್ರಚಾರ, ಮಾನಸಿಕ ಅಂಶಗಳು ಮತ್ತು ರಾಜಕೀಯ ಹೋರಾಟಗಳು ಸಾಧನವಾಗಿ ಗುರುತಿಸಿಕೊಂಡವು.

ಈ ಮೇಲೆ ಪ್ರಸ್ತಾಪಿಸಲಾಗಿರುವ ಶೀತಲ ಸಮರದ ಪರಿಣಾಮಗಳಿಂದ ಅಂತರ್ ರಾಷ್ಟ್ರೀಯ ಸಂಬಂಧಗಳಲ್ಲಿ ವ್ಯಾಪಕ ಬದಲಾವಣೆ ಮೂಡಿತು. ಸೋವಿಯತ್ ರಷ್ಯಾ ಮತ್ತು ಅಮೇರಿಕಾದ ನಾಯಕರು ತಮ್ಮ ನಡುವಿನ ಸಂಬಂಧಗಳ ಸುಧಾರಣೆಯ ಅಗತ್ಯವನ್ನು ಕ್ರಮೇಣ ಮನಗಂಡರು. ಜಾಗತಿಕ ಉದ್ವಿಗ್ನತೆಯನ್ನು ಸೃಷ್ಟಿಸಿರುವ ಶೀತಲ ಸಮರದ ನಿವಾರಣೆಗೆ ರಷ್ಯಾ ಮತ್ತು ಅಮೇರಿಕಾಗಳ ನಾಯಕರು ಅಗತ್ಯ ಕ್ರಮಗಳ ಅನಿವಾರ್ಯತೆಯನ್ನು ಚರ್ಚಿತ ಪರಿಣಾಮಗಳಿಂದ ಕಂಡುಕೊಂಡರು.

## E. ಶೀತಲ ಸಮರದ ಅಂತ್ಯ [The End of Cold War]:

ಎರಡನೇ ವಿಶ್ವ ಯುದ್ಧದ ನಂತರ ಪ್ರಪಂಚವನ್ನು ಸುಮಾರು ನಾಲ್ಕು ದಶಕಗಳವರೆಗೆ ಪ್ರಭಾವಿಸಿದ್ದ ಶೀತಲ ಸಮರವು 1990 ರಲ್ಲಿ ಅಂತ್ಯಗೊಂಡಿತು. 1950 ರ ಕೋರಿಯಾ ಬಿಕ್ಕಟ್ಟು, 1956 ರ ಹಂಗೇರಿ ಬಿಕ್ಕಟ್ಟು, 1956 ರ ಸುಯೇಜ್ ಕಾಲುವೆಯ ಬಿಕ್ಕಟ್ಟು, 1961 ರ ಬರ್ಲಿನ್ ಗೋಡೆಯ ಬಿಕ್ಕಟ್ಟು, 1962 ರ ಕ್ಯೂಬಾದ ಬಿಕ್ಕಟ್ಟುಗಳಿಗೆ ಕಾರಣವಾಗಿದ್ದ ಶೀತಲ ಸಮರದ ಅವನತಿಯು 1970 ರಿಂದಲೇ ಶಕ್ತಿ ಬಣಗಳು ಅನುಸರಿಸಿದ ಡೆಟಾಂಟ್ ನೀತಿಯ ಮೂಲಕವೇ ಚಾಲನೆ ಪಡೆದುಕೊಂಡಿತ್ತು. ಗಮನಾರ್ಹ ಅಂಶವೇನೆಂದರೆ, ಸೋವಿಯತ್ ರಷ್ಯಾ ಮತ್ತು ಅಮೇರಿಕಾವೆಂಬ ಶಕ್ತಿ ಬಣಗಳು ತಮ್ಮ ನಡುವಿನ ಸಂಬಂಧಗಳಲ್ಲಿ ಸಂಘರ್ಷದ ಬದಲು ಸ್ನೇಹಯುತ ಸಹಕಾರವನ್ನು ಮೈಗೂಡಿಸಿಕೊಳ್ಳಲು ಅನುಸರಿಸಿದ ನೀತಿಯೇ ಡೆಟಾಂಟ್. 1970 ರಿಂದ ಉಭಯ ಶಕ್ತಿ ಬಣಗಳ ನಡುವೆ ಡೆಟಾಂಟ್ ನೀತಿಯಡಿ ಹಲವು ಒಪ್ಪಂದಗಳಾಗಿ ಅವುಗಳ ಮಧ್ಯದ ಉದ್ವಿಗ್ನತೆ ಕಡಿಮೆಗೊಳ್ಳತೊಡಗಿತ್ತು. ಈ ನಿಟ್ಟಿನಲ್ಲಿ 1970 ರ ಮಾಸ್ಕೊ – ಬಾನ್ ಒಪ್ಪಂದ,

1971 ರ ಬರ್ಲಿನ್ ಒಪ್ಪಂದ, 1972 ರ ಕೋರಿಯಾ ಒಪ್ಪಂದ, 1975 ರ ಹೆಲ್ಸಿಂಕಿ ಒಪ್ಪಂದ, 1979 ರ ಕ್ಯಾಂಪ್ ಡೆವಿಡ್ ಒಪ್ಪಂದಗಳು ಉಭಯ ಶಕ್ತಿ ಬಣಗಳ ನಡುವೆ ಜರುಗಿದವು. ಜೊತೆಗೆ ರಷ್ಯಾ ಮತ್ತು ಅಮೇರಿಕಾದ ನಾಯಕರು ಪರಸ್ಪರ ದೇಶಗಳಿಗೆ ಭೇಟಿ ನೀಡಿದರಲ್ಲದೇ ಚೀನಾ ಮತ್ತು ಅಮೇರಿಕಾದ ನಡುವೆ ರಾಯಭಾರಿ ಸಂಬಂಧ ಏರ್ಪಟ್ಟಿತು. ಆದರೆ, 1979 ರಲ್ಲಿ ಅಪಘಾನಿಸ್ತಾನ ಕುರಿತಂತೆ ಶಕ್ತಿ ಬಣಗಳ ನಡುವೆ ಅಸಮಾಧಾನ ಉಂಟಾಗಿ 1980 ರಿಂದ ಮರಳಿ ಪೈಪೋಟಿ ಪ್ರಾರಂಭವಾಯಿತು. 1970 ರಿಂದ 1979 ರ ನಡುವಿನ ಡೆಟಾಂಟ್ ನೀತಿಯ ನಡುವೆ ಶಕ್ತಿ ಬಣಗಳ ಮಧ್ಯೆ ಮರಳಿ ಆರಂಭವಾದ ಶೀತಲ ಸಮರವನ್ನು ನೂತನ ಶೀತಲ ಸಮರವೆನ್ನಲಾಗುತ್ತದೆ.

ನೂತನ ಶೀತಲ ಸಮರವು ಕೇವಲ ಐದೇ ವರ್ಷಗಳಲ್ಲಿ ತನ್ನ ತೀವ್ರತೆಯನ್ನು ಕಳೆದುಕೊಳ್ಳತೊಡಗಿತು. 1985 ರಿಂದ ಪ್ರಾರಂಭವಾದ ಎರಡನೇ ಹಂತದ ಡೆಟಾಂಟ್ ನೀತಿಯ ಕಾಲಾವಧಿಯಲ್ಲಿ ಔಪಚಾರಿಕವಾಗಿ ಶೀತಲ ಸಮರದ ಅಂತ್ಯವು ಆರಂಭಗೊಂಡಿತು. ಈ ವೇಳೆಯಲ್ಲಿ ಅಧ್ಯಕ್ಷನಾಗಿದ್ದ ಮಿಕಾಯ್ಲ್ ಎಸ್. ಗೋರ್ಭಚೇವ್ ಸೋವಿಯತ್ ರಷ್ಯಾದಲ್ಲಿ ಪೆರಿಸ್ಟ್ರೊಯ್ಕಾ [Perestroika] ಮತ್ತು ಗ್ಲಾಸ್ನಾಸ್ಟ್ [Glasnost] ನೀತಿಯಡಿ ಹಲವು ಸುಧಾರಣಾ ಕ್ರಮಗಳನ್ನು ಕೈಗೊಂಡನು. ಜೊತೆಗೆ 1987 ರಲ್ಲಿ ರಷ್ಯಾ ಮತ್ತು ಅಮೇರಿಕಾಗಳ ನಡುವೆ ಐತಿಹಾಸಿಕ ಐ. ಎನ್. ಎಫ್. ಒಪ್ಪಂದವಾಗಿ ಯುರೋಪಿನಲ್ಲಿ ಮಧ್ಯಮ ಗಾತ್ರದ ಕ್ಷಿಪಣಿಗಳನ್ನು ನಾಶಗೊಳಿಸಲು ಉಭಯ ಶಕ್ತಿ ಬಣಗಳು ಸಮ್ಮತಿಸಿದವು. ಮುಂದೆ ರಷ್ಯಾದ ಗೋರ್ಭಚೇವ್ ಮತ್ತು ಅಮೇರಿಕಾದ ಅಧ್ಯಕ್ಷ ಬುಷ್ ನಡುವೆ ಡಿಸೆಂಬರ್ 2, 1989 ರಂದು ಮಾಲ್ಟಾ ಮತ್ತು 1991 ರಲ್ಲಿ ವಾಷಿಂಗ್ಟನ್ ಒಪ್ಪಂದಗಳಾದವು. ಶಕ್ತಿ ಬಣಗಳ ನಡುವಿನ ಈ ಬೆಳವಣಿಗೆಯಿಂದ ಪ್ರಪಂಚದ ಅಂತರ್ ರಾಷ್ಟ್ರೀಯ ಸಂಬಂಧಗಳಲ್ಲಿ ಹಲವು ಸಕಾರಾತ್ಮಕ ಬೆಳವಣಿಗೆಗಳು ಘಟಿಸಿದವು. ಆ ಪೈಕಿ ಇರಾನ್ ಇರಾಕ್ ಯುದ್ಧದ ನಂತರ ಅಪಘಾನಿಸ್ತಾನದಿಂದ ಸೋವಿಯತ್ ರಷ್ಯಾದ ಸೈನ್ಯದ ಹಿಂತೆಗೆತ, ಸೈನಿಕ ಕಡಿತಕ್ಕೆ ಅಮೇರಿಕಾದ ಅಂಗೀಕಾರ, ಕಾಂಬೋಡಿಯಾದಿಂದ ವಿಯಟ್ನಾಂ ಸೈನ್ಯದ ಹಿಂತೆಗೆತ, ನಮಿಬಿಯಾದ ಸ್ವಾತಂತ್ರ್ಯಕ್ಕಾಗಿ ನಾಲ್ಕು ಪಕ್ಷಗಳ ನಡುವೆ ಒಪ್ಪಂದ, ಹೊಸ ದೆಹಲಿ ಘೋಷಣೆಗಳು ಪ್ರಮುಖವಾಗಿದ್ದು ಅಂತರ್ ರಾಷ್ಟ್ರೀಯ ಉದ್ವಿಗ್ನತೆಯನ್ನು ಶಮನಗೊಳಿಸಿ ಶೀತಲ ಸಮರದ ಕ್ಷೀಣತೆಗೆ ಕಾರಣವಾದವು.

ಈ ಮಧ್ಯೆ ಗೋರ್ಭಚೇವ್ ನೀತಿಯಿಂದ ಅಸಮಧಾನಗೊಂಡ ಸೋವಿಯತ್ ರಷ್ಯಾವು 1988 ರಿಂದಲೇ ವಿಕಟನೆಗೊಳ್ಳತೊಡಗಿತು. 1991 ರ ಹೊತ್ತಿಗೆ ಸೋವಿಯತ್ ರಷ್ಯಾದ ಹಲವು ಗಣರಾಜ್ಯಗಳು ಸ್ವತಂತ್ರಗೊಂಡು ಸಿ. ಐ. ಎಸ್ ರಷ್ಯಾವನ್ನು ರಚಿಸಿಕೊಂಡವು. ಅಂತಿಮವಾಗಿ ಡಿಸೆಂಬರ್ 31, 1991 ರಿಂದ ಶೀತಲ ಸಮರಕ್ಕೆ ಕಾರಣವಾಗಿದ್ದ ಯೂನಿಯನ್ ಆಫ್ ಸೋಶಿಯಲಿಸ್ಟ್ ಸೋವಿಯತ್ ರಿಪಬ್ಲಿಕ್ಸ್ ರಷ್ಯಾವು



ವಿಕಟನೆಗೊಂಡು ಇತಿಹಾಸದ ಪುಟ ಸೇರಿತು. ಈ ಮೂಲಕ ನೂತನ ಶೀತಲ ಸಮರವು ಅಂತ್ಯಗೊಳ್ಳುವುದರೊಡನೆ ಯು. ಎಸ್. ಎಸ್. ಆರ್ ಮತ್ತು ಯು. ಎಸ್. ಎ. ಗಳ ನಡುವಿನ ನಾಲ್ಕು ದಶಕಗಳ ಶೀತಲ ಸಮರವು ಅಧಿಕೃತವಾಗಿ ಅಂತ್ಯಗೊಂಡಿತು.

## F.] ಸೋವಿಯತ್ ಒಕ್ಕೂಟದ ವಿಕಟನೆ [Collapse of Soviet Union]:

1917 ರಲ್ಲಿ ಜರುಗಿದ ಕ್ರಾಂತಿಯ ಬಳಿಕ ರಷ್ಯಾವು ಜಗತ್ತಿನ ಮೊದಲ ಸಮಾಜವಾದಿ ರಾಷ್ಟ್ರವೆನಿಸಿಕೊಂಡಿತು. ಕೆಲವೇ ದಿನಗಳಲ್ಲಿ ರಷ್ಯಾವು ಯೂನಿಯನ್ ಆಫ್ ಸೋಶಿಯಲಿಸ್ಟ್ ಸೋವಿಯತ್ ರಿಪಬ್ಲಿಕ್ಸ್ ಎಂಬುದಾಗಿ ಪುನರ್‌ರಚನೆಗೊಂಡಿತು. ಆರಂಭದಲ್ಲಿ ತನ್ನ ಆಂತರಿಕ ಸವಾಲುಗಳನ್ನು ಪರಿಹರಿಸಿಕೊಂಡು ಸಮಾಜವಾದಿ ರಾಷ್ಟ್ರ ನಿರ್ಮಾಣಕ್ಕೆ ಸೋವಿಯತ್ ರಷ್ಯಾವು ಆದ್ಯತೆ ನೀಡಿತ್ತು. ಫಲವಾಗಿ ಸೋವಿಯತ್ ರಷ್ಯಾದ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಸೈನಿಕ ಒಳಾಡಳಿತವು ಕ್ರಾಂತಿಕಾರಕ ಪ್ರಗತಿಯನ್ನು ಕಂಡಿತು. ಯುರೋಪಿನ ರೋಗಗ್ರಸ್ಥ ದೇಶವೆಂಬ ಹಣೆಪಟ್ಟಿಯನ್ನು ಕಳಚಿದ ಸೋವಿಯತ್ ರಷ್ಯಾವು ಎರಡೇ ದಶಕಗಳಲ್ಲಿ ಜಗತ್ತಿನ ಶಕ್ತಿಶಾಲಿ ರಾಷ್ಟ್ರವಾಗಿ ಪರಿವರ್ತನೆಗೊಂಡಿತು.

ಎರಡನೇ ವಿಶ್ವ ಯುದ್ಧದಲ್ಲಿ ಮಿತ್ರ ರಾಷ್ಟ್ರಗಳ ಕೂಟವನ್ನು ಸೇರಿದ ರಷ್ಯಾವು 1942 ರಲ್ಲಿ ತನ್ನ ಮೇಲೆ ಯುದ್ಧಕ್ಕೆ ಬಂದ ಜರ್ಮನಿಯನ್ನು ಸೋಲಿಸುವ ಮೂಲಕ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ತನ್ನ ಪ್ರಭಾವ ಹೆಚ್ಚಿಸಿಕೊಂಡಿತು. ಯುದ್ಧದ ಬಳಿಕ ಜರ್ಮನಿಯಿಂದ ತೆರವಾದ ಸ್ಥಾನವನ್ನು ತುಂಬಲು ಅಂದರೆ ಜರ್ಮನಿಯ ಸೋಲಿನಿಂದ ಉಂಟಾದ ಶಕ್ತಿ ಶೂನ್ಯವನ್ನು ತುಂಬಲು ಸೋವಿಯತ್ ರಷ್ಯಾ ಮುಂದಾಯಿತು. ಜೊತೆಗೆ ಯುರೋಪಿನ ಪೋಲೆಂಡ್, ಹಂಗೇರಿ, ಜಕೊಸ್ಲೊವಾಕಿಯಾ, ಅಲ್ಬೇನಿಯಾ, ಪೂರ್ವ ಜರ್ಮನಿಗಳಲ್ಲಿ ತನ್ನ ಸಮಾಜವಾದಿ ಸಿದ್ಧಾಂತವನ್ನು ವಿಸ್ತರಿಸಲು ಪ್ರಯತ್ನಿಸಿ ಯಶಸ್ವಿಯಾಯಿತು. ಈ ನಡುವೆ 1949 ರಲ್ಲಿ ಚೀನಾವು ಸಮತಾವಾದಿ ರಾಷ್ಟ್ರವಾಗಿ ಉದಯಗೊಂಡಿದುದು ಸೋವಿಯತ್ ರಷ್ಯಾದ ಸಮಾಜವಾದಿ ಬಣಕ್ಕೆ ಪುಷ್ಟಿ ನೀಡಿತು. ಯುರೋಪ್ ಮತ್ತು ವಿಶ್ವದ ಇತರ ಭಾಗಗಳಲ್ಲಿ ಸೋವಿಯತ್ ರಷ್ಯಾದ ಪ್ರಭಾವವನ್ನು ತಡೆಯಲು ಪಾಶ್ಚಿಮಾತ್ಯ ಪ್ರಜಾಸತ್ತಾತ್ಮಕ ರಾಷ್ಟ್ರಗಳು ಅಮೇರಿಕಾದ ನೇತೃತ್ವದಲ್ಲಿ ಪ್ರಯತ್ನಿಸತೊಡಗಿದವು. ಆಗ ಅಮೇರಿಕಾದೊಡನೆ ಸೋವಿಯತ್ ರಷ್ಯಾವು ಶೀತಲ ಸಮರದಲ್ಲಿ ತೊಡಗಬೇಕಾಯಿತು. 1970 ರ ವೇಳೆಗೆ ಸೋವಿಯತ್ ರಷ್ಯಾ ಮತ್ತು ಅಮೇರಿಕಾಗಳ ನಡುವೆ ಡೆಟಾಂಟ್ ನೀತಿ ಪಾಲಿಸಲ್ಪಟ್ಟರೂ 1980 ರಲ್ಲಿ ನೂತನ ಶೀತಲ ಸಮರ ಪ್ರಾರಂಭವಾಯಿತು. ಅದೃಷ್ಟವಶಾತ್ 1985 ರ ಹೊತ್ತಿಗೆ ಅಂದರೆ ನೂತನ ಶೀತಲ ಸಮರವು ಆರಂಭಗೊಂಡ ಐದೇ ವರ್ಷಗಳಲ್ಲಿ ಎರಡನೇ ಹಂತದ ಡೆಟಾಂಟ್ ನೀತಿಯ ಅನುಸರಣೆಯು ಸೋವಿಯತ್ ರಷ್ಯಾ ಮತ್ತು ಅಮೇರಿಕಾಗಳ ನಡುವೆ ಪ್ರಾರಂಭಗೊಂಡಿತು. ಈ ಅವಧಿಯಲ್ಲಿಯೇ ಸೋವಿಯತ್

ರಷ್ಯಾದ ವಿಕಟನೆಯು ಚಾಲನೆ ಪಡೆದುಕೊಂಡಿತು. ಸೋವಿಯತ್ ರಷ್ಯಾದ ವಿಕಟನೆಗೆ ಪ್ರಧಾನ ಕಾರಣಗಳು ಈ ಕೆಳಗಿನಂತಿವೆ.

1. ಸೋವಿಯತ್ ರಷ್ಯಾದ ಅಧ್ಯಕ್ಷ ಮಿಕಾಯ್ಲ್ ಗೋರ್ಭಚೇವ್ ಪುನರ್‌ರಚನೆ [ಪೆರಿಸ್ಟ್ರೋಯ್ಕಾ] ಮತ್ತು ಮುಕ್ತತೆ [ಗ್ಲಾಸ್ನಾಸ್ಟ್] ನೀತಿಗಳ ಮೂಲಕ ಉದಾರವಾದಿ ಪ್ರಜಾಸತ್ತಾತ್ಮಕ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ಒದಗಿಸಲು ಮುಂದಾದುದು.
2. ಐ. ಎನ್. ಎಫ್. ಒಪ್ಪಂದದ ಮೂಲಕ ಪಾಶ್ಚಿಮಾತ್ಯ ಪ್ರಜಾಪ್ರಭುತ್ವಗಳೊಡನೆ ಅಂದರೆ ಅಮೇರಿಕಾದೊಡನೆ ಶಾಂತಿಯುತ ಸಹಜೀವನ ಮತ್ತು ಸಹಕಾರಕ್ಕೆ ಸೋವಿಯತ್ ರಷ್ಯಾ ನಿರ್ಧರಿಸಿ ಶಸ್ತ್ರ ನಿಯಂತ್ರಣ ಮತ್ತು ನಿಶ್ಯಸ್ತ್ರೀಕರಣಕ್ಕೆ ಮುಂದಾದುದು.
3. ಸೋವಿಯತ್ ರಷ್ಯಾದ ಅಧ್ಯಕ್ಷ ಗೋರ್ಭಚೇವ್ ಅಮೇರಿಕಾದ ಅಧ್ಯಕ್ಷರಾದ ರೇಗನ್ ಮತ್ತು ಆತನ ಉತ್ತರಾಧಿಕಾರಿ ಜಾರ್ಜ್ ಬುಶ್ ಜೊತೆಗೆ ಉನ್ನತ ಹಂತದ ಸಂಬಂಧ ಮುಂದುವರೆಸಿದುದು.
4. ಸೋವಿಯತ್ ರಷ್ಯಾದ ಉದಾರೀಕರಣ ನೀತಿಯಿಂದ ಯುರೋಪಿನ ಸಮಾಜವಾದಿ ರಾಷ್ಟ್ರಗಳು ಪ್ರಜಾಪ್ರಭುತ್ವ ದೇಶಗಳಾಗಿ ಪರಿವರ್ತನೆಗೊಂಡಿದುದು.
5. ಸೋವಿಯತ್ ರಷ್ಯಾದಲ್ಲಿ ಪ್ರಜಾಸತ್ತಾತ್ಮಕ ಹಕ್ಕು ಮತ್ತು ಸ್ವಾತಂತ್ರ್ಯದ ಚಳುವಳಿ ಬಲಗೊಂಡಿದುದು.
6. ಗೋರ್ಭಚೇವ್ ನೀತಿಯಿಂದ ಸೋವಿಯತ್ ರಷ್ಯಾವು ನಾಗರಿಕರಿಗೆ ಅಗತ್ಯ ವಸ್ತು ಮತ್ತು ಆಹಾರ ಒದಗಿಸಲಾಗದ ಆರ್ಥಿಕ ದುರ್ಬಲತೆ ತಲುಪಿದುದು.

ಈ ಮೇಲಿನ ಕಾರಣಗಳಿಂದ ಯೂನಿಯನ್ ಆಫ್ ಸೋಶಿಯಲಿಸ್ಟ್ ಸೋವಿಯತ್ ರಿಪಬ್ಲಿಕ್ಸ್‌ನಲ್ಲಿ ಅಂದರೆ ಸೋವಿಯತ್ ಒಕ್ಕೂಟದಲ್ಲಿ ಅಸಮಧಾನ ಬುಗಿಲೆದ್ದು ಒಡಕು ಮೂಡಿತು. ಫಲವಾಗಿ ಬಾಲ್ಟಿಕ್ ಪ್ರದೇಶದ ಎಸ್ಟೋನಿಯಾ, ಲಿತುವೇನಿಯಾ, ಲಾಟ್ವಿಯಾಗಳು ಸೋವಿಯತ್ ಒಕ್ಕೂಟದಿಂದ ಹೊರಬಂದು ಸ್ವತಂತ್ರಗೊಂಡವು. ಮುಂದೆ ಒಂದಾದ ನಂತರ ಒಂದು ಸೋವಿಯತ್ ಒಕ್ಕೂಟದ ರಾಜ್ಯಗಳು ಸ್ವತಂತ್ರ ಘೋಷಿಸಿಕೊಳ್ಳತೊಡಗಿದವು. ಸೋವಿಯತ್ ಒಕ್ಕೂಟದಲ್ಲಿನ ರಷ್ಯಾದ ಮುಖ್ಯಸ್ಥ ಬೋರಿಸ್ ಎಲ್ಸಿನ್ ಮತ್ತು ಸೋವಿಯತ್ ಒಕ್ಕೂಟದ ಅಧ್ಯಕ್ಷ ಮಿಕಾಯ್ಲ್ ಗೋರ್ಭಚೇವ್ ನಡುವೆ ಅಧಿಕಾರಕ್ಕಾಗಿ ಸಂಘರ್ಷ ಏರ್ಪಟ್ಟಿತು. ಅಂತಿಮವಾಗಿ ನವೆಂಬರ್ 1991 ರಲ್ಲಿ ಸೋವಿಯತ್ ಒಕ್ಕೂಟದ ಎಲ್ಲ ರಾಜ್ಯಗಳು ಸ್ವತಂತ್ರ ಘೋಷಿಸಿಕೊಂಡಾಗ ಸೋವಿಯತ್ ಒಕ್ಕೂಟದ ಅಧ್ಯಕ್ಷ ಗೋರ್ಭಚೇವ್ ಅಸಹಾಯಕರಾದರು. ಸೋವಿಯತ್ ಒಕ್ಕೂಟದಿಂದ ಹೊರಬಂದ ಒಂಬತ್ತು ಗಣರಾಜ್ಯಗಳು ಕೂಡಲೇ ಕಾಮನ್ವೆಲ್ತ್ ಇಂಡಿಪೆಂಡೆಂಟ್ ಸ್ಟೇಟ್ಸ್ ಆಫ್ ರಷ್ಯಾವನ್ನು ಬೋರಿಸ್ ಎಲ್ಸಿನ್ ನೇತೃತ್ವದಲ್ಲಿ ರಚಿಸಿಕೊಂಡವು. ಜೊತೆಗೆ ಸೋವಿಯತ್ ಒಕ್ಕೂಟದ ಹಿಂದಿನ ಸ್ಥಾನಮಾನ ತನಗೆ ಸೇರಬೇಕೆಂದು ಸಿ. ಐ. ಎಸ್. ರಷ್ಯಾವು ಪ್ರತಿಪಾದಿಸಿ



ಅಮೇರಿಕಾ ಸೇರಿದಂತೆ ವಿಶ್ವದ ಉಳಿದೆಲ್ಲ ರಾಷ್ಟ್ರಗಳ ಮಾನ್ಯತೆ ಪಡೆದುಕೊಂಡಿತು. ಅಂತಿಮವಾಗಿ ಡಿಸೆಂಬರ್ 31, 1991 ರಂದು ಸೋವಿಯತ್ ರಷ್ಯಾದ ಧ್ವಜವು ಬದಲಾವಣೆಗೊಂಡು ಹಿಂದಿನ ಸೋವಿಯತ್ ಒಕ್ಕೂಟದ ಅಧ್ಯಕ್ಷ ಗೋರ್ಭಚೇವ್ ಸಿ. ಐ. ಎಸ್. ರಷ್ಯಾದ ಅಧ್ಯಕ್ಷ ಬೋರಿಸ್ ಎಲ್ಸಿನ್‌ಗೆ ಅಣು ಬಾಂಬಿನ ಬಟನ್ ವರ್ಗಾಯಿಸುವುದರೊಡನೆ ಯು. ಎಸ್. ಎಸ್. ಆರ್. ಅಂದರೆ ಸೋವಿಯತ್ ಒಕ್ಕೂಟದ ವಿಕಟನೆಯ ಪ್ರಕ್ರಿಯೆ ಪೂರ್ಣಗೊಂಡು ಅದು ಇತಿಹಾಸದ ಪುಟ ಸೇರಿತು. ಗಮನಿಸಬೇಕಾದ ಅಂಶವೇನೆಂದರೆ, ಸಿ. ಐ. ಎಸ್. ರಷ್ಯಾವು ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಸೋವಿಯತ್ ರಷ್ಯಾದ ಸ್ಥಾನಮಾನ ಗಳಿಸಿಕೊಂಡಿತು.

## ಮಾದರಿ ಪ್ರಶ್ನೆಗಳು [Model Questions]:

[A.] ಎರಡು ಅಂಕದ ಪ್ರಶ್ನೆಗಳು:

1. ಶೀತಲ ಸಮರದ ಅರ್ಥವನ್ನು ಬರೆಯಿರಿ.
2. ಶೀತಲ ಸಮರದ ಉಗಮದ ಕಾಲಾವಧಿಯನ್ನು ತಿಳಿಸಿರಿ.
3. ಶೀತಲ ಸಮರದ ಉಗಮವನ್ನು ಕುರಿತಾದ ಚಿಂತಕರ ಮೂರು ಗುಂಪುಗಳನ್ನು ಹೆಸರಿಸಿರಿ.
4. ಶೀತಲ ಸಮರದ ಮೂರು ಕಾರಣಗಳನ್ನು ತಿಳಿಸಿರಿ.
5. ಸೋವಿಯತ್ ಒಕ್ಕೂಟವು ಯಾಲ್ಟಾ ಸಮ್ಮೇಳನದ ತತ್ವಗಳನ್ನು ಉಲ್ಲಂಘಿಸಿತು. ಹೇಗೆ?
6. ಶೀತಲ ಸಮರದ ಕಾಲದಲ್ಲಿ ರಚನೆಗೊಂಡ ಮೂರು ಮೈತ್ರಿಕೂಟಗಳನ್ನು ಹೆಸರಿಸಿರಿ.
7. ಅಲಿಪ್ತ ಚಳುವಳಿ ಎಂದರೇನು?
8. ಶೀತಲ ಸಮರದ ಮೂರು ಪರಿಣಾಮಗಳನ್ನು ಬರೆಯಿರಿ.
9. ಶೀತಲ ಸಮರದ ವೇಳೆಯಲ್ಲಿ ಉಂಟಾದ ಯಾವುದಾದರೂ ನಾಲ್ಕು ಬಿಕ್ಕಟ್ಟುಗಳನ್ನು ಹೆಸರಿಸಿರಿ.
10. ಡೆಟಾಂಟ್ ಎಂದರೇನು?
11. ನೂತನ ಶೀತಲ ಸಮರವು ಏಕೆ ಮತ್ತು ಯಾವಾಗ ಪ್ರಾರಂಭವಾಯಿತು?
12. ಮೊದಲ ಹಂತದ ಡೆಟಾಂಟ್ ಕಾಲಾವಧಿಯಲ್ಲಿ ಶಕ್ತಿ ಬಣಗಳ ನಡುವೆ ಏರ್ಪಟ್ಟ ನಾಲ್ಕು ಒಪ್ಪಂದಗಳನ್ನು ತಿಳಿಸಿರಿ.
13. ಎರಡನೇ ಹಂತದ ಡೆಟಾಂಟ್ ಕಾಲಾವಧಿಯಲ್ಲಿ ಘಟಿಸಿದ ಮೂರು ಬೆಳವಣಿಗೆಗಳನ್ನು ಬರೆಯಿರಿ.
14. ಗೋರ್ಭಚೇವ್ ಅನುಸರಿಸಿದ ಎರಡು ನೀತಿಗಳನ್ನು ಹೆಸರಿಸಿರಿ.

15. ಸೋವಿಯತ್ ಒಕ್ಕೂಟದಿಂದ ಸ್ವತಂತ್ರ ಘೋಷಿಸಿಕೊಂಡ ಮೊದಲ ರಾಜ್ಯಗಳನ್ನು ತಿಳಿಸಿರಿ.
16. ಸೋವಿಯತ್ ಒಕ್ಕೂಟ ಎಂದು ವಿಕಟನೆಗೊಂಡಿತು?

[B.] ಐದು ಅಂಕದ ಪ್ರಶ್ನೆಗಳು:

1. ಶೀತಲ ಸಮರ ಎಂದರೇನು? ಅದರ ಉಗಮವನ್ನು ವಿವರಿಸಿರಿ.
2. ಶೀತಲ ಸಮರದ ಕಾರಣಗಳನ್ನು ಪರಿಶೀಲಿಸಿರಿ.
3. ಶೀತಲ ಸಮರದ ಪರಿಣಾಮಗಳನ್ನು ಚರ್ಚಿಸಿರಿ.
4. ಶೀತಲ ಸಮರದ ಅಂತ್ಯವನ್ನು ಕುರಿತು ಟಿಪ್ಪಣಿ ಬರೆಯಿರಿ.
5. ಸೋವಿಯತ್ ಒಕ್ಕೂಟದ ವಿಕಟನೆಯನ್ನು ವಿವರಿಸಿರಿ.

[C.] ಹತ್ತು ಅಂಕದ ಪ್ರಶ್ನೆಗಳು:

1. ಶೀತಲ ಸಮರದ ಕಾರಣ ಮತ್ತು ಪರಿಣಾಮಗಳನ್ನು ಚರ್ಚಿಸಿರಿ.
2. ಶೀತಲ ಸಮರದ ಉಗಮ ಮತ್ತು ಅಂತ್ಯವನ್ನು ಚರ್ಚಿಸಿರಿ.
3. ಸೋವಿಯತ್ ಒಕ್ಕೂಟದ ವಿಕಟನೆಯನ್ನು ಪರಿಶೀಲಿಸಿರಿ.



ಅಧ್ಯಾಯ 6:

# ರಾಷ್ಟ್ರೀಯ ಹಿತಾಸಕ್ತಿ

## [NATIONAL INTEREST]

### ಪ್ರಸ್ತಾವನೆ [Introduction]:

ನಿತ್ಯ ಜೀವನದಲ್ಲಿ ನಾವು ಹಲವು ಚಟುವಟಿಕೆಗಳಲ್ಲಿ ತೊಡಗಿರುತ್ತೇವೆ. ನಮ್ಮ ಪ್ರತಿ ಕಾರ್ಯವು ನಿರ್ದಿಷ್ಟ ಗುರಿ ಹೊಂದಿದ್ದು ಸಾಮಾನ್ಯವಾಗಿ ಆ ಗುರಿಯಲ್ಲಿ ನಮ್ಮ ಹಿತಾಸಕ್ತಿ ಅಡಗಿರುತ್ತದೆ. ಅಂತೆಯೇ ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿ ತೊಡಗಿರುವ ರಾಷ್ಟ್ರಗಳೂ ಸಹ ತಮ್ಮದೇಯಾದ ಗುರಿಗಳ ಸಾಧನೆಗೆ ಪ್ರಯತ್ನಿಸುತ್ತಿರುತ್ತವೆ. ನಮ್ಮಂತೆ ರಾಷ್ಟ್ರಗಳ ಗುರಿಯೂ ಸಹ ಅದರ ಹಿತಾಸಕ್ತಿಯನ್ನು ಆಧರಿಸಿರುತ್ತದೆ. ಜಗತ್ತಿನ ಎಲ್ಲ ರಾಷ್ಟ್ರಗಳು ಸದಾ ತಮ್ಮ ಹಿತಾಸಕ್ತಿ ಪೂರೈಸಬಲ್ಲ ಗುರಿಗಳನ್ನು ಈಡೇರಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿರುತ್ತವೆ. ಹೀಗಾಗಿ ಪ್ರತಿಯೊಂದು ರಾಷ್ಟ್ರದ ವಿದೇಶಾಂಗ ನೀತಿಯು ಆಯಾ ರಾಷ್ಟ್ರಗಳ ಹಿತಾಸಕ್ತಿಯನ್ನಾಧರಿಸಿ ರಚನೆಗೊಂಡು ಅವುಗಳ ಈಡೇರಿಕೆಗೆ ಪ್ರಯತ್ನಿಸುತ್ತದೆ. ತನ್ನ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ಹಕ್ಕು ಪ್ರತಿ ರಾಷ್ಟ್ರಗಳಿಗಿದ್ದು ಸಾರ್ವತ್ರಿಕ ಸ್ವರೂಪವುಳ್ಳ ಹಕ್ಕಾಗಿದೆ. ಸಾಮಾನ್ಯವಾಗಿ ರಾಷ್ಟ್ರಗಳು ಕೈಗೊಂಡ ನಿರ್ಧಾರಗಳನ್ನು ತಮ್ಮ ರಾಷ್ಟ್ರೀಯ ಹಿತಾಸಕ್ತಿಗಳ ಆಧಾರದಲ್ಲಿ ಸಮರ್ಥಿಸಿಕೊಳ್ಳುತ್ತವೆ. ಅಂತರ್‌ರಾಷ್ಟ್ರೀಯ ವ್ಯವಹಾರಗಳಲ್ಲಿ ರಾಷ್ಟ್ರಗಳ ವರ್ತನೆಗಳನ್ನು ನಿರ್ದೇಶಿಸುವ ಮತ್ತು ನಿಯಂತ್ರಿಸುವ ಸಾಮರ್ಥ್ಯ ರಾಷ್ಟ್ರೀಯ ಹಿತಾಸಕ್ತಿಗಳಿಗಿರುತ್ತದೆ. ಈ ಹಿನ್ನೆಲೆಯಲ್ಲಿ ಅಂತರ್‌ರಾಷ್ಟ್ರೀಯ ಸಂಬಂಧಗಳ ವಿಷಯದಲ್ಲಿ ಮಹತ್ವದ್ದಾದ ರಾಷ್ಟ್ರೀಯ ಹಿತಾಸಕ್ತಿಯ ಪರಿಪೂರ್ಣ ಮನವರಿಕೆಗೆ ಪ್ರಸಕ್ತ ಅಧ್ಯಾಯದಲ್ಲಿ ಬೆಳಕು ಚೆಲ್ಲಲಾಗಿದೆ.

### [A.] ರಾಷ್ಟ್ರೀಯ ಹಿತಾಸಕ್ತಿಯ ಅರ್ಥ [Meaning of National Interest]:

ವ್ಯಕ್ತಿಯೊಬ್ಬನ ಹಿತಾಸಕ್ತಿಯನ್ನು ಸ್ಪಷ್ಟವಾಗಿ ಗುರುತಿಸುವುದು ಅಸಾಧ್ಯ. ಇದಕ್ಕೆ ಆ ವ್ಯಕ್ತಿಯ ಸಮಯ, ಪರಿಸ್ಥಿತಿ, ಉದ್ದೇಶ, ಅಗತ್ಯಗಳಿಗೆ ಅನುಗುಣವಾಗಿ ಹಿತಾಸಕ್ತಿಯು ಬದಲಾಗುವುದೇ ಕಾರಣ. ಅಂತೆಯೇ ದೇಶಗಳ ರಾಷ್ಟ್ರೀಯ ಹಿತಾಸಕ್ತಿಯನ್ನು ಸ್ಪಷ್ಟವಾಗಿ

ವಿವರಿಸಲು ಚಿಂತಕರಿಗೂ ಸಾಧ್ಯವಾಗಿಲ್ಲ. ರಾಷ್ಟ್ರೀಯ ಹಿತಾಸಕ್ತಿ ಅಸ್ಪಷ್ಟ ಮತ್ತು ನಿಖರವಲ್ಲದ ಪರಿಕಲ್ಪನೆಯಾಗಿದ್ದು ಅದರ ಅರ್ಥವನ್ನು ಕುರಿತಂತೆ ಚಿಂತಕರಲ್ಲಿ ಏಕಾಭಿಪ್ರಾಯ ಮೂಡಿ ಬಂದಿಲ್ಲ. ರಾಷ್ಟ್ರವೊಂದರ ನಾಯಕರು ಅಥವಾ ನೀತಿ ನಿರೂಪಕರು ತಾವು ಕೈಗೊಂಡ ನಿರ್ಧಾರಗಳನ್ನು ಸಮರ್ಥಿಸಿಕೊಳ್ಳಲು ಸಮಯಾನುಸಾರ ವೈವಿಧ್ಯಮಯವಾಗಿ ರಾಷ್ಟ್ರೀಯ ಹಿತಾಸಕ್ತಿಯನ್ನು ವ್ಯಾಖ್ಯಾನಿಸಿದುದು ಇದಕ್ಕೆ ಪ್ರಧಾನ ಕಾರಣ. ಉದಾ: ಹಿಟ್ಲರ ಆಕ್ರಮಣಶೀಲತೆಯನ್ನು ಜರ್ಮನಿಯ ರಾಷ್ಟ್ರೀಯ ಹಿತಾಸಕ್ತಿಯಾಗಿ, ಭಾರತದ ಭೂ ಭಾಗದ ಕಬಳಿಕೆಯನ್ನು ಚೀನಾದ ರಾಷ್ಟ್ರೀಯ ಹಿತಾಸಕ್ತಿಯಾಗಿ, ಬಾಂಗ್ಲಾದ ಉದಯಕ್ಕೆ ನೀಡಿದ ಸಹಕಾರವನ್ನು ಭಾರತದ ರಾಷ್ಟ್ರೀಯ ಹಿತಾಸಕ್ತಿಯಾಗಿ, ಅಣ್ವಸ್ತ್ರ ಪರೀಕ್ಷೆಯನ್ನು ಸೋವಿಯತ ಒಕ್ಕೂಟದ ರಾಷ್ಟ್ರೀಯ ಹಿತಾಸಕ್ತಿಯಾಗಿ ಸಮರ್ಥಿಸಿದುದು. ಗಮನಾರ್ಹ ಅಂಶವೇನೆಂದರೆ, ರಾಷ್ಟ್ರವೊಂದರ ಹಿತಾಸಕ್ತಿ ಇತರ ರಾಷ್ಟ್ರ ಅಥವಾ ರಾಷ್ಟ್ರಗಳಿಗೆ ರಾಷ್ಟ್ರೀಯ ಹಿತಾಸಕ್ತಿಯಾಗಿರಲಾರದು. ಹೀಗಾಗಿ ರಾಷ್ಟ್ರೀಯ ಹಿತಾಸಕ್ತಿ ಕುರಿತಂತೆ ಸರ್ವ ಸಮ್ಮತ ಅರ್ಥವನ್ನು ನೀಡುವುದು ಕಷ್ಟಸಾಧ್ಯ. ಆದ್ದಾಗ್ಯೂ ಕೆಲ ಚಿಂತಕರು ರಾಷ್ಟ್ರೀಯ ಹಿತಾಸಕ್ತಿ ಕುರಿತಂತೆ ವ್ಯಾಖ್ಯಾನಿಸಿದ್ದು ಪ್ರಧಾನವಾದವುಗಳನ್ನು ಈ ಕೆಳಗೆ ನೀಡಲಾಗಿದೆ.

ಚಾರ್ಲ್ಸ್ ಲೆರ್ಚ್ ಮತ್ತು ಅಬ್ದುಲ್ ಪ್ರಕಾರ ರಾಷ್ಟ್ರವೊಂದರ ಸರ್ಕಾರವು ಕಾರ್ಯಾಚರಿಸುವ ಸಾಮಾನ್ಯ, ದೂರ ದೃಷ್ಟಿಯ ಅಥವಾ ನಿರಂತರ ಉದ್ದೇಶಗಳೇ ರಾಷ್ಟ್ರೀಯ ಹಿತಾಸಕ್ತಿ.

ವರ್ನಾನ್ ವಾನ್ ಡೈಕ್ ಪ್ರಕಾರ ಸಾರ್ವಭೌಮ ರಾಷ್ಟ್ರಗಳು ತಮ್ಮ ಪರಸ್ಪರ ಸಂಬಂಧಗಳಲ್ಲಿ ಸಂರಕ್ಷಿಸಿಕೊಳ್ಳಲು ಮತ್ತು ಸಾಧಿಸಲು ಬಯಸುವ ಮೌಲ್ಯ, ಬೇಡಿಕೆ ಅಥವಾ ಆಸಕ್ತಿಗಳೇ ರಾಷ್ಟ್ರೀಯ ಹಿತಾಸಕ್ತಿ.

ಎಚ್. ಜೆ. ಮಾರ್ಗೆಂಥೊ ಪ್ರಕಾರ ರಾಷ್ಟ್ರವೊಂದು ಇತರ ರಾಷ್ಟ್ರಗಳ ಆಕ್ರಮಣದಿಂದ ತನ್ನ ಭೌತಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಅಸ್ಮಿತೆಯನ್ನು ಸಂರಕ್ಷಿಸಿಕೊಳ್ಳುವುದೇ ರಾಷ್ಟ್ರೀಯ ಹಿತಾಸಕ್ತಿ.

ಈ ಮೇಲಿನ ಚಿಂತಕರ ವ್ಯಾಖ್ಯಾನಗಳ ಆಧಾರದಲ್ಲಿ ರಾಷ್ಟ್ರೀಯ ಹಿತಾಸಕ್ತಿಯನ್ನು ನಾವು ಮನವರಿಕೆ ಮಾಡಿಕೊಳ್ಳಬಹುದಾಗಿದೆ. ಸರಳಾರ್ಥದಲ್ಲಿ ರಾಷ್ಟ್ರಗಳು ತಮ್ಮ ಒಳಿತನ್ನು ಸಾಧಿಸಲು ಮುಂದಾಗುವ ಪ್ರಕ್ರಿಯೆಯನ್ನು ರಾಷ್ಟ್ರೀಯ ಹಿತಾಸಕ್ತಿ ಎನ್ನಬಹುದು. ವಿಶಾಲಾರ್ಥದಲ್ಲಿ ಇತರ ರಾಷ್ಟ್ರಗಳೊಡನೆ ವ್ಯವಹರಿಸುವಾಗ ರಾಷ್ಟ್ರವೊಂದು ರಕ್ಷಿಸಿಕೊಳ್ಳಲು ಅಥವಾ ಸಾಧಿಸಲು ಬಯಸುವ ಬೇಡಿಕೆ, ಆಸಕ್ತಿ, ಗುರಿಗಳೇ ರಾಷ್ಟ್ರೀಯ ಹಿತಾಸಕ್ತಿ. ಸಾಮಾನ್ಯವಾಗಿ ದೇಶವೊಂದರ ರಾಷ್ಟ್ರೀಯ ಹಿತಾಸಕ್ತಿಗಳು ಅಂತರ್‌ರಾಷ್ಟ್ರೀಯ ಹಿತಾಸಕ್ತಿಗಳಿಗೆ ಪೂರಕವಾಗಿರುತ್ತವೆ. ಕೆಲವೊಮ್ಮೆ ದೇಶವೊಂದರ ರಾಷ್ಟ್ರೀಯ ಹಿತಾಸಕ್ತಿಯು ಇತರ ದೇಶಗಳ ರಾಷ್ಟ್ರೀಯ ಹಿತಾಸಕ್ತಿಗೆ ವಿರುದ್ಧವಾಗಿರುತ್ತವೆ.



## [B.] ರಾಷ್ಟ್ರೀಯ ಹಿತಾಸಕ್ತಿಯ ಮೂಲಾಂಶಗಳು

## [Elliments of National Interest]:

ಒಂದು ಪರಿಕಲ್ಪನೆಯ ರಚನೆಯು ತನ್ನದೇಯಾದ ಘಟಕಗಳನ್ನು ಒಳಗೊಂಡಿರುತ್ತದೆ. ಪರಿಕಲ್ಪನೆಯೊಂದರ ಘಟಕಗಳನ್ನೇ ಮೂಲಾಂಶಗಳೆಂದೂ ಕರೆಯಲಾಗುತ್ತದೆ. ಅಂತೆಯೇ ರಾಷ್ಟ್ರೀಯ ಹಿತಾಸಕ್ತಿ ಎಂಬ ಪರಿಕಲ್ಪನೆಯು ತನ್ನದೇಯಾದ ವೈವಿಧ್ಯಮಯ ಘಟಕ ಅಂದರೆ ಮೂಲಾಂಶಗಳಿಂದ ರಚನೆಗೊಂಡಿರುತ್ತದೆ. ಚಿಂತಕರು ರಾಷ್ಟ್ರೀಯ ಹಿತಾಸಕ್ತಿಯ ಮೂಲಾಂಶಗಳನ್ನು ಅಗತ್ಯ ಅಥವಾ ಮಹತ್ವದ ಮೂಲಾಂಶಗಳು ಮತ್ತು ಅಸ್ಥಿರ ಅಥವಾ ಮಹತ್ವವಲ್ಲದ ಮೂಲಾಂಶಗಳು ಎಂಬುದಾಗಿ ಎರಡು ಪ್ರಕಾರಗಳಲ್ಲಿ ವಿಂಗಡಿಸಿದ್ದಾರೆ. ಈ ಕೆಳಗೆ ದೇಶವೊಂದರ ರಾಷ್ಟ್ರೀಯ ಹಿತಾಸಕ್ತಿಯ ಸಾಮಾನ್ಯ ಘಟಕಗಳು ಅಂದರೆ ಮೂಲಾಂಶಗಳನ್ನು ಸಂಕ್ಷೇಪ್ತವಾಗಿ ಪಟ್ಟಿ ಮಾಡಲಾಗಿದೆ.

**1. ಅಸ್ಮಿತೆ [Identity]:** ಜಗತ್ತಿನ ಪ್ರತಿ ದೇಶ ತನ್ನದೇಯಾದ ಭೌಗೋಳಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಅಸ್ಮಿತೆಯನ್ನು ಅಂದರೆ ಗುರುತಿಸಿಕೊಳ್ಳುವಿಕೆಯನ್ನು ರಾಷ್ಟ್ರೀಯ ಹಿತಾಸಕ್ತಿ ಎಂಬುದಾಗಿ ಭಾವಿಸಿರುತ್ತದೆ. ಗಡಿಗಳ ರೂಪದ ಭೌಗೋಳಿಕ, ಸಾರ್ವಭೌಮಾಧಿಕಾರ ರೂಪದಲ್ಲಿ ರಾಜಕೀಯ ಮತ್ತು ಭಿನ್ನ ಸಂಸ್ಕೃತಿಯ ರೂಪದ ಸಾಂಸ್ಕೃತಿಕ ತಳಹದಿಯ ತನ್ನ ರಾಷ್ಟ್ರೀಯ ಹಿತಾಸಕ್ತಿಯನ್ನು ಜಗತ್ತಿನ ಇತರ ದೇಶಗಳಿಂದ ರಕ್ಷಿಸಿಕೊಳ್ಳಲು ದೇಶವೊಂದು ಬಯಸುತ್ತಿರುತ್ತದೆ. ಉಳಿದ ದೇಶಗಳಿಂದ ಒಂದು ನಿರ್ದಿಷ್ಟ ದೇಶಕ್ಕೆ ಸ್ವತಂತ್ರ ಅಸ್ತಿತ್ವ ಒದಗಿಸುವ ಸಾಮರ್ಥ್ಯವನ್ನು ಅಸ್ಮಿತೆ ಹೊಂದಿರುವುದರಿಂದ ದೇಶವೊಂದರ ರಾಷ್ಟ್ರೀಯ ಹಿತಾಸಕ್ತಿಯ ಮೂಲಾಂಶವಾಗಿ ಅಸ್ಮಿತೆಯು ಪರಿಗಣಿಸಲ್ಪಟ್ಟಿದೆ.

**2. ಭದ್ರತೆ [Security]:** ದೇಶವೊಂದರ ರಾಷ್ಟ್ರೀಯ ಹಿತಾಸಕ್ತಿಯು ಸಹಜವಾಗಿ ಆ ದೇಶದ ಭದ್ರತೆಯನ್ನು ಆಧರಿಸಿರುತ್ತದೆ. ಸಾಮಾನ್ಯವಾಗಿ ದೇಶಗಳು ಅಂತರ್‌ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗೆ ಬೆಂಬಲ ನೀಡುವ ಹಿಂದೆ ಅಂತರ್‌ರಾಷ್ಟ್ರೀಯ ಭದ್ರತೆಯಲ್ಲಿ ಆಯಾ ರಾಷ್ಟ್ರದ ಶಾಂತಿ ಮತ್ತು ಭದ್ರತೆ ಅಡಗಿರುವುದು ಪ್ರಧಾನ ಕಾರಣ. ದೇಶದ ಗಡಿಗಳೊಳಗೆ ಮತ್ತು ಗಡಿಯಾಚೆಗೆ ತನ್ನ ಪ್ರಜೆಗಳ ಭದ್ರತೆಗೆ ಸಾರ್ವತ್ರಿಕವಾಗಿ ದೇಶಗಳು ಪ್ರಾಶಸ್ತ್ಯ ನೀಡುವುದರಿಂದ ದೇಶಗಳ ರಾಷ್ಟ್ರೀಯ ಹಿತಾಸಕ್ತಿಯ ಮೂಲಾಂಶವಾಗಿ ಭದ್ರತೆಯು ಗುರುತಿಸಲ್ಪಡುತ್ತದೆ. ಗಮನಾರ್ಹ ಅಂಶವೇನೆಂದರೆ, ತನ್ನ ರಾಷ್ಟ್ರೀಯ ಹಿತಾಸಕ್ತಿಯ ಮೂಲಾಂಶವಾಗಿರುವ ಭದ್ರತೆಗೆ ಧಕ್ಕೆಯಾದರೆ ದೇಶವೊಂದು ಯುದ್ಧದಂತಹ ಕಠಿಣ ನಿರ್ಧಾರಗಳಿಗೆ ಹಿಂಜರಿಯಲಾರದು. ಉದಾ: ಪಾಕಿಸ್ತಾನದ ಸೈನಿಕರ ನುಸುಳುವಿಕೆಯಿಂದ ತನ್ನ ಭದ್ರತೆಗೆ ಧಕ್ಕೆಯುಂಟಾದಾಗ ಶಾಂತಿಯನ್ನು ಬಯಸುವ ಭಾರತವು ಕಾರ್ಗಿಲ್ ಯುದ್ಧದಲ್ಲಿ ತೊಡಗಿದುದು.

3. ಶಾಂತಿ [Peace]: ದೇಶವೊಂದರ ಹಿತಾಸಕ್ತಿಯು ಯುದ್ಧದಲ್ಲಿರದೇ ಶಾಂತಿಯಲ್ಲಿರುತ್ತದೆ. ಅನಿವಾರ್ಯ ಸಮಯದಲ್ಲಿ ಮಾತ್ರ ಯುದ್ಧವನ್ನು ದೇಶಗಳು ತಮ್ಮ ರಾಷ್ಟ್ರೀಯ ಹಿತಾಸಕ್ತಿಗಾಗಿ ಬಯಸುತ್ತವೆಯೇ ಹೊರತು ಆ ಮೊದಲು ಶಾಂತಿಯುತ ವಿಧಾನದಲ್ಲಿ ತಮ್ಮ ರಾಷ್ಟ್ರೀಯ ಹಿತಾಸಕ್ತಿ ಸಂರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತವೆ. ಈ ಹಿನ್ನೆಲೆಯಲ್ಲಿ ಶಾಂತಿಯು ದೇಶಗಳ ರಾಷ್ಟ್ರೀಯ ಹಿತಾಸಕ್ತಿಯ ಮೂಲಾಂಶವೆಂದು ಪ್ರತಿಪಾದಿಸಲ್ಪಟ್ಟಿದೆ.

4. ಆರ್ಥಿಕ ಸಮೃದ್ಧಿ [Economical Prosparity: ದೇಶವೊಂದರ ರಾಷ್ಟ್ರೀಯ ಹಿತಾಸಕ್ತಿಗೆ ಆರ್ಥಿಕ ಪ್ರಗತಿಯು ಸಹಕಾರಿಯಾಗಿದೆ. ಆರ್ಥಿಕವಾಗಿ ಸಮೃದ್ಧವಾದ ದೇಶವು ತನ್ನ ರಾಷ್ಟ್ರೀಯ ಹಿತಾಸಕ್ತಿಯನ್ನು ಈಡೇರಿಸಿಕೊಳ್ಳಲು ವಿಫುಲ ಅವಕಾಶಗಳನ್ನು ಪಡೆದುಕೊಳ್ಳಲು ಶಕ್ತವಾಗುತ್ತದೆ. ಹೀಗಾಗಿ ಆರ್ಥಿಕ ಸಮೃದ್ಧಿ ಅಥವಾ ಪ್ರಗತಿಯು ದೇಶವೊಂದರ ರಾಷ್ಟ್ರೀಯ ಹಿತಾಸಕ್ತಿಯ ಮೂಲಾಂಶವೆನಿಸಿಕೊಂಡಿದೆ.

5. ಸಿದ್ಧಾಂತ [Idealogy]: ಜಗತ್ತಿನ ಪ್ರತಿಯೊಂದು ದೇಶ ನಿರ್ದಿಷ್ಟ ಸಿದ್ಧಾಂತದಲ್ಲಿ ನಂಬಿಕೆ ಹೊಂದಿರುತ್ತದೆ. ಆಯಾ ದೇಶಗಳ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಅವುಗಳ ರಾಷ್ಟ್ರೀಯ ಹಿತಾಸಕ್ತಿ ರಚನೆಗೊಂಡಿರುತ್ತದೆ. ಉದಾ: ಭಾರತವು ಜಾತ್ಯಾತೀತವಾದಿ, ಅಮೇರಿಕಾವು ಪ್ರಜಾಸತ್ತಾತ್ಮಕ, ರಷ್ಯಾವು ಸಮತಾವಾದಿ ಸಿದ್ಧಾಂತಗಳಡಿ ತಮ್ಮ ರಾಷ್ಟ್ರೀಯ ಹಿತಾಸಕ್ತಿಗಳನ್ನು ರೂಪಿಸಿಕೊಂಡಿದುದು.

6. ಶಕ್ತಿ [Power]: ದೇಶವೊಂದು ತನ್ನ ರಾಷ್ಟ್ರೀಯ ಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಮೂಲಕ ರಾಷ್ಟ್ರೀಯ ಹಿತಾಸಕ್ತಿಯನ್ನು ಸಂರಕ್ಷಿಸಿಕೊಳ್ಳಲು ಬಯಸುತ್ತದೆ. ವಿವಿಧ ರೂಪದಲ್ಲಿರುವ ಅಂದರೆ ಆರ್ಥಿಕ, ಸೈನಿಕ, ತಾಂತ್ರಿಕ, ಸ್ವಾಭಾವಿಕ ರೂಪದ ಶಕ್ತಿಯು ರಾಷ್ಟ್ರೀಯ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳಲು ಸಹಕಾರಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ಚಿಂತಕರು ರಾಷ್ಟ್ರೀಯ ಶಕ್ತಿಯನ್ನು ರಾಷ್ಟ್ರೀಯ ಹಿತಾಸಕ್ತಿಯ ಮೂಲಾಂಶವೆಂದು ಒಪ್ಪಿಕೊಂಡಿದ್ದಾರೆ.

7. ದೇಶದ ಘನತೆ [National]: ದೇಶವೊಂದು ತನ್ನ ಹಿತಾಸಕ್ತಿಯ ಸಂರಕ್ಷಣೆಯ ಮೂಲಕ ವಿಶ್ವದಲ್ಲಿ ಘನತೆಯನ್ನು ಎತ್ತರಿಸಿಕೊಳ್ಳಲು ಪ್ರಯತ್ನಿಸುತ್ತದೆ. ರಾಷ್ಟ್ರೀಯ ಹಿತಾಸಕ್ತಿಯನ್ನು ಈಡೇರಿಸಿಕೊಳ್ಳಲಾಗದ ದೇಶವೊಂದರ ಘನತೆಯು ಜಾಗತಿಕ ಮಟ್ಟದಲ್ಲಿ ಕುಸಿಯುತ್ತದೆ. ಹೀಗಾಗಿ ರಾಷ್ಟ್ರೀಯ ಹಿತಾಸಕ್ತಿಯೊಡನೆ ನಿಕಟ ಸಂಬಂಧವುಳ್ಳ ದೇಶದ ಘನತೆಯನ್ನು ಅದರ ಮೂಲಾಂಶವೆಂದು ಪ್ರತಿಪಾದಿಸಲಾಗುತ್ತದೆ.

ಈ ಮೇಲೆ ಪ್ರಸ್ತಾಪಿಸಲಾಗಿರುವ ರಾಷ್ಟ್ರೀಯ ಹಿತಾಸಕ್ತಿಯ ಮೂಲಾಂಶಗಳಲ್ಲಿ ಅಸ್ಥಿರತೆ ಮತ್ತು ಭಿನ್ನತೆಗಳು. ದೇಶವೊಂದರ ಅಗತ್ಯ ಅಥವಾ ಮಹತ್ವದ ಮೂಲಾಂಶವಾಗಿದ್ದು ಉಳಿದ ಅಂಶಗಳು. ರಾಷ್ಟ್ರೀಯ ಹಿತಾಸಕ್ತಿಯು ಅಸ್ಥಿರ ಅಥವಾ ಮಹತ್ವವಲ್ಲದ ಮೂಲಾಂಶಗಳೆನಿಸುವ.



ಆಯಾ ಸನ್ನಿವೇಶಾನುಸಾರ ರಾಷ್ಟ್ರೀಯ ಹಿತಾಸಕ್ತಿಯ ಭಾಗವಾಗುವ ಅಸ್ಥಿರ ಅಥವಾ ಮಹತ್ವವಲ್ಲದ ಮೂಲಾಂಶಗಳನ್ನು ವರ್ನಾನ್ ವಾನ್ ಡೈಕ್ ಪಟ್ಟಿ ಮಾಡಿರುವರು. ಆಸಕ್ತಿದಾಯಕ ಅಂಶವೇನೆಂದರೆ ಅಸ್ಥಿರ ಅಥವಾ ಮಹತ್ವವಲ್ಲದ ಮೂಲಾಂಶಗಳು ಸಾರ್ವತ್ರಿಕವಾಗಿ ಎಲ್ಲ ದೇಶಗಳ ರಾಷ್ಟ್ರೀಯ ಹಿತಾಸಕ್ತಿಯ ಮೂಲಾಂಶವಾಗಿ ಅಸ್ತಿತ್ವದಲ್ಲಿರುವುದು.

## [C.] ರಾಷ್ಟ್ರೀಯ ಹಿತಾಸಕ್ತಿಯ ಬಗೆಗಳು [Kinds of National Interest]:

ಜಗತ್ತಿನ ಪ್ರತಿ ದೇಶವು ತನ್ನದೇಯಾದ ಹಿತಾಸಕ್ತಿ ಹೊಂದಿರುತ್ತದೆ. ದೇಶಗಳ ಹಿತಾಸಕ್ತಿಗಳು ಏಕರೂಪವಾಗಿರದೇ ವೈವಿಧ್ಯಮಯ ಸ್ವರೂಪವನ್ನು ತಾಳಿರುತ್ತವೆ. ಹೀಗಾಗಿ ಥಾಮಸ್ ಡಬ್ಲ್ಯೂ. ರಾಬಿನ್ಸನ್ ವಿವಿಧ ರಾಷ್ಟ್ರಗಳು ಸಂರಕ್ಷಿಸಿಕೊಳ್ಳಲು ಬಯಸುವ ರಾಷ್ಟ್ರೀಯಹಿತಾಸಕ್ತಿಗಳನ್ನು ಕ್ರೋಢೀಕರಿಸಿ ಕೆಳಗಿನ ಆರು ಬಗೆಗಳಾಗಿ ಗುರುತಿಸಿದ್ದಾರೆ. ಅವುಗಳೆಂದರೆ

**1. ಪ್ರಾಥಮಿಕ ಹಿತಾಸಕ್ತಿಗಳು [Primary Interests]:** ದೇಶವೊಂದರ ಮೂಲಭೂತ ಹಿತಾಸಕ್ತಿಗಳನ್ನು ಪ್ರಾಥಮಿಕಹಿತಾಸಕ್ತಿಗಳು ಎನ್ನಲಾಗುತ್ತದೆ. ಸಾಮಾನ್ಯವಾಗಿ ದೇಶವೊಂದರ ಭೌಗೋಳಿಕ, ರಾಜಕೀಯ, ಸಾಂಸ್ಕೃತಿಕ ಅಸ್ಮಿತೆಯನ್ನು ಪ್ರಾಥಮಿಕ ಹಿತಾಸಕ್ತಿಗಳು ಪ್ರತಿನಿಧಿಸುತ್ತವೆ. ಹೀಗಾಗಿ ದೇಶವೊಂದು ತನ್ನ ಪ್ರಾಥಮಿಕ ಹಿತಾಸಕ್ತಿ ಕುರಿತಂತೆ ಯಾವುದೇ ಕಾರಣಕ್ಕೂ ರಾಜಿ ಮಾಡಿಕೊಳ್ಳುವುದಿಲ್ಲ. ಗಮನಾರ್ಹ ಅಂಶವೇನೆಂದರೆ ತನ್ನ ಪ್ರಾಥಮಿಕ ಹಿತಾಸಕ್ತಿಗೆ ಧಕ್ಕೆಯಾಗುವ ಸನ್ನಿವೇಶದಲ್ಲಿ ರಾಷ್ಟ್ರವು ಯುದ್ಧದಂತಹ ಕಠಿಣ ನಿರ್ಧಾರ ಕೈಗೊಳ್ಳಲೂ ಹಿಂಜರಿಯುವುದಿಲ್ಲ.

**2. ಮಾಧ್ಯಮಿಕ ಹಿತಾಸಕ್ತಿಗಳು [Secondary Interests]:** ಪ್ರಾಥಮಿಕ ಹಿತಾಸಕ್ತಿಗಿಂತ ಕಡಿಮೆ ಮಹತ್ವವುಳ್ಳ ಹಿತಾಸಕ್ತಿಗಳನ್ನು ಮಾಧ್ಯಮಿಕ ಹಿತಾಸಕ್ತಿ ಎನ್ನಲಾಗುತ್ತದೆ. ದೇಶದ ಅಸ್ತಿತ್ವ ಮತ್ತು ಮುಂದುವರಿಕೆಗೆ ನೆರವಾಗಬಲ್ಲ ಅಂಶಗಳನ್ನು ಮಾಧ್ಯಮಿಕ ಹಿತಾಸಕ್ತಿಗಳು ಪ್ರತಿನಿಧಿಸುತ್ತವೆ. ವಿದೇಶದಲ್ಲಿರುವ ತನ್ನ ನಾಗರಿಕರ ಮತ್ತು ರಾಯಭಾರಿ ಸಿಬ್ಬಂದಿಗಳ ಹಿತರಕ್ಷಣೆಯ ಮಾಧ್ಯಮಿಕ ಹಿತಾಸಕ್ತಿ ಎನಿಸಿಕೊಳ್ಳುತ್ತದೆ. ಉದಾ: ಆಸ್ಟ್ರೇಲಿಯಾದಲ್ಲಿ ವ್ಯಾಸಂಗ ಮಾಡುತ್ತಿರುವ ಭಾರತೀಯ ವಿದ್ಯಾರ್ಥಿಗಳ ಮೇಲೆ ಜನಾಂಗೀಯ ತಾರತಮ್ಯ ತೋರಿದರೆ ತನ್ನ ರಾಷ್ಟ್ರೀಯ ಹಿತಾಸಕ್ತಿಯ ಉಲ್ಲಂಘನೆ ಎಂದು ಭಾವಿಸುವ ಭಾರತ ಸರ್ಕಾರವು ಅದನ್ನು ಖಂಡಿಸುವುದು.

**3. ಶಾಶ್ವತ ಹಿತಾಸಕ್ತಿಗಳು [Permanent Interests]:** ದೇಶವೊಂದು ಬಹು ಕಾಲದಿಂದ ನಿರಂತರವಾಗಿ ಸಂರಕ್ಷಿಸಿಕೊಳ್ಳಲು ಬಯಸುವ ಬದಲಾವಣೆಗೊಳಗಾಗದ ಹಿತಾಸಕ್ತಿಗಳು ಶಾಶ್ವತ ಹಿತಾಸಕ್ತಿ ಎನಿಸಿಕೊಳ್ಳುತ್ತದೆ. ಈ ಹಿತಾಸಕ್ತಿಗಳು

ಬದಲಾವಣೆಗೊಳಗಾಗಬಹುದಾದರೂ ನಿಧಾನ ಸ್ವರೂಪವನ್ನು ತಾಳಿರುತ್ತವೆ. ತನ್ನ ವಸಾಹತುಶಾಹಿತ್ವದ ರಕ್ಷಣೆಗಾಗಿ ವಿಶ್ವದೆಲ್ಲೆಡೆ ತನ್ನ ಸಂಚಾರವನ್ನು ಬ್ರಿಟನ್ ಪ್ರತಿಪಾದಿಸಿದುದು ಮತ್ತು ಅಮೇರಿಕಾವು ವಿಶ್ವದ ಹಿರಿಯಣ್ಣನೆಂಬ ತನ್ನ ಸ್ಥಾನವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸಿದುದು ಶಾಶ್ವತ ಹಿತಾಸಕ್ತಿಗೆ ನಿದರ್ಶನಗಳಾಗಿವೆ.

4. ಅಸ್ಥಿರ ಹಿತಾಸಕ್ತಿಗಳು [Variable Interests]: ನಿರ್ದಿಷ್ಟ ಸನ್ನಿವೇಶದಲ್ಲಿ ದೇಶದ ಒಳಿತನ್ನು ಪ್ರತಿಪಾದಿಸಿ ಕಾಲಾಂತರದಲ್ಲಿ ಕಣ್ಮರೆಯಾಗುವ ಹಿತಾಸಕ್ತಿಗಳೇ ಅಸ್ಥಿರ ಹಿತಾಸಕ್ತಿಗಳಾಗಿರುತ್ತವೆ. ಇದರರ್ಥ, ಹಿತಾಸಕ್ತಿಗಳು ನಿರಂತರವಾಗಿರದೇ ಆಯಾ ಸನ್ನಿವೇಶದಲ್ಲಿ ವ್ಯಕ್ತಗೊಂಡು ಬೇರೊಂದು ಸನ್ನಿವೇಶದಲ್ಲಿ ತಮ್ಮ ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತವೆ. ಸಾಮಾನ್ಯವಾಗಿ ಅಸ್ಥಿರ ಹಿತಾಸಕ್ತಿಗಳು ಪ್ರಾಥಮಿಕ ಮತ್ತು ಮಾಧ್ಯಮಿಕ ಹಿತಾಸಕ್ತಿಗೆ ಪೂರಕವಾಗಿದ್ದು ಸಾರ್ವಜನಿಕಾಭಿಪ್ರಾಯ, ಪಕ್ಷ ರಾಜಕೀಯ, ವರ್ಗಗಳ ಹಿತಾಸಕ್ತಿಯಲ್ಲಿ ವ್ಯಕ್ತಗೊಳ್ಳುತ್ತವೆ.

5. ಸಾಮಾನ್ಯ ಹಿತಾಸಕ್ತಿಗಳು [The General Interests]: ಇತರ ದೇಶಗಳ ಹಿತಾಸಕ್ತಿಗಳಿಗೆ ಸಮನಾದ ರಾಷ್ಟ್ರೀಯಹಿತಾಸಕ್ತಿಯನ್ನು ಸಾಮಾನ್ಯ ಹಿತಾಸಕ್ತಿ ಎನ್ನಲಾಗುತ್ತದೆ. ಸಾಮಾನ್ಯವಾಗಿ ಜಗತ್ತಿನ ಹಿತಾಸಕ್ತಿಗೆ ಪೂರಕವಾದ ಅಂಶಗಳನ್ನು ಈ ಬಗೆಯ ಹಿತಾಸಕ್ತಿಗಳು ಪ್ರತಿನಿಧಿಸುತ್ತವೆ. ವ್ಯಾಪಾರ, ಭಯೋತ್ಪಾದನೆ, ಜಾಗತಿಕ ತಾಪಮಾನದ ನಿಯಂತ್ರಣ ಸಾಮಾನ್ಯ ಹಿತಾಸಕ್ತಿಗಳಿಗೆ ನಿದರ್ಶನಗಳಾಗಿವೆ. ಗಮನಾರ್ಹ ಅಂಶವೇನೆಂದರೆ, ಅಂತರ್ ರಾಷ್ಟ್ರೀಯ ಸಮುದಾಯದ ಸಾಮಾನ್ಯ ಹಿತಾಸಕ್ತಿಗಳ ನೆರಳಿನಲ್ಲಿ ರಾಷ್ಟ್ರೀಯ ಹಿತಾಸಕ್ತಿಗಳು ಈಡೇರಿಸಲ್ಪಡುತ್ತವೆ.

6. ನಿರ್ದಿಷ್ಟ ಹಿತಾಸಕ್ತಿಗಳು [Specific Interests]: ಸಾಮಾನ್ಯ ಹಿತಾಸಕ್ತಿಯ ಭಾಗವಾಗಿದ್ದು ತಾರ್ಕಿಕ ಗುರಿಯನ್ನು ಇವು ಪ್ರತಿನಿಧಿಸುತ್ತವೆ. ನಿರ್ದಿಷ್ಟ ಸಮಯ ಮತ್ತು ಪ್ರದೇಶಗಳಿಗೆ ಮಾತ್ರ ಸಂಬಂಧಿಸಿ ಈ ಹಿತಾಸಕ್ತಿಗಳು ಪ್ರತಿಪಾದಿಸಲ್ಪಡುತ್ತವೆ. ನೂತನ ಆರ್ಥಿಕ ವ್ಯವಸ್ಥೆಯಲ್ಲಿ ತೃತೀಯ ಜಗತ್ತಿನ ರಾಷ್ಟ್ರಗಳ ಹಿತಾಸಕ್ತಿಯನ್ನು ಕಾಪಾಡುವುದು ಭಾರತದ ನಿರ್ದಿಷ್ಟ ಹಿತಾಸಕ್ತಿ ಎನಿಸಿಕೊಳ್ಳುತ್ತದೆ.

ಈ ಮೇಲೆ ಪ್ರಸ್ತಾಪಿಸಲಾಗಿರುವ ಥಾಮಸ್ ಡಬ್ಲ್ಯೂ. ರಾಬಿನ್ಸನ್ ಪ್ರತಿಪಾದಿಸಿರುವ ಆರು ಬಗೆಯ ರಾಷ್ಟ್ರೀಯ ಹಿತಾಸಕ್ತಿಗಳ ಮನವರಿಕೆಯು ಜಗತ್ತಿನ ವಿವಿಧ ದೇಶಗಳ ಹಿತಾಸಕ್ತಿಗಳನ್ನು ವಿಶ್ಲೇಷಿಸಲು ಸಹಕಾರಿಯಾಗಿವೆ. ಜೊತೆಗೆ ಅಂತರ್‌ರಾಷ್ಟ್ರೀಯ ಸಂಬಂಧಗಳ ವೇಳೆಯಲ್ಲಿ ರಾಷ್ಟ್ರಗಳ ವರ್ತನೆಯನ್ನು ಪರಿಪೂರ್ಣವಾಗಿ ಅರ್ಥೈಸಿಕೊಳ್ಳಲು ಸಹಕಾರಿಯಾಗಿವೆ.



## [D.] ರಾಷ್ಟ್ರೀಯ ಹಿತಾಸಕ್ತಿಯನ್ನು ಉತ್ತೇಜಿಸುವ ಸಾಧನಗಳು

## [Instruments for Promotion of National Interests]:

ತನ್ನ ರಾಷ್ಟ್ರೀಯ ಹಿತಾಸಕ್ತಿಗಳ ಗುರಿ ಮತ್ತು ಉದ್ದೇಶವನ್ನು ಸಂರಕ್ಷಿಸಿಕೊಳ್ಳುವುದು ಪ್ರತಿಯೊಂದು ರಾಷ್ಟ್ರದ ಜವಾಬ್ದಾರಿಯಾಗಿರುತ್ತದೆ. ಹೀಗಾಗಿ ರಾಷ್ಟ್ರಗಳು ಸದಾ ತಮ್ಮ ರಾಷ್ಟ್ರೀಯ ಹಿತಾಸಕ್ತಿಗಳ ಸಂರಕ್ಷಣೆಗಾಗಿ ಪ್ರಯತ್ನಿಸುತ್ತಿರುತ್ತವೆ. ಸಾಮಾನ್ಯವಾಗಿ ತಮ್ಮ ಹಿತಾಸಕ್ತಿಗಳ ರಕ್ಷಣೆಗೆ ರಾಷ್ಟ್ರಗಳು ಈ ಕೆಳಗೆ ಪ್ರಸ್ತಾಪಿಸಲಾಗಿರುವ ಸಾಧನಗಳನ್ನು ಅವಲಂಬಿಸಿರುತ್ತವೆ. ಪ್ರಸ್ತಾಪಿತ ಸಾಧನಗಳ ಸಮರ್ಪಕ ಬಳಕೆಯೊಡನೆ ತಮ್ಮ ರಾಷ್ಟ್ರೀಯ ಹಿತಾಸಕ್ತಿಯನ್ನು ಸಂರಕ್ಷಿಸಿಕೊಳ್ಳಲು ಪ್ರತಿ ರಾಷ್ಟ್ರ ಮುಂದಾಗುತ್ತವೆ. ಈ ಕೆಳಗೆ ರಾಷ್ಟ್ರವೊಂದು ತನ್ನ ರಾಷ್ಟ್ರೀಯ ಹಿತಾಸಕ್ತಿ ಕಾಪಾಡಿಕೊಳ್ಳಲು ಅವಲಂಬಿಸುವ ವಿವಿಧ ಸಾಧನಗಳನ್ನು ಸಂಕ್ಷೇಪ್ತವಾಗಿ ವಿವರಿಸಲಾಗಿದೆ.

1. ರಾಯಭಾರಕ ಸಂಧಾನ [Diplomatic Negotiation]: ರಾಯಭಾರಿಗಳ ನೆರವಿನಿಂದ ರಾಷ್ಟ್ರಗಳು ತಮ್ಮ ರಾಷ್ಟ್ರೀಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುವುದು ಸಾರ್ವತ್ರಿಕ ಸಂಗತಿ. ಹೀಗಾಗಿ ಮಾರ್ಗೆಂಥೊ ''ರಾಯಭಾರಕ ಸಂಧಾನವು ರಾಷ್ಟ್ರೀಯ ಹಿತಾಸಕ್ತಿಯನ್ನು ಉತ್ತೇಜಿಸುವ ಪ್ರಾಥಮಿಕ ಸಾಧನ" ಎಂದಿರುವರು. ರಾಷ್ಟ್ರಗಳು ಇತರ ರಾಷ್ಟ್ರಗಳೊಡನೆ ಕೊಡು ಕೊಳ್ಳುವಿಕೆ ಮಾತುಕತೆಗಳ ಮೂಲಕ ಪರಸ್ಪರ ವಿರೋಧಾತ್ಮಕ ಅಂಶಗಳನ್ನು ಪರಿಹರಿಸಿಕೊಂಡು ರಾಷ್ಟ್ರೀಯ ಹಿತಾಸಕ್ತಿ ಸಂರಕ್ಷಿಸಿಕೊಳ್ಳಲು ರಾಯಭಾರಕ ಸಂಧಾನ ಸಹಕಾರಿಯಾಗಿದೆ. ದೇಶವೊಂದರ ರಾಯಭಾರಿಗಳು ತಾವು ನೇಮಕಗೊಂಡಿರುವ ದೇಶದ ಮುಖ್ಯಸ್ಥರು ಮತ್ತು ರಾಯಭಾರಿಗಳೊಡನೆ ಸಂಧಾನ ನಡೆಸಿ ತಮ್ಮ ದೇಶದ ರಾಷ್ಟ್ರೀಯ ಹಿತಾಸಕ್ತಿಗೆ ಪೂರಕವಾದ ಗುರಿಗಳನ್ನು ಸಾಧಿಸಲು ಶ್ರಮಿಸುತ್ತಾರೆ. ರಾಯಭಾರತ್ವವು ಒಂದು ಕಲೆಯಾಗಿದ್ದು ನ್ಯಾಯ ಸಮ್ಮತ ಬೇಡಿಕೆ, ಪ್ರಭಾವ ಬೀರುವಿಕೆ, ವಿನಾಯಿತಿಗಳ ನೀಡಿಕೆ, ಭಯ ಮೂಡಿಸುವಿಕೆಯಂತಹ ತಂತ್ರಗಳ ಮೂಲಕ ಸಂಧಾನದ ವೇಳೆ ರಾಷ್ಟ್ರೀಯ ಹಿತಾಸಕ್ತಿಯನ್ನು ರಕ್ಷಿಸಲು ಆಯಾ ದೇಶದ ರಾಯಭಾರಿಗಳು ಪ್ರಯತ್ನಿಸುತ್ತಾರೆ. ರಾಯಭಾರಕ ಸಂಧಾನವು ರಾಷ್ಟ್ರಗಳ ನಡುವಿನ ವಿವಾದಗಳ ನಿವಾರಣೆಗೆ ಮತ್ತು ವೈವಿಧ್ಯಮಯ ಹಿತಾಸಕ್ತಿಗಳ ಘರ್ಷಣೆಗಳ ಪರಿಹಾರಕ್ಕೆ ಪರಿಣಾಮಕಾರಿ ಸಾಧನವೆನಿಸಿದೆ.

2. ಪ್ರಚಾರ [Propaganda]: ಪ್ರಚಾರವು ರಾಷ್ಟ್ರೀಯ ಹಿತಾಸಕ್ತಿಯನ್ನು ಕಾಪಾಡುವ ಎರಡನೇ ಪ್ರಮುಖ ಸಾಧನವಾಗಿದೆ. ಫ್ರ್ಯಾಂಕಲ್ ವ್ಯಾಖ್ಯಾನಿಸಿರುವಂತೆ ನಿರ್ದಿಷ್ಟ ಸಾರ್ವಜನಿಕ ಉದ್ದೇಶಕ್ಕಾಗಿ ಗುಂಪೊಂದರ ಮನಸ್ಸು, ಭಾವನೆ ಹಾಗೂ ಕ್ರಿಯೆಗಳನ್ನು ಪ್ರಭಾವಿಸುವ ವ್ಯವಸ್ಥಿತ ಪ್ರಕ್ರಿಯೆಯು ಪ್ರಚಾರವಾಗಿದೆ. ಪ್ರಚಾರವು ರಾಷ್ಟ್ರೀಯ ಹಿತಾಸಕ್ತಿಯ ಗುರಿ ಮತ್ತು ಉದ್ದೇಶಗಳು ನ್ಯಾಯ ಸಮ್ಮತವಾಗಿವೆ ಎಂಬುದನ್ನು ಕುರಿತಂತೆ ಇತರರನ್ನು

ಮನವೊಲಿಸುವ ರಾಷ್ಟ್ರಗಳ ಕಲೆಯಾಗಿದೆ. ಸಾಮಾನ್ಯವಾಗಿ ದೇಶವೊಂದು ಕೈಗೊಳ್ಳುವ ಪ್ರಚಾರವು ಆ ದೇಶವು ಸಾಧಿಸಲು ಬಯಸುವ ರಾಷ್ಟ್ರೀಯ ಹಿತಾಸಕ್ತಿಗೆ ಪೂರಕವಾದ ಗುರಿಗಳ ಅಗತ್ಯವನ್ನು ಒಳಗೊಂಡಿರುತ್ತದೆ. ವಿದೇಶಗಳ ಪೌರರನ್ನು ಪ್ರಭಾವಿಸುವ ಪ್ರಚಾರದಲ್ಲಿ ತೊಡಗಿರುವ ದೇಶವು ತನ್ನ ರಾಷ್ಟ್ರೀಯ ಹಿತಾಸಕ್ತಿಗೆ ಪೂರಕವಾದ ವಾತಾವರಣವನ್ನು ಸೃಷ್ಟಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಸಂವಹನ ಕ್ಷೇತ್ರದಲ್ಲಿನ ಕ್ರಾಂತಿಕಾರಕ ಪರಿವರ್ತನೆಯಿಂದ ಪ್ರಚಾರ ಸಾಧನವನ್ನು ಎಲ್ಲ ರಾಷ್ಟ್ರಗಳು ವ್ಯಾಪಕವಾಗಿ ಬಳಸಿಕೊಳ್ಳುತ್ತಿವೆ. ಪ್ರಚಾರದ ಮಹತ್ವವನ್ನು ಮನಗಂಡಿರುವ ರಾಷ್ಟ್ರಗಳು ವಿದೇಶಗಳಲ್ಲಿ ಮಾಹಿತಿ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ತಮ್ಮ ಸಾಂಸ್ಕೃತಿಕ ರಾಷ್ಟ್ರೀಯ ಹಿತಾಸಕ್ತಿಗಳನ್ನು ಸಂರಕ್ಷಿಸಿಕೊಳ್ಳಲು ಮುಂದಾಗಿವೆ. ಸಂವಹನ ಕ್ರಾಂತಿಯ ಮುಂಚೆಯೂ ಹಲವು ರಾಷ್ಟ್ರಗಳು ಪ್ರಚಾರವನ್ನು ತಮ್ಮ ರಾಷ್ಟ್ರೀಯ ಹಿತಾಸಕ್ತಿಗಳ ರಕ್ಷಣೆಗೆ ಬಳಸಿಕೊಂಡ ನಿದರ್ಶನಗಳಿವೆ. ಉದಾ: ಶೀತಲ ಸಮರದ ವೇಳೆಯಲ್ಲಿ ಸಮಾಜವಾದದ ವಿಸ್ತರಣೆಯ ವಿರುದ್ಧ ಪಾಶ್ಚಿಮಾತ್ಯ ಪ್ರಜಾಪ್ರಭುತ್ವ ದೇಶಗಳು ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳ ವಿರುದ್ಧ ಸೋವಿಯತ್ ಒಕ್ಕೂಟ ಪ್ರಚಾರ ಕೈಗೊಂಡಿದುದು.

3. ಆರ್ಥಿಕ ನೆರವು **[Economic Aid]:** ಜಗತ್ತಿನ ಶ್ರೀಮಂತ ಹಾಗೂ ಮುಂದುವರಿದ ರಾಷ್ಟ್ರಗಳು ತಮ್ಮ ರಾಷ್ಟ್ರೀಯ ಹಿತಾಸಕ್ತಿಯ ಸಾಧನವಾಗಿ ಆರ್ಥಿಕ ನೆರವನ್ನು ಬಳಸಿಕೊಳ್ಳುತ್ತವೆ. ಹಿಂದುಳಿದ ಮತ್ತು ಮುಂದುವರಿಯುತ್ತಿರುವ ದೇಶಗಳಿಗೆ ಸಾಲ ಅಥವಾ ಆರ್ಥಿಕ ನೆರವಿನ ಮೂಲಕ ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿ ತಮ್ಮ ಹಿತಾಸಕ್ತಿಯ ಸಂರಕ್ಷಣೆಗೆ ಮುಂದುವರಿದ ರಾಷ್ಟ್ರಗಳು ಪ್ರಯತ್ನಿಸುತ್ತವೆ. ಪ್ರಪಂಚದ ಶ್ರೀಮಂತ ಹಾಗೂ ಬಡ ರಾಷ್ಟ್ರಗಳ ನಡುವಿನ ಅಂತರವು ರಾಷ್ಟ್ರೀಯ ಹಿತಾಸಕ್ತಿ ಸಂರಕ್ಷಣೆಯ ಆರ್ಥಿಕ ನೆರವಿನ ಸಾಧನಕ್ಕೆ ಮಹತ್ವ ಒದಗಿಸಿದೆ. ಬಡ ದೇಶಗಳು ಶ್ರೀಮಂತ ದೇಶಗಳ ಮೇಲೆ ಕೈಗಾರಿಕಾ ಉತ್ಪನ್ನಗಳ ಆಮದು, ತಂತ್ರಜ್ಞಾನದ ವಿನಿಮಯ, ಕಚ್ಚಾ ವಸ್ತುಗಳ ಮಾರಾಟ, ಶಸ್ತ್ರಾಸ್ತ್ರಗಳ ಖರೀದಿ ಸಂಗತಿಗಳಲ್ಲಿ ಅವಲಂಬನೆಗೊಂಡಿದುದು ಆರ್ಥಿಕ ನೆರವು ಎಂಬ ಸಾಧನವನ್ನು ಸೃಷ್ಟಿಸಿದೆ. ಪ್ರಸ್ತುತ ಜಾಗತೀಕರಣ ಜಾರಿಯಲ್ಲಿರುವುದರಿಂದ ಆರ್ಥಿಕ ನೆರವು ರಾಷ್ಟ್ರೀಯ ಹಿತಾಸಕ್ತಿಯ ಉತ್ತೇಜನಕ್ಕೆ ಅನಿವಾರ್ಯ ಸಾಧನವಾಗಿ ಪರಿವರ್ತನೆಗೊಂಡಿದೆ.

4. ಮೈತ್ರಿ ಕೂಟಗಳು **[Alliances]:** ಸಾಮಾನ್ಯವಾಗಿ ಎರಡು ಅಥವಾ ಹೆಚ್ಚಿನ ರಾಷ್ಟ್ರಗಳು ತಮ್ಮ ಸಾಮಾನ್ಯ ಹಿತಾಸಕ್ತಿಗಳ ಈಡೇರಿಕೆಗಾಗಿ ಮೈತ್ರಿ ಕೂಟಗಳನ್ನು ರಚಿಸಿಕೊಳ್ಳುತ್ತವೆ. ಇಂತಹ ಮೈತ್ರಿ ಕೂಟಗಳ ಸಾಮಾನ್ಯ ಹಿತಾಸಕ್ತಿಯು ಅದರ ಸದಸ್ಯ ರಾಷ್ಟ್ರಗಳ ರಾಷ್ಟ್ರೀಯ ಹಿತಾಸಕ್ತಿಗೆ ಪೂರಕವಾಗಿರುತ್ತದೆ. ಕೆಲವೊಮ್ಮೆ ವಿವಿಧ ರಾಷ್ಟ್ರಗಳು ತಮ್ಮ ಏಕರೂಪದ ಹಿತಾಸಕ್ತಿಗಳಿಗೆ ವಿರುದ್ಧವಾದ ಶಕ್ತಿಯನ್ನು ನಿಯಂತ್ರಿಸುವ ಮೂಲಕ ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಮೈತ್ರಿ ಕೂಟದ ಸಾಧನವನ್ನು ಅವಲಂಬಿಸುತ್ತವೆ. ಉದಾ: ಅಮೇರಿಕಾದ ನೇತೃತ್ವದಲ್ಲಿ ಪಾಶ್ಚಿಮಾತ್ಯ ಪ್ರಜಾಸತ್ತಾತ್ಮಕ ರಾಷ್ಟ್ರಗಳು ತಮ್ಮ



ಹಿತಾಸಕ್ತಿಗೆ ವಿರುದ್ಧವಾದ ಸಮತಾವಾದದ ಪ್ರಭಾವ ತಡೆಯಲು ನ್ಯಾಟೊ, ಸೆಂಟೊ, ಸೀಟೊ ಮೈತ್ರಿ ಕೂಟಗಳನ್ನು ಮತ್ತು ಸೋವಿಯತ್ ಒಕ್ಕೂಟದ ನಾಯಕತ್ವದಲ್ಲಿ ಸಮತಾವಾದಿ ರಾಷ್ಟ್ರಗಳು ವಾರ್ಸಾ ಒಪ್ಪಂದದ ಮೂಲಕ ಮೈತ್ರಿ ಕೂಟಗಳನ್ನು ರಚಿಸಿಕೊಂಡಿದುದು. ಆಸಕ್ತಿದಾಯಕ ಅಂಶವೇನೆಂದರೆ, ಮೈತ್ರಿ ಕೂಟಗಳ ಸ್ವರೂಪವು ಅದರ ಸದಸ್ಯ ರಾಷ್ಟ್ರಗಳು ಸಂರಕ್ಷಿಸಿಕೊಳ್ಳಲು ಬಯಸುವ ಹಿತಾಸಕ್ತಿಯ ಸ್ವರೂಪವನ್ನು ಆಧರಿಸಿರುತ್ತದೆ. ಸಾಮಾನ್ಯವಾಗಿ ರಾಷ್ಟ್ರಗಳ ಸೈನಿಕ ಮತ್ತು ಆರ್ಥಿಕ ಹಿತಾಸಕ್ತಿಗಳ ಸಂರಕ್ಷಣೆಗೆ ರಾಷ್ಟ್ರಗಳು ಮೈತ್ರಿ ಕೂಟಗಳ ರಚನೆಗೆ ಮುಂದಾಗಿರುತ್ತವೆ. ಇಂತಹ ಕೂಟಗಳ ಸದಸ್ಯರು ಕಾನೂನಾತ್ಮಕ ಬಾಧ್ಯತೆಗೆ ಒಳಪಡುವುದರಿಂದ ಪರಸ್ಪರ ಹಿತಾಸಕ್ತಿಗೆ ಧಕ್ಕೆಯುಂಟಾಗದಂತೆ ರಾಷ್ಟ್ರಗಳು ವರ್ತಿಸುವುದರಿಂದ ರಾಷ್ಟ್ರಗಳ ಹಿತಾಸಕ್ತಿ ಸಮರ್ಪಕವಾಗಿ ಸಂರಕ್ಷಿಸಲ್ಪಡುತ್ತದೆ.

5. ಬಲ ಪ್ರಯೋಗ **[Use of Force]:** ತಮ್ಮ ರಾಷ್ಟ್ರೀಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಅನಿವಾರ್ಯ ಸಮಯದಲ್ಲಿ ರಾಷ್ಟ್ರಗಳು ಬಲ ಪ್ರಯೋಗದ ಸಾಧನವನ್ನು ಆಶ್ರಯಿಸುತ್ತವೆ. ಮಧ್ಯಸ್ಥಿಕೆ, ಬೆದರಿಕೆ, ನಿರ್ಬಂಧ, ಆಕ್ರಮಣ, ಯುದ್ಧದ ಆಯಾಮವನ್ನು ಬಲ ಪ್ರಯೋಗವೆಂಬ ಸಾಧನವು ಮೈಗೂಡಿಸಿಕೊಂಡಿರುತ್ತದೆ. ಉದಾ: ಪೂರ್ವ ಪಾಕಿಸ್ತಾನದಿಂದ ನಿರಂತರ ವಲಸೆಯ ಕಾರಣಕ್ಕೆ ಭಾರತವು ತನ್ನ ರಾಷ್ಟ್ರೀಯ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳಲು 1971 ರಲ್ಲಿ ಪಾಕಿಸ್ತಾನದೊಡನೆ ಬಲ ಪ್ರಯೋಗದ ಸಾಧನವಾದ ಯುದ್ಧವನ್ನು ಬಳಸಿದ್ದುದು. ಪ್ರಸ್ತುತ ವಿಶ್ವದ ಎಲ್ಲ ದೇಶಗಳು ಶಾಂತಿಯುತ ಸಾಧನಗಳ ಮಹತ್ವವನ್ನು ಅರಿತಿದ್ದರೂ ರಾಷ್ಟ್ರೀಯ ಹಿತಾಸಕ್ತಿಗೆ ಅನಿವಾರ್ಯವಾದಲ್ಲಿ ಯುದ್ಧ ಅಥವಾ ಆಕ್ರಮಣದಂತಹ ಬಲ ಪ್ರಯೋಗದ ಸಾಧನವನ್ನೂ ಮರೆತಿಲ್ಲ. ಆಸಕ್ತಿದಾಯಕ ಅಂಶವೇನೆಂದರೆ, ಭಯೋತ್ಪಾದನೆಯಿಂದ ರಾಷ್ಟ್ರೀಯ ಹಿತಾಸಕ್ತಿಗೆ ಧಕ್ಕೆಯಾದಾಗ ರಾಷ್ಟ್ರಗಳು ಬಳಸುವ ಮಿಲಿಟರಿ ಬಲದ ಪ್ರಯೋಗವನ್ನು ಅಂತರ್‌ರಾಷ್ಟ್ರೀಯ ಸಮುದಾಯವು ಸಾರ್ವತ್ರಿಕವಾಗಿ ಸಮ್ಮತಿಸುತ್ತದೆ.

6. ಸಾಮೂಹಿಕ ಭದ್ರತೆ **[Collective Security]:** ಒಬ್ಬನಿಗಾಗಿ ಎಲ್ಲರು ಮತ್ತು ಎಲ್ಲರಿಗಾಗಿ ಒಬ್ಬ ಎಂಬ ಸಹಕಾರ ತತ್ವದಂತೆ ವಿಶ್ವದ ರಾಷ್ಟ್ರಗಳು ಕಾರ್ಯಾಚರಿಸುವ ವ್ಯವಸ್ಥೆಯೇ ಸಾಮೂಹಿಕ ಭದ್ರತೆ. ಇಲ್ಲಿ ಒಂದು ರಾಷ್ಟ್ರದ ಹಿತಾಸಕ್ತಿಗೆ ಧಕ್ಕೆಯಾಗುವ ಬೆಳವಣಿಗೆ ಉಂಟಾದರೆ ಅದನ್ನು ತಡೆಯಲು ಇತರ ರಾಷ್ಟ್ರಗಳು ಸಹಾಯಕ್ಕೆ ಧಾವಿಸಿ ಆ ರಾಷ್ಟ್ರದ ರಾಷ್ಟ್ರೀಯ ಹಿತಾಸಕ್ತಿಯನ್ನು ಕಾಪಾಡುತ್ತವೆ. ಅಂತೆಯೇ ರಾಷ್ಟ್ರವೊಂದು ಇತರ ರಾಷ್ಟ್ರಗಳಿಗೆ ತೊಂದರೆ ಉಂಟಾದರೆ ಅಂತರ್‌ರಾಷ್ಟ್ರೀಯ ಸಮುದಾಯ ಕೈಗೊಳ್ಳುವ ನಿರ್ಧಾರಗಳನ್ನು ಪಾಲಿಸುವ ಮೂಲಕ ತೊಂದರೆಗೊಳಗಾದ ದೇಶದ ರಾಷ್ಟ್ರೀಯ ಹಿತಾಸಕ್ತಿಯನ್ನು ಕಾಪಾಡಲು ಶ್ರಮಿಸುತ್ತದೆ. ಸಾಮೂಹಿಕ ಭದ್ರತೆಯಡಿ ಪ್ರತಿ ರಾಷ್ಟ್ರವು ಇತರ ರಾಷ್ಟ್ರಗಳ ಹಿತಾಸಕ್ತಿಗೆ ಧಕ್ಕೆಯಾಗದಂತೆ ತನ್ನ ರಾಷ್ಟ್ರೀಯ ಶಕ್ತಿಯನ್ನು

ಉಪಯೋಗಿಸಬೇಕಾಗುತ್ತದೆ. ಒಂದೊಮ್ಮೆ ರಾಷ್ಟ್ರವೊಂದು ಇತರ ರಾಷ್ಟ್ರಗಳ ಹಿತಾಸಕ್ತಿಗೆ ಧಕ್ಕೆಯುಂಟು ಮಾಡುವ ವರ್ತನೆಯನ್ನು ತೋರಿದರೆ ಅಂತರ್‌ರಾಷ್ಟ್ರೀಯ ಸಮುದಾಯದ ಸಾಮೂಹಿಕ ಕ್ರಮಗಳನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಜಗತ್ತಿನ ಎಲ್ಲ ರಾಷ್ಟ್ರಗಳ ಹಿತಾಸಕ್ತಿಯ ಸಂರಕ್ಷಣೆಗೆ ಸಾಮೂಹಿಕ ಭದ್ರತಾ ವ್ಯವಸ್ಥೆಯು ಉಪಯುಕ್ತ ಸಾಧನವೆನಿಸಿದೆ.

**7. ಮಿಲಿಟರಿ ಬಲದ ಪ್ರದರ್ಶನ [Demonstration of Military Force]:** ಜಗತ್ತಿನ ಕೆಲವು ದೇಶಗಳು ತಮ್ಮ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳಲು ತಮ್ಮ ಸೈನಿಕ ಶಕ್ತಿಯ ಪ್ರದರ್ಶನವನ್ನು ಸಾಧನವಾಗಿ ಬಳಸಿಕೊಂಡಿರುವ ನಿದರ್ಶನಗಳಿವೆ. ಸೈನಿಕ ಶಕ್ತಿಯನ್ನು ಸಾರ್ವಜನಿಕವಾಗಿ ಪ್ರದರ್ಶಿಸುವ ಮೂಲಕ ದೇಶವೊಂದು ಎದುರಾಳಿಗಳಿಗೆ ತನ್ನ ರಾಷ್ಟ್ರೀಯ ಹಿತಾಸಕ್ತಿಗಳ ತಂಟೆಗೆ ಬರದಂತೆ ನಿಯಂತ್ರಿಸುತ್ತವೆ. ಉದಾ: ಭಾರತವು ತನ್ನಲ್ಲಿರುವ ಮಿಲಿಟರಿ ಸಾಮರ್ಥ್ಯವನ್ನು ಗಣರಾಜ್ಯೋತ್ಸವದಂದು ಪ್ರದರ್ಶಿಸುವ ಮೂಲಕ ಎದುರಾಳಿ ದೇಶಗಳನ್ನು ನಿಯಂತ್ರಿಸುವುದು. ಅಂತೆಯೇ ಫೆಸಿಪಿಕ್ ಪ್ರದೇಶದಲ್ಲಿ ಅಮೇರಿಕಾವು ಪರಮಾಣು ಪರೀಕ್ಷೆ ನಡೆಸುವ ಮೂಲಕ ಮಿಲಿಟರಿ ಪ್ರದರ್ಶನಕ್ಕೆ ಪ್ರಯತ್ನಿಸಿತ್ತು.

**8. ಧರ್ಮ [Riligion]:** ಕೆಲ ದೇಶಗಳು ತಮ್ಮ ರಾಷ್ಟ್ರೀಯ ಹಿತಾಸಕ್ತಿಯನ್ನು ಉತ್ತೇಜಿಸಲು ಧರ್ಮವನ್ನು ಸಾಧನವಾಗಿ ಬಳಸಿಕೊಳ್ಳುತ್ತವೆ. ಬ್ರಿಟನ್ ತನ್ನ ಸಾಮ್ರಾಜ್ಯಶಾಹಿ ಆಡಳಿತದ ವೇಳೆಯಲ್ಲಿ ಧರ್ಮ ಪ್ರಚಾರಕರನ್ನು ಬಳಸಿಕೊಂಡು ವಸಾಹತು ಪ್ರದೇಶಗಳಲ್ಲಿ ತನ್ನ ಹಿತಾಸಕ್ತಿ ರಕ್ಷಿಸಿಕೊಳ್ಳಲು ಪ್ರಯತ್ನಿಸಿತ್ತು.

ಈ ಮೇಲೆ ಪ್ರಸ್ತಾಪಿಸಲಾಗಿರುವ ಸಾಧನಗಳು ಜಗತ್ತಿನ ವಿವಿಧ ದೇಶಗಳ ರಾಷ್ಟ್ರೀಯ ಹಿತಾಸಕ್ತಿಯನ್ನು ಸಂರಕ್ಷಿಸಲು ಉಪಯುಕ್ತವೆನಿಸಿವೆ. ತನ್ನ ರಾಷ್ಟ್ರೀಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವುದು ದೇಶವೊಂದರ ಕರ್ತವ್ಯ ಮತ್ತು ಹಕ್ಕಾಗಿದ್ದು ಪ್ರಸ್ತಾಪಿತ ಸಾಧನಗಳ ಪೈಕಿ ಯಾವುದೇ ಸಾಧನವನ್ನು ಬಳಸಿಕೊಳ್ಳಲು ದೇಶಗಳು ಸ್ವತಂತ್ರವಾಗಿರುತ್ತವೆ. ಆದರೆ, ಅಂತರ್‌ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯ ಕಾರಣಕ್ಕೆ ಬಲ ಪ್ರಯೋಗದ ಬದಲು ಶಾಂತಿಯುತ ಸಾಧನಗಳ ಬಳಕೆಯನ್ನು ದೇಶಗಳಿಂದ ನಿರೀಕ್ಷಿಸಲಾಗುತ್ತದೆ.



## ಮಾದರಿ ಪ್ರಶ್ನೆಗಳು [Model Questions]:

**[A.] ಎರಡು ಅಂಕದ ಪ್ರಶ್ನೆಗಳು:**

1. ರಾಷ್ಟ್ರೀಯ ಹಿತಾಸಕ್ತಿಯನ್ನು ವ್ಯಾಖ್ಯಾನಿಸಿರಿ.
2. ರಾಷ್ಟ್ರೀಯ ಹಿತಾಸಕ್ತಿ ಎಂದರೇನು?
3. ರಾಷ್ಟ್ರೀಯ ಹಿತಾಸಕ್ತಿಯ ಮೂಲಾಂಶಗಳ ಎರಡು ಪ್ರಕಾರಗಳನ್ನು ಬರೆಯಿರಿ.
4. ರಾಷ್ಟ್ರೀಯ ಹಿತಾಸಕ್ತಿಯ ಮೂರು ಮೂಲಾಂಶಗಳನ್ನು ತಿಳಿಸಿರಿ.
5. ಮಾಧ್ಯಮಿಕ ಹಿತಾಸಕ್ತಿಯ ಅರ್ಥವನ್ನು ತಿಳಿಸಿರಿ.
6. ಸಾಮಾನ್ಯ ಹಿತಾಸಕ್ತಿ ಎಂದರೇನು?
7. ಪ್ರಚಾರ ಎಂದರೇನು?
8. ಆರ್ಥಿಕ ನೆರವು ಪರಿಕಲ್ಪನೆಗೆ ಕಾರಣವಾದ ಅಂಶಗಳಾವುವು?
9. ಶಕ್ತಿ ಸಮತೋಲನ ಎಂದರೇನು?
10. ರಾಷ್ಟ್ರೀಯ ಹಿತಾಸಕ್ತಿಯನ್ನು ಉತ್ತೇಜಿಸುವ ನಾಲ್ಕು ಸಾಧನಗಳನ್ನು ಬರೆಯಿರಿ

**[B.] ಐದು ಅಂಕದ ಪ್ರಶ್ನೆಗಳು:**

1. ರಾಷ್ಟ್ರೀಯ ಹಿತಾಸಕ್ತಿಯ ಮೂಲಾಂಶಗಳನ್ನು ಚರ್ಚಿಸಿರಿ.
2. ರಾಷ್ಟ್ರೀಯ ಹಿತಾಸಕ್ತಿಯ ಬಗೆಗಳನ್ನು ವಿವರಿಸಿರಿ.
3. ರಾಷ್ಟ್ರೀಯ ಹಿತಾಸಕ್ತಿಯನ್ನು ಉತ್ತೇಜಿಸುವ ಸಾಧನಗಳನ್ನು ಪರಿಶೀಲಿಸಿರಿ.

**[C.] ಹತ್ತು ಅಂಕದ ಪ್ರಶ್ನೆಗಳು:**

1. ರಾಷ್ಟ್ರೀಯ ಹಿತಾಸಕ್ತಿ ಎಂದರೇನು? ಅದನ್ನು ಉತ್ತೇಜಿಸುವ ಸಾಧನಗಳನ್ನು ವಿವರಿಸಿರಿ.
2. ರಾಷ್ಟ್ರೀಯ ಹಿತಾಸಕ್ತಿಯ ಮೂಲಾಂಶಗಳು ಮತ್ತು ಬಗೆಗಳನ್ನು ಚರ್ಚಿಸಿರಿ

ಅಧ್ಯಾಯ 7:

# ರಾಷ್ಟ್ರೀಯ ಶಕ್ತಿ

## [NATIONAL POWER].

### ಪ್ರಸ್ತಾವನೆ [Introduction]:

ಬಲಶಾಲಿಗಳು ಬದುಕುಳಿಯುತ್ತಾರೆ ಮತ್ತು ಶಕ್ತಿಯುತವಾದದ್ದು ಸದಾ ಸರಿಯಾದದ್ದು ಎಂಬ ನುಡಿಗಟ್ಟುಗಳು ಸಮಾಜದಲ್ಲಿನ ಶಕ್ತಿಯ ಮಹತ್ವವನ್ನು ಪ್ರತಿಪಾದಿಸುತ್ತವೆ. ಹೀಗಾಗಿ ವ್ಯಕ್ತಿಯೊಬ್ಬ ತನ್ನಲ್ಲಿ ವೈವಿಧ್ಯಮಯ ಶಕ್ತಿಯನ್ನು ಮೈಗೂಡಿಸಿಕೊಂಡು ಸುಖಕರ ಜೀವನ ನಡೆಸಲು ಬಯಸುತ್ತಾನೆ. ವ್ಯಕ್ತಿಯಂತೆ ಜಗತ್ತಿನ ಪ್ರತಿ ದೇಶವೂ ಸಹ ತನ್ನದೇಯಾದ ಶಕ್ತಿಯನ್ನು ಹೊಂದಲು ಬಯಸುತ್ತದೆ. ದೇಶವೊಂದು ಹೊಂದಿರುವ ಶಕ್ತಿಯನ್ನು ರಾಷ್ಟ್ರೀಯ ಶಕ್ತಿ ಎನ್ನಲಾಗುತ್ತದೆ. ಪ್ರಸ್ತುತ ಅಧ್ಯಾಯದಲ್ಲಿ ವ್ಯಕ್ತಿಯಂತೆ ದೇಶವೊಂದು ಹೊಂದಿರುವ ಶಕ್ತಿ ಅಂದರೆ ರಾಷ್ಟ್ರೀಯ ಶಕ್ತಿಯ ಅರ್ಥ, ಸ್ವರೂಪ, ರೂಪಗಳು, ಮೂಲಾಂಶಗಳು ಮತ್ತು ಮಿತಿಗಳನ್ನು ವಿವರಿಸಲಾಗಿದೆ.

### [A.] ರಾಷ್ಟ್ರೀಯ ಶಕ್ತಿಯ ಅರ್ಥ [Meaning of National Power]:

ರಾಷ್ಟ್ರೀಯ ಶಕ್ತಿಯಅರ್ಥವನ್ನು ಮನವರಿಕೆ ಮಾಡಿಕೊಳ್ಳಬೇಕಾದರೆ ಶಕ್ತಿಯ ಅರ್ಥ ಸ್ಪಷ್ಟವಾಗಿ ತಿಳಿದಿರಬೇಕಾದದ್ದು ಅತ್ಯಗತ್ಯ. ಆದ್ದರಿಂದ ಈ ಕೆಳಗೆ ಮೊದಲು ಶಕ್ತಿ ಎಂಬ ಪರಿಕಲ್ಪನೆಯ ಅರ್ಥವನ್ನು ಸ್ಪಷ್ಟಗೊಳಿಸಿ ನಂತರ ರಾಷ್ಟ್ರೀಯ ಶಕ್ತಿಯ ಅರ್ಥವನ್ನು ನೀಡಲಾಗಿದೆ.

ಶಕ್ತಿ ಎಂಬ ಪದವು ಆಂಗ್ಲ ಭಾಷೆಯ ಪವರ್ ಪದದ ತರ್ಜಿಮೆಯಾಗಿದೆ. ಈ ಎರಡೂ ಪದಗಳ ಮೂಲವನ್ನು ಲ್ಯಾಟಿನ್ ಭಾಷೆಯ ಪೊಟರೆ ಪದದಲ್ಲಿ ಗುರುತಿಸಲಾಗುತ್ತದೆ. ಪೊಟರೆ ಎಂದರೆ ಸಮರ್ಥನಾಗು ಅಥವಾ ಶಕ್ತನಾಗು ಎಂದರ್ಥ. ಗಮನಾರ್ಹ ಅಂಶವೇನೆಂದರೆ, ಚಿಂತಕರಿಂದ ನೈಸರ್ಗಿಕ ವಿಜ್ಞಾನದಲ್ಲಿ ಪವರ್ ಪದಕ್ಕೆ ಬಲ ಅಥವಾ ಶಕ್ತಿ ಎಂಬ ಅರ್ಥವನ್ನು ನೀಡಲಾಗಿದೆ. ಆದರೆ, ಸಮಾಜ ವಿಜ್ಞಾನದಲ್ಲಿ ಪವರ್ ಪದಕ್ಕೆ ಸಾಮರ್ಥ್ಯ, ಬಲ, ಶಕ್ತಿ, ಪ್ರಭಾವ, ಅಧಿಕಾರ ಎಂಬ ವೈವಿಧ್ಯಮಯ ಅರ್ಥವನ್ನು



ನೀಡಲಾಗಿದೆ. ಫಲವಾಗಿ ಶಕ್ತಿಯ ಸ್ಪಷ್ಟ ಅಥವಾ ನಿಖರ ಅರ್ಥ ವಿವರಣೆ ಸವಾಲಿನ ಸಂಗತಿ ಎನಿಸಿದೆ.

ಸರಳಾರ್ಥದಲ್ಲಿ ವಿರೋಧದ ನಡುವೆಯೂ ವ್ಯಕ್ತಿ ತನ್ನ ಇಚ್ಛೆಗಳನ್ನು ಪೂರೈಸಿಕೊಳ್ಳುವ ಸಾಮರ್ಥ್ಯವನ್ನು ಶಕ್ತಿ ಎನ್ನಲಾಗುತ್ತದೆ. ವಿಶಾಲಾರ್ಥದಲ್ಲಿ ದೇಶದ ಪ್ರಜೆಗಳ ವರ್ತನೆಯನ್ನು ಪ್ರಭಾವಿಸುವ ಅಥವಾ ಬದಲಾಯಿಸುವ ನಿರ್ಧಾರಗಳನ್ನು ಜಾರಿಗೊಳಿಸಬಲ್ಲ ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪಿನ ಸಾಮರ್ಥ್ಯವೇ ಶಕ್ತಿ. ನಿರ್ದಿಷ್ಟ ಗುರಿ ಸಾಧನೆಗಾಗಿ ಪ್ರಜೆಗಳ ವರ್ತನೆಯನ್ನು ನಿಯಂತ್ರಿಸುವುದನ್ನು ಮತ್ತು ಒಪ್ಪದವರಿಗೆ ಶಿಕ್ಷೆ ಅಥವಾ ಬಲ ಪ್ರಯೋಗ ಮಾಡುವುದನ್ನು ಶಕ್ತಿಯು ಪ್ರತಿನಿಧಿಸುತ್ತದೆ. ಈ ಹಿನ್ನೆಲೆಯಲ್ಲಿ ವ್ಯಕ್ತಿ ಇತರ ವ್ಯಕ್ತಿಗಳ ಮೇಲೆ ಹೊಂದುವ ನಿಯಂತ್ರಣ, ಬೀರುವ ಪ್ರಭಾವ, ಚಲಾಯಿಸುವ ಬಲ ಪ್ರಯೋಗದ ಸಾಮರ್ಥ್ಯವೇ ಶಕ್ತಿಯಾಗಿದೆ. ಶಕ್ತಿಯ ಪರಿಕಲ್ಪನೆಯನ್ನು ಮತ್ತಷ್ಟು ಸ್ಪಷ್ಟಗೊಳಿಸಿಕೊಳ್ಳಲು ಕೆಳಗೆ ಅದನ್ನು ಕುರಿತಾದ ಚಿಂತಕರ ವ್ಯಾಖ್ಯಾನಗಳನ್ನು ನೀಡಲಾಗಿದೆ.

ಹಾನ್ಸ್ ಜೆ. ಮಾರ್ಗೆಂಥೊ ಪ್ರಕಾರ ಒಬ್ಬ ವ್ಯಕ್ತಿ ಇತರ ವ್ಯಕ್ತಿಗಳ ಮನಸ್ಸು ಮತ್ತು ಕ್ರಿಯೆಗಳ ಮೇಲೆ ಪ್ರಭಾವ ಹೊಂದುವ ಸಾಮರ್ಥ್ಯವೇ ಶಕ್ತಿ.

ಬರ್ಟ್ರ್ಯಾಂಡ್ ರಸ್ಸೆಲ್ ಪ್ರಕಾರ ಅಪೇಕ್ಷಿತ ಪರಿಣಾಮಗಳನ್ನು ಉಂಟು ಮಾಡುವ ವ್ಯಕ್ತಿಯ ಸಾಮರ್ಥ್ಯವೇ ಶಕ್ತಿ.

ಎಂ. ಜಿ. ಸ್ಮಿತ್ ಪ್ರಕಾರ ಮನವೊಲಿಸುವಿಕೆಯಿಂದ ಹಿಡಿದು ಬಲ ಪ್ರಯೋಗದ ವರೆಗಿನ ವಿವಿಧ ಸಾಧನಗಳ ಮೂಲಕ ಜನರು ಮತ್ತು ವಿಷಯಗಳ ಮೇಲೆ ಪರಿಣಾಮಕಾರಿ ನಿಯಂತ್ರಣ ಹೊಂದುವ ಸಾಮರ್ಥ್ಯವೇ ಶಕ್ತಿ.

ತಜ್ಞರು ನೀಡಿರುವ ವಿಭಿನ್ನ ವಿವರಣೆಗಳ ಆಧಾರದ ಮೇಲೆ ಮಾನವ ಸಂಬಂಧಗಳಲ್ಲಿ ವ್ಯಕ್ತಿಯೊಬ್ಬ ತನ್ನ ಉದ್ದೇಶ ಸಾಧನೆಗಾಗಿ ಇತರ ವ್ಯಕ್ತಿಗಳ ವರ್ತನೆಯನ್ನು ಪ್ರಭಾವಿಸುವ, ನಿಯಂತ್ರಿಸುವ ಅಥವಾ ಬದಲಾಯಿಸುವ ಸಾಮರ್ಥ್ಯವು ಶಕ್ತಿಯಾಗಿದೆ. ಚಲಾಯಿಸುವ ವ್ಯಕ್ತಿ ಚಲಾಯಿಸಲ್ಪಟ್ಟ ವ್ಯಕ್ತಿಗಳ ಮೇಲೆ ಪ್ರಾಬಲ್ಯ ಹೊಂದುವ ಪ್ರಕ್ರಿಯೆಯು ಶಕ್ತಿ ಎನಿಸುತ್ತದೆ. ಶಕ್ತಿಯ ಈ ಪೂರ್ವ ತಿಳುವಳಿಕೆಯ ಆಧಾರದ ಮೇಲೆ ನಾವು ರಾಷ್ಟ್ರೀಯ ಶಕ್ತಿಯನ್ನು ಸುಲಭವಾಗಿ ಮನವರಿಕೆ ಮಾಡಿಕೊಳ್ಳಬಹುದಾಗಿದೆ.

ಸರಳಾರ್ಥದಲ್ಲಿ ದೇಶವೊಂದು ತನ್ನ ಹಿತಾಸಕ್ತಿಗಳನ್ನು ಸಂರಕ್ಷಿಸಿಕೊಳ್ಳಲು ಹೊಂದಿರುವ ಸಾಮರ್ಥ್ಯವೇ ರಾಷ್ಟ್ರೀಯ ಶಕ್ತಿ. ವಿಶಾಲಾರ್ಥದಲ್ಲಿ ನೆರವು, ಮನವೊಲಿಕೆ, ಬೆದರಿಕೆ ಅಥವಾ ಬಲ ಪ್ರಯೋಗದ ಮೂಲಕ ದೇಶವೊಂದು ಇತರ ದೇಶಗಳನ್ನು ನಿಯಂತ್ರಿಸುವ ಸಾಮರ್ಥ್ಯವೇ ರಾಷ್ಟ್ರೀಯ ಶಕ್ತಿ. ತನ್ನ ಹಿತಾಸಕ್ತಿಗಳಿಗೆ ಇತರ ರಾಷ್ಟ್ರಗಳಿಂದ ಧಕ್ಕೆಯಾಗದಂತೆ ಸಂರಕ್ಷಿಸಿಕೊಳ್ಳಲು ದೇಶವೊಂದಕ್ಕೆ ರಾಷ್ಟ್ರೀಯ ಶಕ್ತಿಯು ನೆರವಾಗುತ್ತದೆ.

ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿ ಚಲಾವಣೆಯಲ್ಲಿರುವ ರಾಷ್ಟ್ರೀಯ ಶಕ್ತಿಯ ಪರಿಕಲ್ಪನೆಯನ್ನು ಪರಿಪೂರ್ಣವಾಗಿ ಅರ್ಥೈಸಿಕೊಳ್ಳಲು ಅದನ್ನು ಕುರಿತಂತೆ ತಜ್ಞರು ನೀಡಿರುವ ಕೆಳಗಿನ ವ್ಯಾಖ್ಯಾನಗಳು ಸಹಕಾರಿ.

**ಪೆಡಲ್‌ಫೋರ್ಡ್ ಮತ್ತು ಲಿಂಕನ್** ಪ್ರಕಾರ ದೇಶವೊಂದು ತನ್ನ ಹಿತಾಸಕ್ತಿ ಅಥವಾ ಗುರಿಗಳನ್ನು ಈಡೇರಿಸಿಕೊಳ್ಳಲು ಉಪಯೋಗಿಸುವ ಸಾಮರ್ಥ್ಯವೇ ರಾಷ್ಟ್ರೀಯ ಶಕ್ತಿ.

**ಹಾರ್ಟ್‌ಮನ್** ಪ್ರಕಾರ ರಾಷ್ಟ್ರೀಯ ಗುರಿಗಳನ್ನು ಈಡೇರಿಸುವ ದೇಶವೊಂದರ ಸಾಮರ್ಥ್ಯವು ರಾಷ್ಟ್ರೀಯ ಶಕ್ತಿಯಾಗಿದ್ದು ನಿರ್ದಿಷ್ಟ ದೇಶವೊಂದು ತನ್ನ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳುವಲ್ಲಿ ಶಕ್ತಿಶಾಲಿ ಅಥವಾ ದುರ್ಬಲ ರಾಷ್ಟ್ರವೇ ಎಂಬುದನ್ನು ಸೂಚಿಸುವ ಪರಿಕಲ್ಪನೆ.

**ಆರ್ಗೆನ್ಸ್ಕಿ** ಪ್ರಕಾರ ತನ್ನ ಹಿತಾಸಕ್ತಿಗೆ ಪೂರಕವಾಗಿ ಇತರ ರಾಷ್ಟ್ರಗಳ ವರ್ತನೆಯನ್ನು ಪ್ರಭಾವಿಸುವ ದೇಶವೊಂದರ ಸಾಮರ್ಥ್ಯವೇ ರಾಷ್ಟ್ರೀಯ ಶಕ್ತಿ.

## [B.] ರಾಷ್ಟ್ರೀಯ ಶಕ್ತಿಯ ಸ್ವರೂಪ [Nature of National Power]:

ರಾಷ್ಟ್ರೀಯ ಶಕ್ತಿಯ ಸ್ವರೂಪವನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳಲು ರಾಷ್ಟ್ರೀಯ ಮತ್ತು ಶಕ್ತಿ ಪದಗಳ ವಿಶೇಷ ಅರ್ಥವನ್ನು ಮನವರಿಕೆ ಮಾಡಿಕೊಳ್ಳಬೇಕಾಗುತ್ತದೆ. ರಾಷ್ಟ್ರೀಯ ಎಂಬುದು ರಾಷ್ಟ್ರಕ್ಕೆ ಸಂಬಂಧಿಸಿದ ಪರಿಕಲ್ಪನೆಯಾಗಿದೆ. ಹೀಗಾಗಿ ರಾಷ್ಟ್ರೀಯ ಶಕ್ತಿ ಎಂಬುದು ರಾಷ್ಟ್ರವೊಂದರ ಜನರ ಪರವಾಗಿ ನಿರ್ಧಾರ ಕೈಗೊಳ್ಳುವವರು, ನಾಯಕರು ಮತ್ತು ರಾಯಭಾರಿಗಳ ಗುಂಪು ಚಲಾಯಿಸುವ ಶಕ್ತಿಯನ್ನು ಪ್ರತಿನಿಧಿಸುತ್ತದೆ. ನಿರ್ದಿಷ್ಟವಾಗಿ ಹೇಳುವುದಾದರೆ ವಿದೇಶಾಂಗ ನೀತಿಯನ್ನು ರೂಪಿಸುವ ಹಾಗೂ ಜಾರಿಗೊಳಿಸುವ ಮೂಲಕ ರಾಷ್ಟ್ರದ ಹಿತಾಸಕ್ತಿಯನ್ನು ಕಾಪಾಡುವ ನಿರ್ಧಾರ ಕೈಗೊಳ್ಳುವವರ ಗುಂಪಿನ ಶಕ್ತಿಯನ್ನು ರಾಷ್ಟ್ರೀಯ ಶಕ್ತಿಯು ಧ್ವನಿಸುತ್ತದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಶಕ್ತಿ ಎಂಬುದು ದೇಶವೊಂದರ ಸಮಸ್ತ ಜನರನ್ನು ಪ್ರತಿನಿಧಿಸದೇ ನಿರ್ಧಾರ ಕೈಗೊಳ್ಳುವವರನ್ನು ಮಾತ್ರ ಒಳಗೊಳ್ಳುವ ಪರಿಕಲ್ಪನೆಯಾಗಿದೆ. ಅಂತೆಯೇ ಶಕ್ತಿ ಎಂಬುದು ಬಲ ಮತ್ತು ಪ್ರಭಾವ ಎಂಬ ಎರಡು ಆಯಾಮಗಳಿಂದ ಕೂಡಿರುವ ಪರಿಕಲ್ಪನೆ. ದೇಶವೊಂದು ಇತರ ದೇಶಗಳ ವರ್ತನೆಗಳನ್ನು ತನ್ನ ಹಿತಾಸಕ್ತಿಗೆ ತಕ್ಕಂತೆ ನಿಯಂತ್ರಿಸುವಾಗ ಬಲ ಅಥವಾ ಪ್ರಭಾವಗಳನ್ನು ರಾಷ್ಟ್ರೀಯ ಶಕ್ತಿಯಾಗಿ ಬಳಸುತ್ತದೆ. ಹೀಗೆ ತನ್ನದೇಯಾದ ಪದಶಃ ವಿಶೇಷ ಅರ್ಥಗಳನ್ನು ಮೈಗೂಡಿಸಿಕೊಂಡಿರುವ ರಾಷ್ಟ್ರೀಯ ಶಕ್ತಿಯ ಸ್ವರೂಪವನ್ನು ಕೆಳಗೆ ನೀಡಲಾಗಿರುವ ಅದರ ಲಕ್ಷಣಗಳಿಂದ ಸುಲಭವಾಗಿ ಮನವರಿಕೆ ಮಾಡಿಕೊಳ್ಳಬಹುದಾಗಿದೆ.



**1. ಅಂತರ್‌ರಾಷ್ಟ್ರೀಯ ಸಂಬಂಧಗಳ ಸಾಧನ ಮತ್ತು ಗುರಿ:** ಶಾಂತಿ, ಭದ್ರತೆ, ಪ್ರಗತಿ, ಅಭಿವೃದ್ಧಿ, ಸ್ಥಾನಮಾನಗಳ ಕಾರಣಕ್ಕೆ ರಾಷ್ಟ್ರಗಳ ನಡುವೆ ಅಂತರ್‌ರಾಷ್ಟ್ರೀಯ ಸಂಬಂಧ ಏರ್ಪಡುತ್ತವೆ. ಈ ವೇಳೆಯಲ್ಲಿ ದೇಶವೊಂದು ಇತರ ದೇಶಗಳನ್ನು ತನ್ನ ಹಿತಾಸಕ್ತಿಗೆ ಪೂರಕವಾಗಿ ನಿಯಂತ್ರಿಸಲು ಆ ದೇಶದ ರಾಷ್ಟ್ರೀಯ ಶಕ್ತಿಯು ನೆರವಾಗುವ ಮೂಲಕ ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿ ಸಾಧನವಾಗಿ ರಾಷ್ಟ್ರೀಯ ಶಕ್ತಿ ಪರಿಗಣಿಸಲ್ಪಡುತ್ತದೆ. ಅಂತೆಯೇ ದೇಶಗಳು ತಮ್ಮ ತಕ್ಷಣದ ಅಗತ್ಯಗಳ ಸಾಧನೆಗಾಗಿ ಮಾತ್ರ ರಾಷ್ಟ್ರೀಯ ಶಕ್ತಿಯನ್ನು ಬಯಸದೇ ಭವಿಷ್ಯದ ದೃಷ್ಟಿಯಿಂದ ಅದನ್ನು ಹೆಚ್ಚಿಸಿಕೊಳ್ಳಲು ಮುಂದಾಗುತ್ತವೆ. ಹೀಗಾಗಿ ರಾಷ್ಟ್ರೀಯ ಶಕ್ತಿಯು ಕೇವಲ ಸಾಧನವಾಗಿರದೇ ಗುರಿಯಾಗಿಯೂ ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿ ಪರಿಗಣಿಸಲ್ಪಡುತ್ತದೆ.

**2. ರಾಷ್ಟ್ರೀಯ ಹಿತಾಸಕ್ತಿಗಳ ಸಂರಕ್ಷಣೆಯ ಸಾಧನ:** ಇತರ ದೇಶಗಳ ವರ್ತನೆಯನ್ನು ಪ್ರಭಾವಿಸುವ ಅಥವಾ ನಿಯಂತ್ರಿಸುವ ಮೂಲಕ ದೇಶವೊಂದು ತನ್ನ ರಾಷ್ಟ್ರೀಯ ಹಿತಾಸಕ್ತಿಯನ್ನು ಸಾಧಿಸಿಕೊಳ್ಳಲು ರಾಷ್ಟ್ರೀಯ ಶಕ್ತಿ ನೆರವಾಗುತ್ತದೆ. ಜಗತ್ತಿನ ಶಕ್ತಿಶಾಲಿ ದೇಶಗಳು ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಅವುಗಳ ರಾಷ್ಟ್ರೀಯ ಶಕ್ತಿ ಕಾರಣವೆಂದರೆ ತಪ್ಪಾಗಲಾರದು. ಜೊತೆಗೆ ದೇಶವೊಂದು ತನ್ನ ಹಿತಾಸಕ್ತಿಗಳನ್ನು ಸಾಧಿಸಿಕೊಳ್ಳುವ ಸಾಮರ್ಥ್ಯವನ್ನು ಆಧರಿಸಿ ಅವುಗಳ ರಾಷ್ಟ್ರೀಯ ಶಕ್ತಿಯನ್ನು ಅಳೆಯಲಾಗುತ್ತದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಶಕ್ತಿಯು ದೇಶಗಳ ಹಿತಾಸಕ್ತಿಗಳ ಸಂರಕ್ಷಣೆಯ ಸಾಧನವಾಗಿ ತನ್ನ ಸ್ವರೂಪವನ್ನು ಪಡೆದಿದೆ.

**3. ಚಲನಶೀಲ ಮತ್ತು ಅಂತರ್‌ಸಂಬಂಧದ ಗುಣ:** ರಾಷ್ಟ್ರೀಯ ಶಕ್ತಿಯು ಸ್ಥಿರವಾಗಿರದೇ ಕಾಲದಿಂದ ಕಾಲಕ್ಕೆ ಬದಲಾವಣೆಗೊಳ್ಳುತ್ತದೆ. ಉದಾ: ಅಲಿಪ್ತ ಚಳುವಳಿಯ ಸಂಸ್ಥಾಪಕ ದೇಶವಾಗಿದ್ದ ಭಾರತದ ರಾಷ್ಟ್ರೀಯ ಶಕ್ತಿಯು 1962 ರ ಭಾರತ ಮತ್ತು ಚೀನಾ ಯುದ್ಧದ ಸೋಲಿನಿಂದ ಹಿನ್ನಡೆ ಅನುಭವಿಸಿದ್ದು 1965 ರ ಭಾರತ ಮತ್ತು ಪಾಕ್ ಯುದ್ಧದಲ್ಲಿ ಗೆಲುವು ಪಡೆದಾಗ ಮರಳಿ ಸುಧಾರಿಸಿದುದು. ರಾಷ್ಟ್ರೀಯ ಶಕ್ತಿಯ ಚಲನಶೀಲತೆಯಿಂದ ಶಕ್ತಿಶಾಲಿ ರಾಷ್ಟ್ರ ದುರ್ಬಲ ರಾಷ್ಟ್ರವೆನಿಸುವ ಮತ್ತು ದುರ್ಬಲ ರಾಷ್ಟ್ರ ಶಕ್ತಿಶಾಲಿಯಾಗುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಜೊತೆಗೆ ರಾಷ್ಟ್ರೀಯ ಶಕ್ತಿಯು ತನ್ನ ವಿವಿಧ ಮೂಲಾಂಶಗಳ ಅಂತರ್‌ಸಂಬಂಧಗಳಿಂದ ವಿಶ್ಲೇಷಿಸಲ್ಪಡುತ್ತದೆ. ಮುಂದುವರಿದು ಪರಸ್ಪರ ವಿರುದ್ಧ ರಾಷ್ಟ್ರಗಳ ಶಕ್ತಿಗಳ ಬದಲಾವಣೆಯು ದೇಶವೊಂದರ ರಾಷ್ಟ್ರೀಯ ಶಕ್ತಿಯ ಬದಲಾವಣೆಗೆ ಕಾರಣವಾಗುವ ಸಾಧ್ಯತೆ ಅಧಿಕವಾಗಿರುತ್ತದೆ. ಉದಾ: 1991 ರಲ್ಲಿ ಸೋವಿಯತ್ ಒಕ್ಕೂಟದ ವಿಭಜನೆಯಿಂದ ಅಮೇರಿಕಾದ ರಾಷ್ಟ್ರೀಯ ಶಕ್ತಿಯಲ್ಲಿ ವ್ಯಾಪಕ ಬದಲಾವಣೆ ಉಂಟಾದುದು. ವಿವಿಧ ದೇಶಗಳ ರಾಷ್ಟ್ರೀಯ ಶಕ್ತಿಯೊಡನೆ ತೌಲನಿಕವಾಗಿ ದೇಶವೊಂದರ ರಾಷ್ಟ್ರೀಯ ಶಕ್ತಿಯನ್ನು ವಿಶ್ಲೇಷಣೆಗೊಳಪಡಿಸಿ ಅದರ ಸಾಮರ್ಥ್ಯವನ್ನು

ನಿರ್ಧರಿಸಲಾಗುತ್ತದೆ. ಹೀಗಾಗಿ ರಾಷ್ಟ್ರೀಯ ಶಕ್ತಿ ಚಲನಶೀಲ ಮತ್ತು ಅಂತರ್‌ಸಂಬಂಧ ಸ್ವರೂಪವನ್ನು ಪಡೆದಿದೆ ಎನ್ನಬಹುದಾಗಿದೆ.

**4. ದೇಶದಿಂದ ದೇಶಕ್ಕೆ ವ್ಯತ್ಯಾಸ:** ರಾಷ್ಟ್ರೀಯ ಶಕ್ತಿಯನ್ನು ಜಗತ್ತಿನ ಎಲ್ಲ ದೇಶಗಳೂ ಹೊಂದಿರುತ್ತವೆ. ಆದರೆ, ಯಾವುದೇ ಎರಡು ಅಥವಾ ಹೆಚ್ಚು ದೇಶಗಳ ರಾಷ್ಟ್ರೀಯ ಶಕ್ತಿ ಸಮಾನವಾಗಿರುವುದಿಲ್ಲ. ಸಾಮಾನ್ಯವಾಗಿ ಎರಡು ಶಕ್ತಿಶಾಲಿ ದೇಶಗಳನ್ನು ನಾವು ಸಮಾನವೆಂದು ಭಾವಿಸಿದರೂ ಅವೆರಡರ ನಡುವೆ ಪರಿಪೂರ್ಣ ಸಮಾನತೆ ಕಂಡು ಬರುವುದಿಲ್ಲ. ಕೆಲ ದೇಶಗಳು ರಾಷ್ಟ್ರೀಯ ಶಕ್ತಿಯ ಸೈನಿಕ ಆಯಾಮದಲ್ಲಿ ಸಮಾನವಾಗಿದ್ದರೆ ಇತರ ಆರ್ಥಿಕ ಹಾಗೂ ಮಾನಸಿಕ ಆಯಾಮದಲ್ಲಿ ಸಾಕಷ್ಟು ವ್ಯತ್ಯಾಸವನ್ನು ಪಡೆದಿರುತ್ತವೆ. ಆದ್ದರಿಂದ ರಾಷ್ಟ್ರೀಯ ಶಕ್ತಿ ದೇಶದಿಂದ ದೇಶಕ್ಕೆ ವ್ಯತ್ಯಾಸವುಳ್ಳ ಪರಿಕಲ್ಪನೆ ಎಂಬುದನ್ನು ಗುರುತಿಸಲಾಗಿದೆ.

**5. ವೈವಿಧ್ಯಮಯ ಮೂಲಾಂಶಗಳ ಪರಿಕಲ್ಪನೆ:** ರಾಷ್ಟ್ರೀಯ ಶಕ್ತಿಯು ಭೌಗೋಳಿಕ ಅಂಶ, ನೈಸರ್ಗಿಕ ಸಂಪನ್ಮೂಲ, ನಾಯಕತ್ವ, ಜನಸಂಖ್ಯೆ, ರಾಯಭಾರತ್ವ, ತಂತ್ರಜ್ಞಾನ ಮುಂತಾದ ಹಲವು ಮೂಲಾಂಶಗಳಿಂದ ಕೂಡಿರುವ ಪರಿಕಲ್ಪನೆ. ಜೊತೆಗೆ ದೇಶದಿಂದ ದೇಶಕ್ಕೆ ವ್ಯತ್ಯಾಸಗೊಳ್ಳುವ ರಾಷ್ಟ್ರೀಯ ಶಕ್ತಿಯು ಗುಣಾತ್ಮಕ ಮತ್ತು ಪರಿಮಾಣಾತ್ಮಕ ವಿಶ್ಲೇಷಣೆಗೆ ಒಳಪಟ್ಟಿರುತ್ತದೆ. ಹೀಗಾಗಿ ರಾಷ್ಟ್ರೀಯ ಶಕ್ತಿ ವೈವಿಧ್ಯಮಯ ಅಂಶಗಳಿಂದ ಕೂಡಿರುವ ಪರಿಕಲ್ಪನೆ ಎನಿಸಿದೆ.

**6. ನೈಜ ಮತ್ತು ಸಂಭವನೀಯ ಆಯಾಮ:** ದೇಶಗಳು ಹೊಂದಿರುವ ರಾಷ್ಟ್ರೀಯ ಶಕ್ತಿ ಎರಡು ಆಯಾಮಗಳನ್ನು ಮೈಗೂಡಿಸಿಕೊಂಡಿರುತ್ತದೆ. ಪ್ರಸ್ತುತ ಅಸ್ತಿತ್ವದಲ್ಲಿರುವ ದೇಶವೊಂದರ ಶಕ್ತಿಯು ನೈಜರಾಷ್ಟ್ರೀಯ ಶಕ್ತಿ ಎನಿಸಿದರೆ ಎದುರಾಗುವ ಭವಿಷ್ಯದ ಸವಾಲುಗಳನ್ನು ನಿರ್ವಹಿಸುವ ಅಥವಾ ಭವಿಷ್ಯದಲ್ಲಿ ದೇಶವೊಂದು ಗಳಿಸಿಕೊಳ್ಳಬಹುದಾದ ಸಾಮರ್ಥ್ಯವು ಸಂಭವನೀಯ ರಾಷ್ಟ್ರೀಯ ಶಕ್ತಿ ಎನಿಸಿಕೊಳ್ಳುತ್ತದೆ.

**7. ವಿದೇಶಾಂಗ ವ್ಯವಹಾರಗಳಿಗೆ ಆಧಾರ:** ದೇಶವೊಂದು ಹೊಂದಿರುವ ರಾಷ್ಟ್ರೀಯ ಶಕ್ತಿಯು ಆ ದೇಶದ ವಿದೇಶಾಂಗ ನೀತಿಯನ್ನು ರಚಿಸಲು ಮತ್ತು ಜಾರಿಗೊಳಿಸಲು ಸಹಕಾರಿಯಾಗುತ್ತದೆ. ಆಯಾ ದೇಶದ ನಾಯಕರು ಮತ್ತು ರಾಯಭಾರಿಗಳು ವಿದೇಶಿ ವ್ಯವಹಾರದಲ್ಲಿ ನಿರ್ಧಾರ ಕೈಗೊಳ್ಳಲು ಅವರ ದೇಶದ ರಾಷ್ಟ್ರೀಯ ಶಕ್ತಿ ಆಧಾರವಾಗಿರುತ್ತದೆ.

**8. ಅಂತರ್‌ರಾಷ್ಟ್ರೀಯ ಸಂಬಂಧಗಳ ಮಾಧ್ಯಮ:** ಜಗತ್ತಿನ ವಿವಿಧ ದೇಶಗಳ ನಡುವೆ ಸಂಬಂಧ ಏರ್ಪಡಲು ತಮ್ಮ ರಾಷ್ಟ್ರೀಯ ಶಕ್ತಿಯನ್ನು ವೃದ್ಧಿಸಿಕೊಳ್ಳುವ ದೇಶಗಳ ಬಯಕೆಯೇ ಕಾರಣವಾಗಿರುತ್ತದೆ. ಹೀಗಾಗಿ ಅಂತರ್‌ರಾಷ್ಟ್ರೀಯ ಸಂಬಂಧಗಳ ಬಲವರ್ಧನೆಗೆ ರಾಷ್ಟ್ರೀಯ ಶಕ್ತಿಯು ಉತ್ತಮ ಮಾಧ್ಯಮವೆನಿಸಿದೆ.



## [C.] ರಾಷ್ಟ್ರೀಯ ಶಕ್ತಿಯ ರೂಪಗಳು [Forms of National Power]:

ಜಗತ್ತಿನ ಪ್ರತಿ ದೇಶವು ತನ್ನದೇಯಾದ ರಾಷ್ಟ್ರೀಯ ಶಕ್ತಿಯನ್ನು ಹೊಂದಿರುತ್ತದೆ. ಆದರೆ, ಎರಡು ದೇಶಗಳ ರಾಷ್ಟ್ರೀಯ ಶಕ್ತಿ ಸಮ ಪ್ರಮಾಣದಲ್ಲಿರುವುದಿಲ್ಲ. ದೇಶಗಳ ರಾಷ್ಟ್ರೀಯ ಶಕ್ತಿಯ ಪ್ರಮಾಣದಲ್ಲಿ ವ್ಯತ್ಯಾಸವಿದ್ದರೂ ಅವುಗಳ ಶಕ್ತಿಯಲ್ಲಿ ಸಾಮಾನ್ಯ ಅಂಶಗಳನ್ನು ಕಾಣಬಹುದಾಗಿದೆ. ಸಾರ್ವತ್ರಿಕವಾಗಿ ಜಗತ್ತಿನ ಎಲ್ಲ ದೇಶಗಳ ರಾಷ್ಟ್ರೀಯ ಶಕ್ತಿಯಲ್ಲಿ ಚಿಂತಕರು ಕೆಳಗಿನ ಮೂರು ರೂಪವನ್ನು ಗುರುತಿಸಿದ್ದಾರೆ. ಅವುಗಳ ಸಂಕ್ಷೇಪ್ತ ವಿವರವನ್ನು ಇಲ್ಲಿ ನೀಡಲಾಗಿದೆ.

**1. ಸೈನಿಕ ಶಕ್ತಿ [Military Power]:** ಸಾಮಾನ್ಯವಾಗಿ ಭದ್ರತೆಯು ಎಲ್ಲ ದೇಶಗಳ ರಾಷ್ಟ್ರೀಯ ಹಿತಾಸಕ್ತಿಯ ಪ್ರಧಾನ ಮೂಲಾಂಶ. ತನ್ನ ಭದ್ರತೆಯನ್ನು ಕಾಪಾಡಿಕೊಳ್ಳುವುದು ಪ್ರತಿ ದೇಶದ ಪ್ರಾಥಮಿಕ ಜವಾಬ್ದಾರಿಯಾಗಿರುತ್ತದೆ. ಇತರ ದೇಶಗಳಿಂದ ಆಕ್ರಮಣ ಅಥವಾ ಯುದ್ಧದ ಸಾಧ್ಯತೆಯು ದೇಶವೊಂದರ ಭದ್ರತೆಗೆ ಹಾನಿಯನ್ನು ತಂದೊಡ್ಡಬಹುದು. ಹೀಗಾಗಿ ತನ್ನ ಭದ್ರತೆಯನ್ನು ಕಾಪಾಡಿಕೊಳ್ಳಲು ಪ್ರತಿ ದೇಶ ತನ್ನದೇಯಾದ ಸೈನ್ಯ ಶಕ್ತಿಯನ್ನು ಹೊಂದಿರುತ್ತದೆ. ದೇಶವೊಂದರ ಭೌಗೋಳಿಕ ಸಮಗ್ರತೆ ಹಾಗೂ ಜನರ ಭದ್ರತೆಗೆ ಸೈನಿಕ ಶಕ್ತಿಯು ದೇಶವೊಂದಕ್ಕೆ ಅನಿವಾರ್ಯ ಸಾಧನವಾಗಿರುತ್ತದೆ. ಜೊತೆಗೆ ಅಂತರ್‌ರಾಷ್ಟ್ರೀಯ ವ್ಯವಹಾರದಲ್ಲಿ ದೇಶವೊಂದರ ಪಾತ್ರ ಮತ್ತು ಮಹತ್ವವು ಅದರ ಸೈನ್ಯ ಶಕ್ತಿಯನ್ನು ಆಧರಿಸಿರುತ್ತದೆ. ಸೈನಿಕ ಶಕ್ತಿಯನ್ನು ಹೊಂದಿರದ ದೇಶವು ಪ್ರಪಂಚದ ಶಕ್ತಿಶಾಲಿ ರಾಷ್ಟ್ರವೆನಿಸಿಕೊಳ್ಳಲಾರದು. ಉದಾ: ಜರ್ಮನಿ ಮತ್ತು ಜಪಾನ್ ಆರ್ಥಿಕವಾಗಿ ಶಕ್ತಿಶಾಲಿ ದೇಶಗಳಾಗಿದ್ದರೂ ಸೈನಿಕ ಶಕ್ತಿಯಲ್ಲಿ ಅಮೇರಿಕಾಗಿಂತ ದುರ್ಬಲವಾದ್ದರಿಂದ ಅವು ವಿಶ್ವದ ಶಕ್ತಿಶಾಲಿ ಅಂದರೆ ಬಿಗ್ ಪವರ್ ದೇಶವೆನಿಸಿಕೊಂಡಿಲ್ಲದಿರುವುದು. ಈ ಹಿನ್ನೆಲೆಯಲ್ಲಿ ಸೈನಿಕ ಶಕ್ತಿಯು ದೇಶವೊಂದರ ರಾಷ್ಟ್ರೀಯ ಶಕ್ತಿಯ ಪ್ರಧಾನ ರೂಪವೆನಿಸಿದೆ.

**2. ಆರ್ಥಿಕ ಶಕ್ತಿ [Economic Power]:** ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಬಲ್ಲ ದೇಶವೊಂದರ ಸಾಮರ್ಥ್ಯವನ್ನು ಅದರ ಆರ್ಥಿಕ ಶಕ್ತಿ ಪ್ರತಿನಿಧಿಸುತ್ತದೆ. ಜೊತೆಗೆ ಆರ್ಥಿಕ ಅಂಶವಾದ ಸರಕು ಮತ್ತು ಸೇವೆಗಳನ್ನು ನೀಡುವ ಅಥವಾ ನಿರಾಕರಿಸುವ ಮೂಲಕ ಇತರ ದೇಶಗಳ ವರ್ತನೆಗಳನ್ನು ನಿಯಂತ್ರಿಸುವ ಸಾಮರ್ಥ್ಯವು ದೇಶವೊಂದರ ಆರ್ಥಿಕ ಶಕ್ತಿ ಎಂದು ಪರಿಗಣಿಸಲ್ಪಡುತ್ತದೆ. ದೇಶವೊಂದು ಹೊಂದಿರುವ ಕಚ್ಚಾ ವಸ್ತುಗಳು, ನೈಸರ್ಗಿಕ ಸಂಪನ್ಮೂಲಗಳು, ವ್ಯಾಪಾರ, ಕೈಗಾರಿಕಾ ಸಾಮರ್ಥ್ಯ, ಸಾರಿಗೆ ಸಂಪರ್ಕ ವ್ಯವಸ್ಥೆ, ತಲಾದಾಯ ಮುಂತಾದ ಅಂಶಗಳು ಆ ದೇಶದ ಆರ್ಥಿಕ ಶಕ್ತಿಯನ್ನು ನಿರ್ಧರಿಸುತ್ತವೆ. ಜಗತ್ತಿನ ಶ್ರೀಮಂತ ಅಥವಾ ಮುಂದುವರಿದ ದೇಶಗಳು ತಮ್ಮ ಆರ್ಥಿಕ ಶಕ್ತಿಯ ನೆರವಿನಿಂದ ಹಣಕಾಸು ನೆರವು ಅಥವಾ ಸಾಲ ನೀಡಿಕೆ ಮೂಲಕ ಇತರ ದೇಶಗಳನ್ನು ಪ್ರಭಾವಿಸುತ್ತಿವೆ.

ಇದರೊಡನೆ ಶ್ರೀಮಂತ ದೇಶಗಳು ಆರ್ಥಿಕ ಶಕ್ತಿಯ ನೆರವಿನಿಂದಲೇ ಅಂತರ ರಾಷ್ಟ್ರೀಯವಾಗಿ ತಮ್ಮ ಹಿತಾಸಕ್ತಿಯನ್ನು ಈಡೇರಿಸಿಕೊಳ್ಳಲು ಮುಂದಾಗುತ್ತಿವೆ. ಇತ್ತೀಚೆಗೆ ಆರ್ಥಿಕ ನಿರ್ಬಂಧ ಮತ್ತು ದಿಗ್ಬಂಧನಗಳ ಮೂಲಕ ಮುಂದುವರಿದ ದೇಶಗಳು ಆರ್ಥಿಕವಾಗಿ ಬಲ ಪ್ರಯೋಗಕ್ಕೆ ಮುಂದಾಗುತ್ತಿವೆ. ಇದಲ್ಲದೇ ವಿದೇಶಾಂಗ ನೀತಿಯ ವಿಷಯದಲ್ಲಿ ಆರ್ಥಿಕ ಶಕ್ತಿಯು ಪ್ರಧಾನ ಪಾತ್ರ ನಿರ್ವಹಿಸುತ್ತಿದೆ. ಫಲವಾಗಿ ದೇಶವೊಂದರ ರಾಷ್ಟ್ರೀಯ ಶಕ್ತಿಯಲ್ಲಿ ಸೈನ್ಯ ಶಕ್ತಿಗಿಂತ ಆರ್ಥಿಕ ಶಕ್ತಿ ಮಹತ್ವ ಪಡೆಯುತ್ತಿದೆ. ಆರ್ಥಿಕವಾಗಿ ಹಿಂದುಳಿದ ಹಾಗೂ ಮುಂದುವರಿಯುತ್ತಿರುವ ಆಫ್ರಿಕಾದ ದೇಶಗಳು ಆರ್ಥಿಕ ಶಕ್ತಿಯ ಕೊರತೆಯಿಂದ ಜಾಗತಿಕವಾಗಿ ದುರ್ಬಲ ರಾಷ್ಟ್ರಗಳೆನಿಸಿವೆ. ಈ ಹಿನ್ನೆಲೆಯಲ್ಲಿ ದೇಶವೊಂದರ ರಾಷ್ಟ್ರೀಯ ಶಕ್ತಿಯ ರೂಪವಾಗಿ ಆರ್ಥಿಕ ಶಕ್ತಿಯು ಮಹತ್ವದ ಸ್ಥಾನವನ್ನು ಪಡೆದುಕೊಂಡಿರುದು ಸ್ಪಷ್ಟವಾಗುತ್ತದೆ. ಗಮನಾರ್ಹ ಅಂಶವೇನೆಂದರೆ, ದೇಶವೊಂದು ಸೈನಿಕ ಶಕ್ತಿಯನ್ನು ಹೊಂದಲು ಆರ್ಥಿಕ ಶಕ್ತಿ ನೆರವಾಗಿದ್ದು ಸೈನಿಕ ಶಕ್ತಿಯ ಬೆಂಬಲವನ್ನು ಹೊಂದಿರದ ಆರ್ಥಿಕ ಶಕ್ತಿ ಪರಿಣಾಮಕಾರಿಯಾಗಲಾರದು. ಆದ್ದರಿಂದಲೇ ಪಾಮರ್ ಮತ್ತು ಪರ್ಕಿನ್ಸ್ 'ಸೈನಿಕ ಶಕ್ತಿಯು ಪಾತ್ರಧಾರಿಯಾದರೆ ಆರ್ಥಿಕ ಶಕ್ತಿ ಸೂತ್ರಧಾರ' ಎಂದಿರುವರು.

**3. ಮಾನಸಿಕ ಶಕ್ತಿ [Psychological Power]:** ಅಭಿಪ್ರಾಯ ಆಧರಿತ ಶಕ್ತಿಯೇ ಮಾನಸಿಕ ಶಕ್ತಿ. ಸಾಮಾನ್ಯವಾಗಿ ಜಾಗತಿಕ ಮಟ್ಟದಲ್ಲಿ ದೇಶವೊಂದರ ಘನತೆಯನ್ನು ಮಾನಸಿಕ ಶಕ್ತಿ ಪ್ರತಿನಿಧಿಸುತ್ತದೆ. ಪ್ರಚಾರ ಮತ್ತು ಮನವೊಲಿಸುವಿಕೆಯ ಸಂಧಾನಗಳ ನೆರವಿನಿಂದ ಅಂತರ್‌ರಾಷ್ಟ್ರೀಯ ವ್ಯವಹಾರಗಳಲ್ಲಿ ಇತರ ದೇಶಗಳ ನಿಲುವುಗಳನ್ನು ತನಗೆ ಪೂರಕವಾಗುವಂತೆ ನಿಯಂತ್ರಿಸುವ ದೇಶವೊಂದರ ಸಾಮರ್ಥ್ಯವು ಮಾನಸಿಕ ಶಕ್ತಿ ಎನಿಸಿಕೊಳ್ಳುತ್ತದೆ. ಸಂಪರ್ಕ ಕ್ಷೇತ್ರದ ಸುಧಾರಣೆ, ಸಮೂಹ ಮಾಧ್ಯಮಗಳ ಹೆಚ್ಚಳ, ಸಾರ್ವಜನಿಕ ಅಭಿಪ್ರಾಯಾಧರಿತ ವಿದೇಶಾಂಗ ನೀತಿ, ಸಮ್ಮೇಳನ ರಾಯಭಾರತ್ವದ ಅನುಸರಣೆ, ಸರ್ಕಾರೇತರ ಸಂಸ್ಥೆಗಳ ಕಾರ್ಯಾಚರಣೆ, ಪ್ರಚಾರದಂತಹ ಕಾರಣಗಳಿಂದ ಮಾನಸಿಕ ಶಕ್ತಿಯು ದೇಶವೊಂದರ ರಾಷ್ಟ್ರೀಯ ಶಕ್ತಿಯ ರೂಪವಾಗಿ ಬದಲಾವಣೆಗೊಳ್ಳುತ್ತಿದೆ. ಇತರ ದೇಶಗಳ ಜನರು ಅಥವಾ ನಾಯಕರನ್ನು ಸಾಂಸ್ಕೃತಿಕ ಸಾಧನಗಳ ಮೂಲಕ ಪ್ರಭಾವಿಸುವುದು ಮಾನಸಿಕ ಶಕ್ತಿಯಾಗಿದೆ. ಉದಾ: 2023 ರಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿಯವರು ಅಮೇರಿಕಾಗೆ ಭೇಟಿ ನೀಡಿದ್ದ ವೇಳೆ ಭಾರತೀಯ ಸಂಸ್ಕೃತಿಯನ್ನು ಪ್ರತಿನಿಧಿಸುವ ಉಡುಗೊರೆಗಳನ್ನು ಅಮೇರಿಕಾದ ಅಧ್ಯಕ್ಷನಿಗೆ ನೀಡಿ ಪ್ರಭಾವಿಸಿದುದು. ಒಟ್ಟಾರೆ ಪ್ರಚಾರ ಹಾಗೂ ಶೈಕ್ಷಣಿಕ ಅಥವಾ ಸಾಂಸ್ಕೃತಿಕ ಸಂಬಂಧಗಳ ಮೂಲಕ ವ್ಯವಸ್ಥಿತವಾಗಿ ಇತರ ದೇಶಗಳನ್ನು ಪ್ರಭಾವಿಸುವ ದೇಶವೊಂದರ ಸಾಮರ್ಥ್ಯವು ಮಾನಸಿಕ ಶಕ್ತಿಯಾಗಿದ್ದು ಆ ದೇಶದ ರಾಷ್ಟ್ರೀಯ ಶಕ್ತಿಯ ರೂಪವಾಗಿ ಪರಿಗಣಿಸಲ್ಪಡುತ್ತದೆ.



ಈ ಮೇಲೆ ಚರ್ಚಿಸಲಾಗಿರುವ ದೇಶವೊಂದರ ರಾಷ್ಟ್ರೀಯ ಶಕ್ತಿಯ ಮೂರು ಆಯಾಮ ಅಥವಾ ರೂಪಗಳ ನೆರವಿನಿಂದ ಒಂದು ದೇಶದ ರಾಷ್ಟ್ರೀಯ ಶಕ್ತಿಯ ಸ್ವರೂಪ ಮತ್ತು ವ್ಯಾಪ್ತಿಯನ್ನು ಅಳೆಯಲಾಗುತ್ತದೆ. ಆಸಕ್ತಿದಾಯಕ ಅಂಶವೇನೆಂದರೆ, ದೇಶವೊಂದರ ರಾಷ್ಟ್ರೀಯ ಶಕ್ತಿಯ ಪ್ರಸ್ತಾಪಿತ ಮೂರು ಆಯಾಮ ಅಥವಾ ರೂಪಗಳು ಸ್ವತಂತ್ರವಾಗಿರದೇ ಪರಸ್ಪರ ಅವಲಂಬಿಗಳಾಗಿದುದು. ಆರ್ಥಿಕ ಶಕ್ತಿಯಿಲ್ಲದೇ ದೇಶವೊಂದರ ಸೈನಿಕ ಶಕ್ತಿ ಬಲಗೊಳ್ಳಲಾರದು. ಅಂತೆಯೇ ಸೈನಿಕ ಶಕ್ತಿಯಿಲ್ಲದ ಆರ್ಥಿಕ ಶಕ್ತಿ ಪರಿಣಾಮಕಾರಿ ಎನಿಸಲಾರದು. ಇದರೊಡನೆ ಮಾನಸಿಕ ಶಕ್ತಿ ವೃದ್ಧಿಗೊಳ್ಳಲು ದೇಶದ ಸೈನಿಕ ಮತ್ತು ಆರ್ಥಿಕ ಶಕ್ತಿ ಅನಿವಾರ್ಯ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಶಕ್ತಿಯ ಮೂರೂ ರೂಪಗಳನ್ನು ಸಮ ಪ್ರಮಾಣದಲ್ಲಿ ವೃದ್ಧಿಸಿಕೊಳ್ಳುವ ದೇಶವು ಮಾತ್ರ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಶಕ್ತಿಶಾಲಿ ಎನಿಸಿಕೊಳ್ಳಲು ಸಾಧ್ಯವೆಂದರೆ ತಪ್ಪಾಗಲಾರದು.

## [D.] ರಾಷ್ಟ್ರೀಯ ಶಕ್ತಿಯ ಮೂಲಾಂಶಗಳು [Eliments of National Power]:

ದೇಶವೊಂದರ ರಾಷ್ಟ್ರೀಯ ಶಕ್ತಿಯು ವಿವಿಧ ಅಂಶಗಳ ಸಂಯೋಜನೆಯಾಗಿದ್ದು ಅವುಗಳನ್ನು ರಾಷ್ಟ್ರೀಯ ಶಕ್ತಿಯ ಘಟಕಗಳು ಅಥವಾ ಮೂಲಾಂಶಗಳು ಎನ್ನಲಾಗುತ್ತದೆ. ಫ್ರಾಂಕಲ್ ಎಂಬ ಚಿಂತಕ ರಾಷ್ಟ್ರೀಯ ಶಕ್ತಿಯ ಮೂಲಾಂಶಗಳನ್ನು ಸಾಮರ್ಥ್ಯಗಳೆಂದು ಕರೆದರೆ ಇತರ ಕೆಲವು ಚಿಂತಕರು ರಾಷ್ಟ್ರೀಯ ಶಕ್ತಿಯ ಮೂಲಾಂಶಗಳನ್ನು ನಿರ್ಧಾರಕಗಳೆಂದು ಗುರುತಿಸಿದ್ದಾರೆ. ಇದರೊಡನೆ ರಾಷ್ಟ್ರೀಯ ಶಕ್ತಿಯ ವಿವಿಧ ಮೂಲಾಂಶಗಳನ್ನು ಚಿಂತಕರು ವರ್ಗೀಕರಿಸಲು ಮುಂದಾಗಿದ್ದು ಮಾರ್ಗೆಂಥೊ ಶಾಶ್ವತ ಮತ್ತು ಅಶಾಶ್ವತ ಮೂಲಾಂಶಗಳೆಂದು, ಆರ್ಗನ್ಸ್ಕಿ ಸ್ವಾಭಾವಿಕ ಮತ್ತು ಸಾಮಾಜಿಕ ಮೂಲಾಂಶಗಳೆಂದು, ಪಾಮರ್ ಹಾಗೂ ಪರ್ಕಿನ್ಸ್ ಗೋಚರ ಮತ್ತು ಅಗೋಚರ ಮೂಲಾಂಶಗಳೆಂದು ವಿಂಗಡಿಸಿದ್ದಾರೆ. ಚಿಂತಕರಿಂದ ಭಿನ್ನ ಶೀರ್ಷಿಕೆ ಮತ್ತು ಪ್ರಕಾರಗಳಲ್ಲಿ ಗುರುತಿಸಲ್ಪಡುವ ದೇಶವೊಂದರ ರಾಷ್ಟ್ರೀಯ ಶಕ್ತಿಯ ಪ್ರಧಾನ ಮೂಲಾಂಶಗಳನ್ನು ಈ ಕೆಳಗೆ ಸಂಕ್ಷೇಪ್ತವಾಗಿ ವಿವರಿಸಲಾಗಿದೆ.

**1. ಭೌಗೋಳಿಕ ಅಂಶಗಳು [Geographical Facters]:** ದೇಶವೊಂದರ ಭೌಗೋಳಿಕತೆಯು ರಾಷ್ಟ್ರೀಯ ಶಕ್ತಿಯ ಮೂಲಾಂಶಗಳಲ್ಲಿ ಪ್ರಾಥಮಿಕವಾದದ್ದು. ಜೊತೆಗೆ ಭೌಗೋಳಿಕತೆಯು ರಾಷ್ಟ್ರೀಯ ಶಕ್ತಿಯ ಸ್ವಾಭಾವಿಕ, ಶಾಶ್ವತ ಮತ್ತು ಗೋಚರ ಮೂಲಾಂಶವೆನಿಸಿದೆ. ಇದರೊಡನೆ ಅಂತರ್‌ರಾಷ್ಟ್ರೀಯ ರಾಜಕೀಯದಲ್ಲಿ ದೇಶವೊಂದರ ರಾಷ್ಟ್ರೀಯ ಶಕ್ತಿಯನ್ನು ಅದರ ಭೌಗೋಳಿಕ ಅಂಶವನ್ನು ಆಧರಿಸಿಯೇ ನಿರ್ಧರಿಸಲಾಗುತ್ತದೆ. ನೆಪೋಲಿಯನ್ 'ಯುದ್ಧದಲ್ಲಿ ದೇವರು ಯಾವಾಗಲೂ ವಿಶಾಲ ಭೂ ಪ್ರದೇಶವುಳ್ಳ ರಾಷ್ಟ್ರದೊಡನೆಯೇ ಇರುತ್ತಾನೆ' ಎನ್ನುವ ಮೂಲಕ ರಾಷ್ಟ್ರೀಯ ಶಕ್ತಿಯಲ್ಲಿ ಭೌಗೋಳಿಕ

ಅಂಶದ ಮಹತ್ವವನ್ನು ಪ್ರತಿಪಾದಿಸಿರುವ. ಅಲ್ಲದೇ ದೇಶವೊಂದರ ವಿದೇಶಾಂಗ ನೀತಿಯು ಅದರ ಭೌಗೋಳಿಕ ಅಂಶಗಳಿಂದ ಪ್ರಭಾವಿತಗೊಂಡಿರುತ್ತದೆ. ಗಮನಾರ್ಹ ಅಂಶವೇನೆಂದರೆ, ಕೇವಲ ಭೌಗೋಳಿಕ ಅಂಶವೊಂದೇ ರಾಷ್ಟ್ರೀಯ ಶಕ್ತಿ ಎನಿಸಿಕೊಳ್ಳಲಾರದು. ದೇಶವೊಂದರ ರಾಷ್ಟ್ರೀಯ ಶಕ್ತಿಯ ವಿವಿಧ ಮೂಲಾಂಶಗಳಲ್ಲಿ ಒಂದಾಗಿರುವ ಭೌಗೋಳಿಕತೆಯು ಕೆಳಗಿನ ತನ್ನ ಸ್ವರೂಪದೊಡನೆ ಪ್ರಧಾನವಾದ ಮೂಲಾಂಶ ಎನಿಸಿಕೊಂಡಿದೆ.

**ಅ. ಗಾತ್ರ [Size]:** ಭೌಗೋಳಿಕ ಗಾತ್ರವು ರಾಷ್ಟ್ರೀಯ ಶಕ್ತಿಯ ಮೂಲಾಂಶವೆನಿಸಿದೆ. ದೇಶವೊಂದು ಹೊಂದಿರುವ ಚಿಕ್ಕ ಅಥವಾ ಬೃಹತ್ ಗಾತ್ರವು ಅದರ ರಾಷ್ಟ್ರೀಯ ಶಕ್ತಿಯನ್ನು ನಿರ್ಧರಿಸಬಲ್ಲ ಅಂಶವೆನಿಸಿದೆ. ವಿಶಾಲ ಭೂ ಪ್ರದೇಶವುಳ್ಳ ದೇಶಗಳು ಅಧಿಕ ಜನಸಂಖ್ಯೆ ಹಾಗೂ ಸಂಪನ್ಮೂಲಗಳನ್ನು ಹೊಂದುವ ಮೂಲಕ ರಾಷ್ಟ್ರೀಯ ಶಕ್ತಿ ವೃದ್ಧಿಸಿಕೊಳ್ಳಬಹುದಾಗಿದೆ. ಜೊತೆಗೆ ಬೃಹತ್ ಗಾತ್ರವುಳ್ಳ ದೇಶಗಳನ್ನು ಇತರ ರಾಷ್ಟ್ರಗಳು ಆಕ್ರಮಿಸಲು ಸಾಧ್ಯವಾಗುವುದಿಲ್ಲ. ಉದಾ: ಬೃಹತ್ ಗಾತ್ರದ ರಷ್ಯಾವನ್ನು ನೆಪೋಲಿಯನ ಅಥವಾ ಹಿಟ್ಲರ್ ಆಕ್ರಮಿಸಲು ವಿಫಲಗೊಂಡಿದುದು. ಒಂದೊಮ್ಮೆ ದೇಶದ ಭೌಗೋಳಿಕ ಗಾತ್ರ ಚಿಕ್ಕದಾದರೆ ಅದನ್ನು ಸುಲಭವಾಗಿ ಆಕ್ರಮಿಸಲು ಸಾಧ್ಯವಾಗುತ್ತದೆ. ಇದರೊಡನೆ ಚಿಕ್ಕ ಭೌಗೋಳಿಕ ಗಾತ್ರದ ದೇಶಗಳಲ್ಲಿ ಸಂಪನ್ಮೂಲಗಳ ಕೊರತೆ ಸಹಜವಾಗಿದ್ದು ಪರಾವಲಂಬನೆ ಅಧಿಕಗೊಂಡು ರಾಷ್ಟ್ರೀಯ ಶಕ್ತಿ ಕುಗ್ಗುತ್ತದೆ. ಆಸಕ್ತಿದಾಯಕ ಅಂಶವೇನೆಂದರೆ, ಇಂಗ್ಲೆಂಡ್, ಜಪಾನ್, ಇಸ್ರೇಲ್ ಜಗತ್ತಿನ ಚಿಕ್ಕ ಗಾತ್ರವುಳ್ಳ ದೇಶಗಳಾಗಿದ್ದರೂ ಇತರ ಮೂಲಾಂಶಗಳ ನೆರವಿನಿಂದ ತಮ್ಮ ರಾಷ್ಟ್ರೀಯ ಶಕ್ತಿಯನ್ನು ವೃದ್ಧಿಸಿಕೊಂಡಿವೆ. ಅಂತೆಯೇ ಬ್ರೆಜಿಲ್, ಆಸ್ಟ್ರೇಲಿಯಾಗಳು ಬೃಹತ್ ಗಾತ್ರ ಪಡೆದಿದ್ದರೂ ಅವುಗಳ ರಾಷ್ಟ್ರೀಯ ಶಕ್ತಿ ಪ್ರಸ್ತಾಪಿತ ಚಿಕ್ಕ ರಾಷ್ಟ್ರಗಳಿಗಿಂತ ಉತ್ತಮವಾಗಿಲ್ಲ.

**ಆ. ನೆಲೆ [Location]:** ಪ್ರಪಂಚದ ಭೂಪಟದಲ್ಲಿ ದೇಶವೊಂದು ಹೊಂದಿರುವ ಭೌಗೋಳಿಕ ನೆಲೆಯು ಅದರ ರಾಷ್ಟ್ರೀಯ ಶಕ್ತಿಯನ್ನು ಬಲಗೊಳಿಸಲು ಅಥವಾ ಕ್ಷೀಣಗೊಳಿಸಲು ಕಾರಣವಾಗುತ್ತದೆ. ಸಮುದ್ರ ತೀರದಲ್ಲಿರುವ, ಸುತ್ತಲೂ ನೀರಿನಿಂದ ಆವರಿಸಿರುವ, ನೈಸರ್ಗಿಕ ಕಣಿವೆ ಅಥವಾ ಪರ್ವತಗಳಿಂದ ಸುತ್ತುವರೆದ ಭೌಗೋಳಿಕ ನೆಲೆ ಹೊಂದಿರುವ ದೇಶಗಳ ರಾಷ್ಟ್ರೀಯ ಶಕ್ತಿ ಅಧಿಕವಾಗಿರುತ್ತದೆ. ಉದಾ: ಇಂಗ್ಲೆಂಡ್ ನೌಕಾ ಶಕ್ತಿ ಬೆಳೆಸಿಕೊಳ್ಳಲು, ಜಪಾನ್ ಹಡಗು ನಿರ್ಮಾಣದ ಮೂಲಕ ಆರ್ಥಿಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು, ಅಮೇರಿಕಾವು ಏಕಾಂಗಿತನ ನೀತಿಯನ್ನು ಅನುಸರಿಸಲು ಅವುಗಳ ಭೌಗೋಳಿಕ ನೆಲೆ ಸಹಕಾರಿಯಾದುದು. ಸುತ್ತಲೂ ಭೂ ಗಡಿಗಳಿಂದ ಕೂಡಿದ ಅಂದರೆ ಭೂಮಿಯಿಂದ ಆವರಿಸಲ್ಪಟ್ಟ ಭೌಗೋಳಿಕ ನೆಲೆಯುಳ್ಳ ರಾಷ್ಟ್ರಗಳು ತಮ್ಮ ರಾಷ್ಟ್ರೀಯ ಶಕ್ತಿಯನ್ನು ವೃದ್ಧಿಸಿಕೊಳ್ಳುವುದು ಕಠಿಣವಾಗಿ ದುರ್ಬಲ ರಾಷ್ಟ್ರವೆನಿಸಿಕೊಳ್ಳುತ್ತವೆ. ಉದಾ: ಸ್ವಿಟ್ಜರ್‌ಲ್ಯಾಂಡ್ ಶಾಶ್ವತ ತಟಸ್ಥ ರಾಷ್ಟ್ರವಾಗಿ ಉಳಿಯಲು ಮತ್ತು ಕೆನಡಾ ಜಗತ್ತಿನ ಶಕ್ತಿಶಾಲಿ



ರಾಷ್ಟ್ರವಾಗಿ ಗುರುತಿಸಿಕೊಳ್ಳದಿರಲು ಅವುಗಳ ಭೌಗೋಳಿಕ ನೆಲೆ ಕಾರಣವಾಗಿದುದು. ಹೀಗೆ ದೇಶವೊಂದರ ಭೌಗೋಳಿಕ ನೆಲೆಯು ಆ ದೇಶದ ರಾಷ್ಟ್ರೀಯ ಶಕ್ತಿಯನ್ನು ನಿರ್ಧರಿಸುವ ಭೌಗೋಳಿಕ ಅಂಶವಾಗಿ ಪರಿಗಣಿತಗೊಂಡಿದೆ.

**ಇ. ವಾಯುಗುಣ [Climate]:** ದೇಶವೊಂದು ಹೊಂದಿರುವ ವಾಯುಗುಣವು ಆ ದೇಶದ ರಾಷ್ಟ್ರೀಯ ಶಕ್ತಿಯನ್ನು ನಿರ್ಧರಿಸುವ ಭೌಗೋಳಿಕ ಅಂಶವೆನಿಸಿದೆ. ದೇಶದ ಆಹಾರ ಉತ್ಪಾದನೆ, ಆರ್ಥಿಕತೆ ಹಾಗೂ ಸಂಸ್ಕೃತಿಯ ಮೇಲೆ ವಾಯುಗುಣ ತನ್ನದೇಯಾದ ಪ್ರಭಾವ ಬೀರಬಲ್ಲ ಸಾಮರ್ಥ್ಯ ಹೊಂದಿರುತ್ತದೆ. ಅತಿಯಾದ ಶೀತ ವಾಯುಗುಣವುಳ್ಳ ಧ್ರುವ ಪ್ರದೇಶ ಮತ್ತು ಅಧಿಕ ಉಷ್ಣತೆಯಿಂದ ಕೂಡಿರುವ ಸಮಭಾಜಕ ವೃತ್ತದ ಪ್ರದೇಶಗಳ ದೇಶಗಳು ಅಹಿತಕರ ವಾಯುಗುಣದಿಂದ ಆರ್ಥಿಕ ಚಟುವಟಿಕೆಗಳಲ್ಲಿ ಪ್ರಗತಿ ಹೊಂದಲಾರವು. ಆದರೆ, ಸಮಶೀತೋಷ್ಣ ವಲಯದಲ್ಲಿರುವ ದೇಶಗಳು ಆಹ್ಲಾದಕರ ವಾಯುಗುಣ ಹೊಂದಿದ್ದು ಅವುಗಳ ಜನರ ಆರೋಗ್ಯ ಮತ್ತು ದುಡಿಯುವ ಸಾಮರ್ಥ್ಯ ಅಧಿಕಗೊಳ್ಳುತ್ತದೆ. ಫಲವಾಗಿ ಆರ್ಥಿಕ ಚಟುವಟಿಕೆಗಳು ನಿರಂತರವಾಗಿ ಮತ್ತು ನಿರಾಯಾಸವಾಗಿ ಜರುಗಿ ರಾಷ್ಟ್ರೀಯ ಶಕ್ತಿ ವೃದ್ಧಿಗೊಳ್ಳುತ್ತದೆ. ಗಮನಾರ್ಹ ಅಂಶವೇನೆಂದರೆ, ವಾಯುಗುಣವು ಸಕಾಲಿಕ ಮಳೆಯೊಡನೆ ಉತ್ಪಾದನೆಗೆ ನೆರವಾಗುವ ಮತ್ತು ಅಕಾಲಿಕ ಮಳೆಯೊಡನೆ ಉತ್ಪಾದನೆಯನ್ನು ನಾಶಗೊಳಿಸುವ ಮೂಲಕ ರಾಷ್ಟ್ರೀಯ ಶಕ್ತಿಯನ್ನು ಪ್ರಭಾವಿಸುತ್ತವೆ. ಈ ಹಿನ್ನೆಲೆಯಲ್ಲಿ ಹಿತಕರ ವಾಯುಗುಣವುಳ್ಳ ದೇಶದ ರಾಷ್ಟ್ರೀಯ ಶಕ್ತಿ ಉನ್ನತವಾಗಿದ್ದರೆ ಅಹಿತಕರ ವಾತಾವರಣ ಹೊಂದಿರುವ ದೇಶಗಳ ರಾಷ್ಟ್ರೀಯ ಶಕ್ತಿ ಜಾಗತಿಕವಾಗಿ ಕೆಳ ದರ್ಜೆಯಲ್ಲಿರುತ್ತದೆ.

**ಈ. ಮೇಲ್ಮೈ ರಚನೆ [Topography]:** ದೇಶವೊಂದರ ಭೌಗೋಳಿಕ ಮೂಲಾಂಶಗಳಲ್ಲಿ ಮೇಲ್ಮೈ ರಚನೆಯೂ ಒಂದಾಗಿದೆ. ಇತರ ಭೌಗೋಳಿಕ ಅಂಶಗಳೊಡನೆ ದೇಶವೊಂದರ ಮೇಲ್ಮೈ ರಚನೆಯು ರಾಷ್ಟ್ರೀಯ ಶಕ್ತಿಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಬಲ್ಲದು. ಮೈದಾನ ಪ್ರದೇಶವಾಗಿರುವ ಮತ್ತು ಕೃತಕ ಗಡಿಗಳಿಂದ ಕೂಡಿರುವ ರಚನೆಯುಳ್ಳ ದೇಶಗಳ ರಾಷ್ಟ್ರೀಯ ಶಕ್ತಿಯು ದುರ್ಬಲವಾಗಿರುತ್ತದೆ. ಇದಕ್ಕೆ ಆಕ್ರಮಣಕಾರಿ ದೇಶಗಳಿಗೆ ಈ ಬಗೆಯ ಮೇಲ್ಮೈ ರಚನೆಯುಳ್ಳ ದೇಶಗಳು ಸುಲಭವಾಗಿ ತುತ್ತಾಗುವುದು ಪ್ರಧಾನ ಕಾರಣ. ಇನ್ನೊಂದೆಡೆ ನೈಸರ್ಗಿಕ ಗಡಿಗಳಿಂದ ಕೂಡಿರುವ ಮತ್ತು ಪರ್ವತ ಶ್ರೇಣಿ, ನದಿಗಳು, ಇಳಿಜಾರು ಪ್ರದೇಶಗಳಿಂದ ಕೂಡಿರುವ ಮೇಲ್ಮೈ ರಚನೆಯುಳ್ಳ ದೇಶಗಳ ರಾಷ್ಟ್ರೀಯ ಶಕ್ತಿ ಅಧಿಕವಾಗಿರುತ್ತದೆ. ಜೊತೆಗೆ ಸ್ವಾಭಾವಿಕ ಬಂದರು ಮತ್ತು ಗಡಿಗಳನ್ನು ಹೊಂದಿದ ದೇಶಗಳು ಶಕ್ತಿಶಾಲಿ ರಾಷ್ಟ್ರಗಳೆನಿಸಿಕೊಳ್ಳುತ್ತವೆ. ಹೀಗೆ ದೇಶವೊಂದರ ಮೇಲ್ಮೈ ಲಕ್ಷಣಗಳು ಅಂದರೆ ರಚನೆಯು ರಾಷ್ಟ್ರೀಯ ಶಕ್ತಿಯನ್ನು ನಿರ್ಧರಿಸುವ ಅಂಶವಾಗಿ ಪರಿಗಣಿತವಾಗಿದೆ.

ಉ. ಗಡಿಗಳು [Boundaries]: ದೇಶವೊಂದು ಹೊಂದಿರುವ ಗಡಿಗಳು ಅದರ ಭೌಗೋಳಿಕ ಅಂಶವಾಗಿವೆ. ನೈಸರ್ಗಿಕ ಗಡಿಗಳು ನೆರೆಯ ರಾಷ್ಟ್ರಗಳೊಡನೆ ಸುಮಧುರ ಸಂಬಂಧ ಹೊಂದಲು ಕಾರಣವಾದರೆ ಕೃತಕ ಗಡಿಗಳು ನೆರೆಯ ರಾಷ್ಟ್ರಗಳೊಡನೆ ಗೊಂದಲ, ಘರ್ಷಣೆ, ಆರೋಪ ಪ್ರತ್ಯಾರೋಪಗಳಿಗೆ ಕಾರಣವಾಗಿ ರಾಷ್ಟ್ರೀಯ ಶಕ್ತಿಯನ್ನು ಪ್ರಭಾವಿಸುತ್ತವೆ. ಸಾಮಾನ್ಯವಾಗಿ ಸ್ಪಷ್ಟತೆಯಿಲ್ಲದ ಗಡಿಗಳನ್ನು ಹೊಂದಿರುವ ದೇಶಗಳ ನಡುವೆ ಘರ್ಷಣೆ ಉಂಟಾಗಿ ರಾಷ್ಟ್ರೀಯ ಶಕ್ತಿ ಧಕ್ಕೆಗೊಳಗಾಗುತ್ತದೆ. ಉದಾ: ಚೀನಾ ಮತ್ತು ಭಾರತದ ನಡುವೆ ಹಾಗೂ ಇಸ್ರೇಲ್ ಮತ್ತು ಅರಬ್ ದೇಶಗಳ ನಡುವಿನ ಗಡಿ ವಿವಾದ.

ಈ ಮೇಲೆ ಪ್ರಸ್ತಾಪಿಸಲಾದ ವಿವಿಧ ಭೌಗೋಳಿಕ ಅಂಶಗಳು ರಾಷ್ಟ್ರೀಯ ಶಕ್ತಿಯ ಮಹತ್ವದ ಮೂಲಾಂಶವಾಗಿ ಭೌಗೋಳಿಕತೆಯನ್ನು ಸಮ್ಮತಿಸಲು ಕಾರಣವಾಗಿವೆ. ಆದರೆ ಭೌಗೋಳಿಕ ಅಂಶಗಳು ರಾಷ್ಟ್ರೀಯ ಶಕ್ತಿಯನ್ನು ಬಲಗೊಳಿಸುವ ಮತ್ತು ದುರ್ಬಲಗೊಳಿಸಲು ಕಾರಣವಾದುದನ್ನು ಮರೆಯಲಾಗದು. ಇದರೊಡನೆ ರಾಷ್ಟ್ರೀಯ ಶಕ್ತಿಯಲ್ಲಿ ಭೌಗೋಳಿಕ ಅಂಶದ ಪಾತ್ರವು ಇತರ ಮೂಲಾಂಶಗಳ ಅಂತರ್‌ಸಂಬಂಧ ಹೊಂದಿದುದು ಗಮನಾರ್ಹ. ಆದ್ದರಿಂದ ಭೌಗೋಳಿಕತೆಯು ರಾಷ್ಟ್ರೀಯ ಶಕ್ತಿಯ ಹಲವು ಮೂಲಾಂಶಗಳಲ್ಲಿ ಒಂದೇ ಹೊರತು ಅದುವೇ ಪ್ರಧಾನ ಮೂಲಾಂಶವಲ್ಲ ಎಂಬುದನ್ನು ನಾವು ಮರೆಯಕೂಡದು.

**2. ನೈಸರ್ಗಿಕ ಸಂಪನ್ಮೂಲಗಳು [Natural Resources]:** ದೇಶವೊಂದು ಪ್ರಾಕೃತಿಕವಾಗಿ ಹೊಂದಿರುವ ಖನಿಜ, ಜಲ, ಅರಣ್ಯ ಸಂಪನ್ಮೂಲಗಳನ್ನು ನೈಸರ್ಗಿಕ ಸಂಪನ್ಮೂಲ ಎನ್ನಲಾಗುತ್ತದೆ. ನಿಸರ್ಗದ ಕೊಡುಗೆಯಾಗಿರುವ ನೈಸರ್ಗಿಕ ಸಂಪನ್ಮೂಲಗಳು ದೇಶವೊಂದರ ಆರ್ಥಿಕ ಸ್ವಾವಲಂಬನೆಗೆ ನೆರವಾಗುವ ಮೂಲಕ ರಾಷ್ಟ್ರೀಯ ಶಕ್ತಿಯ ಪ್ರಧಾನ ಮೂಲಾಂಶವೆನಿಸಿವೆ. ಜೊತೆಗೆ ಕೈಗಾರಿಕಾ ಮತ್ತು ಸೈನಿಕ ಸಾಮರ್ಥ್ಯವನ್ನು ದೇಶವೊಂದು ಮೈಗೂಡಿಸಿಕೊಳ್ಳಲು ನೈಸರ್ಗಿಕ ಸಂಪನ್ಮೂಲಗಳು ಸಹಕಾರಿಯಾಗುತ್ತವೆ. ಇದರೊಡನೆ ಪ್ರಧಾನ ಸಂಪನ್ಮೂಲಗಳ ಸ್ವಾವಲಂಬನೆಯು ದೇಶದ ರಾಷ್ಟ್ರೀಯ ಶಕ್ತಿಯ ಮೂಲವೆನಿಸಿವೆ. ಉದಾ: ಅಮೇರಿಕಾವು ವಿಶ್ವದ ಶಕ್ತಿಶಾಲಿ ರಾಷ್ಟ್ರವೆನಿಸಲು ಅದು ಕೆಲ ಸಂಪನ್ಮೂಲಗಳಲ್ಲಿ ಸ್ವಾವಲಂಬನೆ ಸಾಧಿಸಿದುದು ಪ್ರಧಾನ ಕಾರಣವಾದದ್ದು. ದೇಶವೊಂದು ಕೈಗಾರಿಕಾ ರಾಷ್ಟ್ರವಾಗಿ ತನ್ನ ರಾಷ್ಟ್ರೀಯ ಶಕ್ತಿಯನ್ನು ಸುಧಾರಿಸಿಕೊಳ್ಳಲು ನೈಸರ್ಗಿಕ ಸಂಪನ್ಮೂಲಗಳ ಪಾತ್ರ ಪ್ರಧಾನವಾಗಿರುತ್ತದೆ. ಉದಾ: 19 ನೇ ಶತಮಾನದಲ್ಲಿ ಇಂಗ್ಲೆಂಡ್ ಕೈಗಾರಿಕಾ ರಾಷ್ಟ್ರವಾಗಿ ತನ್ನ ರಾಷ್ಟ್ರೀಯ ಶಕ್ತಿಯನ್ನು ವೃದ್ಧಿಸಿಕೊಳ್ಳಲು ಖನಿಜ ಸಂಪನ್ಮೂಲಗಳು ನೆರವಾದದ್ದು. ಸಮಕಾಲೀನ ಪ್ರಪಂಚದಲ್ಲಿ ತೈಲ ಸಂಪನ್ಮೂಲವನ್ನು ಹೇರಳವಾಗಿ ಹೊಂದಿದ ರಾಷ್ಟ್ರಗಳು ತಮ್ಮ ರಾಷ್ಟ್ರೀಯ ಶಕ್ತಿಯನ್ನು ಸುಧಾರಿಸಿಕೊಂಡು ಅಂತರರಾಷ್ಟ್ರೀಯವಾಗಿ ಪ್ರಭಾವ ಬೀರಿದ ನಿದರ್ಶನಗಳು ನಮ್ಮ ಮುಂದಿವೆ. ಅಂತೆಯೇ



ನೈಸರ್ಗಿಕ ಅನಿಲವನ್ನು ಉತ್ಪಾದಿಸುವ ರಾಷ್ಟ್ರಗಳು ಪ್ರಸ್ತುತ ಶಕ್ತಿಶಾಲಿ ರಾಷ್ಟ್ರವೆನಿಸಿಕೊಳ್ಳುತ್ತಿವೆ.

ಆಸಕ್ತಿದಾಯಕ ಅಂಶವೇನೆಂದರೆ, ರಾಷ್ಟ್ರೀಯ ಶಕ್ತಿಯ ಮೂಲಾಂಶವಾಗಿ ನೈಸರ್ಗಿಕ ಸಂಪನ್ಮೂಲಗಳನ್ನು ವಿಶ್ಲೇಷಣೆಗೊಳಪಡಿಸಿರುವ ಮಾರ್ಗೆಂಥೊ ಅವುಗಳನ್ನು ಎರಡು ರೂಪದಲ್ಲಿ ವಿಂಗಡಿಸಿರುವರು. ಅವುಗಳೆಂದರೆ ಕಚ್ಚಾ ವಸ್ತುಗಳು ಮತ್ತು ಆಹಾರ. ಕಚ್ಚಾ ವಸ್ತುಗಳಡಿ ಖನಿಜಗಳು, ನೈಸರ್ಗಿಕ ಉತ್ಪನ್ನಗಳು ಮತ್ತು ಜೈವಿಕ ಉತ್ಪನ್ನಗಳೆಂದು ಮಾರ್ಗೆಂಥೊ ವಿಂಗಡಿಸಿದ್ದಾರೆ. ಜೊತೆಗೆ ಆಹಾರವು ರಾಷ್ಟ್ರೀಯ ಶಕ್ತಿಯ ಪ್ರಧಾನ ಮೂಲಾಂಶವೆಂದು ಅವರು ಪ್ರತಿಪಾದಿಸಿರುವರು. ಆಹಾರದಲ್ಲಿ ಸ್ವಾವಲಂಬನೆ ಸಾಧಿಸದ ದೇಶದ ರಾಷ್ಟ್ರೀಯ ಶಕ್ತಿ ಪರಿಪೂರ್ಣತೆ ಹೊಂದಲಾರದು ಎಂಬುದು ಅವರ ನಿಲುವಾಗಿತ್ತು. ಉದಾ: ಭಾರತ ಹಸಿರು ಕ್ರಾಂತಿಯ ಮೂಲಕ ಆಹಾರದಲ್ಲಿ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದ ಬಳಿಕ ತನ್ನ ರಾಷ್ಟ್ರೀಯ ಶಕ್ತಿಯನ್ನು ಹೆಚ್ಚಿಸಿಕೊಂಡಿದುದು. ಒಟ್ಟಾರೆ ನೈಸರ್ಗಿಕ ಸಂಪನ್ಮೂಲಗಳು ಸ್ವತಂತ್ರವಾಗಿ ದೇಶವೊಂದರ ರಾಷ್ಟ್ರೀಯ ಶಕ್ತಿಯನ್ನು ಬಲಗೊಳಿಸದೇ ಜನಸಂಖ್ಯೆ, ತಂತ್ರಜ್ಞಾನ, ರಾಯಭಾರತ್ವದಂತಹ ಇತರ ಮೂಲಾಂಶಗಳ ನೆರವಿನಿಂದ ಮಹತ್ವ ಪಡೆಯುತ್ತವೆ.

**3. ತಂತ್ರಜ್ಞಾನ [Technology]:** ಮನುಕುಲದ ಕಲ್ಯಾಣಕ್ಕಾಗಿ ವಿಜ್ಞಾನದ ಅನ್ವಯವನ್ನು ತಂತ್ರಜ್ಞಾನ ಎನ್ನಬಹುದಾಗಿದೆ. ವೈಜ್ಞಾನಿಕ ಸಂಶೋಧನೆಗಳನ್ನು ಬಳಸಿಕೊಂಡು ಮಾನವರ ಒಳಿತನ್ನು ಸಾಧಿಸುವ ಸಾಮರ್ಥ್ಯವನ್ನು ತಂತ್ರಜ್ಞಾನವು ಪ್ರತಿನಿಧಿಸುತ್ತದೆ. ಇತ್ತೀಚಿನ ವರ್ಷಗಳಲ್ಲಿ ತಾಂತ್ರಿಕ ಪ್ರಗತಿಯು ರಾಷ್ಟ್ರೀಯ ಶಕ್ತಿಯ ಮೂಲವಾಗಿದ್ದು ದೇಶವೊಂದು ಅಂತರ್‌ರಾಷ್ಟ್ರೀಯವಾಗಿ ಪ್ರಭಾವ ಬೀರಲು ತಂತ್ರಜ್ಞಾನ ಸಹಕಾರಿಯಾಗುತ್ತಿದೆ. ರಾಷ್ಟ್ರೀಯ ಶಕ್ತಿಯ ಮೂಲಾಂಶವಾಗಿ ತಂತ್ರಜ್ಞಾನವನ್ನು ಪರಿಗಣಿಸಿ ಅದನ್ನು ಕೈಗಾರಿಕಾ ತಂತ್ರಜ್ಞಾನ, ಸಂಪರ್ಕ ತಂತ್ರಜ್ಞಾನ ಮತ್ತು ಸೈನಿಕ ತಂತ್ರಜ್ಞಾನವೆಂದು ಗುರುತಿಸಲಾಗುತ್ತದೆ.

ಕೈಗಾರಿಕಾ ತಂತ್ರಜ್ಞಾನವು ಉತ್ಪಾದನೆಯನ್ನು ಹೆಚ್ಚಿಸುವ ಮೂಲಕ ದೇಶದ ಆರ್ಥಿಕ ಸುಧಾರಣೆಗೆ ಕಾರಣವಾಗುತ್ತದೆ. ಅಂತೆಯೇ ಸಂಪರ್ಕ ತಂತ್ರಜ್ಞಾನವು ಮಾಹಿತಿ, ಸರಕು ಮತ್ತು ಜನರನ್ನು ವೇಗವಾಗಿ ಸಂಪರ್ಕಿಸಲು ಸಹಕಾರಿಯಾಗುತ್ತದೆ. ಸಂಪರ್ಕ ತಂತ್ರಜ್ಞಾನವು ರಾಯಭಾರಿಗಳ ಸ್ವಾತಂತ್ರ್ಯವನ್ನು ಮಿತಿಗೊಳಿಸಿ ದೇಶದ ಮುಖ್ಯಸ್ಥರ ನಿರ್ದೇಶನದಂತೆ ವರ್ತಿಸಲು ಕಾರಣವಾಗಿವೆ. ಇದರೊಡನೆ ಸೈನಿಕ ತಂತ್ರಜ್ಞಾನವು ರಾಷ್ಟ್ರಗಳ ಸೈನಿಕ ಸಾಮರ್ಥ್ಯವನ್ನು ವೃದ್ಧಿಸಲು ನೆರವಾಗಿವೆ. ಕ್ಷಿಪಣಿ, ರಾಕೆಟ್, ಯುದ್ಧ ವಿಮಾನ, ನೌಕೆಗಳು, ಅಣ್ವಸ್ತ್ರಗಳನ್ನು ಹೊಂದುವ ಮೂಲಕ ಸೈನ್ಯ ಶಕ್ತಿಯನ್ನು ವೃದ್ಧಿಸಿಕೊಳ್ಳಲು ಮಿಲಿಟರಿ ತಾಂತ್ರಿಕತೆ ಸಹಕಾರಿಯಾಗಿದೆ. ಎರಡನೇ ಮಹಾ ಯುದ್ಧದ ನಂತರ ರಷ್ಯಾ ಮತ್ತು ಅಮೇರಿಕಾಗಳು ಶಕ್ತಿಶಾಲಿ ರಾಷ್ಟ್ರಗಳಾಗಿ ಬೆಳೆಯಲು ತಂತ್ರಜ್ಞಾನದ ಪಾತ್ರ ಮಹತ್ವದ್ದಾಗಿದೆ.

ಜೊತೆಗೆ ಒಟ್ಟಿನಲ್ಲಿ ತಂತ್ರಜ್ಞಾನವು ದೇಶಗಳ ರಾಷ್ಟ್ರೀಯ ಶಕ್ತಿಯನ್ನು ಬಲಗೊಳಿಸುವ ಪ್ರಮುಖ ಮೂಲವೆಂದು ಪರಿಗಣಿಸಲ್ಪಟ್ಟಿದೆ.

**4. ಜನಸಂಖ್ಯೆ [Population]:** ರಾಷ್ಟ್ರೀಯ ಶಕ್ತಿಗೆ ಕಾಣಿಕೆ ನೀಡಬಲ್ಲ ಮತ್ತೊಂದು ಮೂಲಾಂಶವೇ ಜನಸಂಖ್ಯೆ. ಸಾಮಾನ್ಯವಾಗಿ ಬೃಹತ್ ಜನಸಂಖ್ಯೆಯು ದೇಶವೊಂದರ ಶಕ್ತಿ ಎಂದು ಪರಿಗಣಿಸಲ್ಪಟ್ಟಿದೆ. ತೃಪ್ತಿಕರ ಜೀವನದ ಗುಣಮಟ್ಟ ಮತ್ತು ಸಾಮರ್ಥ್ಯಕ್ಕೆ ತಕ್ಕ ಅವಕಾಶಗಳನ್ನು ಒದಗಿಸಿ ಮಾನವ ಸಂಪನ್ಮೂಲವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡರೆ ದೇಶವೊಂದರ ಬೃಹತ್ ಜನಸಂಖ್ಯೆಯು ರಾಷ್ಟ್ರೀಯ ಶಕ್ತಿಗೆ ವರವಾಗಿ ಪರಿಗಣಿಸಲ್ಪಡುತ್ತದೆ. ಗಮನಾರ್ಹ ಅಂಶವೇನೆಂದರೆ, ಅಭಿವೃದ್ಧಿ ಹೊಂದಿದ ದೇಶಗಳಿಗೆ ಬೃಹತ್ ಜನಸಂಖ್ಯೆಯು ರಾಷ್ಟ್ರೀಯ ಶಕ್ತಿಗೆ ಮೂಲವೆನಿಸಿದರೆ ಅನಾಭಿವೃದ್ಧಿಯ ರಾಷ್ಟ್ರಗಳಿಗೆ ಅಧಿಕ ಜನಸಂಖ್ಯೆಯು ಶಾಪವಾಗಿ ಪರಿಣಮಿಸುತ್ತದೆ.

ದೇಶವೊಂದರ ಜನಸಂಖ್ಯೆಯ ಮಾನವ ಸಂಪನ್ಮೂಲವು ನೈಸರ್ಗಿಕ ಸಂಪನ್ಮೂಲಗಳನ್ನು ರಾಷ್ಟ್ರೀಯ ಅಗತ್ಯಗಳಿಗೆ ಪೂರೈಸಲು ಶ್ರಮಿಸಿ ರಾಷ್ಟ್ರೀಯ ಶಕ್ತಿಯನ್ನು ವೃದ್ಧಿಸುತ್ತವೆ. ಜೊತೆಗೆ ದೇಶದ ಕೈಗಾರಿಕಾ ಮತ್ತು ಸೈನಿಕ ಸಾಮರ್ಥ್ಯವನ್ನು ಸುಧಾರಿಸಲು ಮಾನವ ಸಂಪನ್ಮೂಲ ನೆರವಾಗುತ್ತದೆ. ಇದರೊಡನೆ ಮಾನವ ಶಕ್ತಿ ಮಾತ್ರವೇ ದೇಶದ ಸೈನಿಕ ವಿಜಯಕ್ಕೆ ಕಾರಣವಾಗಬಲ್ಲದು. ಆದ್ದರಿಂದಲೇ ವಾಲ್ಟೇರ್ ದೇವರು ಯಾವಾಗಲೂ ಬೃಹತ್ ಸೈನ್ಯವುಳ್ಳ ದೇಶದ ಪರವಾಗಿರುತ್ತಾನೆ ಎಂದಿರುವರು. ಫಲವಾಗಿ ಬೃಹತ್ ಜನಸಂಖ್ಯೆಯುಳ್ಳ ಏಷ್ಯಾದ ಚೀನಾ ಮತ್ತು ಭಾರತ ಶಕ್ತಿಯುತ ರಾಷ್ಟ್ರವಾಗಿ ಪರಿಗಣಿಸಲ್ಪಟ್ಟಿವೆ. ಕೌಶಲ್ಯಯುತ ಜನರು ದೇಶವೊಂದರ ರಾಷ್ಟ್ರೀಯ ಶಕ್ತಿಯನ್ನು ಹೆಚ್ಚಿಸಲು ಕಾರಣರಾಗುತ್ತಾರೆ. ಉದಾ: ಭಾರತವು ಕೌಶಲ್ಯಯುತ ಯುವ ಶಕ್ತಿಯನ್ನು ಹೆಚ್ಚಾಗಿ ಹೊಂದಿದುದು ಅದರ ಶಕ್ತಿಯನ್ನು ವೃದ್ಧಿಸಿದುದು. ಒಟ್ಟಾರೆ ರಾಷ್ಟ್ರೀಯ ಶಕ್ತಿಯ ಮೂಲಾಂಶವಾಗಿ ಜನಸಂಖ್ಯೆ ನಿರ್ವಹಿಸುವ ಪಾತ್ರವನ್ನು ಕಡೆಗಣಿಸಲಾಗದು.

ಗಮನಾರ್ಹ ಅಂಶವೇನೆಂದರೆ, ಜನಸಂಖ್ಯೆಯ ಗಾತ್ರಕ್ಕಿಂತ ಅದರ ಗುಣಮಟ್ಟವು ರಾಷ್ಟ್ರೀಯ ಶಕ್ತಿಯ ವೃದ್ಧಿಗೆ ಮಹತ್ವದ ಪಾತ್ರ ಒದಗಿಸಬಲ್ಲದು. ಅನಾರೋಗ್ಯ ಪೀಡಿತ, ಅವಿದ್ಯಾವಂತ, ಕೌಶಲ್ಯಹೀನ ಬೃಹತ್ ಜನಸಂಖ್ಯೆಯು ದೇಶದ ರಾಷ್ಟ್ರೀಯ ಶಕ್ತಿಗೆ ತೊಡಕುಂಟು ಮಾಡುವ ಸಾಧ್ಯತೆ ಅಧಿಕವಾಗಿರುತ್ತದೆ. ಜೊತೆಗೆ ಬಡತನ, ನಿರುದ್ಯೋಗ, ಆಹಾರದ ಕೊರತೆಯಂತಹ ಸವಾಲುಗಳನ್ನು ಸೃಷ್ಟಿಸಿ ದೇಶದ ಆರ್ಥಿಕ ಪ್ರಗತಿಯನ್ನು ಬೃಹತ್ ಜನಸಂಖ್ಯೆಯು ಕುಂಠಿತಗೊಳಿಸಬಹುದಾಗಿದೆ. ವಿದ್ಯಾವಂತ, ಕೌಶಲ್ಯಭರಿತ, ಸಮರ್ಪಣಾ ಮನೋಭಾವದ, ಶಿಸ್ತಿನ ಕಡಿಮೆ ಜನಸಂಖ್ಯೆಯು ದೇಶದ ರಾಷ್ಟ್ರೀಯ ಶಕ್ತಿಯನ್ನು ವೃದ್ಧಿಸಲು ಕಾರಣರಾಗುತ್ತಾರೆ. ಉದಾ: ಇಂಗ್ಲೆಂಡ್ ಕಡಿಮೆ ಜನಸಂಖ್ಯೆಯುಳ್ಳ ದೇಶವಾದರೂ ಭಾರತದಂತಹ ಬೃಹತ್ ಜನಸಂಖ್ಯೆಯ ದೇಶವನ್ನು ಆಳಿದುದು ಮತ್ತು



ಇಸ್ರೇಲ್ ತನಗಿಂತ ಅಧಿಕ ಜನಸಂಖ್ಯೆಯುಳ್ಳ ಅರಬ್ ರಾಷ್ಟ್ರಗಳಿಗಿಂತ ಶಕ್ತಿಶಾಲಿಯಾಗಿದುದು. ಒಟ್ಟಾರೆ ರಾಷ್ಟ್ರೀಯ ಶಕ್ತಿಯ ಮೂಲಾಂಶವಾಗಿ ಜನಸಂಖ್ಯೆಯು ಗುಣಾತ್ಮಕ ಹಾಗೂ ಪರಿಮಾಣಾತ್ಮಕ ಆಯಾಮಗಳೆರಡರಲ್ಲಿ ಉತ್ತೀರ್ಣಗೊಳ್ಳಬೇಕಾದದ್ದು ಅತ್ಯಗತ್ಯ.

**5. ಆರ್ಥಿಕ ಅಭಿವೃದ್ಧಿ [Economic Development]:** ದೇಶವೊಂದರ ರಾಷ್ಟ್ರೀಯ ಶಕ್ತಿಯ ಪ್ರಮುಖ ಮೂಲಾಂಶಗಳಲ್ಲಿ ಆರ್ಥಿಕ ಅಭಿವೃದ್ಧಿಯೂ ಒಂದು. ದೇಶವೊಂದರ ಸೈನಿಕ ಸಾಮರ್ಥ್ಯ ಹಾಗೂ ಜನರ ಕಲ್ಯಾಣಗಳು ಆರ್ಥಿಕ ಅಭಿವೃದ್ಧಿಯನ್ನೇ ಆಧರಿಸಿರುತ್ತದೆ. ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ ದೇಶವು ಅಂತರ್‌ರಾಷ್ಟ್ರೀಯ ರಾಜಕೀಯದಲ್ಲಿ ಸ್ವತಂತ್ರವಾಗಿ ವ್ಯವಹರಿಸಬಲ್ಲ ಸಾಮರ್ಥ್ಯವನ್ನು ಪಡೆದಿರುತ್ತದೆ. ಪರಿಣಾಮಕಾರಿ ಆರ್ಥಿಕ ಸಂಘಟನೆಗಳು ಮತ್ತು ಯೋಜನೆಗಳು ಆರ್ಥಿಕ ಅಭಿವೃದ್ಧಿಯನ್ನು ಬಲಗೊಳಿಸುತ್ತವೆ. ಅಂತೆಯೇ ಬಡತನ, ನಿರುದ್ಯೋಗ, ಅನಕ್ಷರತೆಗಳು ಆರ್ಥಿಕ ಅಭಿವೃದ್ಧಿಗೆ ಮಾರಕವಾಗಿ ರಾಷ್ಟ್ರೀಯ ಶಕ್ತಿಗೆ ಕಂಟಕವೆನಿಸುತ್ತವೆ. ಉದಾ: ತೃತೀಯ ಜಗತ್ತಿನ ಹಲವು ದೇಶಗಳು ನವ ವಸಾಹತುಶಾಹಿ ನೀತಿಗೊಳಪಟ್ಟು ಆರ್ಥಿಕವಾಗಿ ಹಿಂದುಳಿಯಲು ಅವುಗಳಲ್ಲಿನ ಆರ್ಥಿಕ ಅಭಿವೃದ್ಧಿಯ ತೊಡಕುಗಳೇ ಕಾರಣವಾದದ್ದು.

ಆರ್ಥಿಕವಾಗಿ ಅಭಿವೃದ್ಧಿಗೊಂಡಿರುವ ದೇಶಗಳು ಧನ ಸಹಾಯ, ಸಾಲ, ವಂತಿಕೆ ನೀಡುವ ಮೂಲಕ ಇತರ ದೇಶಗಳನ್ನು ನಿಯಂತ್ರಿಸುವ ಮೂಲಕ ತಮ್ಮ ಗುರಿಗಳನ್ನು ಸಾಧಿಸಿಕೊಳ್ಳುತ್ತವೆ. ಜೊತೆಗೆ ಆರ್ಥಿಕ ಸಾಧನಗಳನ್ನು ಬಳಸಿ ದೇಶಗಳು ಉತ್ಪಾದಕ ಮತ್ತು ಉಪಯುಕ್ತ ಫಲಿತಾಂಶಕ್ಕಾಗಿ ತಮ್ಮ ರಾಷ್ಟ್ರೀಯ ಶಕ್ತಿಯನ್ನು ಬಳಸಿಕೊಳ್ಳುತ್ತವೆ. ಹೀಗೆ ಆರ್ಥಿಕ ಅಭಿವೃದ್ಧಿಯು ರಾಷ್ಟ್ರೀಯ ಶಕ್ತಿಯ ಮೂಲಾಂಶವಾಗಿ ಪರಿಗಣಿಸಲ್ಪಟ್ಟಿದೆ.

**6. ಸೈನಿಕ ಸಿದ್ಧತೆ [Military Preparedness]:** ಸೈನಿಕ ಶಕ್ತಿಯು ದೇಶವೊಂದರ ರಾಷ್ಟ್ರೀಯ ಶಕ್ತಿಯ ಮಹತ್ವದ ಮೂಲಾಂಶವಾಗಿದೆ. ಕೆಲವರು ರಾಷ್ಟ್ರೀಯ ಶಕ್ತಿ ಮತ್ತು ಸೈನಿಕ ಶಕ್ತಿ ಸಮಾನಾರ್ಥಕ ಪರಿಕಲ್ಪನೆಗಳೆಂದು ಅಭಿಪ್ರಾಯಪಟ್ಟಿರುವುದು ಅದರ ಪ್ರಾಮುಖ್ಯತೆಯನ್ನು ತೋರಿಸುತ್ತದೆ. ಸೈನಿಕ ಶಕ್ತಿಯು ಅಥವಾ ಸಿದ್ಧತೆಯು ರಾಷ್ಟ್ರೀಯ ಶಕ್ತಿಯ ಗೋಚರ ಮೂಲಾಂಶವಾಗಿದ್ದು ದೇಶವೊಂದರ ವಿದೇಶಾಂಗ ನೀತಿಯ ಹಿಂದಿರುವ ಪ್ರಬಲ ಶಕ್ತಿಯಾಗಿದೆ. ರಾಷ್ಟ್ರೀಯ ಶಕ್ತಿಯ ಮೂಲಾಂಶವಾಗಿ ಸೈನಿಕ ಶಕ್ತಿಯನ್ನು ವಿಶ್ಲೇಷಿಸುವಾಗ ಈ ಕೆಳಗಿನ ಅಂಶಗಳನ್ನು ಗಮನಿಸಬೇಕಾದದ್ದು ಅತ್ಯಗತ್ಯ.

**ಅ. ಯುದ್ಧ ತಂತ್ರಜ್ಞಾನ:** ಸೈನ್ಯವೊಂದು ಯಾವ ಪ್ರಕಾರದ ಮತ್ತು ಸ್ವರೂಪದ ಶಸ್ತ್ರಾಸ್ತ್ರಗಳನ್ನು ಯುದ್ಧದ ಸಮಯದಲ್ಲಿ ಬಳಸುತ್ತದೆ ಎಂಬುದನ್ನು ಯುದ್ಧ ತಂತ್ರಜ್ಞಾನ ಪ್ರತಿನಿಧಿಸುತ್ತದೆ. ಸುಧಾರಿತ ಯುದ್ಧ ತಂತ್ರಗಳು ಮತ್ತು ಶಸ್ತ್ರಗಳನ್ನು ಹೊಂದಿದ ಸೈನ್ಯವು ಮಾತ್ರ ಶಕ್ತಿಶಾಲಿಯಾಗಿರುತ್ತದೆ. ಸಾಂಪ್ರದಾಯಿಕ ಶಸ್ತ್ರ ಮತ್ತು ತಂತ್ರಗಳನ್ನು ಪಾಲಿಸುವ ಸೈನ್ಯವು ದುರ್ಬಲವಾಗಿರುತ್ತದೆ. ಹೀಗಾಗಿ ಸೈನಿಕ ಸಿದ್ಧತೆಯಲ್ಲಿ ಆಧುನಿಕ ಸುಧಾರಿತ ಶಸ್ತ್ರಾಸ್ತ್ರ

ಮತ್ತು ಯುದ್ಧ ಕೌಶಲ್ಯಗಳನ್ನು ಮೈಗೂಡಿಸಿಕೊಂಡ ದೇಶದ ರಾಷ್ಟ್ರೀಯ ಶಕ್ತಿಯು ಪ್ರಬಲವಾಗಿರುತ್ತದೆ.

**ಆ. ಗುಣಾತ್ಮಕ ನಾಯಕತ್ವ:** ದೇಶವೊಂದರ ಸೈನಿಕ ಸಿದ್ಧತೆಯು ಪರಿಣಾಮಕಾರಿಯಾಗಲು ಅದರ ವ್ಯವಸ್ಥಿತ ಯೋಜನೆಯು ಅತ್ಯಗತ್ಯ. ಜೊತೆಗೆ ಸೈನಿಕ ಶಕ್ತಿಯು ಮೈಗೂಡಿಸಿಕೊಂಡ ಯುದ್ಧ ತಂತ್ರಜ್ಞಾನವು ರಾಷ್ಟ್ರೀಯ ಶಕ್ತಿಯನ್ನು ಬಲಗೊಳಿಸಲು ಅದರ ದಕ್ಷ ಮತ್ತು ಸಮಯೋಚಿತ ಬಳಕೆ ಅನಿವಾರ್ಯ. ಈ ಹಿನ್ನೆಲೆಯಲ್ಲಿ ಸೈನಿಕ ಸಿದ್ಧತೆಯು ದಕ್ಷ, ಚಾಣಾಕ್ಷ, ಅನುಭವಿ, ಸಮರ್ಪಣಾ ಮನೋಭಾವದ ನಾಯಕರನ್ನು ಅವಲಂಬಿಸಿರುತ್ತದೆ.

**ಇ. ಗೂಢಾಚಾರ:** ಸೈನಿಕ ಕಾರ್ಯಾಚರಣೆಯ ಯಶಸ್ಸು ಪರಿಣಾಮಕಾರಿ ಗೂಢಾಚಾರವನ್ನು ಅವಲಂಬಿಸಿರುತ್ತದೆ. ರಾಡಾರ್‌ಗಳು, ಡ್ರೋನ್‌ಗಳು, ಕೃತಕ ಉಪಗ್ರಹಗಳ ನೆರವಿನಿಂದ ಎದುರಾಳಿಗಳ ಸೈನಿಕ ಸಿದ್ಧತೆಯನ್ನು ಅರಿತುಕೊಳ್ಳಲು ಗೂಢಾಚಾರ ಅನಿವಾರ್ಯ. ಎದುರಾಳಿ ಸೈನ್ಯದ ಸಿದ್ಧತೆಯ ಸ್ವರೂಪ, ನೆಲೆ, ಪ್ರಮಾಣವನ್ನು ಮನದಟ್ಟು ಮಾಡಿಕೊಂಡು ದೇಶವೊಂದು ತನ್ನ ಯೋಜನೆ ರೂಪಿಸಿ ಜಯಶಾಲಿಯಾಗಲು ಸೈನಿಕ ಸಿದ್ಧತೆಯ ಭಾಗವಾಗಿ ಗೂಢಾಚಾರ ಬಳಸಲ್ಪಡುತ್ತದೆ. ಉದಾ: ಭಾರತದ ಸೈನಿಕ ಸಿದ್ಧತೆಯನ್ನು ಅರಿತುಕೊಳ್ಳಲು ಪಾಕಿಸ್ತಾನವು ಸುಂದರ ಯುವತಿಯರ ಮೂಲಕ ಪ್ರಯತ್ನಿಸಿದುದು.

**ಈ. ಸೈನಿಕರ ಗುಣ ಮತ್ತು ಪ್ರಮಾಣ:** ದೊಡ್ಡ ಸಂಖ್ಯೆಯ ಸೈನಿಕರು ಮತ್ತು ಹೇರಳ ಶಸ್ತ್ರಾಸ್ತ್ರಗಳು ಸೈನಿಕ ಸಿದ್ಧತೆಯ ಪ್ರಮಾಣವನ್ನು ಸೂಚಿಸುತ್ತವೆ. ಅಂತೆಯೇ ಸೈನಿಕರ ಮನೋಬಲ, ತರಬೇತಿ, ಕೌಶಲ್ಯ, ಶಿಸ್ತು, ಸಮರ್ಪಣಾಭಾವ ಅವರ ಗುಣವನ್ನು ಸೂಚಿಸುತ್ತವೆ. ಸೈನಿಕ ಸಿದ್ಧತೆಯು ರಾಷ್ಟ್ರೀಯ ಶಕ್ತಿಯನ್ನು ವೃದ್ಧಿಸಲು ಇವೆರಡರ ಸಂಗಮ ಅತ್ಯಗತ್ಯ. ಒಂದೊಮ್ಮೆ ಅಧಿಕ ಪ್ರಮಾಣದ ಸೈನಿಕರು ಸಮರ್ಪಕ ಗುಣವನ್ನು ಅಳವಡಿಸಿಕೊಳ್ಳದಿದ್ದರೆ ಯುದ್ಧದಲ್ಲಿ ಸೋಲು ಎದುರಾಗುತ್ತದೆ. ಉದಾ: 1965 ರ ಭಾರತ ಮತ್ತು ಪಾಕ್ ಯುದ್ಧದಲ್ಲಿ ಪಾಕಿಸ್ತಾನವು ಸುಧಾರಿತ ಶಸ್ತ್ರಾಸ್ತ್ರ ಹೊಂದಿದ್ದರೂ ಅವುಗಳನ್ನು ಸಮರ್ಪಕವಾಗಿ ಬಳಸುವ ಗುಣವನ್ನು ಮೈಗೂಡಿಸಿಕೊಳ್ಳದ ಕಾರಣ ಜಯಶಾಲಿಯಾಗಲು ಸಾಧ್ಯವಾಗದಿದ್ದದ್ದು.

**7. ಸಿದ್ಧಾಂತ [Ideology]:** ನಿರ್ದಿಷ್ಟ ಸಿದ್ಧಾಂತದ ಪಾಲನೆಯು ದೇಶವೊಂದರ ರಾಷ್ಟ್ರೀಯ ಶಕ್ತಿಯನ್ನು ವೃದ್ಧಿಸಲು ಅಥವಾ ಕ್ಷೀಣಿಸಲು ಕಾರಣವಾಗುವ ಮೂಲಕ ಅದರ ಮೂಲಾಂಶವೆನಿಸಿದೆ. ರಾಷ್ಟ್ರೀಯ ಶಕ್ತಿಯ ಅಗೋಚರ ಮೂಲಾಂಶವಾಗಿರುವ ಸಿದ್ಧಾಂತವು ದೇಶದೊಳಗೆ ಮತ್ತು ಹೊರಗೆ ಜನರನ್ನು ಒಂದುಗೂಡಿಸುವ ಸಾಧನವಾಗಿದೆ. ಉದಾ: 1917 ರಿಂದ 1990 ರವರೆಗೆ ಸಮತಾವಾದಿ ಸಿದ್ಧಾಂತವು ಸೋವಿಯತ್ ಒಕ್ಕೂಟದಲ್ಲಿ ಏಕತೆಯನ್ನು ನೆಲೆಸಿ, ರಾಷ್ಟ್ರೀಯ ಶಕ್ತಿಯನ್ನು ವೃದ್ಧಿಸಲು ಕಾರಣವಾಗಿದುದು. ಕೆಲವೊಮ್ಮೆ ಸೈದ್ಧಾಂತಿಕ ಅನುಸರಣೆಯೇ ರಾಷ್ಟ್ರೀಯ ಶಕ್ತಿಯನ್ನು ನಾಶಗೊಳಿಸಲು



ನೆರವಾಗಬಹುದಾಗಿದೆ. ಉದಾ: ಜರ್ಮನಿ ಅನುಸರಿಸಿದ ನಾಜಿವಾದಿ ಸಿದ್ಧಾಂತವು ಎರಡನೇ ಮಹಾ ಯುದ್ಧದ ವೇಳೆ ಅದರ ಶಕ್ತಿಯನ್ನು ಕುಗ್ಗಿಸಲು ಕಾರಣವಾದುದು. ಸಮಾಧಾನಕರ ಅಂಶವೇನೆಂದರೆ, ಪ್ರಜಾಸತ್ತಾತ್ಮಕ ಸಮಾಜವಾದಿ ಸಿದ್ಧಾಂತವನ್ನು ಮೈಗೂಡಿಸಿಕೊಂಡ ಭಾರತವು ಪಾಶ್ಚಿಮಾತ್ಯ ಪ್ರಜಾಸತ್ತಾತ್ಮಕ ಮತ್ತು ಪೌರಾತ್ಯ ಸಮಾಜವಾದಿ ಬಣಗಳೆರಡರ ಬೆಂಬಲದೊಡನೆ ತನ್ನ ರಾಷ್ಟ್ರೀಯ ಶಕ್ತಿಯನ್ನು ಸುಧಾರಿಸಿಕೊಳ್ಳಲು ಯಶಸ್ವಿಯಾದುದು. ಹೀಗೆ ದೇಶಗಳ ರಾಷ್ಟ್ರೀಯ ಶಕ್ತಿಯ ಮೇಲೆ ಅವುಗಳು ಅನುಸರಿಸುವ ಸೈದ್ಧಾಂತಿಕ ತತ್ವಗಳ ಪ್ರಭಾವ ಅಧಿಕವಾಗಿದ್ದು ರಾಷ್ಟ್ರೀಯ ಶಕ್ತಿಯ ಮೂಲಾಂಶವಾಗಿ ಪರಿಗಣಿಸಲ್ಪಟ್ಟಿದೆ.

**8. ರಾಷ್ಟ್ರೀಯ ಗುಣ ಮತ್ತು ಮನೋಧೋರಣೆ**

[National Character and Morale]:

ರಾಷ್ಟ್ರೀಯ ಗುಣವು ರಾಷ್ಟ್ರೀಯ ಶಕ್ತಿಯ ಮಹತ್ವದ ಅಗೋಚರ ಮೂಲಾಂಶವಾಗಿದೆ. ಜನರು ತಮ್ಮ ರಾಷ್ಟ್ರವನ್ನು ಕುರಿತಂತೆ ಹೊಂದಿರುವ ವರ್ತನೆಗಳನ್ನು ಸರಳವಾಗಿ ರಾಷ್ಟ್ರೀಯ ಗುಣ ಎನ್ನಬಹುದಾಗಿದೆ. ಆಯಾ ದೇಶದ ಜನರಲ್ಲಿ ಅವ್ಯಕ್ತವಾಗಿ ರೂಪುಗೊಂಡು ರಾಷ್ಟ್ರವನ್ನು ಪ್ರತಿನಿಧಿಸುವ ಅಂಶಗಳನ್ನು ರಾಷ್ಟ್ರೀಯ ಗುಣ ಎನ್ನಲಾಗುತ್ತದೆ. ಉದಾ: ಸಹಿಷ್ಣುತೆಯು ಭಾರತದ, ಸಂಶೋಧಕತ್ವವು ಅಮೇರಿಕಾದ, ಸಾಮಾನ್ಯ ಜ್ಞಾನವು ಬ್ರಿಟನ್ನಿನ,. ಶಿಸ್ತು ಜರ್ಮನಿಯ ರಾಷ್ಟ್ರೀಯ ಗುಣವಾಗಿದುದು. ಈ ರಾಷ್ಟ್ರೀಯ ಗುಣವು ರಾಷ್ಟ್ರೀಯ ಶಕ್ತಿಯನ್ನು ಬಲಗೊಳಿಸಲು ಸಹಕಾರಿಯಾಗುತ್ತದೆ. ಅಂತೆಯೇ ದೇಶವೊಂದರ ಜನರಲ್ಲಿನ ಸಕಾರಾತ್ಮಕ ಮನೋಧೋರಣೆಯು ಆ ದೇಶದ ರಾಷ್ಟ್ರೀಯ ಶಕ್ತಿಯ ಮೂಲಾಂಶವೆನಿಸುತ್ತದೆ. ಉದಾ: 1965 ರಲ್ಲಿ ಭಾರತವು ಪಾಕಿಸ್ತಾನವನ್ನು ಮಣಿಸಿದುದು, 1974 ರಲ್ಲಿ ಅಣು ಪರೀಕ್ಷೆ ನಡೆಸಿದುದು, 1978 ರಲ್ಲಿ ಹಸಿರು ಕ್ರಾಂತಿಯ ಮೂಲಕ ಆಹಾರದಲ್ಲಿ ಸ್ವಾವಲಂಬನೆ ಸಾಧಿಸಿದುದು ಭಾರತೀಯರ ಮನೋಧೋರಣೆ ಬಲಗೊಳಿಸುವ ಮೂಲಕ ದೇಶದ ರಾಷ್ಟ್ರೀಯ ಶಕ್ತಿಯನ್ನು ಸುಧಾರಿಸಿದುದು. ಒಟ್ಟಾರೆ ಉನ್ನತ ಹಾಗೂ ಆರೋಗ್ಯಕರ ಮನೋಧೋರಣೆಯು ದೇಶವೊಂದರ ರಾಷ್ಟ್ರೀಯ ಶಕ್ತಿಯನ್ನು ಬಲಗೊಳಿಸಲು ಸಹಕಾರಿ ಎನ್ನಬಹುದು.

9. ರಾಯಭಾರತ್ವ [Diplomacy]:

10. ನಾಯಕತ್ವ [Leadership]:

11. ರಾಜಕೀಯ ರಚನೆ [Political Structure]:

ಈ ಮೇಲೆ ಪ್ರಸ್ತಾಪಿಸಿದ ಅಂಶಗಳು ರಾಷ್ಟ್ರೀಯ ಶಕ್ತಿಯ ಪ್ರಧಾನ ಮೂಲಾಂಶಗಳಾಗಿವೆ. ಪ್ರಸ್ತಾಪಿತ ಮೂಲಾಂಶಗಳಲ್ಲದೇ ವುಲ್ಫ್ ಮತ್ತು ಕೌಲಂಬಸ್ ದೇಶಗಳ

ಪ್ರತಿಷ್ಠೆ, ವಿದೇಶಿ ನೆರವು, ಅವಗಡಗಳನ್ನು ರಾಷ್ಟ್ರೀಯ ಶಕ್ತಿಯ ಮೂಲಾಂಶಗಳೆಂದು ಪ್ರತಿಪಾದಿಸಿರುವರು. ಗಮನಾರ್ಹ ಅಂಶವೇನೆಂದರೆ, ದೇಶವೊಂದರ ರಾಷ್ಟ್ರೀಯ ಶಕ್ತಿಯು ಗೋಚರ ಮತ್ತು ಅಗೋಚರ ಮೂಲಾಂಶಗಳಿಂದ ಪ್ರಭಾವಿತಗೊಂಡಿರುತ್ತದೆ. ಜೊತೆಗೆ ಒಂದೇ ನಿರ್ದಿಷ್ಟ ಮೂಲಾಂಶವು ರಾಷ್ಟ್ರೀಯ ಶಕ್ತಿಯನ್ನು ನಿರ್ಧರಿಸದೇ ವಿವಿಧ ಮೂಲಾಂಶಗಳು ದೇಶವೊಂದರ ರಾಷ್ಟ್ರೀಯ ಶಕ್ತಿಯನ್ನು ಪ್ರಭಾವಿಸಿರುತ್ತವೆ.

### [E] ರಾಷ್ಟ್ರೀಯ ಶಕ್ತಿಯ ಮಿತಿಗಳು [Limitations of National Power]:

ಅಂತರ್‌ರಾಷ್ಟ್ರೀಯ ರಾಜಕೀಯದಲ್ಲಿ ದೇಶವೊಂದು ತನ್ನದೇಯಾದ ರಾಷ್ಟ್ರೀಯ ಶಕ್ತಿಯನ್ನು ಹೊಂದಲು ಸರ್ವಾನುಮತದ ಸಮ್ಮತಿ ನೀಡಲಾಗಿದೆ. ಆಯಾ ದೇಶದ ರಾಷ್ಟ್ರೀಯ ಶಕ್ತಿಯನ್ನು ಆಧರಿಸಿ ದೇಶವೊಂದು ತನ್ನ ಸ್ಥಾನಮಾನ ಗಳಿಸಿಕೊಳ್ಳುತ್ತದೆ. ಇದರೊಂದಿಗೆ ಅಮಿತ ಶಕ್ತಿಯನ್ನು ಪ್ರತಿ ದೇಶಗಳು ಹೊಂದಲು ಮುಂದಾದರೆ ಅರಾಜಕತೆ, ಯುದ್ಧ, ಸಂಘರ್ಷ ಜಗತ್ತಿನಲ್ಲಿ ಸರ್ವೇ ಸಾಮಾನ್ಯವೆನಿಸುತ್ತವೆ. ಹೀಗಾಗಿ ದೇಶಗಳ ರಾಷ್ಟ್ರೀಯ ಶಕ್ತಿಯ ಮೇಲೆ ಕೆಲ ಮಿತಿಗಳನ್ನು ಅಂದಂದಿನ ಅಗತ್ಯಾನುಸಾರ ಪ್ರತಿಪಾದಿಸಲಾಗಿದೆ. ಪ್ರಸ್ತುತ ದೇಶಗಳ ರಾಷ್ಟ್ರೀಯ ಶಕ್ತಿಯ ಮೇಲಿರುವ ಪ್ರಮುಖ ಮಿತಿಗಳನ್ನು ಈ ಕೆಳಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

**1. ಶಕ್ತಿ ಸಮತೋಲನ [Balance of Power]:** ಪರಸ್ಪರ ಪೈಪೋಟಿಗೆ ಮುಂದಾಗುವ ದೇಶಗಳ ರಾಷ್ಟ್ರೀಯ ಶಕ್ತಿಯಲ್ಲಿ ಸಮತೋಲನ ತರುವುದೇ ಶಕ್ತಿ ಸಮತೋಲನದ ಪ್ರಧಾನ ಗುರಿ. ಈ ಸಾಧನದಿಂದ ಶಕ್ತಿಯ ವ್ಯವಸ್ಥಾಪನೆಯೊಡನೆ ಶಕ್ತಿಯ ಮೇಲೆ ಮಿತಿಯನ್ನು ಪ್ರತಿಪಾದಿಸಲಾಗಿದೆ. ಪ್ರಬಲ ಮತ್ತು ಪೈಪೋಟಿಗಿಳಿದ ದೇಶಗಳ ಶಕ್ತಿಯಲ್ಲಿ ಸಮಾನತೆ ತರುವ ಮೂಲಕ ಶಕ್ತಿ ಬಳಕೆಯಾಗದಂತೆ ನಿಯಂತ್ರಿಸುವುದು ಶಕ್ತಿ ಸಮತೋಲನದ ತಿರುಳಾಗಿದೆ. ದೇಶವೊಂದು ತನ್ನ ಅಮಿತ ಶಕ್ತಿಯನ್ನು ಬಳಸಿ ಪ್ರಾಬಲ್ಯ ಮೆರೆಯಲು ಪ್ರಯತ್ನಿಸಿದರೆ ಹಲವು ರಾಷ್ಟ್ರಗಳು ಒಗ್ಗೂಡಿ ಅದಕ್ಕೆ ಸಮನಾದ ಶಕ್ತಿಯನ್ನು ಸೃಷ್ಟಿಸುವ ಮೂಲಕ ಶಕ್ತಿಶಾಲಿ ದೇಶವನ್ನು ನಿಯಂತ್ರಿಸಲು ಪ್ರಯತ್ನಿಸುತ್ತವೆ. ಉದಾ: 19 ನೇ ಶತಮಾನದಲ್ಲಿ ಯುರೋಪಿನ ರಾಷ್ಟ್ರಗಳು ಶಕ್ತಿ ಸಮತೋಲನದ ನೆರವಿನಿಂದ 1815 ರಿಂದ 1914 ರವರೆಗೆ ದೊಡ್ಡ ಯುದ್ಧ ಜರುಗದಂತೆ ನಿಯಂತ್ರಿಸಿದುದು. ಈ ಹಿನ್ನೆಲೆಯಲ್ಲಿ ಶಕ್ತಿ ಸಮತೋಲನ ಪರಿಕಲ್ಪನೆಯು ಶಕ್ತಿಯ ಮೇಲಿನ ಮಿತಿಯಾಗಿ ಪರಿಣಮಿಸಿದೆ. ಪ್ರಸ್ತುತ ಪ್ರಾದೇಶಿಕ ಮತ್ತು ಉಪ ಪ್ರಾದೇಶಿಕ ಮಟ್ಟದಲ್ಲಿ ಅಸ್ತಿತ್ವದಲ್ಲಿರುವ ಶಕ್ತಿ ಸಮತೋಲನವು ಜಾಗತಿಕ ಮಟ್ಟದಲ್ಲಿ ತನ್ನ ಮಹತ್ವ ಕಳೆದುಕೊಂಡಿದೆ.

**2. ಅಂತರ್‌ರಾಷ್ಟ್ರೀಯ ಕಾನೂನು [International Law]:** ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿ ಪ್ರಪಂಚದ ದೇಶಗಳಿಗೆ ಬಂಧನಕಾರಿಯಾದ ಕಾನೂನುಗಳೇ



ಅಂತರ್‌ರಾಷ್ಟ್ರೀಯ ಕಾನೂನುಗಳಾಗಿವೆ. ರಾಷ್ಟ್ರ ರಾಜ್ಯಗಳು ಪರಸ್ಪರ ಸಮ್ಮತಿಸಿ ಪಾಲಿಸುವ ಅಂತರ್‌ರಾಷ್ಟ್ರೀಯ ಕಾನೂನುಗಳು ಅವುಗಳ ವರ್ತನೆಯನ್ನು ನಿರ್ದೇಶಿಸುತ್ತವೆ. ಸ್ವಾಭಾವಿಕ ಕಾನೂನು, ಅಂತರ್‌ರಾಷ್ಟ್ರೀಯ ನೈತಿಕತೆ, ಸರ್ವಾನುಮತದ ಸಮ್ಮತಿ, ಜಾಗತಿಕ ಸಾರ್ವಜನಿಕಾಭಿಪ್ರಾಯಗಳ ಬೆಂಬಲವುಳ್ಳ ಅಂತರ್‌ರಾಷ್ಟ್ರೀಯ ಕಾನೂನು ಜಗತ್ತಿನ ವಿವಿಧ ದೇಶಗಳು ಯುದ್ಧ ಮತ್ತು ಶಾಂತಿಯ ಕಾಲದಲ್ಲಿ ಅನುಸರಿಸಬೇಕಾದ ನಿಯಮಗಳನ್ನು ಒಳಗೊಂಡಿರುತ್ತವೆ. ದೇಶಗಳು ಏನನ್ನು ಮಾಡಬೇಕು ಮತ್ತು ಮಾಡಬಾರದು ಎಂಬುದನ್ನು ಪ್ರತಿಪಾದಿಸುವ ಅಂತರ್‌ರಾಷ್ಟ್ರೀಯ ಕಾನೂನುಗಳು ದೇಶವೊಂದು ತನ್ನ ಶಕ್ತಿಯನ್ನು ದುರುಪಯೋಗವಾಗದಂತೆ ತಡೆಯುತ್ತದೆ. ಇದರೊಡನೆ ಇತರ ದೇಶಗಳ ಹಿತಾಸಕ್ತಿಗೆ ವಿರುದ್ಧವಾದ ಯುದ್ಧವನ್ನು ಅಸಿಂಧು ಎಂದು ಈ ಕಾನೂನು ಪರಿಗಣಿಸುತ್ತದೆ. ಒಟ್ಟಾರೆ ದೇಶವೊಂದು ತನ್ನ ಶಕ್ತಿಯನ್ನು ಮನಸೋಇಚ್ಛೆ ಬಳಸದಂತೆ ನೈತಿಕ ತಳಹದಿಯಲ್ಲಿ ನಿಯಂತ್ರಿಸುವ ಮೂಲಕ ಶಕ್ತಿಯ ಮೇಲಿನ ಪ್ರಧಾನ ಮಿತಿಯೆನಿಸಿದೆ. ಗಮನಾರ್ಹ ಅಂಶವೇನೆಂದರೆ ವಿಧಿಬದ್ಧತೆ ಹೊಂದಿರದೇ ಸ್ವಯಂಪೂರ್ಣತೆಯಿಂದ ಪಾಲಿಸುವ ಅಂತರ್‌ರಾಷ್ಟ್ರೀಯ ಕಾನೂನುಗಳು ದುರ್ಬಲ ಕಾನೂನುಗಳೆನಿಸಿವೆ.

**3. ಅಂತರ್‌ರಾಷ್ಟ್ರೀಯ ನೈತಿಕತೆ [International Morale]:** ಅಂತರ್‌ರಾಷ್ಟ್ರೀಯ ಸಂಬಂಧಗಳ ನಿರ್ವಹಣೆಯಲ್ಲಿ ಜಗತ್ತಿನ ಎಲ್ಲ ದೇಶಗಳಿಂದ ಸಮ್ಮತಿಸಲ್ಪಟ್ಟ ನೈತಿಕ ಸಂಹಿತೆಯೇ ಅಂತರ್‌ರಾಷ್ಟ್ರೀಯ ನೈತಿಕತೆಯಾಗಿದೆ, ಸಮಾಜದಲ್ಲಿ ಮಾನವರ ವರ್ತನೆಗಳನ್ನು ನೈತಿಕ ನಿಯಮಾವಳಿಗಳು ನಿಯಂತ್ರಿಸುವಂತೆ ಜಾಗತಿಕವಾಗಿ ರಾಷ್ಟ್ರಗಳ ವರ್ತನೆಯನ್ನು ಅಂತರ್‌ರಾಷ್ಟ್ರೀಯ ನೈತಿಕತೆಯು ನಿಯಂತ್ರಿಸುತ್ತದೆ. ಅಂತರ್‌ರಾಷ್ಟ್ರೀಯ ಸಮುದಾಯವು ಶಾಂತಿ, ಸುವ್ಯವಸ್ಥೆ, ಒಳಿತು, ಪರಸ್ಪರ ನೆರವು, ಸಮಾನ ಗೌರವ, ಹಕ್ಕುಗಳ ಮನ್ನಣೆ ಮುಂತಾದ ವಿಚಾರಗಳಲ್ಲಿ ಸರ್ವಾನುಮತ ಹೊಂದಿ ವರ್ತಿಸಲು ಮುಂದಾಗಿರುತ್ತವೆ. ರಾಷ್ಟ್ರಗಳ ಈ ಧೋರಣೆಯು ಮಾನವರಲ್ಲಿ ಯುದ್ಧ ವಿರೋಧಿ ಜಾಗೃತಿ ಮೂಡಿಸುವ ಮೂಲಕ ದೇಶಗಳ ಶಕ್ತಿಯ ಬಳಕೆಯನ್ನು ತಡೆಯುತ್ತದೆ.

**4. ಜಾಗತಿಕ ಸಾರ್ವಜನಿಕಾಭಿಪ್ರಾಯ [World Public Opinion]:** ಆಧುನಿಕ ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನಗಳು ವಿಶ್ವವನ್ನು ಕಿರಿದಾಗಿಸಿವೆ. ಜೊತೆಗೆ ದೇಶಗಳ ವಿದೇಶಾಂಗ ನೀತಿಯಲ್ಲಿ ಪ್ರಜಾಸತ್ತಾತ್ಮಕ ಅಂಶಗಳ ಮೈಗೂಡಿಸಿಕೊಳ್ಳುವಿಕೆ ವಿದೇಶಗಳ ಜನರನ್ನು ಹತ್ತಿರಗೊಳಿಸಿವೆ. ಹೀಗಾಗಿ ವಿಶ್ವದ ಪರಿಸರ, ಮಾನವ ಹಕ್ಕು, ಅಣ್ವಸ್ತ್ರ ಪರೀಕ್ಷೆ, ನಿಶ್ಶಸ್ತ್ರೀಕರಣ ಚಳುವಳಿಗಳನ್ನು ಹುಟ್ಟುಹಾಕಿ ಪ್ರಬಲ ಸಾರ್ವಜನಿಕಾಭಿಪ್ರಾಯ ಸೃಷ್ಟಿಸಲು ಸಾಧ್ಯವಾಗಿದೆ. ರಾಷ್ಟ್ರಗಳು ಶಕ್ತಿಯನ್ನು ಅನಾವಶ್ಯಕವಾಗಿ ಬಳಸದಂತೆ ಈ ಜಾಗತಿಕ ಸಾರ್ವಜನಿಕಾಭಿಪ್ರಾಯವು ಒತ್ತಡ ಹೇರುತ್ತವೆ. ಫಲವಾಗಿ ರಾಷ್ಟ್ರಗಳ ಶಕ್ತಿ ಪ್ರಯೋಗ ಸಹಜವಾಗಿ ಮಿತಿಗೊಳಪಟ್ಟಿದೆ.

**5. ಜಾಗತಿಕ ಮತ್ತು ಪ್ರಾದೇಶಿಕ ಸಂಘಟನೆಗಳು [International and Reasonal Organisations]:** ಮೊದಲ ವಿಶ್ವ ಸಮರ ಅಂತ್ಯಗೊಂಡಾಗ 1920 ರಲ್ಲಿ ರಾಷ್ಟ್ರಗಳ ಸಂಘ ಅಸ್ತಿತ್ವಕ್ಕೆ ಬಂದು ಪ್ರಬಲ ದೇಶಗಳನ್ನು ಹತೋಟಿಗೊಳಪಡಿಸಲು ಪ್ರಯತ್ನಿಸಿತು. ಈ ನಡುವೆ ಜರುಗಿದ ಎರಡನೇ ವಿಶ್ವ ಸಮರದ ಬಳಿಕ ರಾಷ್ಟ್ರಗಳ ಸಂಘಕ್ಕಿಂತ ಪ್ರಬಲವಾದ ವಿಶ್ವ ಸಂಸ್ಥೆ ಎಂಬ ಅಂತರ್‌ರಾಷ್ಟ್ರೀಯ ಸಂಘಟನೆ ರೂಪುಗೊಂಡಿತು. ಈ ಸಂಸ್ಥೆಯು ಅಂತರ್‌ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗೆ ದೇಶಗಳ ರಾಷ್ಟ್ರೀಯ ಶಕ್ತಿಯು ಕೊಡಕಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ಹೊಂದಿದೆ. ಜೊತೆಗೆ ವಿಶ್ವ ಸಂಸ್ಥೆಯ ಇತರ ವಿಶೇಷ ಸಂಸ್ಥೆಗಳಾದ ವಿಶ್ವ ಆರೋಗ್ಯ ಸಂಸ್ಥೆ, ಆಹಾರ ಮತ್ತು ಕೃಷಿ ಸಂಸ್ಥೆ, ವಿಶ್ವ ವಾಣಿಜ್ಯ ಸಂಸ್ಥೆ, ವಿಶ್ವ ಬ್ಯಾಂಕ್ ಮುಂತಾದವು ವಿವಿಧ ಕ್ಷೇತ್ರಗಳಲ್ಲಿ ರಾಷ್ಟ್ರಗಳ ನಡುವೆ ಸಂಯೋಜನೆ ಉಂಟು ಮಾಡುವ ಮೂಲಕ ಶಕ್ತಿಯ ದುರುಪಯೋಗವನ್ನು ತಡೆಯುತ್ತಿವೆ. ಅಲ್ಲದೇ ದಕ್ಷಿಣ ಏಷ್ಯಾದ ಪ್ರಾದೇಶಿಕ ಸಹಕಾರ ಸಂಸ್ಥೆ, ಯುರೋಪಿಯನ್ ಒಕ್ಕೂಟ, ತೈಲ ರಫ್ತು ದೇಶಗಳ ಸಂಸ್ಥೆ ಮುಂತಾದ ಪ್ರಾದೇಶಿಕ ಸಂಘಟನೆಗಳೂ ಸಹ ಪರಸ್ಪರರ ಶಕ್ತಿಯನ್ನು ದುರುಪಯೋಗವಾಗದಂತೆ ನಿಯಂತ್ರಿಸಲು ಕಾರಣವಾಗಿವೆ.

**6. ಸಾಮೂಹಿಕ ಭದ್ರತೆ [Collective Security]:** ದೇಶವೊಂದರ ಸ್ವಾತಂತ್ರ್ಯ ಮತ್ತು ಭೌಗೋಳಿಕ ಅಖಂಡತೆಗೆ ಬೇರೊಂದು ದೇಶವು ಶಕ್ತಿಯ ನೆರವಿನಿಂದ ಧಕ್ಕೆಯುಂಟು ಮಾಡಿದರೆ ಉಳಿದ ದೇಶಗಳೆಲ್ಲ ಸಾಮೂಹಿಕವಾಗಿ ತೊಂದರೆಗೊಳಗಾದ ದೇಶದ ಪರವಾಗಿ ನಿಲ್ಲುವುದೇ ಸಾಮೂಹಿಕ ಭದ್ರತೆಯ ತಿರುಳಾಗಿದೆ. ಅಂತರ್‌ರಾಷ್ಟ್ರೀಯ ಶಾಂತಿಯು ಸಾಮೂಹಿಕ ಭದ್ರತೆಯ ಪ್ರಧಾನ ಉದ್ದೇಶವಾಗಿರುತ್ತದೆ. ಶಾಂತಿಯನ್ನು ನಾಶಗೊಳಿಸುವ ದೇಶದ ವಿರುದ್ಧ ಸಾಮೂಹಿಕವಾಗಿ ಹೋರಾಡುವ ಮೂಲಕ ಅದರ ಶಕ್ತಿಯನ್ನು ಮಿತಿಗೊಳಿಸಲು ಪ್ರಯತ್ನಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಸಾಮೂಹಿಕ ಭದ್ರತೆಯು ರಾಷ್ಟ್ರೀಯ ಶಕ್ತಿಯ ಮೇಲಿನ ಮಿತಿಯಾಗಿ ಪರಿಣಮಿಸಿದೆ.

**7. ನಿಶ್ಶಸ್ತ್ರೀಕರಣ ಮತ್ತು ಶಸ್ತ್ರ ನಿಯಂತ್ರಣ [Disarmament and Arms Control]:** ಅಸ್ತಿತ್ವದಲ್ಲಿರುವ ಶಸ್ತ್ರಾಸ್ತ್ರಗಳನ್ನು ನಾಶಗೊಳಿಸುವುದು ನಿಶ್ಶಸ್ತ್ರೀಕರಣವಾದರೆ ಅಸ್ತಿತ್ವದಲ್ಲಿರುವ ಶಸ್ತ್ರಾಸ್ತ್ರಗಳನ್ನು ಕುರಿತು ಮೌನವಾಗಿದ್ದು ಭವಿಷ್ಯದಲ್ಲಿ ಶಸ್ತ್ರಾಸ್ತ್ರ ಉತ್ಪಾದಿಸದಂತೆ ನಿಯಂತ್ರಣ ಹೇರುವುದು ಶಸ್ತ್ರ ನಿಯಂತ್ರಣ ಎನಿಸಿಕೊಳ್ಳುತ್ತದೆ. ಈ ಎರಡೂ ಶಸ್ತ್ರ ಸಂಬಂಧಿ ಪರಿಕಲ್ಪನೆಗಳನ್ನು ದೇಶಗಳು ಪರಸ್ಪರ ಒಪ್ಪಂದದ ಮೂಲಕ ಅನುಸರಿಸಲು ಮುಂದಾದರೆ ದೇಶಗಳ ರಾಷ್ಟ್ರೀಯ ಶಕ್ತಿ ಮಿತಿಗೊಳಪಡುತ್ತದೆ.

ಈ ಮೇಲೆ ಪ್ರಸ್ತಾಪಿಸಲಾದ ಹಲವು ಮಿತಿಗಳನ್ನು ದೇಶವೊಂದರ ರಾಷ್ಟ್ರೀಯ ಶಕ್ತಿ ಹೊಂದಿರುತ್ತದೆ. ಕೆಲ ಚಿಂತಕರು ಪರಮಾಧಿಕಾರಿ ರಾಷ್ಟ್ರಗಳ ಸುಸಂಘಟಿತ ವಿಶ್ವ ಸರ್ಕಾರವು ಮಾತ್ರವೇ ರಾಷ್ಟ್ರೀಯ ಶಕ್ತಿಗೆ ಅತ್ಯುತ್ತಮ ಮಿತಿ ಎಂಬುದಾಗಿ ಅಭಿಪ್ರಾಯಪಟ್ಟಿರುವರು.



ವಾಸ್ತವದಲ್ಲಿ ಜಾಗತಿಕ ಸರ್ಕಾರದ ಕನಸು ನನಸಾಗಿರದ ಕಾರಣ ದೇಶಗಳ ರಾಷ್ಟ್ರೀಯ ಶಕ್ತಿಗೆ ಪ್ರಸ್ತಾಪಿತ ಮಿತಿಗಳೇ ಉಪಯುಕ್ತವೆಂದರೆ ತಪ್ಪಾಗಲಾರದು.

**F.] ರಾಷ್ಟ್ರೀಯ ಶಕ್ತಿಯ ಮೌಲ್ಯ ಮಾಪನ [Evaluation of National Power]:** ದೇಶಗಳು ಹೊಂದಿರುವ ರಾಷ್ಟ್ರೀಯ ಶಕ್ತಿಯನ್ನು ಮೌಲ್ಯ ಮಾಪನ ಮಾಡುವುದು ಅತ್ಯಂತ ಕಷ್ಟಕರ ಸಂಗತಿ. ಇದಕ್ಕೆ ರಾಷ್ಟ್ರೀಯ ಶಕ್ತಿಯು ವೈವಿಧ್ಯಮಯ ಸ್ವರೂಪ ಪಡೆದಿರುವುದು ಪ್ರಧಾನ ಕಾರಣ. ಸಾಮಾನ್ಯವಾಗಿ ಚಿಂತಕರು ರಾಷ್ಟ್ರೀಯ ಶಕ್ತಿಯ ಮೂಲಾಂಶಗಳನ್ನು ವಿಶ್ಲೇಷಿಸುವ ಮೂಲಕ ಅದನ್ನು ಮೌಲ್ಯ ಮಾಪನ ನಡೆಸಲು ಮುಂದಾಗುತ್ತಾರೆ. ಗೋಚರ ಹಾಗೂ ಅಗೋಚರ, ಶಾಶ್ವತ ಹಾಗೂ ಅಶಾಶ್ವತ, ಭೌತಿಕ ಹಾಗೂ ಜೈವಿಕ ಸ್ವರೂಪದ ಮೂಲಾಂಶಗಳನ್ನು ರಾಷ್ಟ್ರೀಯ ಶಕ್ತಿ ಮೈಗೂಡಿಸಿಕೊಂಡಿದ್ದು ಆ ಮೂಲಾಂಶಗಳ ವಿಶ್ಲೇಷಣೆ ನಡೆಸುವಾಗ ಜಾಗರೂಕತೆ ಮತ್ತು ವಸ್ತುನಿಷ್ಠತೆ ಅನುಸರಿಸಬೇಕಾಗುತ್ತದೆ. ಹೀಗಾಗಿ ರಾಷ್ಟ್ರೀಯ ಶಕ್ತಿಯ ಸಮರ್ಪಕ ಮೌಲ್ಯ ಮಾಪನಕ್ಕೆ ಕೆಲ ಅಂಶಗಳನ್ನು ಅವಲಂಬಿಸುವುದು ಅನಿವಾರ್ಯ. ಫ್ರಾಂಕಲ್ ಎಂಬ ಚಿಂತಕ ರಾಷ್ಟ್ರೀಯ ಶಕ್ತಿಯನ್ನು ಮೌಲ್ಯ ಮಾಪನ ಮಾಡುವಾಗ ಅನುಸರಿಸಬೇಕಾದ ಅಂಶಗಳನ್ನು ಪಟ್ಟಿ ಮಾಡಿದ್ದು ಅವುಗಳನ್ನು ಕೆಳಗೆ ನೀಡಲಾಗಿದೆ.

**1. ಸಾಪೇಕ್ಷತೆ [Relativity]:** ದೇಶವೊಂದರ ರಾಷ್ಟ್ರೀಯ ಶಕ್ತಿಯ ಎಲ್ಲ ಮೂಲಾಂಶಗಳನ್ನು ನೆರೆಹೊರೆಯ, ಸಂಭವನೀಯ ಸ್ಪರ್ಧಾತ್ಮಕ, ಶತೃತ್ವಪೂರ್ಣ ದೇಶಗಳ ರಾಷ್ಟ್ರೀಯ ಶಕ್ತಿಯೊಡನೆ ಹೋಲಿಸಿ ಮೌಲ್ಯ ಮಾಪನ ನಡೆಸುವುದು.

**2. ಗುಣಾತ್ಮಕತೆ [Qualitativeness]:** ರಾಷ್ಟ್ರೀಯ ಶಕ್ತಿಯ ವೈವಿಧ್ಯಮಯ ಮೂಲಾಂಶಗಳನ್ನು ಪ್ರಮಾಣದಿಂದ ವಿಶ್ಲೇಷಿಸದೇ ಗುಣಾತ್ಮಕತೆಯಿಂದ ಮೌಲ್ಯ ಮಾಪನ ಮಾಡಬೇಕು. ಬೃಹತ್ ಪ್ರಮಾಣದ ಜನಸಂಖ್ಯೆ ಮತ್ತು ಭೂ ವಿಸ್ತಾರ ಗುಣಾತ್ಮಕ ಪ್ರಜೆಗಳು ಮತ್ತು ನೈಸರ್ಗಿಕ ಸಂಪನ್ಮೂಲ ಪಡೆಯದಿದ್ದರೆ ರಾಷ್ಟ್ರೀಯ ಶಕ್ತಿ ದುರ್ಬಲಗೊಳ್ಳುತ್ತದೆ.

**3. ಪರಸ್ಪರಾವಲಂಬನೆ [Interdependence]:** ಒಂದೇ ಮೂಲಾಂಶವು ರಾಷ್ಟ್ರೀಯ ಶಕ್ತಿಯನ್ನು ನಿರ್ಧರಿಸಲಾರದು. ಹೀಗಾಗಿ ದೇಶವೊಂದರ ರಾಷ್ಟ್ರೀಯ ಶಕ್ತಿಯ ಮೂಲಾಂಶಗಳು ಪರಸ್ಪರ ಅವಲಂಬಿಯಾದುದನ್ನು ಆಧರಿಸಿ ಮೌಲ್ಯ ಮಾಪನ ನಡೆಸಬೇಕು.

**4. ಸಂಪನ್ಮೂಲಗಳ ಬಳಕೆಯ ಸಾಮರ್ಥ್ಯ [Ability of Using the Resources]:** ಸಾಮಾನ್ಯವಾಗಿ ರಾಷ್ಟ್ರವೊಂದು ವೈವಿಧ್ಯಮಯ ಸಂಪನ್ಮೂಲಗಳನ್ನು ತನ್ನ ರಾಷ್ಟ್ರೀಯ ಶಕ್ತಿಯ ಮೂಲಾಂಶವಾಗಿ ಹೊಂದಿರುತ್ತದೆ. ಮೌಲ್ಯ ಮಾಪಕರು ದೇಶವೊಂದು ತನ್ನಲ್ಲಿನ ಸಂಪನ್ಮೂಲಗಳನ್ನು ಎಷ್ಟರ ಮಟ್ಟಿಗೆ ಉಪಯೋಗಿಸಿಕೊಂಡಿದೆ ಎಂಬುದನ್ನು ಆಧರಿಸಿ ರಾಷ್ಟ್ರೀಯ ಶಕ್ತಿಯನ್ನು ನಿರ್ಧರಿಸಬೇಕಾಗುತ್ತದೆ.

**5. ಚಲನಶೀಲ ಸ್ವರೂಪ [Dynamic Nature]:** ದೇಶಗಳು ಹೊಂದಿರುವ ರಾಷ್ಟ್ರೀಯ ಶಕ್ತಿಯ ಮೂಲಾಂಶಗಳು ನಿರಂತರವಾಗಿ ಬದಲಾಗುತ್ತಿರುತ್ತವೆ. ಇಂಧನಕ್ಕೆ ಸಂಬಂಧಿಸಿದಂತೆ ತೈಲವು ಕಲ್ಲಿದ್ದಿಲಿಗೆ, ಕಲ್ಲಿದ್ದಿಲು ಯುರೇನಿಯಂಗೆ, ಯುರೇನಿಯಂ ಸೌರ ಶಕ್ತಿಗೆ ಪರಿವರ್ತನೆಗೊಂಡಿದುದು. ಸೈನಿಕ ಸಿದ್ಧತೆಯಂತೂ ಕ್ರಾಂತಿಕಾರಕವಾಗಿ ಬದಲಾಗುತ್ತಿರುವ ರಾಷ್ಟ್ರೀಯ ಶಕ್ತಿಯ ಮೂಲಾಂಶವಾಗಿದೆ. ಈ ಬಗೆಯ ವಿವಿಧ ಮೂಲಾಂಶಗಳಲ್ಲಿನ ಬದಲಾವಣೆಗೆ ಮೌಲ್ಯ ಮಾಪನ ನಡೆಸುವಾಗ ಆದ್ಯತೆ ನೀಡಬೇಕಾಗುತ್ತದೆ.

**6. ಸಿದ್ಧತೆ [Preparedness]:** ರಾಷ್ಟ್ರೀಯ ಶಕ್ತಿಯ ಎಲ್ಲ ಮೂಲಾಂಶಗಳಲ್ಲಿ ಸಿದ್ಧತೆಗೆ ದೇಶಗಳು ಮಹತ್ವ ನೀಡಿರುತ್ತವೆ. ವಿವಿಧ ಮೂಲಾಂಶಗಳ ಸಿದ್ಧತೆಯನ್ನು ಆಧರಿಸಿ ಮೌಲ್ಯ ಮಾಪನ ನಡೆಸಬಹುದಾಗಿದೆ.

**7. ನೈಜತೆ ಮತ್ತು ಸಂಭವನೀಯತೆ [Actual and Potential:** ರಾಷ್ಟ್ರೀಯ ಶಕ್ತಿ ಸಾಮಾನ್ಯವಾಗಿ ಎರಡು ಆಯಾಮಗಳನ್ನು ಹೊಂದಿರುತ್ತದೆ. ಅವೆಂದರೆ ನೈಜತೆ ಮತ್ತು ಸಂಭವನೀಯತೆ. ಇವೆರಡರ ಸಮರ್ಪಕ ಮೌಲ್ಯ ಮಾಪನಕ್ಕೆ ಮುಂದಾದರೆ ರಾಷ್ಟ್ರೀಯ ಶಕ್ತಿ ಪರಿಪೂರ್ಣವಾಗಿ ಅರ್ಥವಾಗುತ್ತದೆ.

ಈ ಮೇಲೆ ಪ್ರಸ್ತಾಪಿಸಲಾದ ಅಂಶಗಳ ಬೆಳಕಿನಲ್ಲಿ ನಾವು ರಾಷ್ಟ್ರೀಯ ಶಕ್ತಿಯ ಮೌಲ್ಯ ಮಾಪನ ಕೈಗೊಳ್ಳಬಹುದಾಗಿದೆ. ಇವುಗಳ ಕಡೆಗಣನೆಯ ಮೌಲ್ಯ ಮಾಪನವು ರಾಷ್ಟ್ರೀಯ ಶಕ್ತಿಯ ಅಸತ್ಯದ, ಗೊಂದಲಮಯ ಹಾಗೂ ದೋಷಪೂರ್ಣ ಮೌಲ್ಯ ಮಾಪನ ನಡೆಸಿದಂತಾಗುತ್ತದೆ. ಇದರೊಡನೆ ಮೌಲ್ಯ ಮಾಪನವು ನಿರಂತರ, ನಿಷ್ಪಕ್ಷಪಾತ ಹಾಗೂ ವಸ್ತುನಿಷ್ಠ ಲಕ್ಷಣಗಳನ್ನು ಮೈಗೂಡಿಸಿಕೊಂಡರೆ ಮಾತ್ರ ರಾಷ್ಟ್ರೀಯ ಶಕ್ತಿಯ ಮೌಲ್ಯ ಮಾಪನವು ಫಲಕಾರಿಯಾಗುತ್ತದೆ.



## ಮಾದರಿ ಪ್ರಶ್ನೆಗಳು [Model Questions]:

[A.]

1. ಶಕ್ತಿ ಎಂದರೇನು?
2. ರಾಷ್ಟ್ರೀಯ ಶಕ್ತಿಯ ಅರ್ಥವನ್ನು ಬರೆಯಿರಿ.
3. ರಾಷ್ಟ್ರೀಯ ಶಕ್ತಿಯನ್ನು ವ್ಯಾಖ್ಯಾನಿಸಿರಿ.
4. ರಾಷ್ಟ್ರೀಯ ಶಕ್ತಿಯ ಎರಡು ಲಕ್ಷಣಗಳನ್ನು ಬರೆಯಿರಿ.
5. ರಾಷ್ಟ್ರೀಯ ಶಕ್ತಿಯ ಮೂರು ರೂಪಗಳನ್ನು ಹೆಸರಿಸಿರಿ.
6. ನೈಸರ್ಗಿಕ ಸಂಪನ್ಮೂಲಗಳು ರಾಷ್ಟ್ರೀಯ ಶಕ್ತಿಯನ್ನು ಹೇಗೆ ಹೆಚ್ಚಿಸುತ್ತವೆ?
7. ರಾಷ್ಟ್ರೀಯ ಶಕ್ತಿಯಾಗಿ ಸೈನಿಕ ಸಿದ್ಧತೆಯನ್ನು ವಿಶ್ಲೇಷಿಸುವಾಗ ಗಮನಿಸಬೇಕಾದ ಅಂಶಗಳಾವುವು?
8. ರಾಷ್ಟ್ರೀಯ ಶಕ್ತಿಯ ಮೂರು ಅಗೋಚರ ಅಂಶಗಳನ್ನು ಹೆಸರಿಸಿರಿ.
9. ರಾಷ್ಟ್ರೀಯ ಶಕ್ತಿಯ ಮೇಲಿನ ಮೂರು ಮಿತಿಗಳನ್ನು ತಿಳಿಸಿರಿ.
10. ರಾಷ್ಟ್ರೀಯ ಶಕ್ತಿಯನ್ನು ಮೌಲ್ಯ ಮಾಪನ ಮಾಡುವಾಗ ಗಮನಿಸಬೇಕಾದ ಮೂರು ಅಂಶಗಳನ್ನು ಬರೆಯಿರಿ.

[B.] ಐದು ಅಂಕದ ಪ್ರಶ್ನೆಗಳು:

1. ರಾಷ್ಟ್ರೀಯ ಶಕ್ತಿಯ ಸ್ವರೂಪವನ್ನು ವಿವರಿಸಿರಿ.
2. ರಾಷ್ಟ್ರೀಯ ಶಕ್ತಿಯ ರೂಪಗಳನ್ನು ಚರ್ಚಿಸಿರಿ.
3. ರಾಷ್ಟ್ರೀಯ ಶಕ್ತಿಯ ಮೂಲಾಂಶವಾಗಿರುವ ಭೌಗೋಳಿಕ ಅಂಶಗಳನ್ನು ಪರಿಶೀಲಿಸಿರಿ.
4. ಜನಸಂಖ್ಯೆಯು ಒಂದು ರಾಷ್ಟ್ರೀಯ ಶಕ್ತಿಯ ಮೂಲಾಂಶವೆಂಬುದನ್ನು ಸ್ಪಷ್ಟಪಡಿಸಿರಿ.
5. ರಾಷ್ಟ್ರೀಯ ಶಕ್ತಿಯ ಮೇಲಿನ ಮಿತಿಗಳನ್ನು ಚರ್ಚಿಸಿರಿ.
6. ರಾಷ್ಟ್ರೀಯ ಶಕ್ತಿಯ ಮೌಲ್ಯ ಮಾಪನ ಕುರಿತು ಟಿಪ್ಪಣಿ ಬರೆಯಿರಿ.

[C.] ಹತ್ತು ಅಂಕದ ಪ್ರಶ್ನೆಗಳು:

1. ರಾಷ್ಟ್ರೀಯ ಶಕ್ತಿ ಎಂದರೇನು? ಅದರ ಸ್ವರೂಪವನ್ನು ವಿವರಿಸಿರಿ.
2. ರಾಷ್ಟ್ರೀಯ ಶಕ್ತಿ ಎಂದರೇನು? ಅದರ ರೂಪಗಳನ್ನು ಪರಿಶೀಲಿಸಿರಿ.
3. ರಾಷ್ಟ್ರೀಯ ಶಕ್ತಿಯ ಮೂಲಾಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.
4. ರಾಷ್ಟ್ರೀಯ ಶಕ್ತಿಯ ಮಿತಿಗಳನ್ನು ಚರ್ಚಿಸಿ ಅದರ ಮೌಲ್ಯ ಮಾಪನವನ್ನು ವಿವರಿಸಿರಿ.

ಅಧ್ಯಾಯ 8:

# ಶಕ್ತಿ ಸಮತೋಲನ

## [BALANCE OF POWER]

### ಪ್ರಸ್ತಾವನೆ [Introduction]:

ಜಗತ್ತಿನ ಪ್ರತಿಯೊಂದು ರಾಷ್ಟ್ರ ತನ್ನದೇಯಾದ ಶಕ್ತಿಯನ್ನು ಹೊಂದಿರುತ್ತದೆ. ರಾಷ್ಟ್ರಗಳ ಶಕ್ತಿ ಏಕರೂಪವಾಗಿರದೇ ಅಸಮತೋಲನದಿಂದ ಕೂಡಿರುತ್ತದೆ. ಬೃಹತ್ ದೇಶಗಳು ಅಧಿಕ ಮತ್ತು ಚಿಕ್ಕ ದೇಶಗಳು ಕಡಿಮೆ ಶಕ್ತಿ ಹೊಂದಿರುವುದರಿಂದ ಶಕ್ತಿ ಅಸಮತೋಲನ ಸಾಮಾನ್ಯವಾಗಿರುತ್ತದೆ. ಇದರೊಡನೆ ಶಕ್ತಿಶಾಲಿ ಬೃಹತ್ ದೇಶಗಳು ದುರ್ಬಲ ಚಿಕ್ಕ ರಾಷ್ಟ್ರಗಳ ಮೇಲೆ ಆಕ್ರಮಣ ನಡೆಸಬಹುದಾಗಿದೆ. ಇದರಿಂದ ಚಿಕ್ಕ ಸಾರ್ವಭೌಮ ರಾಷ್ಟ್ರಗಳಭದ್ರತೆಗೆ ಆತಂಕವಿರುತ್ತದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರಗಳು ಹೊಂದಿರುವ ಶಕ್ತಿಯ ನಿರ್ವಹಣೆಗೆ ವ್ಯವಸ್ಥೆಯೊಂದರ ಅಥವಾ ಸಾಧನವೊಂದರ ಅಗತ್ಯತೆ ಕಂಡು ಬರತೊಡಗಿತು. ಈ ವೇಳೆ ಜನ್ಮ ತಾಳಿದ ಪರಿಕಲ್ಪನೆಯೇ ಶಕ್ತಿ ಸಮತೋಲನ. ಪ್ರಸ್ತುತ ಅಧ್ಯಾಯದಲ್ಲಿ ಶಕ್ತಿ ಸಮತೋಲನದ ಅರ್ಥ, ಸ್ವರೂಪ, ವಿಧಾನಗಳು ಮತ್ತು ಪ್ರಸ್ತುತತೆಯನ್ನು ಕುರಿತಂತೆ ಸಂಕ್ಷೀಪ್ತವಾಗಿ ಬೆಳಕು ಚೆಲ್ಲಲಾಗಿದೆ.

### [A.] ಶಕ್ತಿ ಸಮತೋಲನದ ಅರ್ಥ [Meaning of Balance of Power]:

ಶಕ್ತಿ ಸಮತೋಲನವೆಂಬ ಪರಿಕಲ್ಪನೆಯಲ್ಲಿನ ಸಮತೋಲನ ಎಂಬುದು ಸಮಾನ ಸ್ಥಿತಿಯನ್ನು ಸೂಚಿಸುವ ಯಂತ್ರಶಾಸ್ತ್ರದ ಪರಿಕಲ್ಪನೆ. ಕಾಲಾನುಕ್ರಮದಲ್ಲಿ ಸಮತೋಲನ ಪರಿಕಲ್ಪನೆಯು ಭೌತಶಾಸ್ತ್ರ, ಜೀವಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರಗಳಲ್ಲಿ ಬಳಸಲ್ಪಟ್ಟಿತು. ಮುಂದೆ ಸಮತೋಲನ ಪರಿಕಲ್ಪನೆಯು ರಾಷ್ಟ್ರಗಳು ಹೊಂದಿರುವ ಶಕ್ತಿಯ ವ್ಯವಸ್ಥಾಪನೆಯನ್ನು ಸೂಚಿಸಲು ರಾಜ್ಯಶಾಸ್ತ್ರದಲ್ಲಿ ಬಳಕೆಗೊಂಡು ಶಕ್ತಿ ಸಮತೋಲನವೆಂಬ ಪರಿಕಲ್ಪನೆಯಾಗಿ ರೂಪುಗೊಂಡಿತು.

ಶಮಗೆಲ್ಲ ತಿಳಿದಿರುವಂತೆ ಪ್ರಪಂಚದ ಯಾವುದೇ ಒಂದು ರಾಷ್ಟ್ರ ಉಳಿದ ರಾಷ್ಟ್ರಗಳಿಂದ ಪ್ರತ್ಯೇಕಗೊಂಡು ಏಕಾಂಗಿಯಾಗಿರಲಾರದು. ಅಸಮಾನ ಶಕ್ತಿ ಹೊಂದಿರುವ



ವಿವಿಧ ರಾಷ್ಟ್ರಗಳು ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಸದಾ ಹವಣಿಸುತ್ತಿರುತ್ತವೆ. ಇತರ ರಾಷ್ಟ್ರ ಅಥವಾ ರಾಷ್ಟ್ರಗಳ ಗುಂಪು ಶಕ್ತಿಶಾಲಿಯಾಗಿ ತಮ್ಮ ಮೇಲೆ ಪ್ರಭಾವ ಬೀರದಂತೆ ತಡೆಯಲು ರಾಷ್ಟ್ರಗಳು ಮತ್ತೊಂದು ಗುಂಪನ್ನು ರಚಿಸಿಕೊಂಡು ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಮುಂದಾಗುತ್ತವೆ. ಆಗ ರಾಷ್ಟ್ರಗಳ ಗುಂಪೊಂದರ ಶಕ್ತಿಯು ಇನ್ನೊಂದು ವಿರೋಧಿ ರಾಷ್ಟ್ರಗಳ ಗುಂಪಿನ ಶಕ್ತಿಗೆ ಸಮಾನವಾಗುತ್ತದೆ. ಫಲವಾಗಿ ಎರಡೂ ಗುಂಪುಗಳ ಶಕ್ತಿ ಸಮತೋಲನ ಉಂಟಾಗಿ ಪರಸ್ಪರ ಶಕ್ತಿಯನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಜಗತ್ತಿನ ರಾಷ್ಟ್ರಗಳ ನಡುವಿನ ಶಕ್ತಿಯ ಸಮತೋಲನವೇ ಶಕ್ತಿ ಸಮತೋಲನವಾಗಿದೆ. ಗಮನಾರ್ಹ ಅಂಶವೇನೆಂದರೆ, ಶಕ್ತಿ ಸಮತೋಲನವನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸುವುದು ಅತ್ಯಂತ ಕಠಿಣ ಸಂಗತಿಯಾಗಿದೆ. ವಿವಿಧ ಚಿಂತಕರು ಶಕ್ತಿ ಸಮತೋಲನವನ್ನು ವೈವಿಧ್ಯಮಯವಾಗಿ ವ್ಯಾಖ್ಯಾನಿಸಿರುವುದು ಇದಕ್ಕೆ ಪ್ರಧಾನ ಕಾರಣ. ಹೀಗಾಗಿ ಮಾರ್ಟಿನ್ ವೈಟ್ 'ಶಕ್ತಿ ಸಮತೋಲನವು ಗೊಂದಲಗಳಿಂದಾಗಿ ಕುಖ್ಯಾತ ಪರಿಕಲ್ಪನೆಯಾಗಿದೆ' ಎಂದಿರುವರು. ಅಂತೆಯೇ ಮತ್ತೊಬ್ಬ ಚಿಂತಕ 'ಶಕ್ತಿ ಸಮತೋಲನ ಅರ್ಥವನ್ನು ಹೊಂದಿಲ್ಲವೆಂದಲ್ಲ, ಹಲವು ಅರ್ಥವನ್ನು ಹೊಂದಿರುವ ಪರಿಕಲ್ಪನೆ' ಎಂದಿರುವ. ಆಸಕ್ತಿದಾಯಕ ಸಂಗತಿ ಏನೆಂದರೆ, ತಕ್ಕಡಿಯೊಂದರ ಎರಡು ಬಟ್ಟಲುಗಳು ಸಮಾನವಾಗಿರುವಂತೆ ಎರಡು ರಾಷ್ಟ್ರ ಅಥವಾ ರಾಷ್ಟ್ರಗಳ ಗುಂಪಿನ ಶಕ್ತಿ ಸಮಾನವಾಗಿರಬೇಕೆಂಬುದು ಶಕ್ತಿ ಸಮತೋಲನದ ತಿರುಳು. ಶಕ್ತಿ ಸಮತೋಲನದ ಪರಿಪೂರ್ಣ ತಿಳುವಳಿಕೆಗೆ ಚಿಂತಕರ ಪ್ರಧಾನ ವಿವರಣೆಗಳನ್ನು ಕೆಳಗೆ ನೀಡಲಾಗಿದೆ.

ಸಿಡ್ನಿ ಬಿ. ಎಫ್. ಪ್ರಕಾರ ರಾಷ್ಟ್ರಗಳ ಕುಟುಂಬದ ಸದಸ್ಯ ರಾಷ್ಟ್ರವೊಂದು ಶಕ್ತಿಶಾಲಿಯಾಗಿ ತನ್ನ ಇಚ್ಛೆಯನ್ನು ಇತರ ಸದಸ್ಯ ರಾಷ್ಟ್ರಗಳ ಮೇಲೆ ಹೇರದಂತೆ ಅದರ ಶಕ್ತಿಯನ್ನು ನಿಯಂತ್ರಿಸಲು ನ್ಯಾಯ ಸಮ್ಮತವಾಗಿ ಉಳಿದ ರಾಷ್ಟ್ರಗಳು ಶಕ್ತಿಯ ಸಮತೋಲನ ಸೃಷ್ಟಿಸುವುದೇ ಶಕ್ತಿ ಸಮತೋಲನ.

ಜಾರ್ಜ್ ಸ್ಕವರ್ಜನ್ ಬರ್ಗರ್ ಪ್ರಕಾರ ರಾಷ್ಟ್ರಗಳ ಮೈತ್ರಿಕೂಟ ಅಥವಾ ಇತರ ಸಾಧನಗಳ ನೆರವಿನಿಂದ ಶಕ್ತಿ ಸಂಬಂಧಗಳಿಗೆ ಪೂರಕವಾದ ಸಮತೋಲಿತ ಅಥವಾ ಸ್ಥಿರ ಸನ್ನಿವೇಶವನ್ನು ಸೃಷ್ಟಿಸುವುದೇ ಶಕ್ತಿ ಸಮತೋಲನ.

ಹಾನ್ಸ್ ಜೆ. ಮಾರ್ಗೆಂಥೊ ಪ್ರಕಾರ ಶಕ್ತಿಯು ರಾಷ್ಟ್ರಗಳ ನಡುವೆ ಸಮಾನವಾಗಿ ಹಂಚಲ್ಪಟ್ಟ ನೈಜ ಸ್ಥಿತಿಯೇ ಸಾಮಾನ್ಯಾರ್ಥದಲ್ಲಿ ಶಕ್ತಿ ಸಮತೋಲನವಾಗಿದೆ.

ಮೇಲಿನ ಚಿಂತಕರ ವಿವರಣೆಯನ್ನಾಧರಿಸಿ ಸರಳಾರ್ಥದಲ್ಲಿ ಜಗತ್ತಿನ ಎರಡು ರಾಷ್ಟ್ರಗಳು ಅಥವಾ ರಾಷ್ಟ್ರಗಳ ಮೈತ್ರಿಕೂಟಗಳ ನಡುವಿನ ಶಕ್ತಿಯ ಸಮಾನ ಸ್ಥಿತಿಯನ್ನು ಶಕ್ತಿ ಸಮತೋಲನ ಎನ್ನಬಹುದಾಗಿದೆ. ವಿಶಾಲಾರ್ಥದಲ್ಲಿ ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿ ಸ್ಪರ್ಧಾತ್ಮಕ ರಾಷ್ಟ್ರಗಳು ಅಥವಾ ರಾಷ್ಟ್ರಗಳ ಮೈತ್ರಿಕೂಟಗಳ ನಡುವಿನ ಶಕ್ತಿಯಲ್ಲಿ

ಸಮತೋಲಿತ ಸ್ಥಿತಿಯನ್ನು ಉಂಟು ಮಾಡುವುದೇ ಶಕ್ತಿ ಸಮತೋಲನವಾಗಿದೆ. ಎಲ್ಲಿ ಯಾವುದೇ ಒಂದು ರಾಷ್ಟ್ರ ಅಥವಾ ರಾಷ್ಟ್ರಗಳ ಗುಂಪು ಶಕ್ತಿಶಾಲಿಯಾಗದಂತೆ ತಡೆಯುವ ಸಾಧನವಾಗಿ ಶಕ್ತಿ ಸಮತೋಲನ ಪರಿಗಣಿಸಲ್ಪಟ್ಟಿದೆ. ಒಂದು ರಾಷ್ಟ್ರ ಅಥವಾ ರಾಷ್ಟ್ರಗಳ ಗುಂಪು ಬಲಶಾಲಿಯಾಗದಂತೆ ಮತ್ತು ಇತರ ರಾಷ್ಟ್ರ ಅಥವಾ ರಾಷ್ಟ್ರಗಳ ಗುಂಪಿಗೆ ಬೆದರಿಕೆ ಒಡ್ಡದಂತೆ ತಡೆಯುವ ಮೂಲಕ ಜಾಗತಿಕ ಶಾಂತಿ ಕಾಪಾಡುವುದು ಶಕ್ತಿ ಸಮತೋಲನದ ಗುರಿಯಾಗಿರುತ್ತದೆ.

## [B.] ಶಕ್ತಿ ಸಮತೋಲನದ ಸ್ವರೂಪ [Nature of Balance of Power):

ಪಾಮರ್ ಮತ್ತು ಪರ್ಕಿನ್ಸ್ ಶಕ್ತಿ ಸಮತೋಲನದ ಕೆಲ ಪ್ರಧಾನ ಲಕ್ಷಣಗಳನ್ನು ಗುರುತಿಸಿದ್ದು ಅವುಗಳ ಬೆಳಕಿನಲ್ಲಿ ನಾವು ಶಕ್ತಿ ಸಮತೋಲನ ಪರಿಕಲ್ಪನೆಯ ಸ್ವರೂಪವನ್ನು ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ.

**1. ಭಾಗಶಃ ಸಮತೋಲನದಿಂದ ಕೂಡಿದುದು:** ಶಕ್ತಿ ಸಮತೋಲನವು ರಾಷ್ಟ್ರಗಳ ನಡುವಿನ ಶಕ್ತಿ ಸಂಬಂಧದಲ್ಲಿ ಸಮತೋಲನವನ್ನು ಪ್ರತಿಪಾದಿಸುವ ಪರಿಕಲ್ಪನೆ. ಆದರೆ, ಶಕ್ತಿ ಸಮತೋಲನವು ನಿರಂತರವಾಗಿ ಕಂಡು ಬರುವ ಸ್ಥಿತಿಯಾಗಿರದೇ ಬದಲಾವಣೆಗೆ ಒಳ್ಪಡುವ ಪರಿಕಲ್ಪನೆಯಾಗಿ ಪರಿಗಣಿಸಲ್ಪಟ್ಟಿದೆ.

**2. ತಾತ್ಕಾಲಿಕ ಮತ್ತು ಅಸ್ಥಿರವಾದದ್ದು:** ಶಕ್ತಿ ಸಮತೋಲನವು ಬಹು ಕಾಲದವರೆಗೆ ಮುಂದುವರೆಯುವ ಗುಣವನ್ನು ಹೊಂದಿರುವುದಿಲ್ಲ. ರಾಷ್ಟ್ರಗಳು ಅಥವಾ ರಾಷ್ಟ್ರಗಳ ಮೈತ್ರಿಕೂಟಗಳ ನಡುವಿನ ಶಕ್ತಿ ಸಮತೋಲನವು ಅಲ್ಪ ಸಮಯದವರೆಗೆ ಮಾತ್ರ ಕಂಡು ಬರುತ್ತದೆ. ಪ್ರತಿ ಗುಂಪು ತನ್ನ ಶಕ್ತಿಯನ್ನು ಬಲಪಡಿಸಿಕೊಳ್ಳಲು ಸತತವಾಗಿ ಪ್ರಯತ್ನಿಸುವುದು ಇದಕ್ಕೆ ಪ್ರಧಾನ ಕಾರಣವಾಗಿರುತ್ತದೆ. ಒಂದು ರಾಷ್ಟ್ರ ಅಥವಾ ರಾಷ್ಟ್ರಗಳ ಗುಂಪು ತನ್ನ ಶಕ್ತಿಯನ್ನು ಸುಧಾರಿಸಿಕೊಂಡರೆ ಸಹಜವಾಗಿ ಅವುಗಳ ನಡುವಿನ ಶಕ್ತಿಯು ಅಸಮತೋಲನಗೊಳ್ಳುತ್ತದೆ. ಹೀಗಾಗಿ ಶಕ್ತಿ ಸಮತೋಲನವು ತಾತ್ಕಾಲಿಕ ಮತ್ತು ಅಸ್ಥಿರ ಪರಿಕಲ್ಪನೆ ಎನಿಸಿಕೊಂಡಿದೆ.

**3. ಸ್ವಾಭಾವಿಕವಾದುದಾಗಿರದೇ ಸಾಧಿಸಲ್ಪಟ್ಟದುದು:** ಶಕ್ತಿ ಸಮತೋಲನವು ನಿಸರ್ಗದ ಕೊಡುಗೆಯಾಗಿರುವುದಿಲ್ಲ. ಆಯಾ ರಾಷ್ಟ್ರ ಅಥವಾ ರಾಷ್ಟ್ರಗಳ ಗುಂಪು ತನ್ನ ಪ್ರಯತ್ನದಿಂದ ಕೃತಕವಾಗಿ ಸಾಧಿಸಲ್ಪಟ್ಟ ಪರಿಕಲ್ಪನೆಯಾಗಿದೆ. ರಾಷ್ಟ್ರಗಳು ಶಕ್ತಿ ಸಮತೋಲನದ ಸೃಷ್ಟಿಗೆ ಕಾಯುತ್ತಾ ಕೂರದೇ ಪ್ರಯತ್ನಪೂರ್ವಕವಾಗಿ ಗಳಿಸಿದ ಸ್ಥಿತಿಯಾಗಿರುತ್ತದೆ. ಹೀಗಾಗಿ ಶಕ್ತಿ ಸಮತೋಲನ ಸ್ವಾಭಾವಿಕವಾದುದಾಗಿರದೇ ಸಾಧಿಸಲ್ಪಟ್ಟದುದು ಎಂದು ಗುರುತಿಸಲ್ಪಟ್ಟಿದೆ.



**4. ಯಥಾಸ್ಥಿತಿಯ ಪರವಾದದ್ದು:** ಶಕ್ತಿ ಸಮತೋಲನವು ಶಕ್ತಿಶಾಲಿ ರಾಷ್ಟ್ರಗಳ ನಡುವಿನ ಶಕ್ತಿಯ ಸಂಬಂಧಗಳಲ್ಲಿ ಯಥಾಸ್ಥಿತಿಯನ್ನು ಬೆಂಬಲಿಸುತ್ತದೆ. ಎರಡು ರಾಷ್ಟ್ರ ಅಥವಾ ರಾಷ್ಟ್ರಗಳ ಗುಂಪಿನ ಶಕ್ತಿಯನ್ನು ಕುರಿತು ಸಮತೋಲನವನ್ನು ಈ ಪರಿಕಲ್ಪನೆಯು ಬಯಸುತ್ತದೆ. ಫಲವಾಗಿ ಶಕ್ತಿ ಸಮತೋಲನವು ಯಥಾಸ್ಥಿತಿಯನ್ನು ಕಾಪಾಡಿಕೊಳ್ಳಲು ರಾಷ್ಟ್ರಗಳ ವಿದೇಶಾಂಗ ನೀತಿಯು ಸದಾ ಚಲನಶೀಲವಾಗಿರುವಂತೆ ಮಾಡುತ್ತದೆ.

**5. ಯುದ್ಧವು ಶಕ್ತಿ ಸಮತೋಲನದ ಮಾಪನ:** ನೈಜ ಶಕ್ತಿ ಸಮತೋಲನ ವಿರಳವಾಗಿರುತ್ತದೆ. ಶಕ್ತಿ ಸಮತೋಲನದ ಏಕೈಕ ಮಾಪನವೆಂದರೆ ಯುದ್ಧ. ಯುದ್ಧ ಆರಂಭವಾದರೆ ಶಕ್ತಿ ಸಮತೋಲನ ಅಂತ್ಯಗೊಳ್ಳುತ್ತದೆ. ಶಕ್ತಿ ಸಮತೋಲನ ಕಾಪಾಡಿಕೊಳ್ಳಲು ಮುಖ್ಯ ಕಾರಣವೇ ಯುದ್ಧ ಸನ್ನಿವೇಶವಾಗಿದ್ದು ಅದರ ಆರಂಭದೊಡನೆ ಶಕ್ತಿ ಸಮತೋಲನ ಅನಾವರಣಗೊಂಡು ಮಾಪನಕ್ಕೆ ಆಸ್ಪದವೊದಗುತ್ತದೆ.

**6. ಶಾಂತಿಯ ಸಾಧನವಲ್ಲ:** ಶಕ್ತಿ ಸಮತೋಲನಕ್ಕೆ ಯುದ್ಧ ಭೀತಿಯೇ ಕಾರಣ. ಹೀಗಾಗಿ ಶಕ್ತಿ ಸಮತೋಲನವು ರಾಷ್ಟ್ರಗಳ ಶಾಂತಿಗೆ ಪ್ರಾಥಮಿಕ ಸಾಧನವೆನಿಸಿಲ್ಲ.

**7. ಶಕ್ತಿಶಾಲಿ ರಾಷ್ಟ್ರಗಳಿಗೆ ಪ್ರಾಶಸ್ತ್ಯ:** ಶಕ್ತಿ ಸಮತೋಲನ ವ್ಯವಸ್ಥೆಯಲ್ಲಿ ಜಗತ್ತಿನ ಶಕ್ತಿಶಾಲಿ ರಾಷ್ಟ್ರಗಳು ಮಾತ್ರ ಪಾತ್ರಧಾರಿಗಳಾಗಿರುತ್ತವೆ. ದುರ್ಬಲ ರಾಷ್ಟ್ರಗಳಿಗೆ ಬಲಶಾಲಿ ರಾಷ್ಟ್ರಗಳಿಗೆ ದೊರೆಯುವ ಮಹತ್ವ ದೊರಕುವುದಿಲ್ಲ. ದುರ್ಬಲ ರಾಷ್ಟ್ರಗಳು ಕೇವಲ ಶಕ್ತಿ ಸಮತೋಲನದ ಪ್ರೇಕ್ಷಕರಾಗಿ ಮಾತ್ರ ಉಳಿದುಕೊಳ್ಳುತ್ತವೆ. ಕೆಲವೊಮ್ಮೆ ಶಕ್ತಿ ಸಮತೋಲನದ ಬಾಧಿತ ಸ್ಥಿತಿಯನ್ನು ದುರ್ಬಲ ರಾಷ್ಟ್ರಗಳು ಎದುರಿಸಬೇಕಾಗುತ್ತದೆ. ಹೀಗಾಗಿ ಶಕ್ತಿ ಸಮತೋಲನವೆಂಬುದು ಶಕ್ತಿಶಾಲಿ ರಾಷ್ಟ್ರಗಳಿಗೆ ಪ್ರಾಶಸ್ತ್ಯವಿರುವ ವ್ಯವಸ್ಥೆಯಾಗಿ ಪರಿಗಣಿಸಲ್ಪಡುತ್ತದೆ.

8. **ರಾಷ್ಟ್ರೀಯ ಹಿತಾಸಕ್ತಿಯ ಆಧಾರ:** ಶಕ್ತಿ ಸಮತೋಲನವು ರಾಷ್ಟ್ರಗಳ ಹಿತಾಸಕ್ತಿಯ ಸಂರಕ್ಷಣೆಗೆ ಜನ್ಮತಾಳಿರುವ ಪರಿಕಲ್ಪನೆಯಾಗಿದೆ. ದೇಶವೊಂದು ತನ್ನ ಆರ್ಥಿಕ, ಸಾಂಸ್ಕೃತಿಕ, ರಾಜಕೀಯ ಹಿತಾಸಕ್ತಿಗೆ ಧಕ್ಕೆಯುಂಟಾಗುವ ಸಾಧ್ಯತೆ ಹೆಚ್ಚಳವಾದಂತೆ ಶಕ್ತಿ ಸಮತೋಲನ ವ್ಯವಸ್ಥೆಯನ್ನು ಸ್ಥಾಪಿಸಲು ಮುಂದಾಗುತ್ತದೆ. ಅಂತೆಯೇ ಶಕ್ತಿ ಸಮತೋಲನ ತೊಂದರೆಗೊಳಗಾದರೆ ತಮ್ಮ ಹಿತಾಸಕ್ತಿ ಕುಂಠಿತಗೊಳ್ಳಬಹುದೆಂಬ ಆತಂಕವೂ ರಾಷ್ಟ್ರಗಳಿಗೆ ಕಾಡುತ್ತಿರುತ್ತದೆ. ಹೀಗೆ ಶಕ್ತಿ ಸಮತೋಲನವೆಂಬುದು ರಾಷ್ಟ್ರೀಯ ಹಿತಾಸಕ್ತಿಯನ್ನು ಆಧರಿಸಿರುವ ಪರಿಕಲ್ಪನೆಯಾಗಿ ಪರಿಣಮಿಸಿದೆ. ಈ ಹಿನ್ನೆಲೆಯಲ್ಲಿ ಶಕ್ತಿ ಸಮತೋಲನವು ರಾಷ್ಟ್ರೀಯ ಹಿತಾಸಕ್ತಿಯನ್ನು ಆಧರಿಸಿರುವ ಪರಿಕಲ್ಪನೆ ಎನಿಸಿದೆ.

ಈ ಮೇಲೆ ಚರ್ಚಿಸಲಾದ ಲಕ್ಷಣಗಳಿಂದ ಕೂಡಿರುವ ಶಕ್ತಿ ಸಮತೋಲನವು ತನ್ನದೇಯಾದ ಪೂರ್ವ ಸ್ಥಿತಿಯನ್ನು ಅವಲಂಬಿಸಿದ ಪರಿಕಲ್ಪನೆಯಾಗಿದೆ. ಜೊತೆಗೆ ಶಕ್ತಿ

ಸಮತೋಲನ ವ್ಯವಸ್ಥೆಯು ನಿರ್ದಿಷ್ಟ ತತ್ವಗಳನ್ನು ಆಧರಿಸಿರುವ ಪರಿಕಲ್ಪನೆ ಎನಿಸಿಕೊಂಡಿದೆ. ಒಟ್ಟಾರೆ ಶಕ್ತಿ ಸಮತೋಲನವನ್ನು ಉಲ್ಲಂಘಿಸುವ ರಾಷ್ಟ್ರ ಅಥವಾ ರಾಷ್ಟ್ರಗಳ ವಿರುದ್ಧ ರಾಷ್ಟ್ರವೊಂದು ಏಕಾಂಗಿಯಾಗಿ ಅಥವಾ ರಾಷ್ಟ್ರಗಳು ಸಾಮೂಹಿಕವಾಗಿ ಯುದ್ಧ ಕೈಗೊಂಡು ಶಕ್ತಿ ಸಮತೋಲನವನ್ನು ಮರು ಸ್ಥಾಪಿಸುವುದು ಶಕ್ತಿ ಸಮತೋಲನ ಪರಿಕಲ್ಪನೆಯ ಉದ್ದೇಶವಾಗಿರುತ್ತದೆ.

### [C.] ಶಕ್ತಿ ಸಮತೋಲನ ಕಾಪಾಡುವ ವಿಧಾನಗಳು

### [Methods of Maintaining the Balance of Power]:

ಶಕ್ತಿ ಸಮತೋಲನವು ತನ್ನಿಂದ ತಾನೇ ಸೃಷ್ಟಿಯಾಗುವ ವ್ಯವಸ್ಥೆಯಲ್ಲ. ರಾಷ್ಟ್ರಗಳು ಪ್ರಜ್ಞಾಪೂರ್ವಕವಾಗಿ ರಚಿಸಿಕೊಂಡು ಪಾಲಿಸುವ ನೀತಿಯಾಗಿದೆ. ಪ್ರಸ್ತುತ ದೇಶಗಳು ನಾನಾ ವಿಧಾನಗಳನ್ನೊಳಗೊಂಡ ಶಕ್ತಿ ಸಮತೋಲನವನ್ನು ಸಾಧಿಸಲು ಪ್ರಯತ್ನಿಸುತ್ತಿದ್ದು ಅವುಗಳಲ್ಲಿ ಪ್ರಧಾನವಾದವುಗಳನ್ನು ಕೆಳಗೆ ನೀಡಲಾಗಿದೆ.

**1. ಪರಿಹಾರ [Compensation]:** ಶಕ್ತಿ ಸಮತೋಲನದ ಪರಿಹಾರ ವಿಧಾನವು ಯುದ್ಧ ನಷ್ಟ ತುಂಬಿಕೊಡುವ ಅಥವಾ ಭೌಗೋಳಿಕ ಹಂಚಿಕೆಯ ಎರಡು ಆಯಾಮವುಳ್ಳ ವಿಧಾನವಾಗಿದೆ. ಶಕ್ತಿ ಸಮತೋಲನ ಉಲ್ಲಂಘಿಸಿ ಯುದ್ಧಕ್ಕೆ ಕಾರಣವಾದ ದೇಶವನ್ನು ಸೋಲಿಸಿದ ಬಳಿಕ ಯುದ್ಧ ನಷ್ಟವನ್ನು ತುಂಬಿಕೊಡಲು ಒತ್ತಾಯಿಸುವ ಮೂಲಕ ಅದರ ಶಕ್ತಿಯನ್ನು ದುರ್ಬಲಗೊಳಿಸಿ ಶಕ್ತಿ ಸಮತೋಲನ ಸ್ಥಾಪಿಸಲು ಪ್ರಯತ್ನಿಸಲಾಗುತ್ತದೆ. ಉದಾ: ಮೊದಲ ವಿಶ್ವ ಯುದ್ಧದ ಬಳಿಕ ಜರ್ಮನಿಗೆ ಯುದ್ಧ ಪರಿಹಾರ ನೀಡುವಂತೆ ಒತ್ತಾಯಿಸುವ ಮೂಲಕ ಅದರ ಶಕ್ತಿಯನ್ನು ಕುಗ್ಗಿಸಿ ಶಕ್ತಿ ಸಮತೋಲನ ಸಾಧಿಸಲಾಯಿತು. ಇನ್ನೊಂದೆಡೆ ಶಾಂತಿ ಸಮತೋಲನವನ್ನು ಧಕ್ಕೆಗೊಳಪಡಿಸಿ, ಯುದ್ಧಕ್ಕೆ ಕಾರಣವಾದ ದೇಶವನ್ನು ಸೋಲಿಸಿ ಅದರ ಭೂಪ್ರದೇಶವನ್ನು ವಿಜಯಶಾಲಿ ದೇಶಗಳು ಆಕ್ರಮಿಸುವ ಅಥವಾ ಹಂಚಿಕೊಳ್ಳುವ ಮೂಲಕ ಶಕ್ತಿ ಸಮತೋಲನ ಕಾಪಾಡುವುದು ಪರಿಹಾರ ವಿಧಾನದ ತಿರುಳಾಗಿದೆ. 17 ನೇ ಶತಮಾನದಿಂದ ಶಾಂತಿ ಶಕ್ತಿ ಸಮತೋಲನದ ಸಾಧನೆಗೆ ನಿರಂತರವಾಗಿ ಭೌಗೋಳಿಕ ಪರಿಹಾರ ವಿಧಾನವನ್ನು ಬಳಸಲಾಗುತ್ತಿದೆ. ಉದಾ: 18 ನೇ ಶತಮಾನದ ಉತ್ತರಾರ್ಧದಲ್ಲಿ ಪೋಲೆಂಡಿನ ಭೂ ಪ್ರದೇಶವನ್ನು ಆಸ್ಟ್ರಿಯಾ, ಪ್ರಷ್ಯಾ ಮತ್ತು ರಷ್ಯಾ ಸಮಾನವಾಗಿ ಹಂಚಿಕೊಳ್ಳುವ ಮೂಲಕ ತಮ್ಮ ನಡುವೆ ಶಕ್ತಿ ಸಮತೋಲನ ಸಾಧಿಸಿದವು. ಮುಂದೆ ಎರಡನೇ ಮಹಾಯುದ್ಧಗಳ ಬಳಿಕ ಶಕ್ತಿ ಸಮತೋಲನವನ್ನು ಉಲ್ಲಂಘಿಸಿದ ದೇಶಗಳ ಶಕ್ತಿಯನ್ನು ಕ್ಷೀಣಗೊಳಿಸಲು ಈ ಭೌಗೋಳಿಕ ಪರಿಹಾರ ವಿಧಾನವನ್ನು ಅನುಸರಿಸಲಾಯಿತು. ಉದಾ: ಸೋತ ಜರ್ಮನಿಯ ಭೂಭಾಗಗಳನ್ನು ವಿಜಯಶಾಲಿಯಾದ ಮಿತ್ರ ರಾಷ್ಟ್ರಗಳಾದ ಅಮೇರಿಕಾ, ಇಂಗ್ಲೆಂಡ್, ಫ್ರಾನ್ಸ್ ಮತ್ತು



ಸೋವಿಯತ್ ಒಕ್ಕೂಟಗಳ ನಿಯಂತ್ರಣಕ್ಕೆ ಒಳಪಡಿಸಿದುದು. ಹೀಗೆ ಆರ್ಥಿಕ ಪರಿಹಾರ ಅಥವಾ ಭೌಗೋಳಿಕ ಪರಿಹಾರದ ಮೂಲಕ ಶಕ್ತಿ ಸಮತೋಲನ ಸಾಧಿಸಲು ಪರಿಹಾರ ವಿಧಾನವು ಸಹಕಾರಿಯಾಗಿದೆ.

**2. ಮೈತ್ರಿಕೂಟ ಮತ್ತು ಪ್ರತಿ ಮೈತ್ರಿಕೂಟಗಳು [Alliances and Counter Alliances]:** ಮೈತ್ರಿಕೂಟಗಳ ನೆರವಿನಿಂದ ಶಕ್ತಿ ಸಮತೋಲನ ಸಾಧಿಸುವುದು ಸಾಂಪ್ರದಾಯಿಕ ವಿಧಾನವಾಗಿದೆ. ಸಾಮಾನ್ಯವಾಗಿ ಸಮಾನ ಮನಸ್ಕ ದೇಶಗಳು ತಮ್ಮ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳಲು ಮೈತ್ರಿಕೂಟಗಳ ರಚನೆಗೆ ಮುಂದಾಗುತ್ತವೆ. ಈ ಮೈತ್ರಿಕೂಟಗಳ ಮೂಲಕ ವಿರೋಧಿ ಬಣಕ್ಕೆ ಸಮನಾದ ಶಕ್ತಿಯನ್ನು ಗಳಿಸಿ ಶಕ್ತಿ ಸಮತೋಲನ ಸಾಧಿಸಲಾಗುತ್ತದೆ. ಗಮನಾರ್ಹ ಅಂಶವೆಂದರೆ, ಮೈತ್ರಿಕೂಟವೊಂದು ರಚನೆಗೊಂಡೊಡನೆ ಅದಕ್ಕೆ ಪ್ರತಿ ಮೈತ್ರಿಕೂಟ ರಚನೆಗೊಳ್ಳುತ್ತದೆ. ಇತಿಹಾಸದಲ್ಲಿ ಹಲವು ಮೈತ್ರಿಕೂಟ ಮತ್ತು ಪ್ರತಿ ಮೈತ್ರಿಕೂಟ ರಚನೆಗೊಳ್ಳುವ ಮೂಲಕ ಶಕ್ತಿ ಸಮತೋಲನ ಸಾಧಿಸಿದ ನಿದರ್ಶನಗಳಿವೆ. ಉದಾ: 1882 ರಲ್ಲಿ ಆಸ್ಟ್ರಿಯಾ ಮತ್ತು ಇಟಲಿಯೊಡನೆ ಒಪ್ಪಂದ ಮಾಡಿಕೊಂಡ ಜರ್ಮನಿ ಟ್ರಿಪಲ್ ಅಲೈಯನ್ಸ್ ಮೈತ್ರಿಕೂಟ ರಚಿಸಿಕೊಂಡಿತು. ಇನ್ನೊಂದೆಡೆ ಫ್ರಾನ್ಸ್ 1907 ರ ಹೊತ್ತಿಗೆ ಇಂಗ್ಲೆಂಡ್ ಮತ್ತು ರಷ್ಯಾದೊಂದಿಗೆ ಗುಪ್ತ ಒಪ್ಪಂದ ಮಾಡಿಕೊಂಡು ಟ್ರಿಪಲ್ ಆಂಟೆಂಟೆ ಎಂಬ ಪ್ರತಿ ಮೈತ್ರಿಕೂಟ ರಚಿಸಿ ಯುರೋಪಿನಲ್ಲಿ ಶಕ್ತಿ ಸಮತೋಲನ ಸ್ಥಾಪಿಸಲು ಮುಂದಾಯಿತು. ಅಂತೆಯೇ ಎರಡನೇ ಮಹಾ ಯುದ್ಧದ ವೇಳೆ ಜರ್ಮನಿ, ಇಟಲಿ, ಜಪಾನ್ ಒಳಗೊಂಡ ಕೂಟದ ಸಮತೋಲನಕ್ಕೆ ಮಿತ್ರ ರಾಷ್ಟ್ರಗಳ ಬಣವು ರಚನೆಗೊಂಡಿತು. ಅಂತೆಯೇ ಶೀತಲ ಸಮರದ ವೇಳೆಯಲ್ಲಿ ನ್ಯಾಟೊ ರಚನೆಯ ಮೂಲಕ ಅಮೇರಿಕಾವು ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಮುಂದಾದಾಗ ಸೋವಿಯತ್ ಒಕ್ಕೂಟವು ವಾರ್ಸಾ ಹೆಸರಿನ ಪ್ರತಿ ಮೈತ್ರಿಕೂಟವನ್ನು ರಚಿಸಿ ಶಕ್ತಿ ಸಮತೋಲನ ಸಾಧಿಸಲು ಮುಂದಾಯಿತು. ಆಸಕ್ತಿದಾಯಕ ಅಂಶವೆಂದರೆ, ಸಮಾನ ಉದ್ದೇಶ, ಏಕ ಸಾಂಸ್ಕೃತಿಕ ಆಸಕ್ತಿ, ಹೊಂದಾಣಿಕೆಯ ಸ್ವಭಾವವುಳ್ಳ ಮೈತ್ರಿಕೂಟಗಳು ಮಾತ್ರ ಶಕ್ತಿ ಸಮತೋಲನವನ್ನು ಯಶಸ್ವಿಗೊಳಿಸಿದರೆ ಕೃತಕ [illegible] ಮೈತ್ರಿಕೂಟಗಳು ಶಕ್ತಿಯ ಅಸಮತೋಲನಕ್ಕೆ ಕಾರಣವಾಗಬಹುದಾಗಿದೆ.

**3. ಹಸ್ತಕ್ಷೇಪ ಮಾಡುವುದು ಮತ್ತು ಹಸ್ತಕ್ಷೇಪ ಮಾಡದಿರುವುದು [Intervention and Non - intervention]:** ಶಕ್ತಿ ಸಮತೋಲನದ ಈ ವಿಧಾನವನ್ನು ಸಾಮಾನ್ಯವಾಗಿ ಬಲಿಷ್ಠ ಶಕ್ತಿಶಾಲಿ ರಾಷ್ಟ್ರಗಳು ಬಳಸುತ್ತವೆ. ಒಂದು ರಾಷ್ಟ್ರ ಅಥವಾ ರಾಷ್ಟ್ರಗಳ ಗುಂಪು ಬಲಿಷ್ಠ ಶಕ್ತಿ ಸಮತೋಲನವನ್ನು ಉಲ್ಲಂಘಿಸಿ ಯುದ್ಧಕ್ಕೆ ಮುಂದಾದಾಗ ಇತರ ದೇಶಗಳು ಹಸ್ತಕ್ಷೇಪ ಮಾಡುವ ಮೂಲಕ [illegible] ಶಕ್ತಿ

ಸಮತೋಲನದ ಮುಂದುವರಿಕೆಗೆ ಪ್ರಯತ್ನಿಸುತ್ತವೆ. ಉದಾ: 1956 ರಲ್ಲಿ ಇಂಗ್ಲೆಂಡ್, ಫ್ರಾನ್ಸ್, ಇಸ್ರೇಲ್ ಈಜಿಪ್ಟ್‌ನ ಮೇಲೆ ದಾಳಿ ನಡೆಸಿದಾಗ ಸೋವಿಯತ್ ರಷ್ಯಾವು ಹಸ್ತಕ್ಷೇಪ ಮಾಡುವ ನಿರ್ಧಾರ ಪ್ರಕಟಿಸುವ ಮೂಲಕ ಶಕ್ತಿ ಸಮತೋಲನ ಕಾಪಾಡಿದುದು. ಅಂತೆಯೇ ಎರಡು ರಾಷ್ಟ್ರಗಳ ನಡುವೆ ಯುದ್ಧ ಜರುಗತೊಡಗಿದರೆ ಅವುಗಳ ಶಕ್ತಿಯನ್ನು ಕುಗ್ಗಿಸಿ ಶಕ್ತಿ ಸಮತೋಲನ ತರಲು ಉಳಿದ ರಾಷ್ಟ್ರಗಳು ತಟಸ್ತವಾಗಿರುವುದು ಹಸ್ತಕ್ಷೇಪ ಮಾಡದಿರುವುದನ್ನು ಪ್ರತಿನಿಧಿಸುತ್ತದೆ. ಉದಾ: ಇತ್ತೀಚೆಗೆ ನಡೆದ ರಷ್ಯಾ ಮತ್ತು ಯುಕ್ರೇನ್ ಯುದ್ಧದ ವೇಳೆ ಯಾವುದೇ ಶಕ್ತಿಶಾಲಿ ರಾಷ್ಟ್ರಗಳು ಹಸ್ತಕ್ಷೇಪ ಮಾಡದಿರಲು ಮುಂದಾದುದು. ಹೀಗೆ ಹಸ್ತಕ್ಷೇಪ ಮಾಡುವ ಅಂದರೆ ಮಧ್ಯ ಪ್ರವೇಶಿಸುವ ಮತ್ತು ಹಸ್ತಕ್ಷೇಪ ಮಾಡದಿರುವ ಅಂದರೆ ತಟಸ್ಥವಾಗಿರುವ ವಿಧಾನದ ಮೂಲಕ ಜಾಗತಿಕ ಶಕ್ತಿ ಸಮತೋಲನ ಕಾಪಾಡಬಹುದೆಂಬುದಕ್ಕೆ ಹತ್ತಾರು ನಿದರ್ಶನಗಳು ನಮ್ಮ ಮುಂದಿವೆ.

**4. ಒಡೆದು ಆಳುವುದು [Divide and Rule]:** ಒಡೆದು ಆಳುವುದು ಜಾಗತಿಕ ಶಕ್ತಿ ಸಮತೋಲನ ಸಾಧನೆಯ ಪ್ರಮುಖ ವಿಧಾನವೆನಿಸಿದೆ. ಕೌಟಿಲ್ಯ ಹಾಗೂ ಮೆಕವೆಲ್ಲಿಯಂತಹ ಚಿಂತಕರಿಂದ ಪ್ರತಿಪಾದಿಸಲ್ಪಟ್ಟ ಈ ವಿಧಾನವನ್ನು ಸಾಮ್ರಾಜ್ಯಶಾಹಿ ಶಕ್ತಿಗಳು ಅದರಲ್ಲೂ ಬ್ರಿಟನ್ ಈ ವಿಧಾನವನ್ನು ಯಶಸ್ವಿಯಾಗಿ ಬಳಸಿಕೊಂಡಿತು. ಉದಾ: ರಾಷ್ಟ್ರೀಯ ಹೋರಾಟದ ವೇಳೆ ಬ್ರಿಟಿಷರು ತಮ್ಮ ಶಕ್ತಿಯನ್ನು ಮೀರಿ ಬೆಳೆಯುತ್ತಿದ್ದ ಭಾರತೀಯರ ಒಗ್ಗಟ್ಟಿನ ಶಕ್ತಿಯನ್ನು ಕುಗ್ಗಿಸಲು ಬಂಗಾಳ ವಿಭಜನೆ, ಧರ್ಮಾಧಾರಿತ ಪ್ರತ್ಯೇಕ ಮತಕ್ಷೇತ್ರಗಳ ಸ್ಥಾಪನೆ, ಕೋಮು ಪ್ರಶಸ್ತಿ ಘೋಷಣೆ ಮೂಲಕ ಒಡೆದು ಆಳುವ ನೀತಿಯನ್ನು ಬಳಸಿದುದು. ಅಂತರ್‌ರಾಷ್ಟ್ರೀಯವಾಗಿ ಒಡೆದು ಆಳುವುದು ಎಂದರೆ ವಿರೋಧಿ ಬಣದಲ್ಲಿನ ದೇಶಗಳನ್ನು ತಮ್ಮ ಬಣದೆಡೆ ಸೆಳೆದುಕೊಳ್ಳುವ, ತಟಸ್ಥವಾಗಿರುವಂತೆ ನೋಡಿಕೊಳ್ಳುವ ಅಥವಾ ಪ್ರತ್ಯೇಕವಾಗಿರುವಂತೆ ಮಾಡುವ ಮೂಲಕ ಅದರ ಶಕ್ತಿಯನ್ನು ಕುಗ್ಗಿಸುವುದು ಎಂದಾಗುತ್ತದೆ. ಈ ನೀತಿಯನ್ನು ಅನುಸರಿಸುವ ಮೂಲಕ ಶಕ್ತಿ ಸಮತೋಲನಕ್ಕೆ ರಾಷ್ಟ್ರಗಳು ಹವಣಿಸುತ್ತಿರುತ್ತವೆ. ಉದಾ: ಅಮೇರಿಕಾದ ನೆರೆಯ ದೇಶವಾದ ಕ್ಯೂಬಾವನ್ನು ಸೋವಿಯತ್ ರಷ್ಯಾ ತನ್ನೆಡೆಗೆ ಸೆಳೆದುಕೊಳ್ಳುವ ಮೂಲಕ ತನ್ನ ಶಕ್ತಿಯ ಸಮತೋಲನಕ್ಕೆ ಪ್ರಯತ್ನಿಸಿದುದು. ಹೀಗೆ ಒಡೆದು ಆಳುವ ವಿಧಾನವೂ ಸಹ ಶಕ್ತಿ ಸಮತೋಲನದ ಸಾಧನವೆನಿಸಿದೆ.

**5. ತಡೆ ರಾಜ್ಯದ ಸೃಷ್ಟಿ [Creation of Buffer State]:** ಎರಡು ವಿರೋಧಿ ಶಕ್ತಿ ಬಣಗಳ ನಡುವಿನ ತಟಸ್ಥ ದೇಶವನ್ನು ತಡೆ ರಾಜ್ಯ ಎನ್ನಲಾಗುತ್ತದೆ. ಸಾಮಾನ್ಯವಾಗಿ ಈ ತಡೆ ರಾಜ್ಯವು ಸಣ್ಣ ಮತ್ತು ದುರ್ಬಲ ದೇಶವಾಗಿರುತ್ತದೆ. ಎರಡು ಶಕ್ತಿ ಬಣಗಳ ನಡುವೆ ನೇರ ಘರ್ಷಣೆಯನ್ನು ತಡೆದು ಶಕ್ತಿ ಸಮತೋಲನ ಮುಂದುವರಿಸುವುದು ಈ ತಟಸ್ಥ ತಡೆ ರಾಜ್ಯದ ಜವಾಬ್ದಾರಿಯಾಗಿರುತ್ತದೆ. ಉದಾ: ಜರ್ಮನಿ ಮತ್ತು ರಷ್ಯಾಗಳ ನಡುವೆ



ಪೋಲೆಂಡ್, ಫ್ರಾನ್ಸ್ ಮತ್ತು ಜರ್ಮನಿ ನಡುವೆ ರೇನ್‌ಲ್ಯಾಂಡ್, ರಷ್ಯಾ ಮತ್ತು ಬ್ರಿಟನ್ ನಡುವೆ ಅಫ್ಘಾನಿಸ್ತಾನ ತಡೆ ರಾಜ್ಯವಾಗಿ ಶಕ್ತಿ ಸಮತೋಲನಕ್ಕೆ ನೆರವಾದುದು.

**6. ಶಸ್ತ್ರೀಕರಣ ಮತ್ತು ನಿಶ್ಯಸ್ತ್ರೀಕರಣ [Armament and Disarmament]:** ದೇಶವೊಂದರ ರಕ್ಷಣೆಯು ಅದರ ಸೈನ್ಯ ಸಿದ್ಧತೆಯನ್ನು ಅಂದರೆ ಶಸ್ತ್ರೀಕರಣವನ್ನು ಅವಲಂಬಿಸಿರುತ್ತದೆ. ಜಗತ್ತಿನ ಎಲ್ಲ ರಾಷ್ಟ್ರಗಳು ಅದರಲ್ಲೂ ಶಕ್ತಿಶಾಲಿ ರಾಷ್ಟ್ರಗಳು ತಮ್ಮ ರಕ್ಷಣೆ ಮತ್ತು ಶಕ್ತಿಯ ಬಲವರ್ಧನೆಗೆ ಶಸ್ತ್ರೀಕರಣದಲ್ಲಿ ತೊಡಗಿರುತ್ತವೆ. ಸುಧಾರಿತ ಶಸ್ತ್ರಾಸ್ತ್ರಗಳ ಸಂಶೋಧನೆ, ಖರೀದಿ, ಉತ್ಪಾದನೆಯಲ್ಲಿ ತೊಡಗುವ ಮೂಲಕ ರಾಷ್ಟ್ರಗಳು ತಮ್ಮ ಸ್ಪರ್ಧಾಳು ರಾಷ್ಟ್ರಕ್ಕಿಂತ ಕಡಿಮೆಯಿಲ್ಲದ ಸ್ಥಾನ ಹೊಂದಲು ಬಯಸುತ್ತವೆ. ಈ ಹಿನ್ನೆಲೆಯಲ್ಲಿ ಶಸ್ತ್ರೀಕರಣವು ಶಕ್ತಿ ಸಮತೋಲನದ ವಿಧಾನವಾಗಿ ಪರಿಗಣಿಸಲ್ಪಡುತ್ತದೆ. ಇದರೊಡನೆ ಶಸ್ತ್ರಗಳ ನಿರ್ಮೂಲನೆ ಅಂದರೆ ನಿಶ್ಯಸ್ತ್ರೀಕರಣವೂ ಸಹ ಶಕ್ತಿ ಸಮತೋಲನ ಸಾಧಿಸುವ ವಿಧಾನವೆನಿಸಿಕೊಂಡಿದೆ. ಉದಾ: ಮೊದಲ ವಿಶ್ವ ಸಮರದ ಬಳಿಕ ಜರ್ಮನಿಯನ್ನು ನಿಶ್ಯಸ್ತ್ರೀಕರಣಕ್ಕೆ ಒಳಪಡಿಸುವ ಮೂಲಕ ಶಕ್ತಿ ಅಸಮತೋಲನವನ್ನು ಸಮತೋಲನಗೊಳಿಸಲು ಪ್ರಯತ್ನಿಸಿದುದು.

**7. ಸಮತೋಲನಕಾರರ ಉಪಸ್ಥಿತಿ [Presence of Balancer]:** ತಕ್ಕಡಿಯ ಎರಡು ಬಟ್ಟಲುಗಳನ್ನು ಶಕ್ತಿಗಾಗಿ ಸ್ಪರ್ಧಿಸುವ ಎರಡು ರಾಷ್ಟ್ರಗಳಿಗೆ ಹೋಲಿಸಿದರೆ ಬಟ್ಟಲುಗಳ ಸಮತೋಲನಗೊಳಿಸಲು ನೆರವಾಗುವ ಹಿಡಿಕೆಯಂತೆ ರಾಷ್ಟ್ರಗಳ ಶಕ್ತಿ ಸಮತೋಲನಕ್ಕೆ ಸಮತೋಲನಕಾರರ ಅಗತ್ಯವಿರುತ್ತದೆ. ಸಮತೋಲನಕಾರಿ ಸ್ಥಾನದಲ್ಲಿ ದೇಶವಾಗಲಿ, ದೇಶಗಳ ಗುಂಪಾಗಲಿ ಅಥವಾ ಅಂತರ್‌ರಾಷ್ಟ್ರೀಯ ಸಂಘಟನೆಗಳಾಗಲಿ ಕಂಡು ಬರುತ್ತವೆ. ವಿರುದ್ಧವಾದ ಶಕ್ತಿಶಾಲಿ ರಾಷ್ಟ್ರಗಳ ನಡುವೆ ಪರಸ್ಪರ ಪ್ರಚೋದನೆಗಳು ಉಂಟಾಗದಂತೆ ನೋಡಿಕೊಳ್ಳುವುದು ಮತ್ತು ಗೊಂದಲಗಳನ್ನು ಪರಿಹರಿಸಿಕೊಳ್ಳಲು ಪ್ರಯತ್ನಿಸುವ ಮೂಲಕ ಸಮತೋಲನಕಾರ ಶಕ್ತಿ ಅಸಮತೋಲನಗೊಳ್ಳದಂತೆ ನೋಡಿಕೊಳ್ಳಬೇಕಾಗುತ್ತದೆ. ಬ್ರಿಟನ್ ಯುರೋಪಿನ ರಾಷ್ಟ್ರಗಳ ನಡುವಿನ ಶಕ್ತಿಯ ನಿರ್ವಹಣೆಯಲ್ಲಿ ಸಮತೋಲನಕಾರನ ಸ್ಥಾನವನ್ನು ಪಡೆದಿತ್ತು. ಅಂತೆಯೇ ವಿಶ್ವ ಸಂಸ್ಥೆಯು ಶಕ್ತಿ ಸಮತೋಲನದ ನಿರ್ವಹಣೆಯಲ್ಲಿ ಸಮತೋಲನಕಾರನ ಸ್ಥಾನವನ್ನು ಹೊಂದಿದೆ. ಗಮನಾರ್ಹ ಅಂಶವೇನೆಂದರೆ, 1990 ರ ಬಳಿಕ ಅಮೇರಿಕಾವೊಂದೇ ಶಕ್ತಿಶಾಲಿ ರಾಷ್ಟ್ರವಾದಾಗ ಸಮತೋಲನಕಾರರ ಅಗತ್ಯವೇ ಬೀಳದಾಯಿತು. ಪ್ರಸ್ತುತ ಜಗತ್ತು ಬಹು ಶಕ್ತಿಶಾಲಿ ರಾಷ್ಟ್ರಗಳಿಂದ ಕೂಡಿದ್ದು ಸಮತೋಲನಕಾರರ ಅಗತ್ಯವೇ ಇಲ್ಲದಾಗಿಸಿದೆ.

## [D.] ಆಧುನಿಕ ಯುಗದಲ್ಲಿ ಶಕ್ತಿ ಸಮತೋಲನದ ಪ್ರಸ್ತುತತೆ

## [Relevance of Balance of Power in Modern Age]:

ಶಕ್ತಿ ಸಮತೋಲನವು ಆಧುನಿಕ ಯುಗದಲ್ಲಿ ಅಂತರ್‌ರಾಷ್ಟ್ರೀಯ ರಾಜಕೀಯದ ಪ್ರಧಾನ ತತ್ವವೆನಿಸಿತ್ತು. ಚಿಂತಕರಲ್ಲಿ ಇದರ ಪಾತ್ರ ಮತ್ತು ಪ್ರಸ್ತುತತೆಯನ್ನು ಕುರಿತಂತೆ ಭಿನ್ನಾಭಿಪ್ರಾಯಗಳಿವೆ. ಪಾಮರ್ ಮತ್ತು ಪರ್ಕಿನ್ಸ್ ಹಾಗೂ ಮಾರ್ಟಿನ್ ರೈಟ್ ಎಂಬ ಚಿಂತಕರು ಶಕ್ತಿ ಸಮತೋಲನದ ಪರವಾಗಿ ಹಲವು ವಾದಗಳನ್ನು ಪ್ರತಿಪಾದಿಸಿದ್ದಾರೆ. ಆದರೆ, ಕೆಲ ಚಿಂತಕರು ಶಕ್ತಿ ಸಮತೋಲನವೆಂಬುದು ಅಪರಿಪೂರ್ಣ, ಅವಾಸ್ತವಿಕ, ಅಸ್ಪಷ್ಟ ಪರಿಕಲ್ಪನೆ ಎಂಬುದಾಗಿ ಪರಿಗಣಿಸಿದ್ದಾರೆ. ಚಿಂತಕರ ಭಿನ್ನಾಭಿಪ್ರಾಯಗಳೇನೇ ಇದ್ದರೂ ಕಳೆದ ನಾನೂರು ವರ್ಷಗಳಿಂದ ಶಕ್ತಿ ಸಮತೋಲನ ಅಸ್ತಿತ್ವದಲ್ಲಿದೆ. ಜೊತೆಗೆ 1815 ರಿಂದ 1914 ರವರೆಗೆ ಜಗತ್ತು ಬೃಹತ್ ಯುದ್ಧವನ್ನು ಎದುರಿಸದಂತೆ ಶಕ್ತಿ ಸಮತೋಲನವು ನೋಡಿಕೊಂಡಿದೆ. ಇದರೊಡನೆ ಕೆಳಗಿನ ಅನುಕೂಲಗಳಿಂದ ಆಧುನಿಕ ಯುಗದಲ್ಲಿ ಶಕ್ತಿ ಸಮತೋಲನವು ತನ್ನ ಪ್ರಸ್ತುತತೆಯನ್ನು ಮುಂದುವರೆಸಿಕೊಂಡು ಬಂದಿರುವ ಪರಿಕಲ್ಪನೆಯಾಗಿದೆ.

**1. ಜಾಗತಿಕ ಶಾಂತಿಯನ್ನು ಸಾಧಿಸಲು:** ರಾಷ್ಟ್ರಗಳ ನಡುವಿನ ಶಕ್ತಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಲ್ಲಿ ಶಕ್ತಿ ಸಮತೋಲನವು ಪ್ರಮುಖ ಸಾಧನವಾಗಿದೆ. ಕಳೆದ ನಾಲ್ಕು ಶತಮಾನಗಳಲ್ಲಿ ಯುದ್ಧವನ್ನು ತಡೆಯುವ ಮೂಲಕ ಜಾಗತಿಕ ಶಾಂತಿಯನ್ನು ಕಾಪಾಡಲು ಶಕ್ತಿ ಸಮತೋಲನವು ಸಫಲವಾಗಿದೆ. ಹೀಗಾಗಿಯೇ ಹೆರಾಲ್ಡ್ ಮ್ಯಾಕ್ಮಿಲನ್ '1810 ರಿಂದ 1914 ರ ನಡುವೆ ಶಾಂತಿಗೆ ಧಕ್ಕೆ ಉಂಟಾಗದಿರಲು ಶಕ್ತಿ ಸಮತೋಲನವೇ ಕಾರಣ' ಎಂದು ಅಭಿಪ್ರಾಯಪಟ್ಟಿರುವರು. ಪ್ರಸ್ತುತ ಬಹು ಶಕ್ತಿಶಾಲಿ ರಾಷ್ಟ್ರಗಳ ನಡುವೆ ಶಕ್ತಿಯ ಅತಿರೇಕವನ್ನು ನಿಯಂತ್ರಿಸಿ ವಿಶ್ವದಲ್ಲಿ ಶಾಂತಿಯನ್ನು ನೆಲೆಗೊಳಿಸಲು ಶಕ್ತಿ ಸಮತೋಲನ ಇಂದಿಗೂ ಪ್ರಸ್ತುತವೆನಿಸಿದೆ.

**2. ರಾಷ್ಟ್ರಗಳ ಸಂಬಂಧಗಳಲ್ಲಿ ಸ್ಥಿರತೆ ತರಲು:** ಚಲನಶೀಲ ಸ್ವರೂಪವುಳ್ಳ ರಾಷ್ಟ್ರಗಳ ನಡುವಿನ ಸಂಬಂಧಗಳಲ್ಲಿ ಸ್ಥಿರತೆ ತರಲು ಶಕ್ತಿ ಸಮತೋಲನದ ಪ್ರಸ್ತುತತೆ ಅಗತ್ಯವಾಗಿದೆ. ಶಕ್ತಿಯ ಅಸಮತೋಲನವು ರಾಷ್ಟ್ರಗಳ ಸಂಬಂಧಗಳಲ್ಲಿ ಅಭದ್ರತೆ, ಸಂಶಯ ಅಥವಾ ಗೊಂದಲಗಳಿಗೆ ಆಸ್ಪದ ಒದಗಿಸುತ್ತದೆ. ಆದರೆ, ನಿರಂತರ ಹೊಂದಾಣಿಕೆ ಮತ್ತು ಮರು ಹೊಂದಾಣಿಕೆಯನ್ನು ತಮ್ಮ ಶಕ್ತಿಯ ವಿಚಾರದಲ್ಲಿ ಮಾಡಿಕೊಳ್ಳುವ ಮೂಲಕ ರಾಷ್ಟ್ರಗಳು ಸುಮಧುರ ಸಂಬಂಧ ಹೊಂದಲು ಶಕ್ತಿ ಸಮತೋಲನದ ಪರಿಕಲ್ಪನೆಯು ಸಹಕಾರಿಯಾಗಿದೆ.

**3. ಚಿಕ್ಕ ರಾಷ್ಟ್ರಗಳ ಸ್ವಾತಂತ್ರ್ಯ ರಕ್ಷಿಸಲು:** ಜಗತ್ತಿನಲ್ಲಿ ಹಲವು ಬೃಹತ್ ರಾಷ್ಟ್ರಗಳೊಡನೆ ಅನೇಕ ಚಿಕ್ಕ ರಾಷ್ಟ್ರಗಳಿವೆ. ಚಿಕ್ಕ ರಾಷ್ಟ್ರಗಳು ಸಾಮಾನ್ಯವಾಗಿ ಶಕ್ತಿಯ ವಿಚಾರದಲ್ಲಿ ಬೃಹತ್



ರಾಷ್ಟ್ರಗಳಿಗಿಂತ ದುರ್ಬಲವಾಗಿರುತ್ತವೆ. ಸಹಜವಾಗಿ ಚಿಕ್ಕ ರಾಷ್ಟ್ರಗಳ ಸ್ವಾತಂತ್ರ್ಯಕ್ಕೆ ಬೃಹತ್ ರಾಷ್ಟ್ರಗಳಿಂದ ಧಕ್ಕೆಯಾಗುವ ಸಾಧ್ಯತೆ ಅಧಿಕವಾಗಿರುತ್ತದೆ. ಆದರೆ, ಶಕ್ತಿ ಸಮತೋಲನ ವ್ಯವಸ್ಥೆಯು ಚಿಕ್ಕ ರಾಷ್ಟ್ರಗಳ ಸ್ವಾತಂತ್ರ್ಯಕ್ಕೆ ಧಕ್ಕೆಯನ್ನುಂಟು ಮಾಡದೇ ಅವುಗಳಿಗೆ ಭದ್ರತೆ ಒದಗಿಸಲು ಸಹಕಾರಿಯಾಗಿದೆ. ಯಾವುದೇ ರಾಷ್ಟ್ರ ಅಥವಾ ರಾಷ್ಟ್ರಗಳ ಗುಂಪು ಶಕ್ತಿಶಾಲಿಯಾಗಿ ಚಿಕ್ಕ ರಾಷ್ಟ್ರಗಳ ಆಕ್ರಮಣಕ್ಕೆ ತೊಡಗದಂತೆ ಶಕ್ತಿ ಸಮತೋಲನ ವ್ಯವಸ್ಥೆಯು ನಿಯಂತ್ರಿಸುತ್ತದೆ. ಈ ಹಿನ್ನೆಲೆಯಲ್ಲಿಯೇ ಟೇಯ್ಲರ್ ಶಕ್ತಿ ಸಮತೋಲನದಿಂದಾಗಿ ಪ್ರಬಲ ರಾಷ್ಟ್ರವೊಂದು ಇತರ ರಾಷ್ಟ್ರಗಳನ್ನು ನುಂಗಿ ಹಾಕಲಾರದು ಎಂದಿರುವರು.

**4. ಅಂತರ್‌ರಾಷ್ಟ್ರೀಯ ಕಾನೂನನ್ನು ಪಾಲಿಸಲು:** ಸಾರ್ವಭೌಮ ರಾಷ್ಟ್ರಗಳು ಪಾಲಿಸಬೇಕಾದ ಜಾಗತಿಕ ಸ್ವರೂಪದ ಕಾನೂನುಗಳೇ ಅಂತರ್‌ರಾಷ್ಟ್ರೀಯ ಕಾನೂನು. ಈ ಕಾನೂನನ್ನು ಜಾರಿಗೊಳಿಸುವ ಪರಿಣಾಮಕಾರಿ ವ್ಯವಸ್ಥೆ ಅಸ್ತಿತ್ವದಲ್ಲಿಲ್ಲ. ಆದರೆ, ಶಕ್ತಿ ಸಮತೋಲನ ವ್ಯವಸ್ಥೆಯು ರಾಷ್ಟ್ರಗಳು ಅಂತರ್‌ರಾಷ್ಟ್ರೀಯ ಕಾನೂನುಗಳನ್ನು ಪಾಲಿಸಲು ಪೂರಕ ವಾತಾವರಣವನ್ನು ಒದಗಿಸುತ್ತದೆ. ಶಕ್ತಿಯ ಸಮತೋಲಿತ ಸ್ಥಿತಿಯು ರಾಷ್ಟ್ರಗಳನ್ನು ಅಂತರ್‌ರಾಷ್ಟ್ರೀಯ ಕಾನೂನುಗಳ ವಿಧೇಯತೆಗೆ ಪ್ರೋತ್ಸಾಹಿಸುತ್ತದೆ.

**5. ಯುದ್ಧ ಭೀತಿಯನ್ನು ಹೋಗಲಾಡಿಸಲು:** ಶಕ್ತಿಯ ಅಸಮತೋಲನವು ರಾಷ್ಟ್ರಗಳಲ್ಲಿ ಮಹತ್ವಾಕಾಂಕ್ಷೆಯನ್ನು ಬೆಳೆಸುತ್ತದೆ. ಪ್ರಬಲ ದೇಶಗಳು ಯುದ್ಧದ ಮೂಲಕ ಸದಾ ತನ್ನ ಮಹತ್ವಾಕಾಂಕ್ಷೆ ಸಾಧಿಸಿಕೊಳ್ಳಲು ಹವಣಿಸುತ್ತಿರುತ್ತವೆ. ಆದರೆ, ಶಕ್ತಿ ಸಮತೋಲನ ಅಸ್ತಿತ್ವದಲ್ಲಿದ್ದರೆ ಪ್ರತಿ ದಾಳಿಯ ಭಯದಿಂದ ರಾಷ್ಟ್ರಗಳು ಯುದ್ಧದಿಂದ ದೂರ ಸರಿಯುತ್ತವೆ.

ಈ ಮೇಲೆ ಚರ್ಚಿಸಲಾಗಿರುವ ಅದರ ಅನುಕೂಲಗಳಿಂದ ಶಕ್ತಿ ಸಮತೋಲನ ಪರಿಕಲ್ಪನೆಯು ಎರಡನೇ ವಿಶ್ವ ಸಮರದವರೆಗಿನ ಆಧುನಿಕ ಕಾಲದಲ್ಲಿ ತನ್ನ ಪ್ರಸ್ತುತತೆಯನ್ನು ಉಳಿಸಿಕೊಂಡು ಬಂದಿತ್ತು. ಆದರೆ, ಸಮಕಾಲೀನ ಪ್ರಪಂಚದಲ್ಲಿ ಘಟಿಸಿದ ಬದಲಾವಣೆಗಳಿಂದ ಅಂತರ್‌ರಾಷ್ಟ್ರೀಯ ರಾಜಕಾರಣದಲ್ಲಿ ಸಾಂಪ್ರದಾಯಿಕ ಶಕ್ತಿ ಸಮತೋಲನದ ಪಾತ್ರ ಮತ್ತು ಪ್ರಸ್ತುತತೆಯು ಮಾಯವಾಗಿದೆ. ಈ ಕೆಳಗೆ ಪಟ್ಟಿ ಮಾಡಲಾಗಿರುವ ಬದಲಾವಣೆಗಳಿಂದ ಜಾಗತಿಕ ಶಕ್ತಿಯ ನಿರ್ವಹಣೆಯ ಸಾಧನವಾಗಿ ತನ್ನ ಪ್ರಸ್ತುತತೆಯನ್ನು ಶಕ್ತಿ ಸಮತೋಲನ ಕಳೆದುಕೊಂಡಿದೆ.

1. ವಿಶ್ವ ರಾಜಕೀಯದಲ್ಲಿ ಯುರೋಪಿಯನ್ ರಾಷ್ಟ್ರಗಳ ಪ್ರಾಬಲ್ಯ ಕ್ಷೀಣಗೊಂಡು ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾದ ದೇಶಗಳು ಜಾಗತಿಕ ರಾಜಕಾರಣದಲ್ಲಿ ಮಹತ್ವ ಪಡೆದುದು.
2. ಥಾಯಭಾರತ್ವ ಮತ್ತು ಯುದ್ಧದ ಬದಲು ಪ್ರಚಾರ, ಮತ್ತು ಮಾನಸಿಕ ಹಾಗೂ ರಾಜಕೀಯ ಯುದ್ಧ ನೀತಿಯನ್ನು ವಿದೇಶಾಂಗ ವ್ಯವಹಾರದಲ್ಲಿ ರಾಷ್ಟ್ರಗಳು ಬಳಸುತ್ತಿದುದು.

3. ಸೈದ್ಧಾಂತಿಕ ವಿಚಾರಗಳು ಅಂತರ್‌ರಾಷ್ಟ್ರೀಯ ಸಂಬಂಧಗಳ ಮೂಲಾಂಶವಾದುದು.
4. ಶಕ್ತಿಶಾಲಿ ರಾಷ್ಟ್ರಗಳ ಸಂಖ್ಯೆಯಲ್ಲಿನ ಇಳಿಮುಖ. ಇದರರ್ಥ, ಮೊದಲ ಹಾಗೂ ಎರಡನೇ ವಿಶ್ವ ಸಮರದ ವೇಳೆ ಹಲವು ಶಕ್ತಿಶಾಲಿ ರಾಷ್ಟ್ರಗಳಿದ್ದು ಸಮಕಾಲೀನ ಜಗತ್ತು ಸೂಪರ್ ಪವರ್ ರಾಷ್ಟ್ರವನ್ನಾಗಿ ಅಮೇರಿಕಾವನ್ನು ಮಾತ್ರ ಹೊಂದಿದೆ.
5. ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ಯುಗದ ಅಂತ್ಯ.
6. ಯುದ್ಧವು ಪೂರ್ಣ ಯುದ್ಧದ ಪರಿಕಲ್ಪನೆಯಾಗಿ ಬದಲಾವಣೆಗೊಂಡಿದುದು.
7. ಜಾಗತಿಕ ಪಾತ್ರಧಾರಿಗಳ ಉದಯ.

### ಮಾದರಿ ಪ್ರಶ್ನೆಗಳು [Model Questions]:

[A.] ಎರಡು ಅಂಕದ ಪ್ರಶ್ನೆಗಳು:

1. ಶಕ್ತಿ ಸಮತೋಲನದ ಅಗತ್ಯವನ್ನು ತಿಳಿಸಿರಿ.
2. ಶಕ್ತಿ ಸಮತೋಲನವನ್ನು ವ್ಯಾಖ್ಯಾನಿಸಿರಿ.
3. ಶಕ್ತಿ ಸಮತೋಲನದ ಅರ್ಥವನ್ನು ಬರೆಯಿರಿ.
4. ಶಕ್ತಿ ಸಮತೋಲನವು ತಾತ್ಕಾಲಿಕವಾದದ್ದು. ಹೇಗೆ?
5. ಶಕ್ತಿ ಸಮತೋಲನದ ಮೂರು ಲಕ್ಷಣಗಳನ್ನು ಬರೆಯಿರಿ.
6. ಪರಿಹಾರ ವಿಧಾನದ ಎರಡು ಆಯಾಮಗಳನ್ನು ತಿಳಿಸಿರಿ.
7. ತಡೆ ರಾಜ್ಯ ಎಂದರೇನು?
8. ಶಕ್ತಿ ಸಮತೋಲನ ಕಾಪಾಡುವ ಮೂರು ವಿಧಾನಗಳನ್ನು ಬರೆಯಿರಿ.
9. ಶಕ್ತಿ ಸಮತೋಲನವು ಚಿಕ್ಕ ರಾಷ್ಟ್ರಗಳ ಸ್ವಾತಂತ್ರ್ಯದ ಭರವಸೆ ನೀಡುತ್ತದೆ. ಹೇಗೆ?
10. ಶಕ್ತಿ ಸಮತೋಲನವು ಯುದ್ಧ ಭೀತಿಯನ್ನು ಹೇಗೆ ಹೋಗಲಾಡಿಸುತ್ತದೆ?

[B.] ಐದು ಅಂಕದ ಪ್ರಶ್ನೆಗಳು:

1. ಶಕ್ತಿ ಸಮತೋಲನದ ಸ್ವರೂಪವನ್ನು ವಿವರಿಸಿರಿ.
2. ಶಕ್ತಿ ಸಮತೋಲನ ಕಾಪಾಡುವ ವಿಧಾನಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.
3. ಶಕ್ತಿ ಸಮತೋಲನದ ಪ್ರಸ್ತುತತೆಯನ್ನು ಪರಿಶೀಲಿಸಿರಿ.

[C.] ಹತ್ತು ಅಂಕದ ಪ್ರಶ್ನೆಗಳು:

1. ಶಕ್ತಿ ಸಮತೋಲನ ಎಂದರೇನು? ಅದನ್ನು ಸಾಧಿಸುವ ವಿಧಾನಗಳನ್ನು ವಿವರಿಸಿರಿ.
2. ಶಕ್ತಿ ಸಮತೋಲನದ ಸ್ವರೂಪ ಮತ್ತು ಪ್ರಸ್ತುತತೆಯನ್ನು ಚರ್ಚಿಸಿರಿ.



ಅಧ್ಯಾಯ 9:

# ಸಾಮೂಹಿಕ ಭದ್ರತೆ ಮತ್ತು ರಾಯಭಾರತ್ವ

# [COLLECTIVE SECURITY AND DIPLOMACY].

## ಪ್ರಸ್ತಾವನೆ [Introduction]:

20 ನೇ ಶತಮಾನದ ಮಧ್ಯದ ವೇಳೆಗೆ ಅಂದರೆ ಎರಡನೇ ವಿಶ್ವ ಸಮರದ ನಂತರ ರಾಷ್ಟ್ರಗಳ ಸಂಬಂಧಗಳಲ್ಲಿ ವ್ಯಾಪಕ ಬದಲಾವಣೆಗಳು ಘಟಿಸಿದವು. ಜಗತ್ತನ್ನು ಮೂರನೇ ವಿಶ್ವ ಯುದ್ಧದಿಂದ ದೂರಗೊಳಿಸಲು ವಿಶ್ವ ಸಂಸ್ಥೆ ಹೆಸರಿನ ಅಂತರ್‌ರಾಷ್ಟ್ರೀಯ ಸಂಘಟನೆ ಅಸ್ತಿತ್ವಕ್ಕೆ ಬಂದಿತು. ಇದರೊಡನೆ ಅಂತರ್‌ರಾಷ್ಟ್ರೀಯ ವ್ಯವಹಾರಗಳನ್ನು ನಿರ್ವಹಿಸುವ ವ್ಯವಸ್ಥೆಯಲ್ಲಿ ನೂತನ ಪರಿಕಲ್ಪನೆಗಳು ಜಾರಿಗೊಂಡವು. ಅವುಗಳಲ್ಲಿ ಸಾಮೂಹಿಕ ಭದ್ರತೆ ಮತ್ತು ನೂತನ ರಾಯಭಾರತ್ವ ಪ್ರಧಾನವಾದವುಗಳಾಗಿದ್ದವು. ಪ್ರಸ್ತುತ ಅಧ್ಯಾಯದಲ್ಲಿ ಸಮಕಾಲೀನ ಪ್ರಪಂಚದಲ್ಲಿ ಮುನ್ನೆಲೆಗೆ ಬಂದಿರುವ ಅಂತರ್‌ರಾಷ್ಟ್ರೀಯ ಸಂಬಂಧಗಳ ಮೂಲ ತತ್ವಗಳೆನಿಸಿರುವ ಸಾಮೂಹಿಕ ಭದ್ರತೆ ಹಾಗೂ ರಾಯಭಾರತ್ವ ಕುರಿತು ಬೆಳಕು ಚೆಲ್ಲಲಾಗಿದೆ.

## [I.] ಸಾಮೂಹಿಕ ಭದ್ರತೆ [Collective Security]:

### [A.] ಸಾಮೂಹಿಕ ಭದ್ರತೆಯ ಅರ್ಥ [Meaning of Collective Security]:

ಸಾಮೂಹಿಕ ಭದ್ರತೆಯು ಒಬ್ಬನಿಗಾಗಿ ಎಲ್ಲರು ಮತ್ತು ಎಲ್ಲರಿಗಾಗಿ ಒಬ್ಬ ಎಂಬ ಸಹಕಾರ ತತ್ವವನ್ನು ಆಧರಿಸಿರುವ ಪರಿಕಲ್ಪನೆಯಾಗಿದೆ. ರಾಷ್ಟ್ರವೊಂದು ಅನ್ಯ ರಾಷ್ಟ್ರದ ಮೇಲೆ ಆಕ್ರಮಣ ನಡೆಸಿದರೆ ಉಳಿದ ರಾಷ್ಟ್ರಗಳು ಆಕ್ರಮಣಕ್ಕೆ ಒಳಗಾದ ರಾಷ್ಟ್ರದ ಭದ್ರತೆಯನ್ನು ರಕ್ಷಿಸಲು ಸಾಮೂಹಿಕವಾಗಿ ಪ್ರಯತ್ನಿಸುತ್ತವೆ. ರಾಷ್ಟ್ರಗಳ ಸಾಮೂಹಿಕ ಕಾರ್ಯಾಚರಣೆಯು ಸಾಮೂಹಿಕ ಭದ್ರತೆಯ ವಿಶಿಷ್ಟತೆಯಾಗಿದೆ. ಸಾಮೂಹಿಕ ಭದ್ರತೆಯು ರಾಷ್ಟ್ರಗಳ ನಡುವಿನ ಬಿಕ್ಕಟ್ಟೊಂದರ ನಿರ್ವಹಣೆಯ ಪ್ರಧಾನ ಸಾಧನವಾಗಿ ಪರಿಗಣಿಸಲ್ಪಟ್ಟಿದೆ. ರಾಷ್ಟ್ರವೊಂದರ ಮೇಲಿನ ಆಕ್ರಮಣವು ಅಂತರ್‌ರಾಷ್ಟ್ರೀಯ ಸಮುದಾಯದ ಶಾಂತಿ ಮತ್ತು ಭದ್ರತೆಯ

ಆಕ್ರಮಣವೆಂದು ಭಾವಿಸಿ ಸಾಮೂಹಿಕ ಕಾರ್ಯಾಚರಣೆಯ ಮೂಲಕ ಅದನ್ನು ರಕ್ಷಿಸುವುದನ್ನು ಸಾಮೂಹಿಕ ಭದ್ರತೆಯು ಪ್ರತಿನಿಧಿಸುತ್ತದೆ. ಈ ಕೆಳಗಿನ ವ್ಯಾಖ್ಯಾನಗಳ ಮನವರಿಕೆಯು ಸಾಮೂಹಿಕ ಭದ್ರತೆಯ ಅರ್ಥವನ್ನು ಮತ್ತಷ್ಟು ಸ್ಪಷ್ಟವಾಗಿ ಅರಿತುಕೊಳ್ಳಲು ನೆರವಾಗಿವೆ.

ಜಾರ್ಜ್ ಸ್ಕವರ್ಜನ್ ಬರ್ಗರ್ ಪ್ರಕಾರ ಸ್ಥಾಪಿತ ಅಂತರ್‌ರಾಷ್ಟ್ರೀಯ ವ್ಯವಸ್ಥೆಯ ಮೇಲಿನ ದಾಳಿಯನ್ನು ರಾಷ್ಟ್ರಗಳು ಜಂಟಿ ಕಾರ್ಯಾಚರಣೆಯ ಮೂಲಕ ಸಂರಕ್ಷಿಸಿಕೊಳ್ಳುವುದೇ ಸಾಮೂಹಿಕ ಭದ್ರತೆ.

ಪಾಮರ್ ಮತ್ತು ಪರ್ಕಿನ್ಸ್ ಪ್ರಕಾರ ಶಾಂತಿಗೆ ಭಂಗ ತರುವಂತಹ ಬೆಳವಣಿಗೆಯ ವಿರುದ್ಧ ರಾಷ್ಟ್ರಗಳು ಕೈಗೊಳ್ಳುವ ಸಾಮೂಹಿಕ ಕ್ರಮಗಳೇ ಸಾಮೂಹಿಕ ಭದ್ರತೆ.

ಸ್ಟೈಚರ್ ಪ್ರಕಾರ ಸಾಮೂಹಿಕ ಭದ್ರತೆಯು ರಾಷ್ಟ್ರಗಳು ರೂಪಿಸಿಕೊಂಡ ವ್ಯವಸ್ಥೆಯಾಗಿದ್ದು ಅದರಲ್ಲಿನ ರಾಷ್ಟ್ರವೊಂದು ಇತರ ರಾಷ್ಟ್ರದ ಮೇಲೆ ಯುದ್ಧ ಅಥವಾ ಆಕ್ರಮಣದಂತಹ ನಿಷೇಧಿತ ಕ್ರಮಗಳಿಗೆ ಮುಂದಾದರೆ ಉಳಿದ ರಾಷ್ಟ್ರಗಳು ಅಭದ್ರತೆಗೆ ಗುರಿಯಾದ ರಾಷ್ಟ್ರದ ಪರವಾಗಿ ಹೋರಾಡುವುದಾಗಿದೆ

ಒಟ್ಟಾರೆ ಸರಳಾರ್ಥದಲ್ಲಿ ಸಾಮೂಹಿಕ ಕಾರ್ಯಾಚರಣೆಯ ಮೂಲಕ ಪ್ರತಿಯೊಂದು ರಾಷ್ಟ್ರಕ್ಕೆ ಭದ್ರತೆಯ ಭರವಸೆ ಒದಗಿಸುವ ಪ್ರಕ್ರಿಯೆಯನ್ನು ಸಾಮೂಹಿಕ ಭದ್ರತೆ ಎನ್ನಬಹುದಾಗಿದೆ. ವಿಶಾಲಾರ್ಥದಲ್ಲಿ ಜಗತ್ತಿನ ಯಾವುದೇ ಒಂದು ರಾಷ್ಟ್ರ ಇತರ ಯಾವುದೇ ರಾಷ್ಟ್ರದಿಂದ ಆಕ್ರಮಣಕ್ಕೊಳಗಾದರೆ ಉಳಿದ ರಾಷ್ಟ್ರಗಳೆಲ್ಲ ಸಾಮೂಹಿಕವಾಗಿ ಕಾರ್ಯಾಚರಿಸುವ ಮೂಲಕ ಆಕ್ರಮಣಕ್ಕೊಳಗಾದ ರಾಷ್ಟ್ರದ ಭದ್ರತೆಯನ್ನು ಕಾಪಾಡುವ ವ್ಯವಸ್ಥೆಯು ಸಾಮೂಹಿಕ ಭದ್ರತೆಯಾಗಿದೆ. ರಾಷ್ಟ್ರಗಳು ಸಾಮೂಹಿಕವಾಗಿ ಕಾರ್ಯಾಚರಿಸುವ ಮೂಲಕ ಆಕ್ರಮಣ ಅಥವಾ ಯುದ್ಧಕ್ಕೆ ತುತ್ತಾದ ರಾಷ್ಟ್ರದ ಭದ್ರತೆಯನ್ನು ಕಾಪಾಡುವುದೇ ಸಾಮೂಹಿಕ ಭದ್ರತೆಯ ತಿರುಳಾಗಿದೆ. ಶಕ್ತಿ ಸಮತೋಲನದ ಸಾಂಸ್ಥೀಕರಣದಿಂದ ಸಾಮೂಹಿಕ ಭದ್ರತೆಯ ಪರಿಕಲ್ಪನೆಯು ಮೂಡಿ ಬಂದಿದ್ದು ಸಮಕಾಲೀನ ಅಂತರ್‌ರಾಷ್ಟ್ರೀಯ ಸಂಬಂಧಗಳ ಪ್ರಧಾನ ತತ್ವವೆನಿಸಿದೆ.

### [B.] ಸಾಮೂಹಿಕ ಭದ್ರತೆಯ ಸ್ವರೂಪ [Nature of Collective Security]:

ಸಾಮೂಹಿಕ ಕಾರ್ಯಾಚರಣೆಯ ಮೂಲಕ ಜಾಗತಿಕ ಭದ್ರತೆಯನ್ನು ಸಂರಕ್ಷಿಸುವುದನ್ನು ಸಾಮೂಹಿಕ ಭದ್ರತೆಯು ಪ್ರತಿನಿಧಿಸುತ್ತದೆ. ಸಾಮೂಹಿಕ ಮತ್ತು ಭದ್ರತೆ ಎಂಬ ಎರಡು ಸ್ವತಂತ್ರ ಪದಗಳಿಂದ ಕೂಡಿರುವ ಸಾಮೂಹಿಕ ಭದ್ರತೆಯು ಒಬ್ಬರಿಗಾಗಿ ಎಲ್ಲರು ಮತ್ತು ಎಲ್ಲರಿಗಾಗಿ ಒಬ್ಬರು ಎಂಬ ತತ್ವವನ್ನು ಆಧರಿಸಿದೆ. ರಾಷ್ಟ್ರವೊಂದರ



ಭದ್ರತೆಯು ಅಂತರ್‌ರಾಷ್ಟ್ರೀಯ ಭದ್ರತೆಯೊಡನೆ ಅಂತರ್‌ಸಂಬಂಧ ಹೊಂದಿದ್ದು ಭದ್ರತೆಯು ಎಲ್ಲ ರಾಷ್ಟ್ರಗಳ ಪ್ರಧಾನ ಗುರಿಯಾಗಿರುತ್ತದೆ. ಹೀಗಾಗಿ ರಾಷ್ಟ್ರವೊಂದರ ಭದ್ರತೆಯ ಮೇಲಿನ ಆಕ್ರಮಣವು ಜಾಗತಿಕ ಭದ್ರತೆಯ ಮೇಲಿನ ಆಕ್ರಮಣವೆಂದು ಪರಿಗಣಿಸಲ್ಪಡುತ್ತದೆ. ಅಂತೆಯೇ ಸಾಮೂಹಿಕ ಎಂಬುದು ಭದ್ರತೆಯನ್ನು ಕಾಪಾಡಲು ಬಳಸುವ ವಿಧಾನವನ್ನು ಪ್ರತಿನಿಧಿಸುತ್ತದೆ. ಇಲ್ಲಿ ಯುದ್ಧ ಅಥವಾ ಆಕ್ರಮಣಕ್ಕೆ ಮುಂದಾದ ರಾಷ್ಟ್ರದ ಶಕ್ತಿಯನ್ನು ನಿಯಂತ್ರಿಸಲು ಉಳಿದೆಲ್ಲ ರಾಷ್ಟ್ರಗಳ ಸಾಮೂಹಿಕ ಶಕ್ತಿಯನ್ನು ಬಳಸಲಾಗುತ್ತದೆ. ಸಾಮೂಹಿಕ ಭದ್ರತೆಯು ಹೊಂದಿರುವ ಕೆಳಗಿನ ಪ್ರಧಾನ ಲಕ್ಷಣಗಳನ್ನು ಮನವರಿಕೆ ಮಾಡಿಕೊಳ್ಳುವ ಮೂಲಕ ಅದರ ಸ್ವರೂಪವನ್ನು ನಾವು ಸ್ಪಷ್ಟವಾಗಿ ಅರ್ಥೈಸಿಕೊಳ್ಳಬಹುದಾಗಿದೆ.

**1. ಬಿಕ್ಕಟ್ಟು ನಿರ್ವಹಣೆಯ ಸಾಧನ:** ಅಂತರ್‌ರಾಷ್ಟ್ರೀಯ ಶಾಂತಿಯನ್ನು ಕದಡುವ ಯುದ್ಧ ಅಥವಾ ಆಕ್ರಮಣದಂತಹ ಬಿಕ್ಕಟ್ಟುಗಳ ನಿಯಂತ್ರಣಕ್ಕೆ ಸಾಮೂಹಿಕ ಭದ್ರತೆಯು ಉತ್ತಮ ಸಾಧನವಾಗಿದೆ.

**2. ಆಕ್ರಮಣದ ಸಾರ್ವತ್ರಿಕತೆಯ ಸಮ್ಮತಿ:** ಸಾಮೂಹಿಕ ಭದ್ರತೆಯು ರಾಷ್ಟ್ರವೊಂದರ ಮೇಲಿನ ಆಕ್ರಮಣವನ್ನು ಸರ್ವರ ಮೇಲಿನ ಆಕ್ರಮಣವೆಂದು ಪರಿಗಣಿಸುತ್ತದೆ. ಜೊತೆಗೆ ಯುದ್ಧ ಅಥವಾ ಆಕ್ರಮಣಗಳು ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿ ಸಾಮಾನ್ಯ ವಿದ್ಯಮಾನವೆಂದು ನಂಬುತ್ತದೆ.

**3. ಆಕ್ರಮಣದ ನಿರ್ಮೂಲನೆಗೆ ಬದ್ಧತೆ:** ಜಗತ್ತಿನ ಯಾವುದೇ ಭಾಗದಲ್ಲಿ ಅಥವಾ ಯಾವುದೇ ರಾಷ್ಟ್ರದಲ್ಲಿ ಆಕ್ರಮಣ ನಡೆದರೂ ಅದನ್ನು ಅಂತ್ಯಗೊಳಿಸುವುದು ಉಳಿದೆಲ್ಲ ರಾಷ್ಟ್ರಗಳ ಜವಾಬ್ದಾರಿ ಎಂಬಂಶವನ್ನು ಸಾಮೂಹಿಕ ಭದ್ರತೆಯು ಸ್ಪಷ್ಟಪಡಿಸುತ್ತದೆ. ಮುಂದುವರಿದು, ಯುದ್ಧ ಅಥವಾ ಆಕ್ರಮಣದ ನಿರ್ಮೂಲನೆಗೆ ಎಲ್ಲ ರಾಷ್ಟ್ರಗಳು ತಮ್ಮಲ್ಲಿನ ಶಕ್ತಿ ಮತ್ತು ಸಂಪನ್ಮೂಲಗಳನ್ನು ಒಗ್ಗೂಡಿಸಿ ಸಾಮೂಹಿಕವಾಗಿ ಕಾರ್ಯಾಚರಿಸಲು ಪ್ರೋತ್ಸಾಹಿಸುತ್ತದೆ.

**4. ಶಕ್ತಿಗೆ ಜಾಗತಿಕ ಪ್ರಾಧಾನ್ಯತೆ:** ಸಾಮೂಹಿಕ ಭದ್ರತೆಯು ಅಂತರ್‌ರಾಷ್ಟ್ರೀಯ ಶಾಂತಿ ಮತ್ತು ಭದ್ರತೆ ಕಾಪಾಡಲು ವಿಶ್ವದ ರಾಷ್ಟ್ರಗಳನ್ನು ಒಳಗೊಂಡ ಪರಿಕಲ್ಪನೆಯಾಗಿದೆ. ಜೊತೆಗೆ ಆಕ್ರಮಣ ಜರುಗಿದರೆ ರಾಷ್ಟ್ರಗಳು ತಮ್ಮ ಶಕ್ತಿಯನ್ನು ಸಾಮೂಹಿಕವಾಗಿ ಬಳಸುವ ಮೂಲಕ ಶಕ್ತಿಯ ಮಹತ್ವವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯುತ್ತದೆ.

**5. ಅಂತರ್‌ರಾಷ್ಟ್ರೀಯ ಸಂಸ್ಥೆಗೆ ಒಲವು:** ಸಾಮೂಹಿಕ ಭದ್ರತೆಯು ತನ್ನ ಯಶಸ್ಸಿಗೆ ಅಂತರ್‌ರಾಷ್ಟ್ರೀಯ ಸಂಸ್ಥೆಯೊಂದನ್ನು ಅವಲಂಬಿಸಿದೆ. ಅಂತರ್‌ರಾಷ್ಟ್ರೀಯ ಸಂಸ್ಥೆಯ ನಿಯಮಾವಳಿಗಳ ಚೌಕಟ್ಟಿನಲ್ಲಿ ಒಗ್ಗೂಡಿ ಆಕ್ರಮಣಗಳನ್ನು ತಡೆಯಲು ಸುಲಭ ಸಾಧ್ಯವೆಂಬ ನಿಲುವು ಬಹುತೇಕ ರಾಷ್ಟ್ರಗಳದಾಗಿದೆ.

**6. ಯುದ್ಧ ನಿಯಂತ್ರಣಕ್ಕೆ ಪ್ರಾಶಸ್ತ್ಯ:** ಯಾವುದೇ ರಾಷ್ಟ್ರ ಇತರ ರಾಷ್ಟ್ರದ ಮೇಲೆ ಆಕ್ರಮಣಕ್ಕೆ ಮುಂದಾದರೆ ಸಾಮೂಹಿಕ ಭದ್ರತಾ ವ್ಯವಸ್ಥೆಯಡಿ ಉಳಿದ ರಾಷ್ಟ್ರಗಳು ಆಕ್ರಮಿತ ರಾಷ್ಟ್ರದ ಭದ್ರತೆಗೆ ಸಾಮೂಹಿಕವಾಗಿ ಕಾರ್ಯಾಚರಿಸಲು ಮುಂದಾಗುತ್ತವೆ. ಹೀಗಾಗಿ ಆಕ್ರಮಣಕಾರಿ ರಾಷ್ಟ್ರಗಳ ಮಹತ್ವಾಕಾಂಕ್ಷೆ ನಿರ್ಬಂಧಿಸಲ್ಪಡುತ್ತದೆ. ಜೊತೆಗೆ ಜಗತ್ತಿನಲ್ಲಿ ಯುದ್ಧ ಜರುಗದಂತಾಗುತ್ತದೆ.

**7. ಯುದ್ಧ ಕೈಗೊಂಡ ರಾಷ್ಟ್ರದ ಬದಲು ಯುದ್ಧದ ಖಂಡನೆ:** ಸಾಮೂಹಿಕ ಭದ್ರತಾ ವ್ಯವಸ್ಥೆಯು ಜಾಗತಿಕ ಕುಟುಂಬದ ಸದಸ್ಯನಾದ ಆಕ್ರಮಣಕಾರಿ ರಾಷ್ಟ್ರವನ್ನು ಖಂಡಿಸದೇ ಅದು ಕೈಗೊಂಡ ಯುದ್ಧವನ್ನು ಖಂಡಿಸುತ್ತದೆ. ಇದರರ್ಥ, ಸಾಮೂಹಿಕ ಭದ್ರತಾ ಕ್ರಮಗಳು ರಾಷ್ಟ್ರದ ವಿರುದ್ಧವಾಗಿರದೇ ರಾಷ್ಟ್ರವೊಂದು ಅನುಸರಿಸುವ ನೀತಿಯನ್ನು ವಿರೋಧಿಸುವುದಾಗಿದೆ.

ಈ ಮೇಲೆ ಚರ್ಚಿಸಲಾಗಿರುವ ಸಾಮೂಹಿಕ ಭದ್ರತೆಯ ಲಕ್ಷಣಗಳನ್ನು ಅವಲೋಕಿಸಿದರೆ ಜಾಗತಿಕ ಶಾಂತಿ ಮತ್ತು ಭದ್ರತೆಗೆ ಜಗತ್ತಿನ ರಾಷ್ಟ್ರಗಳು ಕೈಗೊಳ್ಳುವ ಸಾಮೂಹಿಕ ಕ್ರಮಗಳನ್ನು ಸಾಮೂಹಿಕ ಭದ್ರತೆ ಪ್ರತಿನಿಧಿಸುವುದು ಸ್ಪಷ್ಟವಾಗುತ್ತದೆ. ಜೊತೆಗೆ ಭದ್ರತೆಯು ಪ್ರತಿ ರಾಷ್ಟ್ರದ ಪ್ರಾಥಮಿಕ ಗುರಿಯಾಗಿದ್ದು ಅದನ್ನು ರಾಷ್ಟ್ರಗಳು ಸಾಮೂಹಿಕ ಕಾರ್ಯಾಚರಣೆಯ ಮೂಲಕ ಹೊಂದಲು ಬಯಸುವುದು ಸಾಮೂಹಿಕ ಭದ್ರತೆಯಾಗಿ ರೂಪುಗೊಂಡಿರುದು ಕಂಡು ಬರುತ್ತದೆ.

### [C.] ಶಕ್ತಿ ಸಮತೋಲನ ಮತ್ತು ಸಾಮೂಹಿಕ ಭದ್ರತೆಯ ನಡುವಿನ ವ್ಯತ್ಯಾಸಗಳು

### [Difference Bitween Balance of Power and Collective Security]:

ಶಕ್ತಿ ಸಮತೋಲನ ಮತ್ತು ಸಾಮೂಹಿಕ ಭದ್ರತೆ ಎಂಬುವು ಅಂತರ್‌ರಾಷ್ಟ್ರೀಯ ಸಂಬಂಧಗಳ ಮೂಲಭೂತ ತತ್ವಗಳಲ್ಲಿ ಪ್ರಧಾನವಾದವುಗಳು. ಶಕ್ತಿ ಸಮತೋಲನವು ರಾಷ್ಟ್ರಗಳ ನಡುವಿನ ಶಕ್ತಿಯನ್ನು ನಿರ್ವಹಿಸುವ ಆರಂಭಿಕ ಪರಿಕಲ್ಪನೆಯಾದರೆ ಸಾಮೂಹಿಕ ಭದ್ರತೆಯು ಸಮಕಾಲೀನ ಯುಗದಲ್ಲಿ ಅಸ್ತಿತ್ವದಲ್ಲಿರುವ ಪರಿಕಲ್ಪನೆಯಾಗಿದೆ. ಕೆಲವೊಂದು ಅಂಶಗಳಲ್ಲಿ ಇವೆರಡರ ನಡುವೆ ಸಾಮ್ಯತೆಗಳಿದ್ದರೂ ಕೆಳಗಿನ ವ್ಯತ್ಯಾಸಗಳನ್ನು ನಾವು ಗುರುತಿಸಬಹುದಾಗಿದೆ. ಶಕ್ತಿ ಸಮತೋಲನ ಹಾಗೂ ಸಾಮೂಹಿಕ ಭದ್ರತೆ ಸಮಾನ ಪರಿಕಲ್ಪನೆಗಳಲ್ಲ ಎಂಬುದನ್ನು ಅವುಗಳ ನಡುವಿನ ಕೆಳಗೆ ಪ್ರಸ್ತಾಪಿತ ವ್ಯತ್ಯಾಸಗಳಿಂದ ಗಮನಿಸಬಹುದಾಗಿದೆ.

**1. ಶಕ್ತಿ ಸಮತೋಲನವು ಸ್ಪರ್ಧಾತ್ಮಕ ವ್ಯವಸ್ಥೆಯಾದರೆ ಸಾಮೂಹಿಕ ಭದ್ರತೆಯು ಸಹಕಾರಿ ವ್ಯವಸ್ಥೆ:** ಶಕ್ತಿ ಸಮತೋಲನದಡಿ ಜಗತ್ತಿನ ಎರಡು ಸ್ಪರ್ಧಾತ್ಮಕ ರಾಷ್ಟ್ರ ಅಥವಾ ರಾಷ್ಟ್ರಗಳ ಗುಂಪುಗಳನ್ನು ಗುರುತಿಸಬಹುದಾಗಿದೆ. ಆದರೆ, ಸಾಮೂಹಿಕ ಭದ್ರತೆಯಡಿ



ಜಗತ್ತಿನ ಎಲ್ಲ ರಾಷ್ಟ್ರಗಳು ಪರಸ್ಪರ ಸಹಕಾರದಡಿ ಸಾಮೂಹಿಕವಾಗಿ ಕಾರ್ಯಾಚರಿಸುವುದನ್ನು ಗುರುತಿಸಬಹುದಾಗಿದೆ.

**2. ಶಕ್ತಿ ಸಮತೋಲನದಲ್ಲಿ ಕೇವಲ ಶಕ್ತಿಶಾಲಿ ರಾಷ್ಟ್ರಗಳು ಪಾತ್ರಧಾರಿಗಳಾಗಿದ್ದರೆ ಸಾಮೂಹಿಕ ಭದ್ರತೆಯಲ್ಲಿ ಎಲ್ಲ ರಾಷ್ಟ್ರಗಳೂ ಪಾತ್ರಧಾರಿಗಳಾಗಿರುತ್ತವೆ:** ಶಕ್ತಿ ಸಮತೋಲನವು ಪೈಪೋಟಿ ನಡೆಸುವ ಶಕ್ತಿಶಾಲಿ ರಾಷ್ಟ್ರಗಳಿಗೆ ಮಾತ್ರ ಮಹತ್ವ ನೀಡಿ ದುರ್ಬಲ ರಾಷ್ಟ್ರಗಳನ್ನು ನಿರ್ಲಕ್ಷಿಸುತ್ತದೆ. ಆದರೆ, ಸಾಮೂಹಿಕ ಭದ್ರತೆಯಲ್ಲಿ ಚಿಕ್ಕ ಮತ್ತು ಬೃಹತ್ ರಾಷ್ಟ್ರಗಳಿಗೆ ಸಮಾನ ಸ್ಥಾನಮಾನ ದೊರಕುತ್ತದೆ.

**3. ಶಕ್ತಿ ಸಮತೋಲನದಡಿಯ ಮೈತ್ರಿಕೂಟಗಳು ನಿಖರವಾಗಿದ್ದರೆ ಸಾಮೂಹಿಕ ಭದ್ರತೆಯಡಿ ರಾಷ್ಟ್ರಗಳ ಸಹಕಾರ ನಿಖರವಾಗಿರುವುದಿಲ್ಲ:** ಶಕ್ತಿ ಸಮತೋಲನದಡಿ ಮೈತ್ರಿಕೂಟಗಳು ನಿರ್ದಿಷ್ಟ ಶತ್ರು ರಾಷ್ಟ್ರದ ವಿರುದ್ಧ ರಚನೆಗೊಂಡು ಕಾರ್ಯಾಚರಿ ಸುತ್ತಿರುತ್ತವೆ. ಆದರೆ, ಸಾಮೂಹಿಕ ಭದ್ರತೆಯಡಿ ರಾಷ್ಟ್ರಗಳ ಶತ್ರು ನಿರ್ದಿಷ್ಟವಾಗಿರುವುದಿಲ್ಲ. ರಾಷ್ಟ್ರಗಳು ಸಾಮಾನ್ಯ ಉದ್ದೇಶಕ್ಕಾಗಿ ಸಮ್ಮತಿಸಿ ಜಗತ್ತಿನ ಯಾವುದೇ ಭಾಗ ಅಥವಾ ರಾಷ್ಟ್ರದ ವಿರುದ್ಧ ಸಾಮೂಹಿಕ ಭದ್ರತಾ ವ್ಯವಸ್ಥೆಯು ಕಾರ್ಯಾಚರಿಸುತ್ತಿರುತ್ತದೆ.

**4. ಶಕ್ತಿ ಸಮತೋಲನದಡಿ ಶತ್ರು ಒಳಗಿನ ಅಥವಾ ಹೊರಗಿನವರಾಗಿದ್ದರೆ ಸಾಮೂಹಿಕ ಭದ್ರತೆಯಡಿ ಶತ್ರು ಒಳಗಿನವರಾಗಿರುತ್ತಾರೆ:** ಶಕ್ತಿ ಬಣಕ್ಕೆ ಸೇರಿದ ಪ್ರಬಲ ರಾಷ್ಟ್ರವಾಗಲಿ ಅಥವಾ ಸ್ಪರ್ಧಾತ್ಮಕ ಶಕ್ತಿ ಬಣವು ಶತ್ರುವಾಗಿ ಶಕ್ತಿ ಸಮತೋಲನದಲ್ಲಿ ಕಂಡು ಬರುತ್ತದೆ. ಆದರೆ, ಸಾಮೂಹಿಕ ಭದ್ರತೆಯಲ್ಲಿ ಅಂತರ್‌ರಾಷ್ಟ್ರೀಯ ಸಮುದಾಯದ ಆಕ್ರಮಣಕಾರಿ ರಾಷ್ಟ್ರವೇ ಶತ್ರುವಾದ್ದರಿಂದ ಒಳಗಿನ ಶತ್ರು ಎನ್ನಲಾಗುತ್ತದೆ.

5. ಶಕ್ತಿ ಸಮತೋಲನವು ರಾಷ್ಟ್ರಗಳ ಗುಂಪು ವ್ಯವಸ್ಥೆಯಾದರೆ ಸಾಮೂಹಿಕ ಭದ್ರತೆಯು ಜಾಗತಿಕ ರಾಷ್ಟ್ರಗಳ ವ್ಯವಸ್ಥೆಯಾಗಿರುತ್ತದೆ.

6. ಶಕ್ತಿ ಸಮತೋಲನವು ಕೆಲ ರಾಷ್ಟ್ರಗಳ ಸಾಮಾನ್ಯ ಒಕ್ಕೂಟವಾದರೆ ಸಾಮೂಹಿಕ ಭದ್ರತೆಯು ಎಲ್ಲ ರಾಷ್ಟ್ರಗಳ ಸಾಮಾನ್ಯ ಒಪ್ಪಂದದ ಫಲವಾಗಿರುತ್ತದೆ.

7. ಶಕ್ತಿ ಸಮತೋಲನವು ಅಂತರ್‌ರಾಷ್ಟ್ರೀಯ ಸಂಸ್ಥೆಯ ಅನುಪಸ್ಥಿತಿಯಲ್ಲಿ ಕಾರ್ಯಾಚರಿಸಿದರೆ ಸಾಮೂಹಿಕ ಭದ್ರತೆಯು ಜಾಗತಿಕ ಸಂಸ್ಥೆಯ ನೆರವಿನಿಂದ ಕಾರ್ಯಾಚರಿಸಲ್ಪಡುತ್ತದೆ.

### [D.] ವಿಶ್ವ ಸಂಸ್ಥೆ ಮತ್ತು ಸಾಮೂಹಿಕ ಭದ್ರತಾ ಕ್ರಮಗಳು

### [United Nations Organisation and Collective Security Mesures]:

ಎರಡನೇ ವಿಶ್ವ ಯುದ್ಧದ ನಂತರ ಅಂತರ್‌ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡಲು ಅಸ್ತಿತ್ವಕ್ಕೆ ಬಂದ ಅಂತರ್‌ರಾಷ್ಟ್ರೀಯ ಸಂಘಟನೆಯೇ ವಿಶ್ವ ಸಂಸ್ಥೆ. ಈ ವಿಶ್ವ

ಸಂಸ್ಥೆಯ ಪ್ರಣಾಳಿಕೆಯಲ್ಲಿ 32 ಬಾರಿ ಅಂತರ್‌ರಾಷ್ಟ್ರೀಯ ಶಾಂತಿ ಮತ್ತು ಭದ್ರತೆ ಎಂಬ ಪದಗಳನ್ನು ಬಳಸಲಾಗಿದ್ದು ಅದರ ಮಹತ್ವವನ್ನು ಸೂಚಿಸುತ್ತದೆ. ಜೊತೆಗೆ ವಿಶ್ವ ಸಂಸ್ಥೆಯ ಉದ್ದೇಶಗಳನ್ನು ಪ್ರಸ್ತಾಪಿಸಿರುವ ಅದರ ಪ್ರಣಾಳಿಕೆಯ ಮೊದಲ ವಿಧಿಯಲ್ಲಿ ಅಂತರ ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದು ವಿಶ್ವ ಸಂಸ್ಥೆಯ ಪ್ರಾಥಮಿಕ ಜವಾಬ್ದಾರಿ ಎಂದು ತಿಳಿಸಲಾಗಿದೆ. ಇದರೊಡನೆ ಅಂತರ್‌ರಾಷ್ಟ್ರೀಯ ಭದ್ರತೆಯನ್ನು ಕಾಪಾಡಲು ನೆರವಾಗುವ ಸಾಮೂಹಿಕ ಭದ್ರತಾ ಕ್ರಮವನ್ನು ಪರಿಹಾರೋಪಾಯವಾಗಿ ಪ್ರಣಾಳಿಕೆಯಲ್ಲಿ ಪ್ರಸ್ತಾಪಿಸಲಾಗಿದೆ. ವಿಶ್ವ ಸಂಸ್ಥೆಯ ಪ್ರನಾಳಿಕೆಯ ಏಳನೇ ಅಧ್ಯಾಯದಲ್ಲಿ 36 ರಿಂದ 51 ನೇ ವಿಧಿಯವರೆಗೆ ಸಾಮೂಹಿಕ ಭದ್ರತಾ ಕ್ರಮಗಳನ್ನು ಕುರಿತಾದ 13 ವಿಧಿಗಳಿದ್ದು ಶಾಂತಿಗೆ ಭಂಗ ತರುವ, ಶಾಂತಿಯನ್ನು ಉಲ್ಲಂಘಿಸುವ ಅಥವಾ ಆಕ್ರಮಣ ನಡೆಸುವ ರಾಷ್ಟ್ರದ ವಿರುದ್ಧ ಕೈಗೊಳ್ಳುವ ಕ್ರಮವನ್ನು ಸಾಮೂಹಿಕ ಭದ್ರತಾ ಕ್ರಮವೆಂದು ಪ್ರತಿಪಾದಿಸಲಾಗಿದೆ. ವಿಶ್ವ ಸಂಸ್ಥೆಯ ಅಂಗವಾದ ಭದ್ರತಾ ಮಂಡಳಿಗೆ ಜಾಗತಿಕ ಶಾಂತಿ ಮತ್ತು ಭದ್ರತೆಗೆ ಧಕ್ಕೆಯುಂಟಾದರೆ ಸಾಮೂಹಿಕ ಭದ್ರತಾ ಕ್ರಮಗಳನ್ನು ರೂಪಿಸಿ ಜಾರಿಗೊಳಿಸುವ ಅಧಿಕಾರವನ್ನು ನೀಡಲಾಗಿದೆ. ಈ ಅವಕಾಶದಡಿ ಭದ್ರತಾ ಮಂಡಳಿಯು ಅಂತರ್‌ರಾಷ್ಟ್ರೀಯ ಶಾಂತಿ ಪಾಲನಾ ಪಡೆಯನ್ನು ರಚಿಸಿ ಅನೇಕ ಜಾಗತಿಕ ಭದ್ರತಾ ಬಿಕ್ಕಟ್ಟುಗಳನ್ನು ಸಾಮೂಹಿಕ ಭದ್ರತಾ ಕ್ರಮದ ಮೂಲಕ ನಿವಾರಿಸಲು ಪ್ರಯತ್ನಿಸಿದೆ. ಆ ಪೈಕಿ ಪ್ರಮುಖ ಸಾಮೂಹಿಕ ಭದ್ರತಾ ಕ್ರಮಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ.

**1. ಕೋರಿಯಾ ಬಿಕ್ಕಟ್ಟು 1950:** ಉತ್ತರ ಕೋರಿಯಾವು ದಕ್ಷಿಣ ಕೋರಿಯಾವನ್ನು ಜೂನ್ 25, 1950 ರಂದು ಆಕ್ರಮಿಸಿತು. ಭದ್ರತಾ ಮಂಡಳಿ ಉತ್ತರ ಕೋರಿಯಾಕ್ಕೆ ತನ್ನ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಳ್ಳಲು ಸೂಚಿಸಿದರೂ ಅದು ಸಮ್ಮತಿಸಲಿಲ್ಲ. ಆಗ ಭದ್ರತಾ ಮಂಡಳಿಯು ಸಾಮೂಹಿಕ ಕ್ರಮದ ಅನಿವಾರ್ಯತೆಯನ್ನು ಮನಗಂಡು ಮೊದಲ ಬಾರಿಗೆ ಅದನ್ನು ಉಪಯೋಗಿಸಲು ನಿರ್ಣಯಿಸಿದಾಗ 53 ರಾಷ್ಟ್ರಗಳು ಬೆಂಬಲಿಸಿದವು. ಜುಲೈ 7, 1950 ರಂದು ವಿಶ್ವ ಸಂಸ್ಥೆಯ ಧ್ವಜದಡಿ ಏಕೀಕೃತ ಸೈನ್ಯವನ್ನು ರಚಿಸಿ ಅಂತರ್‌ರಾಷ್ಟ್ರೀಯ ಭದ್ರತೆಯನ್ನು ಧಕ್ಕೆಗೊಳಪಡಿಸಿದ ಉತ್ತರ ಕೋರಿಯಾ ವಿರುದ್ಧ ಸಾಮೂಹಿಕ ಭದ್ರತಾ ಕ್ರಮ ಕೈಗೊಳ್ಳಲು ತೀರ್ಮಾನಿಸಲಾಯಿತು. ಆದರೆ, ಉತ್ತರ ಕೋರಿಯಾದ ಪರವಾಗಿ ಚೀನಾ ನಿಂತುಕೊಂಡ ಕಾರಣ ಸಾಮೂಹಿಕ ಭದ್ರತಾ ಕ್ರಮವು ಸಂಕೀರ್ಣವೆನಿಸಿಕೊಂಡಿತು. ಮುಂದೆ ನವೆಂಬರ್ 3, 1950 ರಂದು ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯು ಒಕ್ಕೊರಲಿನಿಂದ ಶಾಂತಿಗಾಗಿ ಐಕ್ಯತೆ ನಿರ್ಣಯವನ್ನು ಅಂಗೀಕರಿಸಿದ್ದುದು ಸಾಮೂಹಿಕ ಭದ್ರತಾ ಕ್ರಮಕ್ಕೆ ಬಲ ನೀಡಿತು.

**2. ಸುಯೇಜ್ ಕಾಲುವೆ ಬಿಕ್ಕಟ್ಟು 1956:** 120 ಮೈಲುಗಳಷ್ಟು ಉದ್ದದ ಸುಯೇಜ್ ಕಾಲುವೆಯು ಮೆಡಿಟರೇನಿಯನ್ ಸಮುದ್ರವನ್ನು ಕೆಂಪು ಸಮುದ್ರದ ಮೂಲಕ ಹಿಂದೂ



ಮಹಾ ಸಾಗರಕ್ಕೆ ಸಂಪರ್ಕ ಕಲ್ಪಿಸುತ್ತದೆ. ಯುರೋಪ್ ಮತ್ತು ಏಷ್ಯಾದ ನಡುವೆ ಸಂಪರ್ಕ ಕಲ್ಪಿಸಲು ನೆರವಾಗಿದ್ದ ಈ ಕಾಲುವೆಯನ್ನು ಈಜಿಪ್ಟಿನ ಅಧ್ಯಕ್ಷ ಅಬ್ದುಲ್ ನಾಸೆರ್ ರಾಷ್ಟ್ರೀಕರಣಗೊಳಿಸುತ್ತಾರೆ. ಇದರಿಂದ ಕೋಪಗೊಂಡ ಬ್ರಿಟನ್ ಮತ್ತು ಫ್ರಾನ್ಸ್ ಇಸ್ರೇಲ್ ಜೊತೆಗೂಡಿ ಈಜಿಪ್ಟಿನ ಮೇಲೆ ಅಕ್ಟೋಬರ್ 29, 1956 ರಂದು ಯುದ್ಧ ಸಾರುತ್ತವೆ. ಈ ಬಿಕ್ಕಟ್ಟು ಅಂತರ್‌ರಾಷ್ಟ್ರೀಯ ಭದ್ರತೆಗೆ ಧಕ್ಕೆಯುಂಟು ಮಾಡುವುದೆಂದು ಭಾವಿಸಿ ಭದ್ರತಾ ಮಂಡಳಿಯು ಸಾಮೂಹಿಕ ಭದ್ರತಾ ಕ್ರಮಕ್ಕೆ ಪ್ರಯತ್ನಿಸಿತು.

**3. ಹಂಗೇರಿ ಬಿಕ್ಕಟ್ಟು 1956:** ಹಂಗೇರಿಯ ಆಂತರಿಕ ವ್ಯವಹಾರದಲ್ಲಿ ರಷ್ಯಾವು ಹಸ್ತಕ್ಷೇಪ ಮಾಡುವುದನ್ನು ತಡೆಯುವಲ್ಲಿ ಸಾಮೂಹಿಕ ಭದ್ರತಾ ಕ್ರಮವು ಸಫಲವಾಯಿತು.

**4. ಕೊವೈತ್ ಬಿಕ್ಕಟ್ಟು 1991:** ಇರಾಕ್ ದೇಶವು ತನ್ನ ನೆರೆಯ ಕೊವೈತ್ ಮೇಲೆ ದಾಳಿ ನಡೆಸಿ. ಅಂತರ್‌ರಾಷ್ಟ್ರೀಯ ಭದ್ರತೆಯನ್ನು ಉಲ್ಲಂಘಿಸಿತು. ವಿಶ್ವ ಸಂಸ್ಥೆ ನೀಡಿದ ಸೂಚನೆಯನ್ನು ಇರಾಕ್‌ನ ಸರ್ವಾಧಿಕಾರಿ ಸದ್ದಾಮ್ ಹುಸೇನ್ ಮನ್ನಿಸದಿದ್ದಾಗ ಸಾಮೂಹಿಕ ಸೈನಿಕ ಕಾರ್ಯಾಚರಣೆಗೆ ನಿರ್ಧರಿಸಲಾಯಿತು. ಕೊವೈತ್ ಪರವಾಗಿ ಜನವರಿ 17, 1991 ರಂದು 42 ರಾಷ್ಟ್ರಗಳ ಸೈನಿಕ ತುಕುಡಿಗಳು ವಿಶ್ವ ಸಂಸ್ಥೆಯ ಶಾಂತಿ ಪಾಲನಾ ಪಡೆಯೊಡನೆ ಸಾಮೂಹಿಕ ಕ್ರಮಕ್ಕೆ ಮುಂದಾದವು. ಫಲವಾಗಿ ಇರಾಕ್ ಹಿಮ್ಮೆಟ್ಟಿ ಕೊವೈತ್ ಸ್ವಾತಂತ್ರ್ಯ ಸಂರಕ್ಷಿಸಲ್ಪಟ್ಟಿತು.

**5. ತಾಲಿಬಾನ್ ಬಿಕ್ಕಟ್ಟು 2001 :** ಅಫ್ಘಾನಿಸ್ತಾನದ ತಾಲಿಬಾನ್ ಸರ್ಕಾರವು ಭಯೋತ್ಪಾದಕರನ್ನು ಪ್ರೋತ್ಸಾಹಿಸುವ ಮೂಲಕ ಜಾಗತಿಕ ಶಾಂತಿಗೆ ಪೆಟ್ಟು ನೀಡುತ್ತಿತ್ತು. ಹೀಗಾಗಿ ತಾಲಿಬಾನ್ ಸರ್ಕಾರವನ್ನು ನಿರ್ಮೂಲನೆಗೊಳಿಸಲು ಜಗತ್ತಿನ ಎಲ್ಲ ರಾಷ್ಟ್ರಗಳು ಬಯಸಿದವು. ಫಲವಾಗಿ ಸಾಮೂಹಿಕ ಭದ್ರತಾ ವಿಧಾನದ ಮೂಲಕ ಅಲ್ಲಿ ತಾಲಿಬಾನಿಗಳನ್ನು ನಿಗ್ರಹಿಸಲಾಯಿತು.

ಈ ಮೇಲೆ ಪ್ರಸ್ತಾಪಿಸಲಾದ ಪ್ರಧಾನ ಬಿಕ್ಕಟ್ಟುಗಳಲ್ಲದೇ ಇನ್ನಿತರ ಬಿಕ್ಕಟ್ಟುಗಳ ನಿವಾರಣೆಗೂ ಸಹ ವಿಶ್ವ ಸಂಸ್ಥೆಯು ಸಾಮೂಹಿಕ ಭದ್ರತಾ ಕ್ರಮ ಕೈಗೊಳ್ಳಲು ಶ್ರಮಿಸಿದೆ. ಆದರೆ, 1990 ರವರೆಗೆ ಅಸ್ತಿತ್ವದಲ್ಲಿದ್ದ ಶೀತಲ ಸಮರವು ಸಾಮೂಹಿಕ ಭದ್ರತಾ ಕ್ರಮಗಳ ಯಶಸ್ಸಿಗೆ ತೊಡಕನ್ನುಂಟು ಮಾಡಿತ್ತು. ಇತ್ತೀಚೆಗೆ ಸಾಮೂಹಿಕ ಭದ್ರತಾ ಕ್ರಮದ ಮಹತ್ವವನ್ನರಿತ ಜಗತ್ತಿನ ಎಲ್ಲ ರಾಷ್ಟ್ರಗಳು ಅದರ ಅನುಸರಣೆಗೆ ತುದಿಗಾಲಲ್ಲಿ ನಿಂತಿರುವುದು ಗಮನಾರ್ಹ ಸಂಗತಿ.

## [II.] ರಾಷ್ಟ್ರೀಯ ಭದ್ರತೆಯ ಪರಿಕಲ್ಪನೆ [Concept of National Security]:

ಜಗತ್ತಿನ ಪ್ರತಿಯೊಂದೂ ರಾಷ್ಟ್ರ ತನ್ನ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಸದಾ ಪ್ರಯತ್ನಿಸುತ್ತದೆ. ರಾಷ್ಟ್ರಗಳು ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ತಮ್ಮ ರಾಷ್ಟ್ರೀಯ ಭದ್ರತೆಗೆ ಅಧಿಕ ಪ್ರಾಶಸ್ತ್ಯ ನೀಡಿರುತ್ತವೆ. ಫಲವಾಗಿ ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿ

ರಾಷ್ಟ್ರಗಳ ಭದ್ರತೆ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಜೊತೆಗೆ ಅಂತರ್‌ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗಾಗಿ ರಾಷ್ಟ್ರಗಳು ಕೈಗೊಳ್ಳುವ ಸಾಮೂಹಿಕ ಭದ್ರತಾ ಕ್ರಮಗಳಿಗೆ ರಾಷ್ಟ್ರೀಯ ಭದ್ರತೆಯು ತಳಹದಿಯಾಗಿರುತ್ತದೆ. ಹೀಗಾಗಿ ರಾಷ್ಟ್ರೀಯ ಭದ್ರತೆಯು ಅಂತರ ರಾಷ್ಟ್ರೀಯ ಭದ್ರತೆಯೊಡನೆ ಅಂತರ್‌ಸಂಬಂಧವುಳ್ಳ ಪರಿಕಲ್ಪನೆ ಎನಿಸಿಕೊಂಡಿದೆ. ವಿಶ್ವ ಸಂಸ್ಥೆಯು ಅಂತರ್‌ರಾಷ್ಟ್ರೀಯ ಭದ್ರತೆಯನ್ನು ಕಾಪಾಡುವ ಮೂಲಕ ಪ್ರತಿ ರಾಷ್ಟ್ರದ ರಾಷ್ಟ್ರೀಯ ಭದ್ರತೆಯನ್ನು ಖಾತ್ರಿಗೊಳಿಸಲು ಪ್ರಯತ್ನಿಸುತ್ತಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಭದ್ರತೆಯ ಪರಿಕಲ್ಪನೆಯನ್ನು ನಾವು ಮನವರಿಕೆ ಮಾಡಿಕೊಳ್ಳಬೇಕಾದದ್ದು ಅತ್ಯಗತ್ಯ.

## [A.] ರಾಷ್ಟ್ರೀಯ ಭದ್ರತೆಯ ಅರ್ಥ [Meaning of National Security]:

ರಾಷ್ಟ್ರೀಯ ಭದ್ರತೆ ಎಂಬ ಪರಿಕಲ್ಪನೆಯಲ್ಲಿ ಭದ್ರತೆಯು ಕೇಂದ್ರಬಿಂದುವಾಗಿದ್ದು ಅದನ್ನು ಕುರಿತಂತೆ ಚಿಂತಕರಲ್ಲಿ ಏಕಾಭಿಪ್ರಾಯವಿಲ್ಲ. ರಾಷ್ಟ್ರಗಳ ಶಸ್ತ್ರಾಸ್ತ್ರ ಸಾಮರ್ಥ್ಯ, ಬೆದರಿಕೆಯಿಲ್ಲದ ಸ್ಥಿತಿ, ಸ್ವತಂತ್ರ ಕಾರ್ಯಾಚರಣೆಯ ವಾತಾವರಣಗಳಿಗೆ ಸಮಾನವಾಗಿ ಭದ್ರತೆಯನ್ನು ಉಪಯೋಗಿಸಲಾಗುತ್ತದೆ. ಅಂತರ್‌ರಾಷ್ಟ್ರೀಯ ಸಂಬಂಧಗಳ ಇತಿಹಾಸದಲ್ಲಿ ರಾಷ್ಟ್ರೀಯ ಭದ್ರತೆಯನ್ನು ಭಿನ್ನ ಕಾಲಘಟ್ಟದಲ್ಲಿ ವೈವಿಧ್ಯಮಯವಾಗಿ ಅರ್ಥೈಸಿರುವುದನ್ನು ಗುರುತಿಸಬಹುದಾಗಿದೆ. ಭದ್ರತೆಯು ರಾಷ್ಟ್ರಗಳ ವೈಯಕ್ತಿಕ ಮತ್ತು ಸಾಮೂಹಿಕ ಆಯಾಮವನ್ನು ಪಡೆದಿದ್ದು ರಾಷ್ಟ್ರದಿಂದ ರಾಷ್ಟ್ರಕ್ಕೆ ಭಿನ್ನತೆಯನ್ನು ಪಡೆದಿರುತ್ತದೆ.

ಸರಳಾರ್ಥದಲ್ಲಿ ರಾಷ್ಟ್ರವೊಂದು ಬಾಹ್ಯ ಸೈನಿಕ ಆಕ್ರಮಣದಿಂದ ರಕ್ಷಣೆ ಹೊಂದುವುದು ರಾಷ್ಟ್ರೀಯ ಭದ್ರತೆ ಎನಿಸಿಕೊಳ್ಳುತ್ತದೆ. ವಿಶಾಲಾರ್ಥದಲ್ಲಿ ತನ್ನ ಪ್ರಜೆಗಳು, ಆರ್ಥಿಕತೆ ಹಾಗೂ ಇತರ ಸಂಸ್ಥೆಗಳನ್ನು ರಕ್ಷಿಸಿಕೊಳ್ಳುವ ದೇಶವೊಂದರ ಸರ್ಕಾರದ ಸಾಮರ್ಥ್ಯವು ರಾಷ್ಟ್ರೀಯ ಭದ್ರತೆ ಎನಿಸಿಕೊಳ್ಳುತ್ತದೆ. ರಾಷ್ಟ್ರೀಯ ಭದ್ರತೆಯು ಸೈನಿಕ ಆಯಾಮವನ್ನು ಮಾತ್ರ ಪ್ರತಿನಿಧಿಸದೇ ದೇಶದ ರಾಜಕೀಯ, ಆರ್ಥಿಕ, ಭೌಗೋಳಿಕ ಸಂರಕ್ಷಣೆಯನ್ನು ಮೈಗೂಡಿಸಿಕೊಂಡಿರುತ್ತದೆ. ಜೊತೆಗೆ ಆಹಾರ, ಆರೋಗ್ಯ, ಇಂಧನ, ಪರಿಸರದಂತಹ ವಿಷಯಗಳಿಗೂ ರಾಷ್ಟ್ರೀಯ ಭದ್ರತೆಯು ವ್ಯಾಪಿಸಿರುತ್ತದೆ. ಸಾಮಾನ್ಯವಾಗಿ ಆಯಾ ದೇಶದ ಸರ್ಕಾರ ಅಂದರೆ ಕಾರ್ಯಾಂಗವು ವಿವಿಧ ಕ್ಷೇತ್ರಗಳನ್ನು ಸಂಯೋಜಿಸಿ ಭದ್ರತಾ ಕ್ರಮಗಳನ್ನು ಜಾರಿಗೊಳಿಸುವ ಮೂಲಕ ರಾಷ್ಟ್ರೀಯ ಹಿತಾಸಕ್ತಿಯಾಗಿರುವ ರಾಷ್ಟ್ರೀಯ ಭದ್ರತೆಯನ್ನು ಖಾತ್ರಿಗೊಳಿಸುತ್ತದೆ. ಗಮನಾರ್ಹ ಅಂಶವೇನೆಂದರೆ, ರಾಷ್ಟ್ರೀಯ ಭದ್ರತೆಯು ದೇಶವೊಂದರ ನಿರಾತಂಕ ಸ್ಥಿತಿಯನ್ನು ಪ್ರತಿಪಾದಿಸುವ ಪರಿಕಲ್ಪನೆಯಾಗಿದ್ದು ಜಗತ್ತಿನ ಯಾವುದೇ ದೇಶ ಪರಿಪೂರ್ಣ ಭದ್ರತೆಯನ್ನು ಹೊಂದಲಾರದು. ಉದಾ: ಜಗತ್ತಿನ ಪ್ರಬಲ ದೇಶವಾಗಿರುವ ಅಮೇರಿಕಾದ ರಾಷ್ಟ್ರೀಯ ಭದ್ರತೆಯು ಭಯೋತ್ಪಾದಕ ಕೃತ್ಯಗಳ ಆತಂಕವನ್ನು ಎದುರಿಸುತ್ತಿದುದು.



## [B.] ರಾಷ್ಟ್ರೀಯ ಭದ್ರತೆಯ ಸವಾಲುಗಳು

## [Challenges of National Security]:

ರಾಷ್ಟ್ರೀಯ ಭದ್ರತೆಯು ಆಂತರಿಕ ಮತ್ತು ಬಾಹ್ಯ ಎಂಬ ಎರಡು ಸ್ವರೂಪ ಪಡೆದಿರುತ್ತದೆ. ಧಂಗೆ, ಭಯೋತ್ಪಾದನೆ, ಹಿಂಸಾಚಾರಗಳು ಆಂತರಿಕ ರಾಷ್ಟ್ರೀಯ ಭದ್ರತೆಗೆ ಸವಾಲಾದರೆ ಯುದ್ಧ, ಆಕ್ರಮಣ, ಒಳ ನುಸುಳುವಿಕೆ, ಅಕ್ರಮ ವಲಸೆಗಳು ಬಾಹ್ಯ ರಾಷ್ಟ್ರೀಯ ಭದ್ರತೆಗೆ ಸವಾಲಾಗಿರುತ್ತವೆ. ಜಗತ್ತಿನ ಪ್ರತಿ ರಾಷ್ಟ್ರದ ಭದ್ರತೆಯು ಒಂದಲ್ಲಾ ಇನ್ನೊಂದು ರೂಪದಲ್ಲಿ ಆತಂಕವನ್ನು ನಿರಂತರವಾಗಿ ಎದುರಿಸುತ್ತಿರುತ್ತದೆ. ಪ್ರಪಂಚದ ರಾಷ್ಟ್ರಗಳ ರಾಷ್ಟ್ರೀಯ ಭದ್ರತೆಗೆ ಸವಾಲಾಗಬಲ್ಲ ಸಾಮಾನ್ಯ ಅಂಶಗಳನ್ನು ಕೆಳಗೆ ಸಂಕ್ಷೇಪ್ತವಾಗಿ ವಿವರಿಸಲಾಗಿದೆ.

**1. ಜನಾಂಗೀಯ ಸಂಘರ್ಷಗಳು:** ವಿವಿಧ ಜನಾಂಗದ ಜನರನ್ನು ಹೊಂದಿರುವ ದೇಶಗಳ ರಾಷ್ಟ್ರೀಯ ಭದ್ರತೆಗೆ ಜನಾಂಗಿಯ ಸಂಘರ್ಷವು ಸವಾಲಾಗಿ ಪರಿಣಮಿಸುತ್ತದೆ. ಪ್ರತಿ ಜನಾಂಗ ತಮ್ಮ ಹಿತಾಸಕ್ತಿಗಾಗಿ ಅನ್ಯ ಜನಾಂಗಗಳೊಡನೆ ಸ್ಪರ್ಧಗಿಳಿಯುವುದು ಸಂಘರ್ಷಮಯ ವಾತಾವರಣವನ್ನು ಹುಟ್ಟು ಹಾಕುವ ಮೂಲಕ ದೇಶದ ಭದ್ರತೆಯನ್ನು ನಾಶಗೊಳಿಸುತ್ತದೆ. ಉದಾ: ದಕ್ಷಿಣ ಆಫ್ರಿಕಾದಲ್ಲಿನ ಕರಿಯರು ಹಾಗೂ ಬಿಳಿಯರ ನಡುವಿನ, ಇಸ್ಲಾಂ ರಾಷ್ಟ್ರಗಳಲ್ಲಿನ ಶಿಯಾ ಮತ್ತು ಸುನ್ನಿಗಳ ನಡುವಿನ, ಈಶಾನ್ಯ ಭಾರತದ ಜನಾಂಗಗಳ ನಡುವಿನ ಸಂಘರ್ಷಗಳು ಆಯಾ ರಾಷ್ಟ್ರದ ಭದ್ರತೆಯನ್ನು ಧಕ್ಕೆಗೊಳಪಡಿಸಿ ಸವಾಲಾಗಿ ಪರಿಣಮಿಸಿದುದು.

**2. ಪ್ರತ್ಯೇಕತಾ ಚಳುವಳಿಗಳು:** ದೇಶವೊಂದರ ನಿರ್ದಿಷ್ಟ ಪ್ರದೇಶದ ಜನರು ತಮ್ಮನ್ನು ಪ್ರತ್ಯೇಕಗೊಳಿಸಿಕೊಳ್ಳಲು ನಡೆಸುವ ಹೋರಾಟಗಳೇ ಪ್ರತ್ಯೇಕತಾ ಚಳುವಳಿಗಳು. ಈ ಚಳುವಳಿಗಳು ಸಾಮಾನ್ಯವಾಗಿ ನಿರ್ದಿಷ್ಟ ಭಾಷೆ ಅಥವಾ ಧರ್ಮಗಳನ್ನು ಆಧರಿಸಿರುತ್ತವೆ. ಜೊತೆಗೆ ಶಸ್ತ್ರಸಹಿತ ಪ್ರತ್ಯೇಕತಾ ಚಳುವಳಿಗಳು ಹಿಂಸಾತ್ಮಕ ಸ್ವರೂಪವನ್ನು ತಾಳಿರುತ್ತವೆ. ಪ್ರತ್ಯೇಕತಾ ಚಳುವಳಿಗಳು ದೇಶದ ಜನರಲ್ಲಿನ ಏಕತೆ ಹಾಗೂ ಸಹೋದರ ಭಾವನೆಗಳನ್ನು ಧಕ್ಕೆಗೊಳಿಸುತ್ತವೆ. ಪರಿಣಾಮ ರಾಷ್ಟ್ರೀಯ ಅಭದ್ರತೆಗೆ ಪ್ರತ್ಯೇಕತಾ ಚಳುವಳಿಗಳು ಕಾರಣವಾಗಿ ರಾಷ್ಟ್ರೀಯ ಭದ್ರತೆಯ ಸವಾಲಾಗಿ ಪರಿಗಣಿಸಲ್ಪಟ್ಟಿವೆ.

**3. ಭಯೋತ್ಪಾದಕ ಕೃತ್ಯಗಳು:** ಹಿಂಸೆಯ ಮೂಲಕ ರಾಜಕೀಯ ಉದ್ದೇಶ ಸಾಧನೆಗಾಗಿ ಕೈಗೊಳ್ಳುವ ಚಟುವಟಿಕೆಗಳು ಭಯೋತ್ಪಾದಕ ಕೃತ್ಯಗಳಾಗಿವೆ. ಈ ಕೃತ್ಯಗಳು ದೇಶವೊಂದರ ಜನ ಜೀವನವನ್ನು ಆತಂಕಕ್ಕೆ ದೂಡುವ ಮೂಲಕ ಅಭದ್ರತೆಯನ್ನು ಬಿತ್ತುತ್ತವೆ. ಇದರಿಂದ ದೇಶವೊಂದರ ರಾಷ್ಟ್ರೀಯ ಭದ್ರತೆಯು ಧಕ್ಕೆಗೊಳಗಾಗುತ್ತದೆ.

**4. ಕಳ್ಳ ಸಾಗಾಣಿಕೆ:** ಕಾನೂನು ಬಾಹೀರವಾಗಿ ಸರಕು ಅಥವಾ ಮಾನವರ ಸಾಗಾಣಿಕೆ ಮಾಡುವುದನ್ನು ಕಳ್ಳ ಸಾಗಾಣಿಕೆ ಎನ್ನಬಹುದಾಗಿದೆ. ಈ ಚಟುವಟಿಕೆಯು

ವಿದೇಶಿ ವಿನಿಮಯದ ಆದಾಯವನ್ನು ಕಡಿತಗೊಳಿಸುವ ಮೂಲಕ ರಾಷ್ಟ್ರೀಯ ಭದ್ರತೆಯ ಆಯಾಮವಾಗಿರುವ ಆರ್ಥಿಕ ಭದ್ರತೆಯನ್ನು ನಾಶಗೊಳಿಸುತ್ತದೆ. ಜೊತೆಗೆ ಅಮಲು ಪದಾರ್ಥಗಳನ್ನು ಲಭ್ಯಗೊಳಿಸಿ ದೇಶದ ಸಾಮಾಜಿಕ ಭದ್ರತೆಯನ್ನು ನಾಶಗೊಳಿಸುತ್ತದೆ. ಈ ಹಿನ್ನೆಲೆಯಲ್ಲಿ ಕಳ್ಳ ಸಾಗಾಣಿಕೆಯು ರಾಷ್ಟ್ರೀಯ ಭದ್ರತೆಗೆ ಸವಾಲಾಗಿ ಪರಿಗಣಿಸಲ್ಪಟ್ಟಿದೆ.

**5. ಬಾಹ್ಯ ಆಕ್ರಮಣಗಳು:** ನೆರೆ ರಾಷ್ಟ್ರಗಳ ಸೈನ್ಯವು ಅಪ್ರಚೋದಿತವಾಗಿ ದೇಶವೊಂದರ ಗಡಿ ಉಲ್ಲಂಘಿಸುವುದು ಬಾಹ್ಯ ಆಕ್ರಮಣವೆನಿಸುತ್ತದೆ. ಈ ಬಗೆಯ ಆಕ್ರಮಣದಿಂದ ದೇಶವೊಂದರ ರಾಷ್ಟ್ರೀಯ ಭದ್ರತೆಯು ನಾಶವಾಗುತ್ತದೆ. ಉದಾ: ರಷ್ಯಾವು ಉಕ್ರೇನ್ ಮೇಲೆ ಇತ್ತೀಚೆಗೆ ಕೈಗೊಂಡ ಆಕ್ರಮಣ.

**6. ಅಕ್ರಮ ವಲಸೆ:** ದೇಶವೊಂದರ ಗಡಿಯೊಳಗೆ ಅನ್ಯ ದೇಶದ ಪ್ರಜೆಗಳು ಪರವಾನಿಗೆಯಿಲ್ಲದೇ ಪ್ರವೇಶಿಸುವುದು ಅಕ್ರಮ ವಲಸೆಯಾಗಿದೆ. ಈ ರೀತಿಯ ಅಕ್ರಮ ವಲಸೆಯು ಮೂಲ ಹಾಗೂ ವಲಸಿಗರ ನಡುವೆ ಸಂಘರ್ಷಕ್ಕೆ ಕಾರಣವಾಗುತ್ತದೆ. ಜೊತೆಗೆ ಕಾಲಾನುಕ್ರಮದಲ್ಲಿ ವಲಸಿಗರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾದ ಅನಿವಾರ್ಯತೆಯನ್ನು ಉಂಟು ಮಾಡುತ್ತದೆ. ಹೀಗಾಗಿ ಅಕ್ರಮ ವಲಸೆಯು ರಾಷ್ಟ್ರೀಯ ಭದ್ರತೆಗೆ ಸವಾಲಾಗಿ ಪರಿಗಣಿಸಲ್ಪಡುತ್ತದೆ.

ಈ ಮೇಲೆ ಪ್ರಸ್ತಾಪಿಸಲಾಗಿರುವ ಅಂಶಗಳು ದೇಶವೊಂದರ ರಾಷ್ಟ್ರೀಯ ಭದ್ರತೆಗೆ ಆಂತರಿಕವಾಗಿ ಮತ್ತು ಬಾಹ್ಯವಾಗಿ ಎದುರಾಗುವ ಪ್ರಧಾನ ಸವಾಲುಗಳಾಗಿವೆ. ಇವುಗಳಲ್ಲದೇ ಇನ್ನಿತರ ಅಂಶಗಳೂ ಸಹ ರಾಷ್ಟ್ರೀಯ ಭದ್ರತೆಗೆ ತೊಡಕುಗಳನ್ನು ಸೃಷ್ಟಿಸಬಲ್ಲ ಸಾಮರ್ಥ್ಯ ಪಡೆದಿರುದು ಗಮನಾರ್ಹ. ವಿಶೇಷವಾಗಿ ಜಾಗತಿಕವಾಗಿ ಜರುಗುವ ಶಸ್ತ್ರಾಸ್ತ್ರ ಪೈಪೋಟಿ, ಯುದ್ಧಗಳು, ನೈಸರ್ಗಿಕ ವಿಕೋಪಗಳು, ವಾತಾವರಣದಲ್ಲಿನ ಬದಲಾವಣೆಗಳು ಪ್ರತಿ ರಾಷ್ಟ್ರದ ರಾಷ್ಟ್ರೀಯ ಭದ್ರತೆಯನ್ನು ಪ್ರಭಾವಿಸುವ ಅಂಶಗಳಾಗಿವೆ.

## [III.] ರಾಯಭಾರತ್ವ [Diplomacy]:

### [A.] ರಾಯಭಾರತ್ವದ ಅರ್ಥ [Meaning of Diplomacy]:

ರಾಯಭಾರತ್ವ ಎಂಬ ಕನ್ನಡ ಪದವು ಆಂಗ್ಲ ಭಾಷೆಯ ಡಿಪ್ಲೊಮೆಸಿ ಪದದ ತರ್ಜುಮೆಯಾಗಿದೆ. ಈ ಎರಡೂ ಪದಗಳ ಮೂಲವನ್ನು ಚಿಂತಕರು ಗ್ರೀಕ್ ಭಾಷೆಯ ಡಿಪ್ಲೋನ್ ಅಥವಾ ಲ್ಯಾಟಿನ ಭಾಷೆಯ ಡಿಪ್ಲೊಮಾ ಪದಗಳಲ್ಲಿ ಗುರುತಿಸಿದ್ದಾರೆ. 1796 ರಲ್ಲಿ ಎಡ್ಮಂಡ್ ಬರ್ಕ್ ಎಂಬ ರಾಜಕೀಯ ಚಿಂತಕ ಮೊದಲ ಬಾರಿಗೆ ರಾಯಭಾರ ಎಂಬ ಪದವನ್ನು ಅಂತರರಾಷ್ಟ್ರೀಯ ವ್ಯವಹಾರದಲ್ಲಿನ ಸಂಧಾನ ಕೌಶಲ್ಯ, ಭಾಷಣ ಅಥವಾ ಪತ್ರವನ್ನು ಸೂಚಿಸಲು ಬಳಸಿದರು. ಕಾಲಾನುಕ್ರಮದಲ್ಲಿ ರಾಯಭಾರದೊಡನೆ ಅಂತರ್



ಸಂಬಂಧವುಳ್ಳ ರಾಯಭಾರತ್ವ ಮತ್ತು ರಾಯಭಾರತ್ವವನ್ನು ಜಾರಿಗೊಳಿಸುವ ರಾಯಭಾರಿ ಪರಿಕಲ್ಪನೆಗಳು ಅಸ್ತಿತ್ವಕ್ಕೆ ಬಂದವು. ಗಮನಾರ್ಹ ಅಂಶವೇನೆಂದರೆ, ವೈವಿಧ್ಯಮಯವಾದ ಅರ್ಥವನ್ನು ಹೊಂದಿರುವ ರಾಯಭಾರತ್ವದ ಅರ್ಥವನ್ನು ಕುರಿತಂತೆ ಚಿಂತಕರಲ್ಲಿ ಏಕಾಭಿಪ್ರಾಯವಿಲ್ಲ. ಹೀಗಾಗಿ ಹೆರಾಲ್ಡ್ ನಿಕೊಲ್ಸನ್ ವಿದೇಶಾಂಗ ನೀತಿಯನ್ನು ಸೂಚಿಸುವ, ಸಂಧಾನವನ್ನು ಪ್ರತಿನಿಧಿಸುವ, ಸಂಧಾನದ ವಿಧಾನವನ್ನು ವಿವರಿಸುವ, ಅಂತರ್‌ರಾಷ್ಟ್ರೀಯ ಸಂಬಂಧಗಳ ಸೇವೆಗಳನ್ನು ತಿಳಿಸುವ ಮತ್ತು ನೈಪುಣ್ಯತೆಯನ್ನು ಪ್ರತಿಪಾದಿಸುವ ಪರಿಕಲ್ಪನೆಯೇ ರಾಯಭಾರತ್ವ ಎಂಬುದಾಗಿ ಅಭಿಪ್ರಾಯಪಟ್ಟಿರುವರು. ಚಿಂತಕರು ರಾಯಭಾರತ್ವ ಕುರಿತಂತೆ ನೀಡಿರುವ ಪ್ರಧಾನ ವ್ಯಾಖ್ಯಾನಗಳ ಬೆಳಕಿನಲ್ಲಿ ಅದರ ಅರ್ಥವನ್ನು ಮನವರಿಕೆ ಮಾಡಿಕೊಳ್ಳಬಹುದಾಗಿದೆ.

**ಆಕ್ಸ್‌ಫರ್ಡ್ ಇಂಗ್ಲಿಷ್ ಅರ್ಥಕೋಶದ** ಪ್ರಕಾರ ಅಂತರ್‌ರಾಷ್ಟ್ರೀಯ ಸಂಬಂಧಗಳನ್ನು ಸಂಧಾನದ ಮೂಲಕ ನಿರ್ವಹಿಸುವುದೇ ರಾಯಭಾರತ್ವ.

**ಪೆಡಲ್ ಫೋರ್ಡ್ ಮತ್ತು ಲಿಂಕನ್** ಪ್ರಕಾರ ಶಾಂತಿಯ ಕಾಲದಲ್ಲಿ ರಾಷ್ಟ್ರಗಳು ಪರಸ್ಪರ ವ್ಯವಹರಿಸುವಾಗ ಸಾಂಪ್ರದಾಯಿಕವಾಗಿ ಅನುಸರಿಸುವ ಪ್ರಾತಿನಿಧ್ಯ ಹಾಗೂ ಸಂಧಾನ ಪ್ರಕ್ರಿಯೆಗಳೇ ರಾಯಭಾರತ್ವ.

**ಹಾನ್ಸ್ ಜೆ. ಮಾರ್ಗೆಂಥೊ** ಪ್ರಕಾರ ಶಾಂತಿಯುತ ಮಾರ್ಗದಲ್ಲಿ ರಾಷ್ಟ್ರೀಯ ಹಿತಾಸಕ್ತಿಯನ್ನು ಉತ್ತೇಜಿಸುವ ವಿಧಾನವೇ ರಾಯಭಾರತ್ವ.

**ಕೆ. ಎಂ. ಫಣಿಕ್ಕರ್** ಪ್ರಕಾರ ರಾಷ್ಟ್ರಗಳ ನಡುವಿನ ಸಂಬಂಧಗಳಲ್ಲಿ ಒಬ್ಬರ ಹಿತಾಸಕ್ತಿಯನ್ನು ಇನ್ನೊಬ್ಬರ ಮೇಲೆ ಹೇರುವ ಕಲೆಯೇ ರಾಯಭಾರತ್ವ.

**ಹೆರಾಲ್ಡ್ ನಿಕೋಲ್ಸನ್** ಪ್ರಕಾರ ರಾಷ್ಟ್ರೀಯ ಹಿತಾಸಕ್ತಿಗಳನ್ನು ಅಂತರ್‌ರಾಷ್ಟ್ರೀಯ ಹಿತಾಸಕ್ತಿಗಳೊಡನೆ ಹೊಂದಾಣಿಕೆ ಮಾಡುವ ಪ್ರಕ್ರಿಯೆಯೇ ರಾಯಭಾರತ್ವ.

ಈ ಮೇಲೆ ಪ್ರಸ್ತಾಪಿಸಲಾಗಿರುವ ರಾಯಭಾರತ್ವದ ವ್ಯಾಖ್ಯಾನಗಳ ಆಧಾರದ ಮೇಲೆ ಸರಳಾರ್ಥದಲ್ಲಿ ಅಂತರ್‌ರಾಷ್ಟ್ರೀಯ ಸಂಬಂಧಗಳನ್ನು ನಿರ್ವಹಿಸುವ ಸಾಮಾನ್ಯ ಸಾಧನವನ್ನು ರಾಯಭಾರತ್ವ ಎನ್ನಲಾಗುತ್ತದೆ. ವಿಶಾಲಾರ್ಥದಲ್ಲಿ ರಾಷ್ಟ್ರಗಳ ನಡುವಿನ ಸಂಬಂಧಗಳನ್ನು ನಿರ್ವಹಿಸುವಾಗ ಅನುಸರಿಸಲಾಗುವ ತಂತ್ರಗಳು ಮತ್ತು ಕಾರ್ಯ ವಿಧಾನಗಳನ್ನು ಒಳಗೊಂಡ ಪರಿಕಲ್ಪನೆಯೇ ರಾಯಭಾರತ್ವ. ವಿದೇಶಿ ಸಂಬಂಧಗಳನ್ನು ನಿರ್ವಹಿಸುವ ಮತ್ತು ರಾಷ್ಟ್ರಗಳ ನಡುವೆ ಸಂಧಾನ ಏರ್ಪಡಿಸುವ ಕಲೆಯಾಗಿರುವ ರಾಯಭಾರತ್ವವು ರಾಷ್ಟ್ರವೊಂದರ ವಿದೇಶಾಂಗ ನೀತಿಯನ್ನು ಅನುಷ್ಠಾನಗೊಳಿಸುವ ಪ್ರಮುಖ ಸಾಧನವಾಗಿದೆ. ಒಟ್ಟಾರೆ ರಾಷ್ಟ್ರಗಳ ಸಂಬಂಧಗಳಲ್ಲಿ ಸಂಧಾನದ ಮೂಲಕ ದೇಶವೊಂದು ತನ್ನ ರಾಷ್ಟ್ರೀಯ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ಸಾಧನವನ್ನು ರಾಯಭಾರತ್ವವು ಪ್ರತಿನಿಧಿಸುತ್ತದೆ.

ಗಮನಾರ್ಹ ಅಂಶವೇನೆಂದರೆ, ರಾಯಭಾರತ್ವದ ಸಫಲತೆ ಹಾಗೂ ವಿಫಲತೆ ಅದನ್ನು ಅನುಷ್ಠಾನಗೊಳಿಸುವ ರಾಯಭಾರಿಯ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ರಾಯಭಾರಿಯು ತನ್ನ ರಾಷ್ಟ್ರದ ವಿದೇಶಾಂಗ ನೀತಿಯಿಂದ ಮಾರ್ಗದರ್ಶಿಸಲ್ಪಡುವ ರಾಯಭಾರತ್ವದ ಅನುಷ್ಠಾನಕ್ಕೆ ಶ್ರಮಿಸಬೇಕಿದ್ದು ಆತನ ಮಾತು ಮತ್ತು ಕೃತಿಗಳ ನಡುವೆ ಸಾಕಷ್ಟು ವ್ಯತ್ಯಾಸಗಳಿರುತ್ತವೆ. ರಾಯಭಾರಿಯು ತನ್ನ ದೇಶದ ರಾಷ್ಟ್ರೀಯ ಹಿತಾಸಕ್ತಿಗಳ ಸಾಧನೆಗೆ ಕೆಲವೊಮ್ಮೆ ಸುಳ್ಳುಗಳನ್ನು ಹೇಳಬೇಕಾಗುತ್ತದೆ. ಆದ್ದರಿಂದಲೇ ಹೆನ್ರಿ ವಾಟನ ಎಂಬಾತ 'ದೇಶವೊಂದು ತನ್ನ ಪರವಾಗಿ ಸುಳ್ಳು ಹೇಳಲು ವಿದೇಶಕ್ಕೆ ಕಳುಹಿಸಿರುವ ಪ್ರಾಮಾಣಿಕ ವ್ಯಕ್ತಿ' ಎಂಬುದಾಗಿ ರಾಯಭಾರಿಯನ್ನು ಕುರಿತಂತೆ ವ್ಯಂಗ್ಯವಾಗಿ ನುಡಿದಿದ್ದಾರೆ. ಅಂತೆಯೇ ಒಣ ನೀರು ಮತ್ತು ಕಟ್ಟಿಗೆಯಂತಹ ಕಬ್ಬಿಣವನ್ನು ಕಾಣಲು ಹೇಗೆ ಸಾಧ್ಯವಿಲ್ಲವೋ ಹಾಗೆ ರಾಯಭಾರತ್ವವನ್ನು ಅನುಷ್ಠಾನಗೊಳಿಸುವ ರಾಯಭಾರಿಗಳಲ್ಲಿ ಪ್ರಾಮಾಣಿಕತೆ ಕಾಣಲಾಗದು ಎಂಬ ನಿಲುವು ಅನೇಕರದಾಗಿದೆ.

## [B.] ರಾಯಭಾರತ್ವದ ಸ್ವರೂಪ [Nature of Diplomacy]:

ರಾಯಭಾರತ್ವವು ಅಂತರ್‌ರಾಷ್ಟ್ರೀಯ ಸಂಬಂಧಗಳನ್ನು ನಿರ್ವಹಿಸುವ ಪ್ರಧಾನ ಸಾಧನ. ವೈವಿಧ್ಯಮಯವಾದ ರಾಯಭಾರತ್ವದ ಅರ್ಥ ಮತ್ತು ವ್ಯಾಖ್ಯಾನಗಳನ್ನು ಆಧರಿಸಿ ಅದು ಹೊಂದಿರುವ ಸ್ವರೂಪವನ್ನು ಕೆಳಗಿನ ಅದರ ಲಕ್ಷಣಗಳ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ.

**1. ರಾಯಭಾರತ್ವವು ಅಂತರ್‌ರಾಷ್ಟ್ರೀಯ ಸಂಬಂಧಗಳ ಸಾಧನ:** ರಾಯಭಾರತ್ವವು ರಾಷ್ಟ್ರಗಳ ನಡುವಿನ ಸಂಬಂಧಗಳನ್ನು ನಿರ್ವಹಿಸುವ ಸಾಮಾನ್ಯ ಸಾಧನವೆನಿಸಿದೆ. ಸಾರ್ವತ್ರಿಕವಾಗಿ ಎಲ್ಲ ರಾಷ್ಟ್ರಗಳು ತಮ್ಮ ಪರಸ್ಪರ ಸಂಬಂಧಗಳಲ್ಲಿ ರಾಯಭಾರತ್ವವನ್ನು ಹಿಂದಿನಿಂದ ಅನುಸರಿಸಿಕೊಂಡು ಬಂದಿವೆ. ರಾಷ್ಟ್ರಗಳ ಸಂಬಂಧವನ್ನು ನಿರ್ಧರಿಸುವ ತಂತ್ರ ಮತ್ತು ಕಾರ್ಯ ವಿಧಾನಗಳನ್ನು ಈ ರಾಯಭಾರತ್ವ ಒಳಗೊಂಡಿರುತ್ತದೆ.

**2. ರಾಯಭಾರತ್ವವು ಕಾರ್ಯ ಯೋಜನೆ:** ರಾಷ್ಟ್ರಗಳ ನಡುವಿನ ಸಂಬಂಧವನ್ನು ನಿರ್ವಹಿಸುವ ಔಪಚಾರಿಕ ಕಾರ್ಯ ಯೋಜನೆಯನ್ನು ರಾಯಭಾರತ್ವವು ಪ್ರತಿನಿಧಿಸುತ್ತದೆ.

**3. ರಾಯಭಾರತ್ವವು ಸ್ಥಾಪಿತ ಕಾರ್ಯ ವಿಧಾನಗಳ ಆಧಾರವುಳ್ಳದ್ದು:** ರಾಷ್ಟ್ರಗಳ ನಡುವೆ ಸಂಬಂಧಗಳನ್ನು ನಿರ್ವಹಿಸುವ ಸಾಧನವಾದ ರಾಯಭಾರತ್ವವು ನಿಶ್ಚಿತ ಕಾರ್ಯ ವಿಧಾನಗಳನ್ನು ಆಧರಿಸಿರುವ ಪರಿಕಲ್ಪನೆಯಾಗಿರುತ್ತದೆ. ರಾಯಭಾರಿ ಕಛೇರಿಗಳು, ರಾಯಭಾರಕ ನಿಯಮಾವಳಿಗಳು, ರಾಯಭಾರಕ ಸ್ಥಾನಮಾನಗಳು ಅದರ ಕಾರ್ಯ ವಿಧಾನಗಳನ್ನು ಪ್ರತಿನಿಧಿಸುತ್ತವೆ.



**4. ದ್ವಿಪಕ್ಷೀಯ ಅಥವಾ ಬಹುಪಕ್ಷೀಯ ಸ್ವರೂಪವುಳ್ಳದ್ದು:** ಆರಂಭದಲ್ಲಿ ರಾಯಭಾರತ್ವವು ದ್ವಿಪಕ್ಷೀಯ ಸ್ವರೂಪದ್ದಾಗಿತ್ತು. ಸಮಕಾಲೀನ ಜಗತ್ತಿನಲ್ಲಿ ರಾಯಭಾರತ್ವವು ಬಹುಪಕ್ಷೀಯ ಸ್ವರೂಪವನ್ನು ತಾಳಿದೆ. ಸಮ್ಮೇಳನ ರಾಯಭಾರತ್ವ, ಅಂತರ್‌ರಾಷ್ಟ್ರೀಯ ಸಂಘಟನೆಗಳು, ರಾಷ್ಟ್ರಗಳ ಗುಂಪುಗಳ ಕಾರ್ಯಾಚರಣೆಯು ರಾಯಭಾರತ್ವದ ಬಹುಪಕ್ಷೀಯ ಸ್ವರೂಪಕ್ಕೆ ಪ್ರಧಾನ ಕಾರಣವಾಗಿವೆ.

**5. ರಾಯಭಾರತ್ವವು ಬಹು ಆಯಾಮದ ವಿಷಯಗಳಿಗೆ ಸಂಬಂಧಿಸಿದ್ದುದು:** ರಾಯಭಾರತ್ವವು ರಾಷ್ಟ್ರಗಳ ನಡುವಿನ ರಾಜಕೀಯ ವಿಷಯಗಳಿಗೆ ಮಾತ್ರ ಸಂಬಂಧಿಸಿರುವುದಿಲ್ಲ. ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ, ವಾಣಿಜ್ಯ ಮುಂತಾದ ವಿವಿಧ ವಿಷಯಗಳಿಗೆ ರಾಯಭಾರತ್ವದ ಕಾರ್ಯ ವ್ಯಾಪ್ತಿ ತನ್ನ ಬಾಹುಗಳನ್ನು ಚಾಚಿಕೊಂಡಿರುವ ಪರಿಕಲ್ಪನೆಯಾಗಿದೆ.

**6. ರಾಯಭಾರತ್ವದ ಕಡಿತವು ಬಿಕ್ಕಟ್ಟುಗಳಿಗೆ ಆಸ್ಪದ ಒದಗಿಸುವುದು:** ರಾಷ್ಟ್ರಗಳ ನಡುವೆ ರಾಯಭಾರಕ ಸಂಬಂಧ ಕಡಿತಗೊಂಡರೆ ಯುದ್ಧದ ವಾತಾವರಣ ನಿರ್ಮಾಣವಾಗುತ್ತದೆ. ರಾಷ್ಟ್ರಗಳು ಪರಸ್ಪರ ದ್ವೇಷ, ಸಂಶಯ ಅಥವಾ ಸ್ಪರ್ಧೆಗೆ ಮುಂದಾಗುತ್ತವೆ. ಫಲವಾಗಿ ರಾಷ್ಟ್ರಗಳ ನಡುವೆ ಗಂಭೀರ ಬಿಕ್ಕಟ್ಟುಗಳು ಜನ್ಮ ತಾಳುತ್ತವೆ.

**7. ರಾಯಭಾರತ್ವವು ಯುದ್ಧ ಮತ್ತು ಶಾಂತಿ ಕಾಲದಲ್ಲಿ ಸಕ್ರಿಯವಾಗಿರುತ್ತದೆ:** ಕೆಲವು ಚಿಂತಕರು ರಾಯಭಾರತ್ವವು ಶಾಂತಿ ಕಾಲದಲ್ಲಿ ಮಾತ್ರ ಅಸ್ತಿತ್ವದಲ್ಲಿರುತ್ತದೆ ಎಂದು ಪ್ರತಿಪಾದಿಸಿರುವರು. ಅವರ ಅಭಿಪ್ರಾಯದಲ್ಲಿ ಯುದ್ಧ ಆರಂಭವಾದೊಡನೆ ರಾಯಭಾರತ್ವ ಮುರಿದು ಬಿದ್ದು ನಿಷ್ಕ್ರಿಯವಾಗುತ್ತದೆ. ಆದರೆ, ವಾಸ್ತವದಲ್ಲಿ ಯುದ್ಧ ಆರಂಭದೊಡನೆ ರಾಯಭಾರತ್ವದ ಸ್ವರೂಪದಲ್ಲಿ ಬದಲಾವಣೆಯಾಗುತ್ತದೆಯೇ ಹೊರತು ಅದರ ಜವಾಬ್ದಾರಿ ಮತ್ತಷ್ಟು ಅಧಿಕಗೊಳ್ಳುತ್ತದೆ.

**8. ರಾಯಭಾರತ್ವವು ಸಹಕಾರ ಮತ್ತು ಬಿಕ್ಕಟ್ಟುಗಳ ಸಂಗಮ:** ರಾಷ್ಟ್ರಗಳ ನಡುವಿನ ಸಂಬಂಧಗಳಲ್ಲಿ ವ್ಯಾಪಕವಾಗಿರದಿದ್ದರೂ ಕನಿಷ್ಠ ಮಟ್ಟಿನ ಸಹಕಾರವಿರಲೇಬೇಕಾಗುತ್ತದೆ. ಅಂತೆಯೇ ಯಾವುದೇ ಕ್ಷೇತ್ರ ಕುರಿತಾದ ಬಿಕ್ಕಟ್ಟುಗಳು ಅಸ್ತಿತ್ವದಲ್ಲಿರುವುದು ಸಹಜವಾಗಿರುತ್ತದೆ. ಒಂದೊಮ್ಮೆ ಬಿಕ್ಕಟ್ಟುಗಳಿಲ್ಲವಾದರೆ ರಾಯಭಾರತ್ವದ ತಿರುಳಾದ ಸಂಧಾನ ನಿರುಪಯುಕ್ತವೆನಿಸುತ್ತದೆ.

**9. ರಾಷ್ಟ್ರೀಯ ಹಿತಾಸಕ್ತಿಯ ಪ್ರಾತಿನಿಧ್ಯ:** ರಾಯಭಾರತ್ವವು ಸಾಮಾನ್ಯವಾಗಿ ಆಯಾ ದೇಶದ ರಾಷ್ಟ್ರೀಯ ಹಿತಾಸಕ್ತಿಯನ್ನು ಕಾಪಾಡುವ ಉದ್ದೇಶ ಹೊಂದಿರುತ್ತದೆ. ತನ್ನ ರಾಷ್ಟ್ರದ ಹಿತಾಸಕ್ತಿಯನ್ನು ರಕ್ಷಿಸಿಕೊಳ್ಳಲು ರಾಯಭಾರಿಕೆಲವೊಮ್ಮೆ ಕೆಟ್ಟ ಬೆಳವಣಿಗೆಗಳನ್ನು ಮರೆಮಾಚಿ ಸಂಬಂಧಗಳ ದೃಢತೆಗೆ ಪ್ರಯತ್ನಿಸುತ್ತಾನೆ.

**10. ರಾಯಭಾರತ್ವವು ರಾಷ್ಟ್ರೀಯ ಶಕ್ತಿಯ ಬೆಂಬಲವುಳ್ಳದ್ದು:** ರಾಷ್ಟ್ರವೊಂದರ ರಾಯಭಾರತ್ವವು ತನ್ನ ರಾಷ್ಟ್ರದ ರಾಷ್ಟ್ರೀಯ ಶಕ್ತಿಯನ್ನು ಆಧರಿಸಿರುತ್ತದೆ. ಶಕ್ತಿಶಾಲಿ ರಾಷ್ಟ್ರದ ರಾಯಭಾರತ್ವವು ಪ್ರಭಾವ ಅಥವಾ ಬೆದರಿಕೆ ಮೂಲಕ ಅಂತರ್‌ರಾಷ್ಟ್ರೀಯವಾಗಿ ರಾಯಭಾರತ್ವ ತನ್ನ ಅಧಿಕಾರವನ್ನು ಚಲಾಯಿಸಲು ಮುಂದಾಗುತ್ತದೆ. ಅಂತೆಯೇ ದುರ್ಬಲ ಶಕ್ತಿಯನ್ನು ಹೊಂದಿರುವ ದೇಶದ ರಾಯಭಾರತ್ವವು ತನ್ನ ಇಚ್ಛೆಯನ್ನು ಅನ್ಯ ರಾಷ್ಟ್ರಗಳ ಮೇಲೆ ಹೇರಲು ಸಫಲವಾಗುವುದಿಲ್ಲ. ಹೀಗಾಗಿ ರಾಯಭಾರತ್ವವು ರಾಷ್ಟ್ರೀಯ ಶಕ್ತಿಯನ್ನು ಆಧರಿಸುವಂತಹುದು ಎನ್ನಬಹುದಾಗಿದೆ.

ಈ ಮೇಲಿನ ಲಕ್ಷಣಗಳ ನೆರವಿನಿಂದ ರಾಯಭಾರತ್ವದ ಸ್ವರೂಪವನ್ನು ಮನವರಿಕೆ ಮಾಡಿಕೊಳ್ಳಬಹುದಾಗಿದೆ. ಜೊತೆಗೆ ರಾಯಭಾರತ್ವವು ರಾಯಭಾರಿಯ ಮೂಲಕ ಅನುಷ್ಠಾನಗೊಳ್ಳುವ ಅಂಶವು ನಮಗೆ ಸ್ಪಷ್ಟವಾಗುತ್ತದೆ. ಅಲ್ಲದೇ ದೇಶವೊಂದರ ರಾಷ್ಟ್ರೀಯ ಹಿತಾಸಕ್ತಿಯ ಸಾಧನವಾಗಿ ಮತ್ತು ವಿದೇಶಾಂಗ ನೀತಿಯ ಉಪಕರಣವಾಗಿ ರಾಯಭಾರತ್ವವು ಕಾರ್ಯಾಚರಿಸುತ್ತಿರುವ ಅಂಶ ತಿಳಿದು ಬರುತ್ತದೆ.

## [C.] ಹಳೆಯ ಮತ್ತು ಹೊಸ ರಾಯಭಾರತ್ವ [Old and New Diplomacy]:

ರಾಯಭಾರತ್ವವು ಅತ್ಯಂತ ಪುರಾತನ ಕಾಲದಿಂದಲೂ ಅಸ್ತಿತ್ವದಲ್ಲಿರುವ ಪರಿಕಲ್ಪನೆ. ಆಧುನಿಕ ಯುಗದಲ್ಲಿ ರಾಷ್ಟ್ರ ರಾಜ್ಯಗಳು ಅಸ್ತಿತ್ವಕ್ಕೆ ಬಂದಾಗಿನಿಂದ ರಾಯಭಾರತ್ವಕ್ಕೆ ಅಂತರ್ ರಾಷ್ಟ್ರೀಯ ಸಂಬಂಧಗಳಲ್ಲಿ ಅಧಿಕ ಪ್ರಾಶಸ್ತ್ಯ ದೊರಕಿತು. ಎರಡನೇ ವಿಶ್ವ ಸಮರದವರೆಗಿನ ರಾಯಭಾರತ್ವವನ್ನು ಚಿಂತಕರು ಹಳೆಯ ರಾಯಭಾರತ್ವವೆಂದು ಪರಿಗಣಿಸಿದರೆ ಆ ನಂತರದ ರಾಯಭಾರತ್ವವನ್ನು ನೂತನ ರಾಯಭಾರತ್ವವೆಂದು ಗುರುತಿಸುತ್ತಾರೆ. ಸಮಕಾಲೀನ ಜಗತ್ತಿನಲ್ಲಾದ ಹಲವು ಬದಲಾವಣೆಗಳು ರಾಯಭಾರತ್ವದ ಪರಿಕಲ್ಪನೆಯಲ್ಲಿಯೂ ಪ್ರಭಾವ ಬೀರಿದುದು ಈ ಬೆಳವಣಿಗೆಗೆ ಪ್ರಧಾನ ಕಾರಣ. ವಿಶೇಷವಾಗಿ ಸಾರಿಗೆ, ಸಂಪರ್ಕ, ತಂತ್ರಜ್ಞಾನ, ಮಾಹಿತಿ ಕ್ರಾಂತಿಗಳು ರಾಯಭಾರತ್ವದ ಹಳೆಯ ಮತ್ತು ನೂತನ ಆಯಾಮದ ವಿಂಗಡಣೆಗೆ ಒತ್ತಾಸೆಯಾದುದು ಕಂಡು ಬರುತ್ತದೆ. ಈ ಕೆಳಗೆ ಹಳೆಯ ಮತ್ತು ನೂತನ ರಾಯಭಾರತ್ವದ ವ್ಯತ್ಯಾಸಗಳನ್ನು ವಿವರಿಸಲಾಗಿದ್ದು ಅವುಗಳ ನೆರವಿನಿಂದ ಹಳೆಯ ಮತ್ತು ನೂತನ ರಾಯಭಾರತ್ವದ ಪರಿಕಲ್ಪನೆಗಳನ್ನು ಸ್ಪಷ್ಟಪಡಿಸಿಕೊಳ್ಳಲು ಪ್ರಯತ್ನಿಸೋಣ.

ಸಾಂಪ್ರದಾಯಿಕ ಸ್ವರೂಪದ ರಾಯಭಾರತ್ವವು ಹಳೆಯ ರಾಯಭಾರತ್ವವೆಂದು ಪರಿಗಣಿಸಲ್ಪಡುತ್ತದೆ. ಸಾಮಾನ್ಯವಾಗಿ ಎರಡನೇ ವಿಶ್ವ ಸಮರದ ಮುಂಚಿನ ಕಾಲಾವಧಿಯಲ್ಲಿ ಅಸ್ತಿತ್ವದಲ್ಲಿದ್ದ ರಾಯಭಾರತ್ವವು ಹಳೆಯ ರಾಯಭಾರತ್ವವೆಂದು ಗುರುತಿಸಲ್ಪಡುತ್ತದೆ. ಈ ಹಳೆಯ ರಾಯಭಾರತ್ವದ ಪ್ರಧಾನ ಲಕ್ಷಣಗಳು ಈ ಕೆಳಗಿನಂತಿವೆ.



**1. ಯುರೋಪಿಯನ್ ರಾಷ್ಟ್ರಗಳಿಗೆ ಸೀಮಿತ:** ಸಾಂಪ್ರದಾಯಿಕ ಅಥವಾ ಹಳೆಯ ರಾಯಭಾರತ್ವವು ಯುರೋಪಿನಲ್ಲಿ ಜನ್ಮ ತಾಳಿತ್ತು. ಜಗತ್ತಿನ ಇತರ ಭಾಗಗಳಲ್ಲಿ ವಸಾಹತುಗಳನ್ನು ಸ್ಥಾಪಿಸಿದ್ದ ಸಾಮ್ರಾಜ್ಯಶಾಹಿ ಯುರೋಪಿಯನ್ ರಾಷ್ಟ್ರಗಳ ನಡುವಿನ ಸಂಬಂಧಗಳ ನಿರ್ವಹಣೆಗೆ ಮಾತ್ರ ಅದು ಬಳಸಲ್ಪಟ್ಟಿತ್ತು. ಯುರೋಪಿನ ವಿವಿಧ ದೇಶಗಳ ಸಾಮ್ರಾಜ್ಯಶಾಹಿ ನೀತಿಗೆ ಒಳಪಟ್ಟಿದ್ದ ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾದ ರಾಷ್ಟ್ರಗಳಲ್ಲಿ ಹಳೆಯ ರಾಯಭಾರತ್ವ ಅಸ್ತಿತ್ವದಲ್ಲಿರಲಿಲ್ಲ.

**2. ಶ್ರೀಮಂತ ವರ್ಗಕ್ಕೆ ಆದ್ಯತೆ:** ಹಳೆಯ ರಾಯಭಾರತ್ವವು ಅರಸು, ಆತನ ಅಧಿಕಾರಿಗಳು ಅಥವಾ ನಂಬಿಗಸ್ತ ವ್ಯಕ್ತಿಗಳನ್ನು ಮಾತ್ರ ಪ್ರತಿನಿಧಿಸುತ್ತಿತ್ತು. ಜೊತೆಗೆ ಅಂದಿನ ಸಂಧಾನಗಳು ಗಣ್ಯರ ಆಶಯಗಳನ್ನು ಮಾತ್ರ ಆಧರಿಸಿದ್ದು ಜನಸಾಮಾನ್ಯರನ್ನು ಕಡೆಗಣಿಸಿದ್ದವು.

**3. ಸದ್ವರ್ತನೆಗಳ ಪ್ರತಿಪಾದನೆ:** ಸರ್ವ ಸಮ್ಮತವಾದ ಮತ್ತು ಸ್ಥಾಪಿತ ನಿಯಮಾವಳಿಗಳು ಹಳೆಯ ರಾಯಭಾರತ್ವದ ಅವಿಭಾಜ್ಯ ಅಂಗವೆನಿಸಿದ್ದವು. ಸಾಮಾನ್ಯವಾಗಿ ಹಳೆಯ ರಾಯಭಾರತ್ವವು ಪ್ರಾಮಾಣಿಕತೆ, ಸತ್ಯ, ಗೌಪ್ಯತೆ, ಸನ್ನಡತೆ, ರಾಷ್ಟ್ರೀಯ ಹಿತಾಸಕ್ತಿಗೆ ಬದ್ಧತೆಯಂತಹ ಗುಣಗಳನ್ನು ಮೈಗೂಡಿಸಿಕೊಂಡಿದ್ದ ರಾಯಭಾರಿಗಳನ್ನು ಪ್ರತಿನಿಧಿಸುತ್ತಿತ್ತು.

**[4. ಗೌಪ್ಯತೆಗೆ ಪ್ರಾಶಸ್ತ್ಯ:** ಗೌಪ್ಯತೆಯು ಸಾಂಪ್ರದಾಯಿಕ ಅಥವಾ ಹಳೆಯ ರಾಯಭಾರತ್ವದ ಪ್ರಧಾನ ಲಕ್ಷಣವಾಗಿತ್ತು. ಸಂಧಾನ ಮಾತುಕತೆ ಮತ್ತು ಸಂಧಾನದ ಫಲಿತಾಂಶ ಕುರಿತು ಪರಿಪೂರ್ಣ ಗೌಪ್ಯತೆಯನ್ನು ಅಂದಿನ ರಾಯಭಾರಿಗಳು ಕಾಪಾಡುತ್ತಿದ್ದರು. ಈ ಉದ್ದೇಶಕ್ಕಾಗಿ ರಾಯಭಾರಿಗಳು ತಮ್ಮ ವಿದೇಶಿ ಸಹವರ್ತಿಗಳೊಡನೆ ಮಾತ್ರ ಅಂದರೆ ರಾಯಭಾರಿಗಳೊಡನೆ ಮಾತ್ರ ಸಂಪರ್ಕ ಹೊಂದುತ್ತಿದ್ದರು. ಗಮನಾರ್ಹ ಅಂಶವೇನೆಂದರೆ, ಗೌಪ್ಯ ಒಪ್ಪಂದ, ಮಾತುಕತೆ, ನಿರ್ಧಾರ, ಮೈತ್ರಿಕೂಟಗಳು ದುರುದ್ದೇಶದಿಂದ ಕೂಡಿರದೇ ಶಾಂತಿಯನ್ನು ನೆಲೆಗೊಳಿಸುವ ಆದರ್ಶ ತತ್ವಗಳನ್ನು ಆಧರಿಸಿರುತ್ತಿದ್ದವು.

**5. ಕಾರ್ಯ ನಿರ್ವಹಣಾ ಸ್ವಾತಂತ್ರ್ಯ:** ಹಳೆಯ ರಾಯಭಾರತ್ವದಲ್ಲಿ ರಾಯಭಾರಿಗಳಿಗೆ ಅಧಿಕ ಸ್ವಾತಂತ್ರ್ಯವನ್ನು ಆಯಾ ರಾಷ್ಟ್ರದ ಮುಖ್ಯಸ್ಥರು ನೀಡುತ್ತಿದ್ದರು. ವಿದೇಶದೊಡನೆ ಸಂಧಾನ ಕೈಗೊಳ್ಳುವ ವೇಳೆಯಲ್ಲಿ ರಾಯಭಾರಿಗಳು ನಿರಾತಂಕವಾಗಿ ತಮ್ಮ ವಿವೇಚನಾನುಸಾರ ಕಾರ್ಯ ನಿರ್ವಹಿಸಲು ಸ್ವಾತಂತ್ರ್ಯ ಪಡೆದಿದ್ದರು. ಸಂಪರ್ಕ ಹಾಗೂ ಮಾಹಿತಿ ತಂತ್ರಜ್ಞಾನದ ಕೊರತೆಯು ರಾಯಭಾರಿಗಳಿಗೆ ಸಹಜವಾಗಿ ಮುಕ್ತ ಸ್ವಾತಂತ್ರ್ಯವನ್ನು ಹಳೆಯ ರಾಯಭಾರತ್ವದಲ್ಲಿ ಒದಗಿಸಿತ್ತು. ತಮ್ಮ ತಾಯ್ನಾಡಿನೊಡನೆ ರಾಯಭಾರಿಗಳಿಗೆ ನಿರಂತರವಾಗಿ ಮತ್ತು ವೇಗವಾಗಿ ಸಂಪರ್ಕ ಹೊಂದಲು ಸಾಧ್ಯವಾಗದಿದ್ದದ್ದು ಈ ಕಾರ್ಯ ನಿರ್ವಹಣಾ ಸ್ವಾತಂತ್ರ್ಯ ನೀಡಿಕೆಗೆ ಪ್ರಧಾನ ಕಾರಣವಾಗಿತ್ತು.

ಈ ಮೇಲಿನ ಲಕ್ಷಣಗಳನ್ನು ಮೈಗೂಡಿಸಿಕೊಂಡಿದ್ದ ಹಳೆಯ ರಾಯಭಾರತ್ವವು ಎರಡನೇ ವಿಶ್ವ ಸಮರದವರೆಗೆ ಅಸ್ತಿತ್ವದಲ್ಲಿತ್ತು. ಈ ನಂತರದಲ್ಲಿ ಕಂಡುಬಂದ ಅಂತರ ರಾಷ್ಟ್ರೀಯ ವ್ಯವಸ್ಥೆಯಲ್ಲಿನ ಬದಲಾವಣೆ, ಸಾರಿಗೆ ಹಾಗೂ ಸಂಪರ್ಕ ಕ್ಷೇತ್ರದಲ್ಲಿನ ಆವಿಷ್ಕಾರಗಳು, ಮಾಹಿತಿ ತಂತ್ರಜ್ಞಾನದ ಪ್ರಗತಿಯಿಂದಾಗಿ ಸಾಂಪ್ರದಾಯಿಕ ಹಳೆಯ ರಾಯಭಾರತ್ವ ತನ್ನ ಪ್ರಸ್ತುತತೆಯನ್ನು ಕಳೆದುಕೊಂಡು ನೇಪಥ್ಯಕ್ಕೆ ಜಾರಿತು. ರಾಯಭಾರತ್ವ ವಿನೂತನ ಲಕ್ಷಣಗಳನ್ನು ಮೈಗೂಡಿಸಿಕೊಳ್ಳುವ ಮೂಲಕ ನೂತನ ರಾಯಭಾರತ್ವದ ಸ್ವರೂಪವನ್ನು ಪಡೆದುಕೊಂಡಿತು. ತನ್ನ ಮೊದಲಿನ ಹಳೆಯ ರಾಯಭಾರತ್ವಕ್ಕಿಂತ ಭಿನ್ನವಾದ ಲಕ್ಷಣಗಳನ್ನು ಮೈಗೂಡಿಸಿಕೊಂಡು ಎರಡನೇ ಮಹಾ ಯುದ್ಧದ ಬಳಿಕ ಪಾಲಿಸಲ್ಪಡುತ್ತಿರುವ ರಾಯಭಾರತ್ವವೇ ನೂತನ ರಾಯಭಾರತ್ವವೆಂದು ಪರಿಗಣಿಸಲ್ಪಟ್ಟಿದೆ. ಹಳೆಯ ರಾಯಭಾರತ್ವಕ್ಕಿಂತ ಭಿನ್ನವಾದ ನೂತನ ರಾಯಭಾರತ್ವದ ಲಕ್ಷಣಗಳು ಈ ಕೆಳಗಿನಂತಿವೆ.

**1. ಜಾಗತಿಕ ವ್ಯಾಪ್ತಿ:** ಹಳೆಯ ರಾಯಭಾರತ್ವವು ಕೇವಲ ಯುರೋಪಿಯನ ಸಾಮ್ರಾಜ್ಯಶಾಹಿ ರಾಷ್ಟ್ರಗಳ ನಡುವಿನ ಸಂಬಂಧಗಳಿಗೆ ಮಾತ್ರ ಸೀಮಿತವಾಗಿತ್ತು. ಆದರೆ, ನೂತನ ರಾಯಭಾರತ್ವವು ಜಗತ್ತಿನ ಎಲ್ಲ ಸ್ವತಂತ್ರ ರಾಷ್ಟ್ರಗಳಿಗೆ ವ್ಯಾಪಿಸಿರುವ ಪರಿಕಲ್ಪನೆಯಾಗಿದೆ. ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾಗಳ ಹೊಸ ಸಾರ್ವಭೌಮ ರಾಷ್ಟ್ರಗಳ ನಡುವಿನ ಸಂಬಂಧಗಳ ನಿರ್ವಹಣೆಯೂ ಸಹ ರಾಯಭಾರತ್ವದ ವ್ಯಾಪ್ತಿಗೆ ಸೇರಿದ್ದುದು ಅದರ ಜಾಗತಿಕ ಸ್ವರೂಪವನ್ನು ಸ್ಪಷ್ಟಪಡಿಸಿದೆ.

**2. ಬಹುಪಕ್ಷೀಯ ಸಂಧಾನಗಳು:** ಹಳೆಯ ರಾಯಭಾರತ್ವವು ದ್ವಿಪಕ್ಷೀಯ ಸಂಧಾನಗಳಿಗೆ ಮಾತ್ರವೇ ಅಂಟಿಕೊಂಡು ಸೀಮಿತವಾಗಿತ್ತು. ಆದರೆ, ನೂತನ ರಾಯಭಾರತ್ವವು ಸಮ್ಮೇಳನ ರಾಯಭಾರತ್ವ, ವಿಶ್ವ ಸಂಸ್ಥೆಯ ಮೂಲಕ ಸಾಂಸ್ಥಿಕ ರಾಯಭಾರತ್ವ ಹಾಗೂ ವಿದೇಶಿ ನಾಯಕರ ನೇರ ಸಂಪರ್ಕದ ರೂಪದ ರಾಯಭಾರತ್ವ ಮೈಗೂಡಿಸಿಕೊಂಡಿದ್ದು ವಿಶಾಲ ಸ್ವರೂಪದ ಬಹುಪಕ್ಷೀಯ ಸಂಧಾನಗಳನ್ನು ಪ್ರತಿನಿಧಿಸುತ್ತದೆ.

**3. ಅನೌಪಚಾರಿಕತೆಗೆ ಆಸ್ಪದ:** ಹಳೆಯ ರಾಯಭಾರತ್ವವು ಹೆಚ್ಚು ಔಪಚಾರಿಕ ಗುಣವನ್ನು ಹೊಂದಿತ್ತು. ಇದರರ್ಥ, ಹಳೆಯ ರಾಯಭಾರತ್ವವು ಸಂಕೀರ್ಣ ನಿಯಮ ಮತ್ತು ಕಾರ್ಯ ವಿಧಾನಗಳನ್ನು ಆಧರಿಸಿತ್ತು. ಆದರೆ, ನೂತನ ರಾಯಭಾರತ್ವವು ಅನೌಪಚಾರಿಕ ಸ್ವರೂಪದ್ದಾಗಿದ್ದು ಬಹುತೇಕ ಸಂಧಾನಗಳು ದೇಶಗಳ ನಾಯಕರ ನೇರ ಸಂಪರ್ಕದಿಂದ ಜರುಗುತ್ತಿದ್ದು ರಾಯಭಾರತ್ವ ಅನೌಪಚಾರಿಕವೆನಿಸಿದೆ.

**4. ಮುಕ್ತತೆಗೆ ಪ್ರಾಶಸ್ತ್ಯ:** ಹಳೆಯ ರಾಯಭಾರತ್ವದಲ್ಲಿ ಸಂಧಾನಗಳು, ಒಪ್ಪಂದಗಳು, ಮೈತ್ರಿ ಗೌಪ್ಯತೆಯಿಂದ ಕೂಡಿರುತ್ತಿದ್ದವು. ಆದರೆ, ನೂತನ ರಾಯಭಾರತ್ವದಲ್ಲಿ ದೇಶಗಳ ನಡುವಿನ ರಾಯಭಾರಿಕ ಮಾತುಕತೆ, ಸಂಧಾನ, ಒಪ್ಪಂದಗಳು ಬಹಿರಂಗವಾಗಿ ಜರುಗುತ್ತವೆ. ರಾಯಭಾರತ್ವದ ಪ್ರತಿ ಹಂತದ ಬೆಳವಣಿಗೆಗಳನ್ನು ಸಮೂಹ ಮಾಧ್ಯಮ



ಮತ್ತು ಪತ್ರಿಕಾ ಮಾಧ್ಯಮಗಳ ಮೂಲಕ ಸಾರ್ವಜನಿಕವಾಗಿ ಹಂಚಿಕೊಳ್ಳಲಾಗುತ್ತದೆ.

**5. ಪ್ರಜಾಸತ್ತಾತ್ಮಕತೆಯ ಸ್ವರೂಪ:** ಹಳೆಯ ರಾಯಭಾರತ್ವವು ಶ್ರೀಮಂತ ವರ್ಗವನ್ನು ಪ್ರತಿನಿಧಿಸುತ್ತಿತ್ತು. ಗಣ್ಯರ ಆಶಯದಂತೆ ಮತ್ತು ಅವರ ಮೂಲಕವೇ ಅಂದಿನ ಸಂಧಾನಗಳು ಏರ್ಪಡುತ್ತಿದ್ದವು. ಆದರೆ, ನೂತನ ರಾಯಭಾರತ್ವದಲ್ಲಿ ರಾಜಕೀಯ ಪಕ್ಷಗಳು, ಒತ್ತಡ ಗುಂಪುಗಳು, ಜಾಗತಿಕ ಸಾರ್ವಜನಿಕಾಭಿಪ್ರಾಯಗಳು ನಿರ್ಣಾಯಕ ಪ್ರಭಾವ ಬೀರುತ್ತವೆ. ಜೊತೆಗೆ ಪ್ರಜಾಸತ್ತಾತ್ಮಕ ತತ್ವಗಳಲ್ಲಿ ನಂಬಿಕೆಯುಳ್ಳ ಪರಿಣಿತ ನಾಗರಿಕ ಸೇವಾ ವರ್ಗದವರು ನೂತನ ರಾಯಭಾರತ್ವದಡಿ ರಾಯಭಾರಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿ ನೂತನ ರಾಯಭಾರತ್ವವು ಪ್ರಜಾಸತ್ತಾತ್ಮಕ ಸ್ವರೂಪದ್ದು ಎನ್ನಲಾಗುತ್ತದೆ.

**6. ಪ್ರಚಾರಕ್ಕೆ ಆದ್ಯತೆ:** ಹಳೆಯ ರಾಯಭಾರತ್ವವು ಔಪಚಾರಿಕ ವಿಧಾನಗಳಲ್ಲಿ ನಂಬಿಕೆ ಹೊಂದಿದ್ದು ಗೌಪ್ಯವಾಗಿ ಪರಸ್ಪರ ಬೇಡಿಕೆ, ಅಗತ್ಯ, ಗುರಿಗಳನ್ನು ವಿನಿಮಯ ಮಾಡಿಕೊಳ್ಳಲು ಆದ್ಯತೆ ಒದಗಿಸಿತ್ತು. ಆದರೆ, ನೂತನ ರಾಯಭಾರತ್ವವು ಬಹಿರಂಗ ಸ್ವರೂಪ ತಾಳಿದ್ದು ರಾಯಭಾರಿಕ ಚಟುವಟಿಕೆಗಳಿಗೆ ಅಧಿಕ ಪ್ರಚಾರವನ್ನು ಅಪೇಕ್ಷಿಸುತ್ತದೆ.

## ಮಾದರಿ ಪ್ರಶ್ನೆಗಳು [Model Questions]:

**[A.] ಎರಡು ಅಂಕದ ಪ್ರಶ್ನೆಗಳು:**

1. ಸಾಮೂಹಿಕ ಭದ್ರತೆಯನ್ನು ವ್ಯಾಖ್ಯಾನಿಸಿರಿ.
2. ಸಾಮೂಹಿಕ ಭದ್ರತೆಯ ಅರ್ಥವನ್ನು ಬರೆಯಿರಿ.
3. ಸಾಮೂಹಿಕ ಭದ್ರತೆಯ ಮೂರು ಲಕ್ಷಣಗಳನ್ನು ಬರೆಯಿರಿ.
4. ರಾಷ್ಟ್ರೀಯ ಭದ್ರತೆ ಎಂದರೇನು?
5. ಸಾಮೂಹಿಕ ಭದ್ರತೆ ಕುರಿತಂತೆ ವಿಶ್ವ ಸಂಸ್ಥೆಯ ಪ್ರನಾಳಿಕೆಯಲ್ಲಿರುವ ಅಂಶಗಳಾವುವು?
6. ಸಾಮೂಹಿಕ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾದ ಮೂರು ಪ್ರಧಾನ ಬಿಕ್ಕಟ್ಟುಗಳನ್ನು ಹೆಸರಿಸಿರಿ.
7. ಕೋರಿಯಾ ಬಿಕ್ಕಟ್ಟನ್ನು ಕುರಿತಂತೆ ನಿಮಗೇನು ತಿಳಿದಿದೆ?
8. ಸುಯೇಜ್ ಕಾಲುವೆಯ ಬಿಕ್ಕಟ್ಟಿಗೆ ಕಾರಣವೇನು?
9. ರಾಯಭಾರತ್ವ ಪದದ ಉತ್ಪತ್ತಿಯನ್ನು ತಿಳಿಸಿರಿ.
10. ರಾಯಭಾರತ್ವ ಎಂದರೇನು?

11. ರಾಯಭಾರತ್ವವನ್ನು ವ್ಯಾಖ್ಯಾನಿಸಿರಿ.
12. ರಾಯಭಾರತ್ವದ ಮೂರು ಲಕ್ಷಣಗಳನ್ನು ಬರೆಯಿರಿ.
13. ಹಳೆಯ ರಾಯಭಾರತ್ವದ ವಿಶೇಷವೇನು?
14. ನೂತನ ರಾಯಭಾರತ್ವ ಎಂದರೇನು?
15. ರಾಯಭಾರತ್ವದಲ್ಲಿ ಬದಲಾವಣೆಯಾಗಲು ಪ್ರಧಾನ ಕಾರಣಗಳಾವುವು?

[B.] ಐದು ಅಂಕದ ಪ್ರಶ್ನೆಗಳು:

1. ಸಾಮೂಹಿಕ ಭದ್ರತೆ ಎಂದರೇನು? ಅದರ ಸ್ವರೂಪವನ್ನು ವಿವರಿಸಿರಿ.
2. ಸಾಮೂಹಿಕ ಭದ್ರತೆಯ ವಿಚಾರದಲ್ಲಿ ವಿಶ್ವ ಸಂಸ್ಥೆಯ ಪಾತ್ರವನ್ನು ಚರ್ಚಿಸಿರಿ.
3. ಶಕ್ತಿ ಸಮತೋಲನ ಮತ್ತು ಸಾಮೂಹಿಕ ಭದ್ರತೆಯ ನಡುವಿನ ವ್ಯತ್ಯಾಸಗಳನ್ನು ಪಟ್ಟಿ ಮಾಡಿರಿ.
4. ರಾಯಭಾರತ್ವದ ಲಕ್ಷಣಗಳನ್ನು ಪರಿಶೀಲಿಸಿರಿ.
5. ನೂತನ ರಾಯಭಾರತ್ವದ ಲಕ್ಷಣಗಳನ್ನು ವಿವರಿಸಿರಿ.
6. ರಾಷ್ಟ್ರೀಯ ಭದ್ರತೆಯ ಪ್ರಧಾನ ಸವಾಲುಗಳನ್ನು ಚರ್ಚಿಸಿರಿ.

[C.] ಹತ್ತು ಅಂಕದ ಪ್ರಶ್ನೆಗಳು:

1. ಸಾಮೂಹಿಕ ಭದ್ರತೆಯ ಅರ್ಥ, ಸ್ವರೂಪ ಮತ್ತು ಕ್ರಮಗಳನ್ನು ವಿವರಿಸಿರಿ.
2. ರಾಯಭಾರತ್ವ ಎಂದರೇನು? ಹಳೆಯ ಮತ್ತು ನೂತನ ರಾಯಭಾರತ್ವದ ವ್ಯತ್ಯಾಸಗಳನ್ನು ಚರ್ಚಿಸಿರಿ.



ಅಧ್ಯಾಯ 10:

# ಶಸ್ತ್ರಾಸ್ತ್ರ ಸ್ಪರ್ಧೆ ಮತ್ತು ನಿಶ್ಯಸ್ತ್ರೀಕರಣ

# [ARMS RACE AND DISARMAMENT].

## ಪ್ರಸ್ತಾವನೆ [Introduction]:

ಶಾಂತಿ, ಭದ್ರತೆ ಹಾಗೂ ಅಭಿವೃದ್ಧಿ ಪರಸ್ಪರ ಅಂತರ್‌ಸಂಬಂಧವುಳ್ಳ ಸ್ಥಿತಿಗಳು. ಪರಸ್ಪರ ಪೂರಕವಾದ ಈ ಸ್ಥಿತಿಗಳು ಮನುಕುಲದ ಒಳಿತಿಗೆ ಕಾರಣವಾಗುತ್ತವೆ. ಹೀಗಾಗಿ ಜಗತ್ತಿನ ಪ್ರತಿ ರಾಷ್ಟ್ರ ಶಾಂತಿ, ಭದ್ರತೆ ಹಾಗೂ ಅಭಿವೃದ್ಧಿಯನ್ನು ತಮ್ಮ ಪ್ರಾಥಮಿಕ ಗುರಿಯನ್ನಾಗಿ ಪರಿಗಣಿಸುತ್ತವೆ. ಆದರೆ, ರಾಷ್ಟ್ರಗಳ ನಡುವಿನ ಶಕ್ತಿಯ ಹೋರಾಟವು ಶಸ್ತ್ರಾಸ್ತ್ರ ಸ್ಪರ್ಧೆಗೆ ಚಾಲನೆ ನೀಡುವ ಮೂಲಕ ಪ್ರಸ್ತಾಪಿತ ಸ್ಥಿತಿಗಳಿಗೆ ಧಕ್ಕೆಯನ್ನುಂಟು ಮಾಡಿದೆ. ಇದರೊಡನೆ ಶಸ್ತ್ರಾಸ್ತ್ರ ಸ್ಪರ್ಧೆಯು ಯುದ್ಧವನ್ನು ಉತ್ತೇಜಿಸುವ ಮೂಲಕ ಮನುಕುಲಕ್ಕೆ ಸವಾಲಾಗಿ ಪರಿಣಮಿಸಿದೆ. ಈ ಹಿನ್ನೆಲೆಯಲ್ಲಿ ಶಸ್ತ್ರಾಸ್ತ್ರ ಸ್ಪರ್ಧೆಗೆ ಪರಿಹಾರೋಪಾಯವಾಗಿ ಶಸ್ತ್ರ ನಿಯಂತ್ರಣ ಹಾಗೂ ನಿಶ್ಯಸ್ತ್ರೀಕರಣ ಪರಿಕಲ್ಪನೆಗಳು ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿ ಜನ್ಮ ತಾಳಿವೆ. ಪ್ರಸಕ್ತ ಅಧ್ಯಾಯದಲ್ಲಿ ಶಸ್ತ್ರಾಸ್ತ್ರ ಸ್ಪರ್ಧೆ, ಶಸ್ತ್ರ ನಿಯಂತ್ರಣ ಹಾಗೂ ನಿಶ್ಯಸ್ತ್ರೀಕರಣದ ಕುರಿತಾದ ಕೆಲ ವಿಚಾರಗಳ ಮೇಲೆ ಬೆಳಕು ಚೆಲ್ಲಲಾಗಿದೆ.

## [I.] ಶಸ್ತ್ರಾಸ್ತ್ರ ಸ್ಪರ್ಧೆ [Arms Race]:

ಜಗತ್ತಿನ ಪ್ರತಿ ರಾಷ್ಟ್ರ ತನ್ನ ಭದ್ರತೆಗೆ ಮೊದಲ ಆದ್ಯತೆ ನೀಡುತ್ತದೆ. ಕಳೆದ ಶತಮಾನಗಳಲ್ಲಿ ಘಟಿಸಿದ ರಾಷ್ಟ್ರಗಳ ಆಕ್ರಮಣಶೀಲತೆ, ವಿಶ್ವ ಸಮರಗಳು, ಶಕ್ತಿ ಬಣಗಳ ರಚನೆ ಮುಂತಾದವು ಆಯಾ ರಾಷ್ಟ್ರಗಳ ಭದ್ರತೆಯ ಅನಿವಾರ್ಯತೆಯನ್ನು ಹೆಚ್ಚಿಸಿವೆ. ಇದರಿಂದ ರಾಷ್ಟ್ರಗಳು ಅಂತರ್‌ರಾಷ್ಟ್ರೀಯ ಶಾಂತಿಗಿಂತ ತಮ್ಮ ಭದ್ರತೆಗೆ ಅಧಿಕ ಮಹತ್ವ ನೀಡುವಂತಾಗಿದೆ. ಇದರೊಡನೆ ರಾಷ್ಟ್ರಗಳ ನಡುವೆ ಶಕ್ತಿಗಾಗಿ ನಿರಂತರ ಹೋರಾಟ ಜರುಗುತ್ತಿರುತ್ತದೆ. ಫಲವಾಗಿ ರಾಷ್ಟ್ರಗಳು ಪರಸ್ಪರ ಶಸ್ತ್ರಾಸ್ತ್ರ ಸ್ಪರ್ಧೆಗೆ ತೊಡಗುವುದು ಅನಿವಾರ್ಯವೆನಿಸಿದೆ.

## [A.] ಶಸ್ತ್ರಾಸ್ತ್ರ ಸ್ಪರ್ಧೆಯ ಅರ್ಥ [Meaning of Arms Race]:

ಸರಳಾರ್ಥದಲ್ಲಿ ಎರಡು ರಾಷ್ಟ್ರಗಳು ತಮ್ಮ ಸೈನಿಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಪೈಪೋಟಿ ನಡೆಸುವುದನ್ನು ಶಸ್ತ್ರಾಸ್ತ್ರ ಸ್ಪರ್ಧೆ ಎನ್ನಬಹುದಾಗಿದೆ. ವಿಶಾಲಾರ್ಥದಲ್ಲಿ ಎರಡು ರಾಷ್ಟ್ರ ಅಥವಾ ಶಕ್ತಿ ಬಣಗಳ ನಡುವೆ ಸೈನಿಕ, ಜೈವಿಕ, ಅಣ್ವಸ್ತ್ರ ಹೊಂದುವ ಮೂಲಕ ಯುದ್ಧ ಸಾಮರ್ಥ್ಯವನ್ನು ಬಲಪಡಿಸಿಕೊಳ್ಳಲು ಜರುಗುವ ಪೈಪೋಟಿಯನ್ನು ಶಸ್ತ್ರಾಸ್ತ್ರ ಸ್ಪರ್ಧೆ ಎನ್ನಲಾಗುತ್ತದೆ. ಸಾಮಾನ್ಯವಾಗಿ ರಾಷ್ಟ್ರಗಳ ನಡುವಿನ ಮಿಲಿಟರಿ ಸಾಮರ್ಥ್ಯ ಸುಧಾರಣೆಗೆ ನಡೆಯುವ ಸ್ಪರ್ಧೆಯನ್ನು ಈ ಪರಿಕಲ್ಪನೆಯು ಪ್ರತಿನಿಧಿಸುತ್ತದೆ. ಶಸ್ತ್ರಾಸ್ತ್ರ ಸ್ಪರ್ಧೆಯು ರಾಷ್ಟ್ರೀಯ, ಪ್ರಾದೇಶಿಕ ಹಾಗೂ ಜಾಗತಿಕ ಮಟ್ಟದಲ್ಲಿ ಘಟಿಸುವ ವಿದ್ಯಮಾನವಾಗಿರುತ್ತದೆ. ವಿಶೇಷವಾಗಿ ಪರಸ್ಪರ ದ್ವೇಷ ಬೆಳೆಸಿಕೊಂಡ, ಭಿನ್ನಾಭಿಪ್ರಾಯ ಮೂಡಿಸಿಕೊಂಡ, ಮಹತ್ವಾಕಾಂಕ್ಷೆ ಮೈಗೂಡಿಸಿಕೊಂಡಿರುವ ರಾಷ್ಟ್ರಗಳ ನಡುವೆ ಶಸ್ತ್ರಾಸ್ತ್ರ ಸ್ಪರ್ಧೆ ಅಧಿಕವಾಗಿರುತ್ತದೆ. ಶಸ್ತ್ರಾಸ್ತ್ರ ಸ್ಪರ್ಧೆ ಎಂಬುದು ಹಲವು ಆಯಾಮವುಳ್ಳ ಪರಿಕಲ್ಪನೆಯಾಗಿದ್ದು ರಾಷ್ಟ್ರಗಳ ನಡುವಿನ ಸೈನಿಕ ಸಿದ್ಧತೆ ಮತ್ತು ಮಿಲಿಟರಿ ವೆಚ್ಚ ಕುರಿತಾದ ಪೈಪೋಟಿಗೆ ಹೆಚ್ಚು ಅನ್ವಯಿಸಲ್ಪಡುತ್ತದೆ.

## [B. ಶಸ್ತ್ರಾಸ್ತ್ರ ಸ್ಪರ್ಧೆಯ ಪರಿಣಾಮಗಳು [Impacts of Arms Race]:

ಶಸ್ತ್ರಗಳು ಎಂದಿಗೂ ಸಂತೋಷ ನೀಡಲಾರವು ಎಂಬ ತತ್ವದಂತೆ ಭದ್ರತಾ ಪರಿಭಾಷೆಯಲ್ಲಿ ಶಸ್ತ್ರಾಸ್ತ್ರ ಸ್ಪರ್ಧೆಯು ಒಂದು ಋಣಾತ್ಮಕ ವಿದ್ಯಮಾನವಾಗಿದೆ. ರಾಷ್ಟ್ರಗಳ ನಡುವಿನ ಶಸ್ತ್ರಾಸ್ತ್ರ ಸ್ಪರ್ಧೆಯು ಸಹಜವಾಗಿ ಈ ಕೆಳಗಿನ ಹಲವು ಪರಿಣಾಮಗಳನ್ನು ಬೀರುತ್ತದೆ.

**1. ಅಂತರ್‌ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗೆ ಧಕ್ಕೆ:** ಜಗತ್ತಿನ ವಿವಿಧ ರಾಷ್ಟ್ರಗಳ ನಡುವೆ ಶಸ್ತ್ರಾಸ್ತ್ರ ಸ್ಪರ್ಧೆ ಏರ್ಪಟ್ಟರೆ ಸಹಜವಾಗಿ ರಾಷ್ಟ್ರಗಳಲ್ಲಿ ಅಭದ್ರತೆ ಉಂಟಾಗುತ್ತದೆ. ಜೊತೆಗೆ ಶಸ್ತ್ರಾಸ್ತ್ರ ಸ್ಪರ್ಧೆಯು ರಾಷ್ಟ್ರಗಳ ನಡುವೆ ಯುದ್ಧವನ್ನು ಉತ್ತೇಜಿಸುತ್ತದೆ. ಎಲ್ಲೆಡೆ ಯುದ್ಧ ಭೀತಿಯನ್ನು ಮೂಡಿಸುವ ಮೂಲಕ ಶಸ್ತ್ರಾಸ್ತ್ರ ಸ್ಪರ್ಧೆಯು ಅಂತರ್‌ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗೆ ಪೆಟ್ಟು ನೀಡುತ್ತದೆ. ಉದಾ: 19 ನೇ ಶತಮಾನದ ಉತ್ತರಾರ್ಧದಲ್ಲಿ ಜರ್ಮನಿ ಹಾಗೂ ಇಂಗ್ಲೆಂಡಿನ ನಡುವೆ ಜರುಗಿದ ಶಸ್ತ್ರಾಸ್ತ್ರ ಸ್ಪರ್ಧೆಯು ಮೊದಲ ವಿಶ್ವ ಸಮರಕ್ಕೆ ಕಾರಣವಾಗುವುದರೊಡನೆ ಅಂತರ್‌ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗೆ ಧಕ್ಕೆಯನ್ನುಂಟು ಮಾಡಿದುದು.

**2. ರಾಷ್ಟ್ರಗಳ ನಡುವೆ ಉದ್ವಿಗ್ನತೆ:** ಶಸ್ತ್ರಾಸ್ತ್ರ ಸ್ಪರ್ಧೆಯು ಪ್ರಪಂಚದ ರಾಷ್ಟ್ರಗಳ ನಡುವೆ ಪರಸ್ಪರ ಸಂಶಯ, ಅಪನಂಬಿಕೆ, ದ್ವೇಷವನ್ನು ಬೆಳೆಸುತ್ತದೆ. ಫಲವಾಗಿ ರಾಷ್ಟ್ರಗಳ ಮಧ್ಯೆ



ಸುಮಧುರ ಹಾಗೂ ಶಾಂತಿಯುತ ಸಂಬಂಧಗಳ ಬದಲು ಉದ್ವಿಗ್ನತೆ ಕಂಡು ಬರುತ್ತದೆ. ಉದಾ: ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಉದ್ವಿಗ್ನತೆಗೆ ಶಸ್ತ್ರಾಸ್ತ್ರ ಸ್ಪರ್ಧೆ ಕಾರಣವಾದುದು.

**3. ಆರ್ಥಿಕ ಪ್ರಗತಿಗೆ ತೊಡಕು:** ಶಸ್ತ್ರಾಸ್ತ್ರ ಸ್ಪರ್ಧೆಯು ರಾಷ್ಟ್ರಗಳ ಆರ್ಥಿಕ ಪ್ರಗತಿಗೆ ಕಂಟಕವಾಗಿ ಪರಿಣಮಿಸುತ್ತದೆ. ಅನುತ್ಪಾದಕ ಹಾಗೂ ಅಪಾಯಕಾರಿ ಶಸ್ತ್ರಾಸ್ತ್ರಕ್ಕಾಗಿ ರಾಷ್ಟ್ರಗಳು ತಮ್ಮ ವರಮಾನದ ಅಧಿಕ ಪಾಲನ್ನು ಬಳಸಬೇಕಾಗಿದೆ. ಇದರಿಂದ ಪ್ರಜೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ರಾಷ್ಟ್ರಗಳು ಸಾಲದ ಮೊರೆ ಹೋಗಬೇಕಾಗುತ್ತದೆ. ಫಲವಾಗಿ ರಾಷ್ಟ್ರದ ಆರ್ಥಿಕ ಪ್ರಗತಿ ಕುಂಠಿತಗೊಂಡು ಆರ್ಥಿಕ ಮುಗ್ಗಟ್ಟು ಎದುರಿಸಬೇಕಾಗುತ್ತದೆ. ಉದಾ: ಅಮೇರಿಕಾದೊಡನೆ ಶಸ್ತ್ರಾಸ್ತ್ರ ಸ್ಪರ್ಧೆಗೆ ಮುಂದಾದ ಸೋವಿಯತ್ ಒಕ್ಕೂಟ ಆರ್ಥಿಕ ತೊಡಕುಗಳನ್ನು ಎದುರಿಸಿದುದು.

**4. ವೈವಿಧ್ಯಮಯ ಸವಾಲುಗಳಿಗೆ ಹಾದಿ:** ಶಸ್ತ್ರಾಸ್ತ್ರ ಸ್ಪರ್ಧೆಯಿಂದ ರಾಷ್ಟ್ರಗಳು ಆಂತರಿಕವಾಗಿ ಮತ್ತು ಬಾಹ್ಯವಾಗಿ ವಿವಿಧ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಶಸ್ತ್ರಾಸ್ತ್ರಗಳಿಗೆ ಅಧಿಕ ವೆಚ್ಚ ಮಾಡುವುದರಿಂದ ಹಸಿವು, ಬಡತನ, ನಿರುದ್ಯೋಗದಂತಹ ಆಂತರಿಕ ಸವಾಲುಗಳು ಜೀವಂತವಾಗಿ ಉಳಿದುಕೊಳ್ಳುತ್ತವೆ. ಅಂತೆಯೇ ಶಸ್ತ್ರಾಸ್ತ್ರ ಸ್ಪರ್ಧೆಯು ಪೈಪೋಟಿಗಿಳಿದ ರಾಷ್ಟ್ರಗಳಿಂದ ಅಸಹಕಾರವನ್ನು ರಾಷ್ಟ್ರವೊಂದು ಎದುರಿಸುವಂತೆ ಮಾಡುತ್ತದೆ.

**5. ಯುದ್ಧ ಸಾಧ್ಯತೆಯ ಹೆಚ್ಚಳ:** ಶಸ್ತ್ರಾಸ್ತ್ರ ಸ್ಪರ್ಧೆಯು ರಾಷ್ಟ್ರಗಳಲ್ಲಿ ಅಭದ್ರತೆ ಮೂಡಿಸುತ್ತದೆ. ಜೊತೆಗೆ ವಿವಾದಗಳನ್ನು ಉಲ್ಬಣಗೊಳಿಸುತ್ತದೆ. ಇದರೊಡನೆ ಶಸ್ತ್ರಾಸ್ತ್ರ ಸಾಮರ್ಥ್ಯದ ಪ್ರಯೋಗಕ್ಕೆ ರಾಷ್ಟ್ರಗಳನ್ನು ಉತ್ತೇಜಿಸುತ್ತದೆ. ಈ ಹಿನ್ನೆಲೆಯಲ್ಲಿ ಶಸ್ತ್ರಾಸ್ತ್ರ ಪೈಪೋಟಿಯು ಯುದ್ಧದ ಸಾಧ್ಯತೆಯನ್ನು ತೀವ್ರಗೊಳಿಸುತ್ತದೆ.

**6. ಶಸ್ತ್ರ ನಿಯಂತ್ರಣ ಅಥವಾ ನಿಶ್ಯಸ್ತ್ರೀಕರಣಕ್ಕೆ ಮಹತ್ವ:** ರಾಷ್ಟ್ರಗಳ ನಡುವಿನ ಶಸ್ತ್ರಾಸ್ತ್ರ ಸ್ಪರ್ಧೆಯು ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿ ಶಸ್ತ್ರ ನಿಯಂತ್ರಣ ಅಥವಾ ನಿಶಸ್ತ್ರೀಕರಣದ ಚರ್ಚೆಯನ್ನು ಹುಟ್ಟು ಹಾಕಿತು. ಜೊತೆಗೆ ಸ್ಪರ್ಧಾತ್ಮಕ ರಾಷ್ಟ್ರಗಳು ಸಹಕರಿಸಿ ನಿಶಸ್ತ್ರೀಕರಣ ಸಾಕಾರಗೊಳ್ಳಲು ಕಾಲಾನುಕ್ರಮದಲ್ಲಿ ಕಾರಣವಾಗಿದೆ.

ಈ ಮೇಲಿನ ಪರಿಣಾಮಗಳನ್ನು ಉಂಟು ಮಾಡಿದ ಶಸ್ತ್ರಾಸ್ತ್ರ ಸ್ಪರ್ಧೆಯು ಅಂತರ್‌ರಾಷ್ಟ್ರೀಯ ಭದ್ರತಾ ಕ್ಷೇತ್ರದಲ್ಲಿ ಋಣಾತ್ಮಕ ಪರಿಕಲ್ಪನೆಯಾಗಿ ಪರಿಗಣಿಸಲ್ಪಟ್ಟಿದೆ. ವಿಶೇಷವಾಗಿ ಶೀತಲ ಸಮರದ ಕಾಲದಲ್ಲಿ ತನ್ನ ಉತ್ತುಂಗ ಸ್ಥಿತಿಯನ್ನು ತಲುಪಿದ್ದ ಶಸ್ತ್ರಾಸ್ತ್ರ ಸ್ಪರ್ಧೆಯು ಕಾಲಾನುಕ್ರಮದಲ್ಲಿ ಶಸ್ತ್ರಾಸ್ತ್ರ ನಿಯಂತ್ರಣ ಹಾಗೂ ನಿಶಸ್ತ್ರೀಕರಣದ ಬಲವರ್ಧನೆಯಿಂದ ತನ್ನ ತೀವ್ರತೆಯನ್ನು ಕಳೆದುಕೊಂಡಿದೆ. ಗಮನಾರ್ಹ ಅಂಶವೇನೆಂದರೆ, ಇಂದಿಗೂ ರಾಷ್ಟ್ರಗಳ

ನಡುವೆ ಶಸ್ತ್ರಾಸ್ತ್ರ ಸ್ಪರ್ಧೆ ಅಸ್ತಿತ್ವದಲ್ಲಿದುದು. ಉದಾ: ಅಣ್ವಸ್ತ್ರ ಪರೀಕ್ಷೆಗೆ ವಿವಿಧ ರಾಷ್ಟ್ರಗಳು ಪ್ರಯುಕ್ತಿಸುವ ಮೂಲಕ ಶಸ್ತ್ರಾಸ್ತ್ರ ಸ್ಪರ್ಧೆಗೆ ಮುಂದಾಗುತಿದುದು.

## [II.] ಶಸ್ತ್ರ ನಿಯಂತ್ರಣ ಮತ್ತು ನಿಶ್ಯಸ್ತ್ರೀಕರಣ

## [Arms Control and Disornament]:

ರಾಷ್ಟ್ರಗಳ ನಡುವಿನ ಶಸ್ತ್ರಾಸ್ತ್ರ ಸ್ಪರ್ಧೆಯು ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿ ಶಸ್ತ್ರ ನಿಯಂತ್ರಣ ಮತ್ತು ನಿಶಸ್ತ್ರೀಕರಣ ಎಂಬ ಪರಿಕಲ್ಪನೆಯ ಉಗಮಕ್ಕೆ ಕಾರಣವಾಯಿತು. ಪರಸ್ಪರ ಪೂರಕವಾಗಿರುವ ಶಸ್ತ್ರ ನಿಯಂತ್ರಣ ಮತ್ತು ನಿಶಸ್ತ್ರೀಕರಣಗಳು ಸಮಾನಾರ್ಥಕವಾಗಿ ಬಳಸಲ್ಪಡುತ್ತಿರುವ ಪ್ರತ್ಯೇಕ ಪರಿಕಲ್ಪನೆಗಳಾಗಿವೆ. ತಮ್ಮ ಭದ್ರತೆಯ ಕಾರಣಕ್ಕೆ ರಾಷ್ಟ್ರಗಳು ಪಾಲಿಸುವ ಶಸ್ತ್ರಾಸ್ತ್ರ ಸ್ಪರ್ಧೆಗೆ ಪರಿಹಾರೋಪಾಯವಾಗಿ ಈ ಪರಿಕಲ್ಪನೆಗಳು ಅಸ್ತಿತ್ವದಲ್ಲಿವೆ. ಈ ಹಿನ್ನೆಲೆಯಲ್ಲಿ ಕೆಳಗೆ ಶಸ್ತ್ರ ನಿಯಂತ್ರಣ ಮತ್ತು ನಿಶ್ಯಸ್ತ್ರೀಕರಣಗಳ ಅರ್ಥ, ವ್ಯತ್ಯಾಸ ಹಾಗೂ ಸಂಬಂಧಗಳನ್ನು ವಿವರಿಸಲಾಗಿದ್ದು ಅವುಗಳ ಸ್ಪಷ್ಟ ತಿಳುವಳಿಕೆಗೆ ಸಹಕಾರಿಯಾಗುತ್ತದೆ. ಜೊತೆಗೆ ಅಂತರ್‌ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯ ಉದ್ದೇಶ ಹೊಂದಿರುವ ಅವುಗಳ ಸಾಧನೆಯ ಐತಿಹಾಸಿಕ ಪ್ರಯತ್ನಗಳ ವಿವರಣೆಯನ್ನು ನೀಡಲಾಗಿದೆ.

### [A.] ಶಸ್ತ್ರಾಸ್ತ್ರ ನಿಯಂತ್ರಣದ ಅರ್ಥ [Meaning of Arms Control]:

ಸರಳಾರ್ಥದಲ್ಲಿ ಯುದ್ಧಕ್ಕೆ ಕಾರಣವಾಗಬಲ್ಲ ರಾಷ್ಟ್ರಗಳ ನಡುವಿನ ಶಸ್ತ್ರಾಸ್ತ್ರ ಸ್ಪರ್ಧೆಯನ್ನು ನಿಯಂತ್ರಿಸುವುದೇ ಶಸ್ತ್ರ ನಿಯಂತ್ರಣ. ವಿಶಾಲಾರ್ಥದಲ್ಲಿ ಯುದ್ಧದ ಸಾಧ್ಯತೆ, ತೀವ್ರತೆ ಹಾಗೂ ಭಯಾನಕತೆಗಳನ್ನು ತಗ್ಗಿಸಲು ರಾಷ್ಟ್ರಗಳ ನಡುವಿನ ಶಸ್ತ್ರಾಸ್ತ್ರ ಸ್ಪರ್ಧೆಯನ್ನು ಮಿತಿಗೊಳಪಡಿಸುವ ಪ್ರಯತ್ನವೇ ಶಸ್ತ್ರ ನಿಯಂತ್ರಣ. ಶಸ್ತ್ರಾಸ್ತ್ರ ನಿಯಂತ್ರಣವು ರಾಷ್ಟ್ರಗಳ ನಡುವೆ ನಿರ್ದಿಷ್ಟ ಮಾದರಿಯ ಶಸ್ತ್ರಾಸ್ತ್ರಗಳ ಕಡಿತ ಅಥವಾ ಮಿತಿಗಳನ್ನು ಪ್ರತಿನಿಧಿಸುತ್ತದೆ. ಶಸ್ತ್ರಾಸ್ತ್ರ ಕಡಿತ ಮತ್ತು ಶಸ್ತ್ರಾಸ್ತ್ರಗಳ ಮೇಲಿನ ಮಿತಿಗಳು ಶಸ್ತ್ರ ನಿಯಂತ್ರಣದ ಎರಡು ಆಯಾಮಗಳಾಗಿದ್ದು ಈಗಾಗಲೇ ಹೊಂದಿರುವ ಶಸ್ತ್ರಗಳನ್ನು ಒಪ್ಪಿತ ಪ್ರಮಾಣದಲ್ಲಿ ನಾಶಗೊಳಿಸುವುದು ಶಸ್ತ್ರಾಸ್ತ್ರ ಕಡಿತವನ್ನು ಮತ್ತು ಭವಿಷ್ಯದಲ್ಲಿ ಶಸ್ತ್ರಗಳನ್ನು ಉತ್ಪಾದಿಸಲು ಮುಂದಾಗದಂತೆ ತಡೆಯುವುದನ್ನು ಶಸ್ತ್ರಾಸ್ತ್ರಗಳ ಮೇಲಿನ ಮಿತಿ ಎನ್ನಲಾಗುತ್ತದೆ. ಶಸ್ತ್ರಾಸ್ತ್ರ ಕಡಿತವು ರಾಷ್ಟ್ರಗಳ ಸಹಕಾರವನ್ನು ಆಧರಿಸಿದ್ದರೆ ಶಸ್ತ್ರಾಸ್ತ್ರಗಳ ಮೇಲಿನ ಮಿತಿಯು ಅಂತರ್‌ರಾಷ್ಟ್ರೀಯ ಒಪ್ಪಂದಗಳ ಫಲವಾಗಿರುತ್ತದೆ. ಒಟ್ಟಾರೆ ಶಸ್ತ್ರಾಸ್ತ್ರ ನಿಯಂತ್ರಣವು ನಿಶ್ಯಸ್ತ್ರೀಕರಣಕ್ಕೆ ಪೂರಕವಾದ ಮತ್ತು ಅದಕ್ಕೆ ಸಮಾನಾರ್ಥದಲ್ಲಿ ಪರಿಗಣಿಸಬಹುದಾದ ಪರಿಕಲ್ಪನೆಯಾಗಿದ್ದರೂ ತನ್ನದೇಯಾದ ಭಿನ್ನ ಅರ್ಥವನ್ನು ಶಸ್ತ್ರ ನಿಯಂತ್ರಣ ಹೊಂದಿದುದು ಸ್ಪಷ್ಟ.



### [B.] ನಿಶ್ಯಸ್ತ್ರೀಕರಣದ ಅರ್ಥ [Meaning of Disarmament]:

ಸರಳಾರ್ಥದಲ್ಲಿ ಯುದ್ಧಕ್ಕೆ ಕಾರಣವಾಗಬಲ್ಲ ವಿವಿಧ ಶಸ್ತ್ರಾಸ್ತ್ರಗಳ ಕಡಿತ ಅಥವಾ ತ್ಯಜಿಸುವಿಕೆಯನ್ನು ನಿಶಸ್ತ್ರೀಕರಣ ಎನ್ನಬಹುದಾಗಿದೆ. ವಿಶಾಲಾರ್ಥದಲ್ಲಿ ಜಾಗತಿಕವಾಗಿ ಎಲ್ಲ ಮಾದರಿಯ ಶಸ್ತ್ರಾಸ್ತ್ರಗಳನ್ನು ನಾಶಗೊಳಿಸುವ ಮತ್ತು ಸೈನಿಕ ಬಲವನ್ನು ವಿಸರ್ಜಿಸುವ ಪರಿಕಲ್ಪನೆಯೇ ನಿಶ್ಯಸ್ತ್ರೀಕರಣ. ರಾಷ್ಟ್ರಗಳ ನಡುವಿನ ಶಸ್ತ್ರಾಸ್ತ್ರ ಸ್ಪರ್ಧೆಗೆ ನಿಶಸ್ತ್ರೀಕರಣವು ಪರಿಹಾರವಾಗಿದ್ದು ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿ ಭಯಾನಕತೆಯನ್ನು ಹೋಗಲಾಡಿಸುವ ಗುರಿಯನ್ನು ಹೊಂದಿರುತ್ತದೆ. ಆಸಕ್ತಿದಾಯಕ ಅಂಶವೇನೆಂದರೆ, ನಿಶಸ್ತ್ರೀಕರಣವು ಶಸ್ತ್ರ ನಿಯಂತ್ರಣಕ್ಕಿಂತ ವಿಶಾಲ ವ್ಯಾಪ್ತಿಯುಳ್ಳ ಮತ್ತು ಸಂಕೀರ್ಣವಾಗಿರುವ ಪರಿಕಲ್ಪನೆಯಾಗಿದೆ. ಚಿಂತಕರು ನೀಡಿರುವ ಕೆಳಗಿನ ವ್ಯಾಖ್ಯಾನಗಳು ನಿಶಸ್ತ್ರೀಕರಣದ ಸ್ಪಷ್ಟ ಅರ್ಥವನ್ನು ಮನವರಿಕೆ ಮಾಡಿಕೊಳ್ಳಲು ನೆರವಾಗಿದ್ದು ಅವುಗಳಲ್ಲಿ ಪ್ರಧಾನವಾದವು ಕೆಳಕಂಡಂತಿವೆ.

**ಹಾನ್ಸ್ ಜೆ. ಮಾರ್ಗೆಂಥೊ ಪ್ರಕಾರ** 'ಶಸ್ತ್ರಾಸ್ತ್ರ ಸ್ಪರ್ಧೆಯನ್ನು ತಡೆಯುವ ಉದ್ದೇಶಕ್ಕಾಗಿ ರಾಷ್ಟ್ರಗಳು ನಿರ್ದಿಷ್ಟ ಅಥವಾ ಎಲ್ಲ ಶಸ್ತ್ರಗಳನ್ನು ಕಡಿತಗೊಳಿಸುವ ಅಥವಾ ತ್ಯಜಿಸುವ ಪ್ರಕ್ರಿಯೆಯೇ ನಿಶಸ್ತ್ರೀಕರಣ'

**ಸ್ಪೈಚರ್ ಪ್ರಕಾರ** 'ದೈಹಿಕ ಹಿಂಸೆಗೆ ಕಾರಣವಾಗಬಲ್ಲ ರಾಷ್ಟ್ರಗಳು ಹೊಂದಿರುವ ಭೌತಿಕ ಹಾಗೂ ಕೃತಕ ಸಾಧನಗಳ ಕಡಿತ ಅಥವಾ ತ್ಯಜಿಸುವಿಕೆಯೇ ನಿಶಸ್ತ್ರೀಕರಣ'

**ಎ. ಎ. ಡೈಕ್ ಪ್ರಕಾರ** 'ಶಸ್ತ್ರಾಸ್ತ್ರ ಶಕ್ತಿಯ ಮೇಲಿನ ಕಡಿತ ಅಥವಾ ಮಿತಿಗಾಗಿ ಜರುಗುವ ಪ್ರಯತ್ನಗಳೆಲ್ಲ ನಿಶಸ್ತ್ರೀಕರಣ'

ಗಮನಿಸಬೇಕಾದ ಅಂಶವೇನೆಂದರೆ, ನಿಶಸ್ತ್ರೀಕರಣವು ಸಾಮಾನ್ಯ ಹಾಗೂ ಸ್ಥಳೀಯ, ಗುಣಾತ್ಮಕ ಹಾಗೂ ಪರಿಮಾಣಾತ್ಮಕ, ಸಾಂಪ್ರದಾಯಿಕ ಹಾಗೂ ಅಣ್ವಸ್ತ್ರ, ಭಾಗಶಃ ಹಾಗೂ ಸಂಪೂರ್ಣ ಎಂಬ ಆಯಾಮ ಅಥವಾ ಪ್ರಕಾರಗಳಿಂದ ಕೂಡಿದೆ. ಜಗತ್ತಿನ ಎಲ್ಲ ರಾಷ್ಟ್ರಗಳು ಭಾಗವಹಿಸಿದ ನಿಶಸ್ತ್ರೀಕರಣವು ಸಾಮಾನ್ಯ, ಜಗತ್ತಿನ ನಿರ್ದಿಷ್ಟ ಪ್ರದೇಶದ ರಾಷ್ಟ್ರಗಳು ಭಾಗವಹಿಸಿದ ನಿಶಸ್ತ್ರೀಕರಣವು ಸ್ಥಳೀಯ, ಸಮೂಹ ವಿನಾಶಕ ವಿಶೇಷ ಶಸ್ತ್ರಗಳಿಗೆ ಸಂಬಂಧಿಸಿದ ನಿಶಸ್ತ್ರೀಕರಣವು ಗುಣಾತ್ಮಕ, ನಿರ್ದಿಷ್ಟ ಪ್ರಮಾಣವನ್ನು ಪ್ರತಿನಿಧಿಸುವ ನಿಶಸ್ತ್ರೀಕರಣವು ಪರಿಮಾಣಾತ್ಮಕ, ಸಾಂಪ್ರದಾಯಿಕ ಶಸ್ತ್ರಗಳಿಗೆ ಸಂಬಂಧಿಸಿದ ನಿಶಸ್ತ್ರೀಕರಣವು ಸಾಂಪ್ರದಾಯಿಕ, ಅಣ್ವಸ್ತ್ರಗಳಿಗೆ ಸಂಬಂಧಿಸಿದ ನಿಶ್ಯಸ್ತ್ರೀಕರಣವು ಅಣ್ವಸ್ತ್ರ, ಪರಸ್ಪರ ಒಪ್ಪಿತ ಪ್ರಮಾಣದ ನಿಶಸ್ತ್ರೀಕರಣವು ಭಾಗಶಃ ಮತ್ತು ಎಲ್ಲ ಮಾದರಿಯ ಶಸ್ತ್ರಾಸ್ತ್ರ ತ್ಯಾಗಕ್ಕೆ ಸಂಬಂಧಿಸಿದ ನಿಶಸ್ತ್ರೀಕರಣವು ಸಮಗ್ರ ನಿಶಸ್ತ್ರೀಕರಣವೆನಿಸಿಕೊಳ್ಳುತ್ತದೆ. ಬಹುತೇಕ ಚಿಂತಕರು ಎಲ್ಲ ಮಾದರಿಯ ಶಸ್ತ್ರಾಸ್ತ್ರಗಳನ್ನು ಎಲ್ಲ ರಾಷ್ಟ್ರಗಳು ನಿರ್ಮೂಲನಗೊಳಿಸಲು ಪರಸ್ಪರ ಸಹಕರಿಸುವ ಸಮಗ್ರ ನಿಶಸ್ತ್ರೀಕರಣವನ್ನೇ ನಿಶಸ್ತ್ರೀಕರಣವೆಂದು ಸಮ್ಮತಿಸುತ್ತಾರೆ.

ಆಸಕ್ತಿದಾಯಕ ಅಂಶವೇನೆಂದರೆ, ಪರಮಾಣು ನಿಶಸ್ತ್ರೀಕರಣವು ಅಣ್ವಸ್ತ್ರಗಳ ಕಡಿತ, ಅಣ್ವಸ್ತ್ರಗಳ ನಿರ್ಮೂಲನೆ ಅಥವಾ ಪರಮಾಣು ರಾಷ್ಟ್ರವಲ್ಲದ ದೇಶಗಳು ಅಣ್ವಸ್ತ್ರ ಹೊಂದುವುದನ್ನು ನಿಷೇಧಿಸುವುದಕ್ಕೆ ಸಂಬಂಧಿಸಿದೆ. ಎರಡನೇ ವಿಶ್ವ ಸಮರದ ಅಂತ್ಯದಲ್ಲಿ ಅಮೇರಿಕಾವು ಜಪಾನಿನ ಹಿರೋಶಿಮಾ ಮತ್ತು ನಾಗಾಸಾಕಿ ನಗರಗಳ ಮೇಲೆ ಪ್ರಯೋಗಿಸಿದ ಅಣ್ವಸ್ತ್ರಗಳ ಪರಿಣಾಮದಿಂದ ಹೆಚ್ಚೆತ್ತುಕೊಂಡ ಜಗತ್ತು ಅಣು ಅಥವಾ ಪರಮಾಣು ಶಸ್ತ್ರಾಸ್ತ್ರಗಳ ನಿಶ್ಶಸ್ತ್ರೀಕರಣಕ್ಕೆ ಮುಂದಾಯಿತು. ಪ್ರಸ್ತುತ ಜಗತ್ತಿನ ಒಂಬತ್ತು ರಾಷ್ಟ್ರಗಳು ಪರಮಾಣು ಅಸ್ತ್ರಗಳನ್ನು ಹೊಂದಿದ್ದು ಅವುಗಳಿಗೆ ಮಾತ್ರವಲ್ಲದೇ ಪರಮಾಣು ಅಸ್ತ್ರಗಳನ್ನು ಇತರ ರಾಷ್ಟ್ರಗಳು ಹೊಂದಬಾರದೆಂಬುದು ಈ ಪರಮಾಣು ನಿಶ್ಶಸ್ತ್ರೀಕರಣದ ಉದ್ದೇಶವಾಗಿದೆ.

## [C. ಶಸ್ತ್ರ ನಿಯಂತ್ರಣ ಹಾಗೂ ನಿಶಸ್ತ್ರೀಕರಣಗಳ ನಡುವಿನ ವ್ಯತ್ಯಾಸಗಳು ಮತ್ತು ಸಂಬಂಧ ] [Differences and Relation Between Arms Control and Disornament]:

ಶಸ್ತ್ರ ನಿಯಂತ್ರಣ ಹಾಗೂ ನಿಶಸ್ತ್ರೀಕರಣಗಳ ಗುರಿ ಅಂತರ್‌ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದಾಗಿದೆ. ಹೀಗಾಗಿ ಅವೆರಡೂ ಪರಿಕಲ್ಪನೆಗಳು ಸ್ವತಂತ್ರವಾಗಿದ್ದರೂ ಸಮಾನಾರ್ಥಕವಾಗಿ ಬಳಸಲಾಗುತ್ತದೆ. ಆದರೆ, ಶಸ್ತ್ರ ನಿಯಂತ್ರಣ ಹಾಗೂ ನಿಶಸ್ತ್ರೀಕರಣಗಳ ನಡುವೆ ಕೆಲ ವ್ಯತ್ಯಾಸಗಳಿದ್ದು ಪರಸ್ಪರ ಸಂಬಂಧವುಳ್ಳ ಪರಿಕಲ್ಪನೆಗಳಾಗಿವೆ. ಸಮಾನಾಂತರವಾಗಿ ಬಳಸಲ್ಪಡುವ ಇವೆರಡೂ ಪರಿಕಲ್ಪನೆಗಳ ನಡುವಿನ ಪ್ರಧಾನ ವ್ಯತ್ಯಾಸಗಳೆಂದರೆ

1. ನಿಶಸ್ತ್ರೀಕರಣವು ಈಗಾಗಲೇ ರಾಷ್ಟ್ರಗಳು ಹೊಂದಿರುವ ಶಸ್ತ್ರಾಸ್ತ್ರಗಳ ನಿರ್ಮೂಲನೆಗೆ ಸಂಬಂಧಿಸಿದೆ. ಆದರೆ, ಶಸ್ತ್ರ ನಿಯಂತ್ರಣವು ರಾಷ್ಟ್ರಗಳು ಪರಸ್ಪರ ಸಮ್ಮತಿಸಿ ಭವಿಷ್ಯದಲ್ಲಿ ಉತ್ಪಾದಿಸಲ್ಪಡುವ ಶಸ್ತ್ರಾಸ್ತ್ರಗಳಿಗೆ ಸಂಬಂಧಿಸಿದೆ.

2. ನಿಶಸ್ತ್ರೀಕರಣವು ರಾಷ್ಟ್ರಗಳ ಸೈನಿಕ ಪಡೆಗಳು, ಸೈನಿಕ ಸಾಧನಗಳು, ಸೈನಿಕ ವೆಚ್ಚ, ಸೈನಿಕ ನೆಲೆಗಳಿಗೆ ಸಂಬಂಧಿಸಿದ ಕಡಿತ, ಮಿತಿ, ನಾಶ ಅಥವಾ ನಿರ್ಮೂಲನೆಯನ್ನು ಒಳಗೊಂಡ ವಿಶಾಲ ಪರಿಕಲ್ಪನೆಯಾಗಿದೆ. ಆದರೆ, ಶಸ್ತ್ರ ನಿಯಂತ್ರಣವು ಶಸ್ತ್ರಾಸ್ತ್ರ ಕಡಿತ ಅಥವಾ ಶಸ್ತ್ರಾಸ್ತ್ರಗಳ ಮೇಲಿನ ಮಿತಿಯನ್ನು ಒಳಗೊಂಡ ರಾಷ್ಟ್ರಗಳ ನಡುವಿನ ಶಸ್ತ್ರಾಸ್ತ್ರ ನೀತಿಯನ್ನು ಪ್ರತಿನಿಧಿಸುವ ಸೀಮಿತ ಪರಿಕಲ್ಪನೆಯಾಗಿದೆ.

3. ನಿಶಸ್ತ್ರೀಕರಣವು ಯುದ್ಧ ಸಂಬಂಧಿತ ಶಸ್ತ್ರ ಮತ್ತು ಸೈನ್ಯವನ್ನು ಅಂತರ್‌ರಾಷ್ಟ್ರೀಯ ಒಪ್ಪಂದದಂತೆ ನಾಶಗೊಳಿಸುವ ಅಥವಾ ಮಿತಿಗೊಳಪಡಿಸುವ ವ್ಯವಸ್ಥೆಯಾಗಿದೆ. ಆದರೆ, ಶಸ್ತ್ರ ನಿಯಂತ್ರಣವು ಶಸ್ತ್ರಾಸ್ತ್ರಗಳ ಉಪಯೋಗವನ್ನು ನಿಯಂತ್ರಿಸುವ ಅಂತರ್‌ರಾಷ್ಟ್ರೀಯ ಒಪ್ಪಂದಗಳ ಫಲಶೃತಿಯಾಗಿದೆ.



ಈ ಮೇಲೆ ಪ್ರಸ್ತಾಪಿತ ಪ್ರಧಾನ ವ್ಯತ್ಯಾಸಗಳನ್ನು ಹೊಂದಿರುವ ಶಸ್ತ್ರ ನಿಯಂತ್ರಣ ಹಾಗೂ ನಿಶಸ್ತ್ರೀಕರಣಗಳ ಮಧ್ಯೆ ಸೂಕ್ಷ್ಮ ಭಿನ್ನತೆಯಿರುವುದು ಸ್ಪಷ್ಟವಾಗುತ್ತದೆ. ಇದರೊಡನೆ ಇವೆರಡೂ ಪರಿಕಲ್ಪನೆಗಳ ನಡುವೆ ಅಂತರ್‌ಸಂಬಂಧವನ್ನೂ ನಾವು ಗುರುತಿಸಬಹುದಾಗಿದೆ. ಶಸ್ತ್ರ ನಿಯಂತ್ರಣವಿಲ್ಲದ ನಿಶ್ಶಸ್ತ್ರೀಕರಣವು ತನ್ನ ಗುರಿಯನ್ನು ತಲುಪಲಾರದು. ಭವಿಷ್ಯದ ಶಸ್ತ್ರ ಉತ್ಪಾದನೆಯನ್ನು ಮಿತಿಗೊಳಪಡಿಸುವ ಶಸ್ತ್ರ ನಿಯಂತ್ರಣವು ನಿಶ್ಶಸ್ತ್ರೀಕರಣದ ನಿರಂತರತೆಗೆ ನೆರವಾಗುತ್ತದೆ. ಅಂತೆಯೇ ನಿಶ್ಶಸ್ತ್ರೀಕರಣವಿಲ್ಲದ ಶಸ್ತ್ರ ನಿಯಂತ್ರಣ ಪರಿಪೂರ್ಣವೆನಿಸಲಾರದು. ಅಸ್ತಿತ್ವದಲ್ಲಿರುವ ಶಸ್ತ್ರಗಳ ನಾಶದಿಂದ ಮಾತ್ರ ಭವಿಷ್ಯದ ಶಸ್ತ್ರ ಉತ್ಪಾದನೆಗೆ ರಾಷ್ಟ್ರಗಳು ಮುಂದಾಗಬಲ್ಲವು. ಹೀಗೆ ಶಸ್ತ್ರ ನಿಯಂತ್ರಣ ಹಾಗೂ ನಿಶಸ್ತ್ರೀಕರಣಗಳು ಪರಸ್ಪರ ಸಹಕರಿಸಿದರೆ ಮಾತ್ರ ಯುದ್ಧದ ಮೂಲವಾಗಿರುವ ಶಸ್ತ್ರಾಸ್ತ್ರಗಳ ನಾಮಾವಶೇಷದೊಡನೆ ಅಂತರ್‌ರಾಷ್ಟ್ರೀಯ ವ್ಯವಸ್ಥೆಯನ್ನು ಅಭದ್ರತೆಯಿಂದ ಸಂರಕ್ಷಿಸಬಹುದಾಗಿದೆ.

## [D.] ಪರಮಾಣು ನಿಶ್ಶಸ್ತ್ರೀಕರಣ ಪ್ರಯತ್ನಗಳ ಇತಿಹಾಸ

## [History of Efferts Towards Nuclear Disarmament]:

ಕಳೆದ ಶತಮಾನದಲ್ಲಿ ಘಟಿಸಿದ ಎರಡು ವಿಶ್ವ ಸಮರಗಳು ಶಸ್ತ್ರಾಸ್ತ್ರಗಳ ಕೆಟ್ಟ ಪರಿಣಾಮಗಳನ್ನು ಬಿಚ್ಚಿಟ್ಟವು. ಆಗ ಮನುಕುಲದ ಉಳಿವಿಗೆ ಶಸ್ತ್ರ ನಿಯಂತ್ರಣ ಅಥವಾ ನಿಶಸ್ತ್ರೀಕರಣ ಅನಿವಾರ್ಯ ಎಂಬಂಶವನ್ನು ಜಗತ್ತಿನ ಎಲ್ಲ ರಾಷ್ಟ್ರಗಳು ಮನಗಂಡವು. ಈ ನಡುವೆ ಎರಡನೇ ವಿಶ್ವ ಸಮರದ ಬಳಿಕ ಜಾಗತಿಕ ಶಾಂತಿ ಮತ್ತು ಭದ್ರತೆಯನ್ನು ಕಾಪಾಡಲು ಅಸ್ತಿತ್ವಕ್ಕೆ ಬಂದ ವಿಶ್ವ ಸಂಸ್ಥೆಯು ಪರಮಾಣು ನಿಶಸ್ತ್ರೀಕರಣದ ಅಗತ್ಯವನ್ನು ಪ್ರತಿಪಾದಿಸಿ ಅದರ ಸಾಧನೆಗೆ ತನ್ನ ಪ್ರಣಾಳಿಕೆಯಲ್ಲಿ ಹಲವು ನಿಯಮಾವಳಿಗಳನ್ನು ರಚಿಸಲು ಮುಂದಾಯಿತು. ವಿಶ್ವ ಸಂಸ್ಥೆಯ ಪ್ರಣಾಳಿಕೆಯ 11, 25 ಹಾಗೂ 47 ನೇ ಸೆಕ್ಷನ್‌ಗಳು ಶಸ್ತ್ರ ನಿಯಂತ್ರಣ ಹಾಗೂ ನಿಶಸ್ತ್ರೀಕರಣಕ್ಕೆ ಪೂರಕವಾದ ಅಂಶಗಳನ್ನು ಮೈಗೂಡಿಸಿಕೊಂಡಿದ್ದವು. ಇದರೊಡನೆ ಸ್ವಯಂ ಪ್ರೇರಿತವಾಗಿ ಜಗತ್ತಿನ ಶಕ್ತಿಶಾಲಿ ರಾಷ್ಟ್ರಗಳು ಪರಮಾಣು ಶಸ್ತ್ರಾಸ್ತ್ರ ಸ್ಪರ್ಧೆಯ ಬದಲು ಪರಮಾಣು ನಿಶಸ್ತ್ರೀಕರಣಕ್ಕೆ ಶ್ರಮಿಸಲು ಮುಂದಾದವು. ಹೀಗಾಗಿ ಎರಡನೇ ಮಹಾ ಯುದ್ಧೋತ್ತರ ಕಾಲದಲ್ಲಿ ಹಲವು ನಿಶಸ್ತ್ರೀಕರಣದ ಪ್ರಯತ್ನಗಳು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಕಂಡು ಬರುವಂತಾಯಿತು. ಅಣ್ವಸ್ತ್ರ ನಿಶಸ್ತ್ರೀಕರಣ ಕುರಿತಾದ ಪ್ರಯತ್ನಗಳಲ್ಲಿ ಪ್ರಧಾನವಾದ ಬೆಳವಣಿಗೆಗಳನ್ನು ಈ ಕೆಳಗೆ ಸಂಕ್ಷೇಪ್ತವಾಗಿ ವಿವರಿಸಲಾಗಿದೆ.

**1. ನಾಲ್ಕು ಶಕ್ತಿಗಳ ಘೋಷಣೆ:** ಅಕ್ಟೋಬರ್ 3, 1945 ರಂದು ವಿಶ್ವದ ಪ್ರಬಲ ರಾಷ್ಟ್ರಗಳಾಗಿದ್ದ ಬ್ರಿಟನ್, ಅಮೇರಿಕಾ, ಸೋವಿಯತ್ ಒಕ್ಕೂಟ ಹಾಗೂ ಚೀನಾಗಳು ಸಾಮಾನ್ಯ ಭದ್ರತೆಯ ಘೋಷಣೆಯೊಂದಕ್ಕೆ ಸಹಿ ಹಾಕಿದ್ದವು. ಎರಡನೇ ವಿಶ್ವ ಯುದ್ಧೋತ್ತರ ಸಮಯದಲ್ಲಿ ಶಸ್ತ್ರಾಸ್ತ್ರ ನಿಯಂತ್ರಣಕ್ಕೆ ಪರಸ್ಪರ ಪ್ರಾಯೋಗಿಕ ಒಪ್ಪಂದಕ್ಕೆ ಒಳಪಡುವುದು ಈ ಘೋಷಣೆಯ ತಿರುಳಾಗಿತ್ತು.

**2. ಅಣು ಶಕ್ತಿ ಆಯೋಗದ ಸ್ಥಾಪನೆ:** ಜನವರಿ 26, 1946 ರಂದು ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯು ಅಪಾಯಕಾರಿ ಅಣ್ವಸ್ತ್ರಗಳ ನಿಯಂತ್ರಣಕ್ಕಾಗಿ ಅಣು ಶಕ್ತಿ ಆಯೋಗವನ್ನು ರಚಿಸಿತು. ಕೆನಡಾ ಸೇರಿದಂತೆ ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯ ಶಾಶ್ವತ ಸದಸ್ಯ ರಾಷ್ಟ್ರಗಳು ಈ ಆಯೋಗದ ಸದಸ್ಯ ರಾಷ್ಟ್ರಗಳೆನಿಸಿದ್ದವು. ಜಗತ್ತಿನ ರಾಷ್ಟ್ರಗಳ ನಡುವೆ ಶಾಂತಿಯ ಉದ್ದೇಶವುಳ್ಳ ವೈಜ್ಞಾನಿಕ ಮಾಹಿತಿಯ ವಿನಿಮಯವನ್ನು ಪ್ರೋತ್ಸಾಹಿಸುವುದು ಮತ್ತು ಅಣ್ವಸ್ತ್ರ ಸೇರಿದಂತೆ ಇತರ ಸಮೂಹ ನಾಶಕ ಶಸ್ತ್ರಗಳನ್ನು ನಿಯಂತ್ರಿಸುವುದು ಅಣು ಆಯೋಗದ ಜವಾಬ್ದಾರಿಯಾಗಿತ್ತು. ಇದರೊಡನೆ ರಾಷ್ಟ್ರಗಳ ನಡುವೆ ಉಂಟಾಗಬಹುದಾದ ಅಣು ಶಕ್ತಿ ಸಂಬಂಧಿತ ಸಮಸ್ಯೆಗಳನ್ನು ಪರಿಶೀಲಿಸಿ ಸೂಕ್ತವಾದ ಸಲಹೆಗಳನ್ನು ನೀಡುವುದು ಈ ಆಯೋಗದ ಕಾರ್ಯವಾಗಿತ್ತು. ಅಣು ಶಕ್ತಿ ಆಯೋಗವು ಭದ್ರತಾ ಮಂಡಳಿಯ ಅಧೀನದಲ್ಲಿ ಕಾರ್ಯಾಚರಿಸಬೇಕಾದ್ದರಿಂದ ಶೀತಲ ಸಮರದ ಪರಿಣಾಮ ಸಮರ್ಥವಾಗಿ ಅಣು ಶಕ್ತಿಯನ್ನು ಕುರಿತಂತೆ ಕಾರ್ಯಾಚರಿಸಲು ಸಾಧ್ಯವಾಗಲಿಲ್ಲ.

**3. ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳ ಆಯೋಗ:** ಡಿಸೆಂಬರ್ 1946 ರ ಸಾಮಾನ್ಯ ಸಭೆಯ ನಿರ್ಣಯದಂತೆ 1947 ರಲ್ಲಿ ಭದ್ರತಾ ಮಂಡಳಿಯು ಸಾಂಪ್ರದಾಯಿಕ ಶಸ್ತ್ರಾಸ್ತ್ರ ಆಯೋಗವನ್ನು ಸ್ಥಾಪಿಸಿತು. ವಿವಿಧ ಶಸ್ತ್ರಾಸ್ತ್ರ ನಿಯಂತ್ರಣ ಮತ್ತು ಸೈನಿಕ ಶಕ್ತಿಯ ಕಡಿತವನ್ನು ಕುರಿತಂತೆ ಮೂರು ತಿಂಗಳೊಳಗೆ ವರದಿಯೊಂದನ್ನು ಸಿದ್ಧಪಡಿಸಿ ಭದ್ರತಾ ಮಂಡಳಿಗೆ ಈ ಆಯೋಗವು ಸಲ್ಲಿಸಬೇಕಿತ್ತು. ಆಗಸ್ಟ 12, 1948 ರಂದು ನಿರ್ಣಯವೊಂದನ್ನು ಕೈಗೊಂಡ ಸಾಂಪ್ರದಾಯಿಕ ಶಸ್ತ್ರಾಸ್ತ್ರ ಆಯೋಗವು ಕೆಳಗಿನ ಶಿಫಾರಸ್ಸುಗಳನ್ನು ಪ್ರತಿಪಾದಿಸಿತು.

ಅ. ರಾಷ್ಟ್ರಗಳು ಹೊಂದಿರುವ ಶಸ್ತ್ರಾಸ್ತ್ರಗಳ ಕಡಿತ ಅಥವಾ ನಿಯಂತ್ರಣ ವ್ಯವಸ್ಥೆ ಜಾರಿಗೊಳಿಸುವುದು.

ಆ. ಅಣ್ವಸ್ತ್ರ ನಿಯಂತ್ರಣಕ್ಕೆ ಅಂತರ್‌ರಾಷ್ಟ್ರೀಯ ವ್ಯವಸ್ಥೆಯೊಂದನ್ನು ಅಸ್ತಿತ್ವಕ್ಕೆ ತರುವುದು.

ಇ. ಜಪಾನ್ ಮತ್ತು ಜರ್ಮನಿಯೊಡನೆ ಶಾಂತಿಯುತ ಇತ್ಯರ್ಥಕ್ಕೆ ಮುಂದಾಗುವುದು.

ಈ. ಆರ್ಥಿಕ ಹಾಗೂ ಮಾನವ ಸಂಪನ್ಮೂಲಗಳಿಗೆ ಧಕ್ಕೆಯಾಗದಂತೆ ಅಂತರ್‌ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗೆ ಪೂರಕವಾದಷ್ಟು ಶಸ್ತ್ರಾಸ್ತ್ರ ಹೊಂದಲು ಮಾತ್ರ ಆಸ್ಪದ ಕಲ್ಪಿಸುವುದು.

ಉ. ಶಸ್ತ್ರಾಸ್ತ್ರ ನಿಯಂತ್ರಣದ ಉಲ್ಲಂಘನೆಗೆ ಸೂಕ್ತವಾದ ಕ್ರಮಗಳನ್ನು ಅನುಷ್ಠಾನಗೊಳಿಸುವುದು.

ಸಾಂಪ್ರದಾಯಿಕ ಶಸ್ತ್ರಾಸ್ತ್ರ ಆಯೋಗದ ಮೇಲಿನ ಶಿಫಾರಸ್ಸುಗಳು ಸಾಮಾನ್ಯ ಸಭೆಯಲ್ಲಿ ಮಂಡನೆಗೊಂಡಾಗ ಸೋವಿಯತ್ ಒಕ್ಕೂಟ ಅದರ ಸಲಹೆಗಳನ್ನು ತಿರಸ್ಕರಿಸಿ ಭದ್ರತಾ ಮಂಡಳಿಯ ಎಲ್ಲ ಸದಸ್ಯ ರಾಷ್ಟ್ರಗಳು ತಮ್ಮ ಮೂರನೇ ಒಂದು ಸೈನ್ಯ ಶಕ್ತಿಯನ್ನು ಕಡಿತಗೊಳಿಸಬೇಕೆಂಬ ಪ್ರಸ್ತಾಪವನ್ನು ಮುಂದಿಟ್ಟಿತು. ಈ ಪ್ರಸ್ತಾಪವನ್ನು ಪಾಶ್ಚಿಮಾತ್ಯ



ರಾಷ್ಟ್ರಗಳು ಒಪ್ಪದಿದ್ದಾಗ ಚೀನಾದ ಮಾನ್ಯತೆಯನ್ನು ಮುಂದಿಟ್ಟು ಸೋವಿಯತ್ ರಷ್ಯಾವು ಸಾಂಪ್ರದಾಯಿಕ ಶಸ್ತ್ರಾಸ್ತ್ರ ಆಯೋಗ ಮತ್ತು ಅಣು ಶಕ್ತಿ ಆಯೋಗದಿಂದ ಹೊರ ನಡೆಯಿತು.

[**4. ನಿಶ್ಶಸ್ತ್ರೀಕರಣ ಆಯೋಗ:** ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯು 12 ಸದಸ್ಯರ ಸಮಿತಿಯೊಂದನ್ನು ರಚಿಸಿ ನಿಶಸ್ತ್ರೀಕರಣದ ಮಾರ್ಗೋಪಾಯಗಳನ್ನು ಕುರಿತು ವರದಿ ನೀಡಲು ಸೂಚಿಸಿತ್ತು. ಈ ಸಮಿತಿಯು ಅಣು ಶಕ್ತಿ ಆಯೋಗ ಮತ್ತು ಸಾಂಪ್ರದಾಯಿಕ ಶಸ್ತ್ರಾಸ್ತ್ರ ಆಯೋಗಗಳನ್ನು ವಿಲೀನಗೊಳಿಸಿ ನೂತನ ಆಯೋಗವನ್ನು ರೂಪಿಸಲು ಸಲಹೆ ನೀಡಿತು. ಫಲವಾಗಿ ಜನವರಿ 1952 ರಲ್ಲಿ ನಿಶಸ್ತ್ರೀಕರಣ ಆಯೋಗ ಅಸ್ತಿತ್ವಕ್ಕೆ ಬಂದಿತು. ಈ ಆಯೋಗವು ಆರಂಭದಲ್ಲಿ ಭದ್ರತಾ ಮಂಡಳಿಯ ಶಾಶ್ವತ ಸದಸ್ಯರು ಹಾಗೂ ಕೆನಡಾವನ್ನು ಒಳಗೊಂಡಿತ್ತು. ಮುಂದೆ ಇದರ ಸದಸ್ಯರನ್ನು 14 ಕ್ಕೆ ಹೆಚ್ಚಿಸಲಾಯಿತಲ್ಲದೇ 1958 ರಲ್ಲಿ ವಿಶ್ವ ಸಂಸ್ಥೆಯ ಸರ್ವ ಸದಸ್ಯರನ್ನು ನಿಶ್ಶಸ್ತ್ರೀಕರಣ ಆಯೋಗದ ಸದಸ್ಯರನ್ನಾಗಿ ಪರಿಗಣಿಸಲಾಯಿತು. ಈ ಆಯೋಗದ ಬಲವರ್ಧನೆಯ ಉದ್ದೇಶ ಸಾಂಪ್ರದಾಯಿಕ ಶಸ್ತ್ರಾಸ್ತ್ರ ಹಾಗೂ ಅಣ್ವಸ್ತ್ರ ಕುರಿತಂತೆ ಜಗತ್ತಿನ ರಾಷ್ಟ್ರಗಳ ನಡುವೆ ಸಾಮಾನ್ಯ ಒಪ್ಪಂದವನ್ನು ಏರ್ಪಡಿಸುವುದಾಗಿತ್ತು. ಆದರೆ, ಸೋವಿಯತ್ ಒಕ್ಕೂಟ ಮತ್ತು ಅಮೇರಿಕಾ ಬಣಗಳ ನಡುವಿನ ಭಿನ್ನಾಭಿಪ್ರಾಯಗಳಿಂದ ತೃಪ್ತಿಕರ ಸಾಧನೆಯನ್ನು ನಿಶಸ್ತ್ರೀಕರಣ ಆಯೋಗ ಸಾಧಿಸಲಾಗಲಿಲ್ಲ.

**5. ಭಾಗಶಃ ಅಣ್ವಸ್ತ್ರ ಪರೀಕ್ಷಾ ನಿಷೇಧ ಒಪ್ಪಂದ:** ಸೋವಿಯತ್ ಒಕ್ಕೂಟ, ಅಮೇರಿಕಾ ಹಾಗೂ ಬ್ರಿಟನ್ 1958 ರಲ್ಲಿ ಅಣ್ವಸ್ತ್ರ ಪರಿಣಿತರ ಗುಂಪೊಂದನ್ನು ರಚಿಸಲು ಸಮ್ಮತಿಸಿ ನಾಲ್ಕು ವರ್ಷಗಳ ಸಮಾಲೋಚನೆಯ ನಂತರ ಒಪ್ಪಂದವೊಂದಕ್ಕೆ ಬಂದವು. ಈ ಒಪ್ಪಂದವೇ ಭಾಗಶಃ ಅಣ್ವಸ್ತ್ರ ಪರೀಕ್ಷಾ ನಿಷೇಧ ಒಪ್ಪಂದವಾಗಿದ್ದು ಮಾಸ್ಕೊ ಪರೀಕ್ಷಾ ನಿಷೇಧ ಒಪ್ಪಂದವೆಂದೂ ಚಿರಪರಿಚಿತವಾಗಿದೆ. ಈ ಒಪ್ಪಂದದಂತೆ ಸಹಿ ಹಾಕಿದ ರಾಷ್ಟ್ರಗಳು ಭೂಮಿಯ ಮೇಲೆ, ಆಕಾಶದಲ್ಲಿ ಹಾಗೂ ಸಮುದ್ರಗಳಲ್ಲಿ ಅಣು ಪರೀಕ್ಷೆ ನಡೆಸುವುದನ್ನು ನಿಷೇಧಿಸಲಾಯಿತು. ಜೊತೆಗೆ ಸಹಿ ಹಾಕಿದ ರಾಷ್ಟ್ರಗಳು ಸಹಿ ಹಾಕದ ರಾಷ್ಟ್ರಗಳಿಗೆ ಪರೋಕ್ಷವಾಗಿ ಅಥವಾ ಪ್ರತ್ಯಕ್ಷವಾಗಿ ಅಣ್ವಸ್ತ್ರ ಪರೀಕ್ಷೆ ನಡೆಸಲು ಸಹಕರಿಸದಂತೆ ಮಿತಿ ಹೇರಿತು. ಗಮನಾರ್ಹ ಅಂಶವೇನೆಂದರೆ, ಈ ಒಪ್ಪಂದವು ಭೂ ಗರ್ಭದಲ್ಲಿ ಅಣ್ವಸ್ತ್ರ ಪರೀಕ್ಷೆಯನ್ನು ಕುರಿತಂತೆ ಮೌನವಾಗಿದ್ದುದು. ಅನೇಕ ದೇಶಗಳು ಈ ಒಪ್ಪಂದಕ್ಕೆ ಸಹಿ ಹಾಕಿದವಾದರೂ ಚೀನಾ ಮತ್ತು ಫ್ರಾನ್ಸ್ ಸಹಿ ಹಾಕಲು ಹಿಂದೇಟು ಹಾಕಿದವು. ಜೊತೆಗೆ 1964 ರಲ್ಲಿ ಚೀನಾ ಮತ್ತು 1966 ರಲ್ಲಿ ಫ್ರಾನ್ಸ್ ಅಣ್ವಸ್ತ್ರ ಪರೀಕ್ಷೆ ನಡೆಸಿದವು. ಹೀಗಾಗಿ ಭಾಗಶಃ ಅಣ್ವಸ್ತ್ರ ಪರೀಕ್ಷಾ ನಿಷೇಧ ಒಪ್ಪಂದವು ಪರಿಪೂರ್ಣ ನಿಶಸ್ತ್ರೀಕರಣ ಸಾಧನೆಯಲ್ಲಿ ವಿಫಲಗೊಂಡಿತು.

**6. ಬಾಹ್ಯಾಕಾಶ ಒಪ್ಪಂದ:** ಪರಮಾಣು ಶಸ್ತ್ರಾಸ್ತ್ರ ಸ್ಪರ್ಧೆಯ ಫಲವಾಗಿ ಮನುಕುಲದ ಉಳಿವಿಗೆ ಪೂರಕವಾದ ಬಾಹ್ಯಾಕಾಶ ನಾಶದ ಭೀತಿ ಎದುರಾಯಿತು. ಫಲವಾಗಿ 1966 ರಲ್ಲಿ

ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯು ನಿರ್ಣಯವೊಂದನ್ನು ಅಂಗೀಕರಿಸಿ ಕೆಳಗಿನ ಗೊತ್ತುವಳಿಯನ್ನು ಸ್ವೀಕರಿಸಿತು.

ಅ. ಬಾಹ್ಯಾಕಾಶದ ಬಳಕೆಯು ಕೇವಲ ಮನುಕುಲದ ಸುಧಾರಣೆಗೆ ಮಾತ್ರ ಸೀಮಿತಗೊಳ್ಳಬೇಕು.

ಆ. ರಾಷ್ಟ್ರಗಳ ವೈಜ್ಞಾನಿಕ ಹಾಗೂ ಆರ್ಥಿಕ ಸ್ಥಿತಿಯನ್ನಾಧರಿಸದೇ ಬಾಹ್ಯಾಕಾಶದ ಪ್ರಯೋಜನಗಳ ಬಳಕೆಗೆ ಎಲ್ಲ ರಾಷ್ಟ್ರಗಳಿಗೂ ಸಮಾನವಕಾಶವಿರಬೇಕು.

ಇ. ಬಾಹ್ಯಾಕಾಶಕ್ಕೆ ಸಂಬಂಧಿಸಿದ ರಾಷ್ಟ್ರಗಳ ಚಟುವಟಿಕೆಗಳನ್ನು ವಿಶ್ವ ಸಂಸ್ಥೆಯು ಸಂಯೋಜಿಸಬೇಕು.

ಈ. ಬಾಹ್ಯಾಕಾಶಕ್ಕೆ ಸಂಬಂಧಿಸಿದಂತೆ ಅಂತರ್‌ರಾಷ್ಟ್ರೀಯ ಸಹಕಾರವನ್ನು ಬಲಗೊಳಿಸಿ ರಾಷ್ಟ್ರಗಳು ಮತ್ತು ಜನರ ಸಂಬಂಧಗಳನ್ನು ಉತ್ತಮಗೊಳಿಸಬೇಕು.

ಮೇಲೆ ಪ್ರಸ್ತಾಪಿಸಲಾದ ಸಾಮಾನ್ಯ ಸಭೆಯ ಆಶಯದಂತೆ ಕರಡು ಒಪ್ಪಂದ ರಚನೆಗೊಂಡಿತು. ಸೋವಿಯತ್ ಒಕ್ಕೂಟ ಮತ್ತು ಅಮೇರಿಕಾಗಳು ಬಾಹ್ಯಾಕಾಶಕ್ಕೆ ಸಂಬಂಧಿಸಿದ ದ್ವಿಪಕ್ಷೀಯ ಒಪ್ಪಂದಕ್ಕೆ ಮುಂದಾದವು. ಬಾಹ್ಯಾಕಾಶದಲ್ಲಿ ಅಣ್ವಸ್ತ್ರ ಪರೀಕ್ಷೆ ನಡೆಸದಿರಲು ಮತ್ತು ಬಾಹ್ಯಾಕಾಶದ ಬಳಕೆಗೆ ಉಳಿದ ರಾಷ್ಟ್ರಗಳ ಹಕ್ಕನ್ನು ಗೌರವಿಸಲು ಈ ಒಪ್ಪಂದದನ್ವಯ ನಿರ್ಧರಿಸಿದವು.

**7. ಪರಮಾಣು ಪರೀಕ್ಷಾ ನಿಷೇಧ ಒಪ್ಪಂದ:** 1965 ರಲ್ಲಿ ಜಗತ್ತಿನ ಶಕ್ತಿಶಾಲಿ ರಾಷ್ಟ್ರಗಳು ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಅಣ್ವಸ್ತ್ರ ಹರಡುವಿಕೆಯನ್ನು ನಿಯಂತ್ರಿಸಲು ಕರಡು ಒಪ್ಪಂದವನ್ನು ಮಂಡಿಸಿದವು. ಮೂರು ವರ್ಷಗಳ ನಿರಂತರ ಚರ್ಚೆಯ ಬಳಿಕ ಜೂನ್ 1968 ರಲ್ಲಿ ಸಾಮಾನ್ಯ ಸಭೆಯಲ್ಲಿ ಈ ಒಪ್ಪಂದವು ಮತದಾನಕ್ಕೊಳಪಟ್ಟು ಅಂಗೀಕಾರಗೊಂಡಿತು. ಮುಂದೆ ಜುಲೈ 1, 1968 ರಂದು ಬ್ರಿಟನ್‌ನ ಲಂಡನ್, ಸೋವಿಯತ್ ಒಕ್ಕೂಟದ ಮಾಸ್ಕೊ ಮತ್ತು ಅಮೇರಿಕಾದ ವಾಶಿಂಗ್ಟನ್‌ನಲ್ಲಿ ಏಕ ಕಾಲದಲ್ಲಿ ಅಂಕಿತ ಪಡೆದುಕೊಂಡು ಮಾರ್ಚ್ 5, 1970 ರಂದು ಔಪಚಾರಿಕವಾಗಿ ಜಾರಿಗೊಂಡಿತು. ಅಣ್ವಸ್ತ್ರ ಪರೀಕ್ಷಾ ನಿಷೇಧ ಒಪ್ಪಂದದ ಪ್ರಧಾನ ಅಂಶಗಳೆಂದರೆ

ಅ. ಅಣ್ವಸ್ತ್ರ ಹೊಂದಿದ ರಾಷ್ಟ್ರಗಳು ಅಣ್ವಸ್ತ್ರ ಜ್ಞಾನವನ್ನು ಅಣ್ವಸ್ತ್ರ ಹೊಂದದ ದೇಶಗಳಿಗೆ ನೀಡದಂತೆ ತಡೆಯುವುದು ಮತ್ತು ಅಣ್ವಸ್ತ್ರಗಳನ್ನು ಇತರ ರಾಷ್ಟ್ರಗಳಿಗೆ ವರ್ಗಾಯಿಸುವುದನ್ನು ನಿಯಂತ್ರಿಸುವುದು.

ಆ. ಸಹಿ ಹಾಕಿದ ಅಣ್ವಸ್ತ್ರ ಹೊಂದಿರದ ದೇಶಗಳಿಗೆ ಅಣ್ವಸ್ತ್ರ ಹೊಂದಿರುವ ರಾಷ್ಟ್ರಗಳು ಶಾಂತಿಯುತ ಉದ್ದೇಶಕ್ಕಾಗಿ ಬಳಸಿಕೊಳ್ಳಲು ಅಣ್ವಸ್ತ್ರ ಜ್ಞಾನವನ್ನು ಹಂಚಿಕೊಳ್ಳುವುದು.



ಇ. ಅಣ್ವಸ್ತ್ರ ಹೊಂದಿದ ರಾಷ್ಟ್ರಗಳು ಅದನ್ನು ಹೊಂದದ ರಾಷ್ಟ್ರಗಳ ಮೇಲಿನ ಅಣ್ವಸ್ತ್ರ ದಾಳಿಯ ವೇಳೆಯಲ್ಲಿ ಸಹಕರಿಸುವುದು.

ಈ. ಅಣ್ವಸ್ತ್ರ ಹೊಂದಿರದ ರಾಷ್ಟ್ರಗಳು ತಮ್ಮ ಅಣು ಶಕ್ತಿಯ ಚಟುವಟಿಕೆಗಳ ವಿಚಾರಣೆಗೆ ಸಮ್ಮತಿ ಸೂಚಿಸುವುದು.

ಮೇಲಿನ ನಿಬಂಧನೆಗಳಿಂದ ಕೂಡಿದ್ದ ಅಣ್ವಸ್ತ್ರ ಪರೀಕ್ಷಾ ನಿಷೇಧ ಒಪ್ಪಂದಕ್ಕೆ ಸೋವಿಯತ್ ಒಕ್ಕೂಟ, ಅಮೇರಿಕಾ ಹಾಗೂ ಬ್ರಿಟನ್ ಸಹಿ ಹಾಕಿದಾಗ ಅನೇಕ ಅಣ್ವಸ್ತ್ರ ಹೊಂದಿರದ ರಾಷ್ಟ್ರಗಳು ಸಹಿ ಹಾಕಲು ಮುಂದಾದವು. ಆದರೆ, ಈ ಒಪ್ಪಂದಕ್ಕೆ ಭಾರತ ಸೇರಿದಂತೆ ಚೀನಾ, ಫ್ರಾನ್ಸ್, ಅರ್ಜಂಟೈನಾ, ಪಾಕಿಸ್ತಾನಗಳು ಅಸಮ್ಮತಿ ತೋರಿ ಸಹಿ ಹಾಕಲು ನಿರಾಕರಿಸಿದವು. ಈ ಒಪ್ಪಂದವು ಅಣ್ವಸ್ತ್ರ ಹೊಂದಿದ ಮತ್ತು ಹೊಂದಿರದ ರಾಷ್ಟ್ರಗಳ ನಡುವೆ ತಾರತಮ್ಯದಿಂದ ಕೂಡಿದ್ದುದು, ಅಣ್ವಸ್ತ್ರ ಹೊಂದಿದ ರಾಷ್ಟ್ರಗಳ ಹಿತಾಸಕ್ತಿಗೆ ಪೂರಕವಾದುದು, ಶಾಂತಿಯುತ ಉದ್ದೇಶದ ಅಣು ಪರೀಕ್ಷೆಗಳನ್ನು ಮಿತಿಗೊಳಪಡಿಸಿದುದು ಭಾರತಕ್ಕೆ ಸರಿ ತೋರದಿದ್ದರಿಂದ ಅದು ಒಪ್ಪಂದದಿಂದ ದೂರ ಉಳಿಯಿತು. ಭಾರತ ಸಹಿ ಹಾಕದಿದ್ದರಿಂದ ಪಾಕಿಸ್ತಾನ ಸಹಿ ಹಾಕಲು ಹಿಂದೇಟು ಹಾಕಿತು. ಅಂತೆಯೇ ಚೀನಾ ಮತ್ತು ಫ್ರಾನ್ಸ್‌ಗಳು ಅಣ್ವಸ್ತ್ರ ತಯಾರಿಕೆಯಲ್ಲಿ ಆಗ ತಾನೇ ತೊಡಗಿದ್ದರಿಂದ ಸಹಿ ಹಾಕಲು ಮುಂದಾಗಲಿಲ್ಲ. ಫಲವಾಗಿ ನಿಶ್ಶಸ್ತ್ರೀಕರಣದ ಕನಸು ತನ್ನ ಗುರಿಯನ್ನು ಈ ಒಪ್ಪಂದದಿಂದಲೂ ತಲುಪಲಾಗಲಿಲ್ಲ.

**8. ಅಮೇರಿಕಾ ಮತ್ತು ಸೋವಿಯತ್ ರಷ್ಯಾಗಳ ಶಸ್ತ್ರಾಸ್ತ್ರ ಒಪ್ಪಂದ:** ಈ ಒಪ್ಪಂದವು ಜುಲೈ 1974 ರಲ್ಲಿ ಜರುಗಿತು. ಇದರನ್ವಯ ಅಮೇರಿಕಾ ಮತ್ತು ಸೋವಿಯತ್ ರಷ್ಯಾಗಳು ಮುಂದಿನ ಹತ್ತು ವರ್ಷಗಳವರೆಗೆ ಮಾರಕ ಅಣ್ವಸ್ತ್ರಗಳ ಉತ್ಪಾದನೆಗೆ ತೊಡಗದಂತಾಯಿತು. ಜೊತೆಗೆ ಭೂ ಗರ್ಭದಲ್ಲಿ 150 ಮೆಗಾಟನ್ ಗಾತ್ರದ ಅಣು ಪರೀಕ್ಷೆ ನಡೆಸದಿರಲು ಸಮ್ಮತಿಸಲಾಯಿತು. ಅಂತೆಯೇ ಒಪ್ಪಂದದ ಜಾರಿಯನ್ನು ಖಾತ್ರಿಗೊಳಿಸಿಕೊಳ್ಳಲು ಪರಸ್ಪರ ವೀಕ್ಷಕರ ನೇಮಕಕ್ಕೆ ಎರಡೂ ರಾಷ್ಟ್ರಗಳು ಒಪ್ಪಿಗೆ ಸೂಚಿಸಿದವು.

ಈ ನಡುವೆ ಅಮೇರಿಕಾ ಮತ್ತು ಸೋವಿಯತ್ ರಷ್ಯಾದ ನಡುವಿನ ಶೀತಲ ಸಮರದ ತೀವ್ರತೆ ಕಡಿಮೆಯಾದ ಕಾರಣ 1972 ರಲ್ಲಿ ಮೊದಲ ಶಸ್ತ್ರಾಸ್ತ್ರ ಮಿತಿ ಕಾರ್ಯತಂತ್ರ ಮಾತುಕತೆ [Strategic Arms Limitation Talks I.] ಜರುಗಿ ಐದು ವರ್ಷಗಳ ಒಪ್ಪಂದ ಏರ್ಪಟ್ಟಿತು. ನಂತರ 1979 ರಲ್ಲಿ ಎರಡನೇ ಶಸ್ತ್ರಾಸ್ತ್ರ ಮಿತಿ ಕಾರ್ಯತಂತ್ರ ಮಾತುಕತೆ ] Strategic Arms Limitation Talks II.] ಜರುಗಿತಾದರೂ ಅಫ್ಘಾನಿಸ್ತಾನದ ಬಿಕ್ಕಟ್ಟಿನಿಂದಾಗಿ ಒಪ್ಪಂದ ಅಸ್ತಿತ್ವಕ್ಕೆ ಬರಲಿಲ್ಲ.

**9. ಮಧ್ಯಂತರ ಅಣು ಶಕ್ತಿ ಒಪ್ಪಂದ:** ನೂತನ ಶೀತಲ ಸಮರದ ನಡುವೆ ಡಿಸೆಂಬರ್

8, 1987 ರಂದು ಅಮೇರಿಕಾದ ಅಧ್ಯಕ್ಷ ರೊನಾಲ್ಡ್ ರೇಗನ್ ಮತ್ತು ಸೋವಿಯತ್ ಒಕ್ಕೂಟದ ಅಧ್ಯಕ್ಷ ಮಿಕಾಯ್ಲ್ ಎಸ್. ಗೋರ್ಬಚೇವ್ ಮಧ್ಯಂತರ ಅಣು ಶಕ್ತಿ ಒಪ್ಪಂದಕ್ಕೆ ಸಹಿ ಹಾಕಿದರು. ಈ ಒಪ್ಪಂದದಂತೆ ಅಮೇರಿಕಾ ಮತ್ತು ಸೋವಿಯತ್ ರಷ್ಯಾಗಳು ತಮ್ಮ ಸಮೂಹ ನಾಶಕ ವಿವಿಧ ಅಸ್ತ್ರಗಳನ್ನು ನಾಶಗೊಳಿಸಬೇಕಾಯಿತು. ಜೊತೆಗೆ ಎರಡೂ ರಾಷ್ಟ್ರಗಳು ಪರಸ್ಪರ ಅಣು ಶಕ್ತಿಯ ಮೌಲ್ಯ ಮಾಪನಕ್ಕೆ ತಂಡವನ್ನು ನೇಮಿಸಲು ಅವಕಾಶ ದೊರಕಿತು. ಆಸಕ್ತಿದಾಯಕ ಅಂಶವೇನೆಂದರೆ, ಈ ಒಪ್ಪಂದವು ನಿಶ್ಯಸ್ತ್ರೀಕರಣದ ಇತಿಹಾಸದಲ್ಲಿ ಪ್ರಾಯೋಗಿಕವಾಗಿ ಜಾರಿಗೊಂಡ ಮೊದಲ ಒಪ್ಪಂದವೆನಿಸಿದುದು. ಈ ಒಪ್ಪಂದವನ್ನು ಜಗತ್ತಿನ ಎಲ್ಲ ರಾಷ್ಟ್ರಗಳು ಬೆಂಬಲಿಸಿದವಲ್ಲದೇ ಅರ್ಥಪೂರ್ಣ ನಿಶ್ಯಸ್ತ್ರೀಕರಣದೆಡೆಗೆ ಮೊದಲ ಹೆಜ್ಜೆ ಎಂಬುದಾಗಿ ಬಣ್ಣಿಸಿದವು.

**10. ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳ ಕಡಿತದ ಒಪ್ಪಂದ:** ನವೆಂಬರ್ 19, 1990 ರಂದು ಪ್ಯಾರಿಸ್‌ನಲ್ಲಿ ಜರುಗಿದ ಸಮ್ಮೇಳನದಲ್ಲಿ ಈ ಒಪ್ಪಂದ ಚಾಲನೆ ಪಡೆಯಿತು. ಅಮೇರಿಕಾ, ಸೋವಿಯತ್ ಒಕ್ಕೂಟ ಮತ್ತು ಯುರೋಪಿನ ರಾಷ್ಟ್ರಗಳು ಈ ಒಪ್ಪಂದಕ್ಕೆ ಭಾಗಿಯಾಗಿದ್ದವು. ಇದರನ್ವಯ ಅಮೇರಿಕಾ ಮತ್ತು ಸೋವಿಯತ್ ಒಕ್ಕೂಟಗಳು ತಮ್ಮ ನೇತೃತ್ವದ ನ್ಯಾಟೊ ಮತ್ತು ವಾರ್ಸಾ ಮೈತ್ರಿಕೂಟದಲ್ಲಿದ್ದ ಯುದ್ಧ ಟ್ಯಾಂಕ್, ಬಂದೂಕುಗಳು, ಯುದ್ಧ ವಿಮಾನಗಳು, ಹೆಲಿಕಾಪ್ಟರ್‌ಗಳನ್ನು ಸೇರಿದಂತೆ ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸಬೇಕಾಯಿತು.

**11. ಸಮಗ್ರ ಅಣ್ವಸ್ತ್ರ ಪರೀಕ್ಷಾ ನಿಷೇಧ ಒಪ್ಪಂದ:** ಭವಿಷ್ಯದಲ್ಲಿ ಅಣ್ವಸ್ತ್ರಗಳನ್ನು ನಿಷೇಧಿಸಲು 1996 ರಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಗಮನಾರ್ಹ ಅಂಶವೇನೆಂದರೆ, ಸಮಗ್ರ ಅಣ್ವಸ್ತ್ರ ಪರೀಕ್ಷಾ ನಿಷೇಧ ಒಪ್ಪಂದವು ಅಣ್ವಸ್ತ್ರ ಹೊಂದಿದ ರಾಷ್ಟ್ರಗಳು ತಮ್ಮ ಅಣ್ವಸ್ತ್ರ ಸಂಗ್ರಹವನ್ನು ನಿರ್ವಹಿಸಲು ಆಸ್ಪದ ಕಲ್ಪಿಸಿತು. ಜೊತೆಗೆ ಅಣು ಶಕ್ತಿಯ ಸುಧಾರಣೆಗೆ ಸಂಶೋಧನಾತ್ಮಕ ಪರೀಕ್ಷೆ ನಡೆಸಲು ಸಮ್ಮತಿ ಸೂಚಿಸಿತ್ತು. ಆದರೆ, ಅಣ್ವಸ್ತ್ರ ಹೊಂದಲು ಬಯಸುವ ರಾಷ್ಟ್ರಗಳ ಅಣು ಶಕ್ತಿ ಸ್ಥಾವರಗಳನ್ನು ಅಂತರ್‌ರಾಷ್ಟ್ರೀಯ ಪರಿಶೀಲನೆಗೆ ಮುಕ್ತಗೊಳಿಸಬೇಕೆಂದು ಸೂಚಿಸಿತ್ತು. ಈ ಹಿನ್ನೆಲೆಯಲ್ಲಿ ಭಾರತವು ಸಮಗ್ರ ಅಣ್ವಸ್ತ್ರ ಪರೀಕ್ಷಾ ನಿಷೇಧ ಒಪ್ಪಂದವನ್ನು ತಾರತಮ್ಯದಿಂದ ಕೂಡಿದ, ಅಸಮಾನ ಮತ್ತು ಅಪರಿಪೂರ್ಣ ಒಪ್ಪಂದವೆಂದು ವಾದಿಸಿತು. ಅಣ್ವಸ್ತ್ರ ನಿಶ್ಯಸ್ತ್ರೀಕರಣದ ಯೋಜನೆಯನ್ನೇ ಒಳಗೊಂಡಿರದ ಈ ಒಪ್ಪಂದವು ಅಣ್ವಸ್ತ್ರ ಆಧಿಪತ್ಯಕ್ಕೆ ಹಾದಿ ಮಾಡಿಕೊಡುವುದೆಂದು ಭಾರತ ಪ್ರತಿಪಾದಿಸುತ್ತಾ ಈ ಒಪ್ಪಂದಕ್ಕೆ ಸಹಿ ಹಾಕಲು ನಿರಾಕರಿಸಿತು. ಪಾಕಿಸ್ತಾನವೂ ಸಹ ಭಾರತದ ಹಾದಿಯನ್ನು ತುಳಿಯಿತಲ್ಲದೇ 1998 ರಲ್ಲಿ ಭಾರತ ಹಾಗೂ ಪಾಕಿಸ್ತಾನ ಅಣು ಪರೀಕ್ಷೆ ನಡೆಸಿ ಅಣ್ವಸ್ತ್ರ ರಾಷ್ಟ್ರಗಳೆನಿಸಿದವು. ಕಾರಣಾಂತರದಿಂದ ಅಮೇರಿಕಾವೂ ಸಹ ಸಮಗ್ರ ಅಣ್ವಸ್ತ್ರ ಪರೀಕ್ಷಾ ನಿಷೇಧ ಒಪ್ಪಂದಕ್ಕೆ ಸಹಿ ಹಾಕದ್ದರಿಂದ ಈ ಒಪ್ಪಂದ ಯಶಸ್ವಿಗೊಳ್ಳಲು



ಸಾಧ್ಯವಾಗಲಿಲ್ಲ.

ಈ ಮೇಲೆ ಪ್ರಸ್ತಾಪಿಸಲಾಗಿರುವ ವಿವಿಧ ಒಪ್ಪಂದ ಅಥವಾ ಮಾತುಕತೆಗಳ ಬೆಳಕಿನಲ್ಲಿ ಪರಮಾಣು ನಿಶ್ಯಸ್ತ್ರೀಕರಣ ಪ್ರಯತ್ನಗಳ ಇತಿಹಾಸವನ್ನು ಮನವರಿಕೆ ಮಾಡಿಕೊಳ್ಳಬಹುದಾಗಿದೆ. ಈ ವೈವಿಧ್ಯಮಯ ಪ್ರಯತ್ನಗಳ ನಡುವೆಯೂ ಜಗತ್ತು ಪ್ರಸ್ತುತ ಅಣ್ವಸ್ತ್ರಗಳ ಭೀತಿಯಿಂದ ಮುಕ್ತಗೊಂಡಿಲ್ಲ. 1994 ರ ಅಂಕಿ ಸಂಖ್ಯೆಯಂತೆ ಅಮೇರಿಕಾವು 7900, ರಷ್ಯಾವು 9000, ಫ್ರಾನ್ಸ್ 471, ಬ್ರಿಟನ್ 169 ಮತ್ತು ಚೀನಾ 300 ಅಣ್ವಸ್ತ್ರಗಳನ್ನು ಹೊಂದಿದ್ದು ಅಣ್ವಸ್ತ್ರ ಸ್ಪರ್ಧೆ ಕಂಡು ಬರುತ್ತಿದೆ. ಇದರೊಡನೆ 1998 ರಲ್ಲಿ ಭಾರತ ಹಾಗೂ ಪಾಕಿಸ್ತಾನಗಳು ಅಣ್ವಸ್ತ್ರ ರಾಷ್ಟ್ರಗಳೆನಿಸಿದ್ದು ಹಲವು ಅಣ್ವಸ್ತ್ರಗಳನ್ನು ಸಂಗ್ರಹಿಸಿಕೊಂಡಿವೆ. ಉತ್ತರ ಕೋರಿಯಾವು ವಿರೋಧದ ನಡುವೆಯೂ 2006 ರಿಂದ 2009 ರ ಮಧ್ಯೆ ಪರೀಕ್ಷೆ ನಡೆಸಲು ಯಶಸ್ವಿಯಾಗಿದೆ. ಇರಾನ್ ಸಹ ಅಣ್ವಸ್ತ್ರ ಉತ್ಪಾದನೆಯಲ್ಲಿ ತೊಡಗಿದೆ. ಹೀಗಾಗಿ ಜಗತ್ತು ಪರಮಾಣು ನಿಶಸ್ತ್ರೀಕರಣದ ಗುರಿಯನ್ನು ಇಂದಿಗೂ ತಲುಪಿಲ್ಲವೆಂದರೆ ತಪ್ಪಾಗಲಾರದು. ಆಶಾದಾಯಕ ಬೆಳವಣಿಗೆ ಏನೆಂದರೆ, ವಿಶ್ವ ಸಂಸ್ಥೆಯು 2017 ರಲ್ಲಿ 122 ರಾಷ್ಟ್ರಗಳು ಅಂಕಿತ ನೀಡಿರುವ ಪರಮಾಣು ನಿಷೇಧ ಒಪ್ಪಂದವನ್ನು ಜಾರಿಗೊಳಿಸುವಲ್ಲಿ ಯಶಸ್ವಿಯಾಗಿದೆ.

## ಮಾದರಿ ಪ್ರಶ್ನೆಗಳು [Model Questions]:

**[A.] ಎರಡು ಅಂಕದ ಪ್ರಶ್ನೆಗಳು:**

1. ರಾಷ್ಟ್ರಗಳ ನಡುವಿನ ಶಸ್ತ್ರಾಸ್ತ್ರ ಸ್ಪರ್ಧೆಗೆ ಮೂರು ಕಾರಣಗಳಾವುವು?
2. ಶಸ್ತ್ರಾಸ್ತ್ರ ಸ್ಪರ್ಧೆ ಎಂದರೇನು?
3. ಶಸ್ತ್ರಾಸ್ತ್ರ ಸ್ಪರ್ಧೆಯ ಮೂರು ಪರಿಣಾಮಗಳನ್ನು ಬರೆಯಿರಿ.
4. ಶಸ್ತ್ರಾಸ್ತ್ರ ಸ್ಪರ್ಧೆಯು ಆರ್ಥಿಕ ಪ್ರಗತಿಗೆ ಹೇಗೆ ತೊಡಕಾಗಿದೆ?
5. ಶಸ್ತ್ರ ನಿಯಂತ್ರಣದ ಅರ್ಥವನ್ನು ತಿಳಿಸಿರಿ.
6. ಶಸ್ತ್ರ ನಿಯಂತ್ರಣದ ಎರಡು ಆಯಾಮಗಳನ್ನು ಬರೆಯಿರಿ.
7. ನಿಶ್ಯಸ್ತ್ರೀಕರಣ ಎಂದರೇನು?
8. ನಿಶ್ಯಸ್ತ್ರೀಕರಣವನ್ನು ವ್ಯಾಖ್ಯಾನಿಸಿರಿ.
9. ನಿಶ್ಯಸ್ತ್ರೀಕರಣದ ಪ್ರಕಾರಗಳನ್ನು ಬರೆಯಿರಿ.
10. ಶಸ್ತ್ರ ನಿಯಂತ್ರಣ ಹಾಗೂ ನಿಶಸ್ತ್ರೀಕರಣದ ನಡುವಿನ ಮೂರು ವ್ಯತ್ಯಾಸಗಳನ್ನು ಬರೆಯಿರಿ.

11. ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳ ಆಯೋಗದ ಎರಡು ಶಿಫಾರಸುಗಳನ್ನು ತಿಳಿಸಿರಿ.
12. ಭಾಗಶಃ ಅಣ್ವಸ್ತ್ರ ಪರೀಕ್ಷಾ ನಿಷೇಧ ಒಪ್ಪಂದವು ಎಲ್ಲಿ ಪರೀಕ್ಷೆಯನ್ನು ನಿಷೇಧಿಸಿತು?
13. ಪರಮಾಣು ನಿಶ್ಶಸ್ತ್ರೀಕರಣ ಎಂದರೇನು?
14. ಭಾರತವು ಸಮಗ್ರ ಅಣ್ವಸ್ತ್ರ ಪರೀಕ್ಷಾ ಒಪ್ಪಂದಕ್ಕೆ ಸಹಿ ಹಾಕದಿರಲು ಕಾರಣವೇನು?

[B.] ಐದು ಅಂಕದ ಪ್ರಶ್ನೆಗಳು:

1. ಶಸ್ತ್ರಾಸ್ತ್ರ ಸ್ಪರ್ಧೆಯ ಪರಿಣಾಮಗಳನ್ನು ವಿವರಿಸಿರಿ.
2. ಶಸ್ತ್ರ ನಿಯಂತ್ರಣ ಕುರಿತು ಟಿಪ್ಪಣಿ ಬರೆಯಿರಿ.
3. ಶಸ್ತ್ರ ನಿಯಂತ್ರಣ ಹಾಗೂ ನಿಶಸ್ತ್ರೀಕರಣಗಳ ನಡುವಿನ ವ್ಯತ್ಯಾಸ ಮತ್ತು ಸಂಬಂಧವನ್ನು ಚರ್ಚಿಸಿರಿ.
4. ಅಣ್ವಸ್ತ್ರ ಪರೀಕ್ಷಾ ನಿಷೇಧ ಒಪ್ಪಂದ ಕುರಿತು ಟಿಪ್ಪಣಿ ಬರೆಯಿರಿ.

[C.] ಹತ್ತು ಅಂಕದ ಪ್ರಶ್ನೆಗಳು:

1. ಶಸ್ತ್ರಾಸ್ತ್ರ ಸ್ಪರ್ಧೆ ಎಂದರೇನು? ಅದರ ಪರಿಣಾಮಗಳನ್ನು ವಿವರಿಸಿರಿ.
2. ಪರಮಾಣು ನಿಶಸ್ತ್ರೀಕರಣದ ಪ್ರಯತ್ನಗಳ ಇತಿಹಾಸವನ್ನು ಸಂಕ್ಷೀಪ್ತವಾಗಿ ವಿವರಿಸಿರಿ.



ಅಧ್ಯಾಯ 11:

# ವಿವಾದಗಳ ಶಾಂತಿಯುತ ಇತ್ಯರ್ಥ ಮತ್ತು ಸಂಘರ್ಷ ಪರಿಹಾರ ಸಿದ್ಧಾಂತಗಳು

## [PEACEFUL SETTLEMENT OF DISPUTES AND THEORIES OF CONFLICT RESOLUTION].

### ಪ್ರಸ್ತಾವನೆ [Introduction]:

ವಿವಾದಗಳು ಅಂತರ್‌ರಾಷ್ಟ್ರೀಯ ಸಂಬಂಧಗಳ ಪ್ರಧಾನ ಲಕ್ಷಣವೆನಿಸಿದೆ. ಜಗತ್ತಿನ ರಾಷ್ಟ್ರಗಳು ಇತರ ರಾಷ್ಟ್ರಗಳೊಡನೆ ವ್ಯವಹರಿಸುವಾಗ ವಿವಿಧ ವಿಚಾರಗಳಿಗೆ ಭಿನ್ನ ಕಾಲದಲ್ಲಿ ಸಹಜವಾಗಿ ವಿವಾದಗಳು ತಲೆದೋರುವುದು ಈ ಬೆಳವಣಿಗೆಗೆ ಪ್ರಧಾನ ಕಾರಣ. ಸಾಮಾನ್ಯವಾಗಿ ರಾಷ್ಟ್ರ ರಾಷ್ಟ್ರಗಳ ನಡುವೆ ಕಂಡುಬರುವ ವಿವಾದಗಳು ಕೆಲವೊಮ್ಮೆ ನಿರ್ದಿಷ್ಟ ರಾಷ್ಟ್ರ ಹಾಗೂ ಅಂತರ್‌ರಾಷ್ಟ್ರೀಯ ಸಂಸ್ಥೆಗಳು ಅಥವಾ ರಾಷ್ಟ್ರೇತರ ಪಾತ್ರಧಾರಿಗಳ ನಡುವೆ ತಲೆದೋರಬಹುದಾಗಿದೆ. ಅಂತರ್‌ರಾಷ್ಟ್ರೀಯ ಸ್ವರೂಪವುಳ್ಳ ವಿವಾದಗಳನ್ನು ಕಡೆಗಣಿಸಿದರೆ ಅವು ಬಲಗೊಂಡು ಭವಿಷ್ಯದಲ್ಲಿ ಜಾಗತಿಕ ಶಾಂತಿ ಹಾಗೂ ಭದ್ರತೆಗೆ ಮಾರಕವಾಗುವ ಸಾಧ್ಯತೆ ಅಧಿಕವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ವಿವಾದಗಳ ಶಾಂತಿಯುತ ಇತ್ಯರ್ಥ ಹಾಗೂ ಸಂಘರ್ಷ ಪರಿಹಾರ ಪರಿಕಲ್ಪನೆಗಳು ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿ ಜನ್ಮ ತಾಳಿವೆ. ಪ್ರಸ್ತುತ ಅಧ್ಯಾಯದಲ್ಲಿ ವಿವಾದಗಳ ಶಾಂತಿಯುತ ಇತ್ಯರ್ಥ ಹಾಗೂ ಸಂಘರ್ಷ ಪರಿಹಾರ ಸಿದ್ಧಾಂತಗಳನ್ನು ಕುರಿತಂತೆ ಸಂಕ್ಷೀಪ್ತವಾಗಿ ಬೆಳಕು ಚೆಲ್ಲಲಾಗಿದೆ.

### [I.] ವಿವಾದಗಳ ಶಾಂತಿಯುತ ಇತ್ಯರ್ಥ [Peaceful Settlement of Disputes]:

**[A.] ಅರ್ಥ [Meaning]:** ಎರಡು ರಾಷ್ಟ್ರ ಅಥವಾ ರಾಷ್ಟ್ರಗಳ ಗುಂಪಿನ ನಡುವೆ ತಲೆದೋರುವ ವೈವಿಧ್ಯಮಯ ವಿವಾದಗಳನ್ನು ಶಸ್ತ್ರಾಸ್ತ್ರಗಳ ಪ್ರಯೋಗವಿಲ್ಲದೇ ಬಗೆಹರಿಸಿಕೊಳ್ಳಲು ಮಾಡುವ ಪ್ರಯತ್ನಗಳನ್ನು ವಿವಾದಗಳ ಶಾಂತಿಯುತ ಇತ್ಯರ್ಥ

ಎನ್ನಲಾಗುತ್ತದೆ. ರಾಷ್ಟ್ರಗಳ ನಡುವಿನ ಸಂಶಯ, ಭಿನ್ನಾಭಿಪ್ರಾಯ, ದ್ವೇಷ ಭಾವನೆಗಳನ್ನಾಧರಿಸಿ ತಲೆದೋರುವ ವಿವಾದಗಳನ್ನು ಸೌಹಾರ್ದಯುತ ವಾತಾವರಣದಲ್ಲಿ ಶಾಂತಿಯುತವಾಗಿ ಹೋಗಲಾಡಿಸುವುದನ್ನು ವಿವಾದಗಳ ಶಾಂತಿಯುತ ಇತ್ಯರ್ಥವು ಪ್ರತಿನಿಧಿಸುತ್ತದೆ. ಈ ಪರಿಕಲ್ಪನೆಯು ಯುದ್ಧಗಳನ್ನು ನಿರ್ಮೂಲನೆಗೊಳಿಸುವ ಮೂಲಕ ಅಂತರ್‌ರಾಷ್ಟ್ರೀಯ ಶಾಂತಿ ಮತ್ತು ಭದ್ರತೆ ಕಾಪಾಡುವ ಗುರಿಯನ್ನು ಹೊಂದಿದೆ.

**[B.] ವಿಧಾನಗಳು [Methods]:** ವಿವಾದಗಳ ಶಾಂತಿಯುತ ಇತ್ಯರ್ಥವು ಪ್ರಾಚೀನವಾದುದು ಎಂಬುದನ್ನು ಹಲವು ಐತಿಹಾಸಿಕ ನಿದರ್ಶನಗಳು ಸ್ಪಷ್ಟಪಡಿಸಿವೆ. ಆದರೆ, ಎರಡನೇ ವಿಶ್ವ ಸಮರದ ಬಳಿಕ ಜಾರಿಗೊಂಡ ವಿಶ್ವ ಸಂಸ್ಥೆಯು ತನ್ನ ಗುರಿಗಳಲ್ಲಿ ವಿವಾದಗಳ ಶಾಂತಿಯುತ ಇತ್ಯರ್ಥವನ್ನು ಒಂದೆಂದು ಪರಿಗಣಿಸಿದೆ. ಮುಂದುವರಿದು, ತನ್ನ ಪ್ರಣಾಳಿಕೆಯ ಆರನೇ ಭಾಗದ 33 ರಿಂದ 38 ನೇ ವಿಧಿಗಳಲ್ಲಿ ವಿಶ್ವ ಸಂಸ್ಥೆಯು ವಿವಾದಗಳ ಶಾಂತಿಯುತ ಇತ್ಯರ್ಥದ ವಿಧಾನಗಳನ್ನು ಪ್ರಸ್ತಾಪಿಸಿದೆ. ಇದರೊಡನೆ ಅಂತರ್‌ರಾಷ್ಟ್ರೀಯ ಭದ್ರತೆಯನ್ನು ಕಾಪಾಡಲು ಕಾಲಾನುಕ್ರಮದಲ್ಲಿ ನಾನಾ ವಿಧಾನಗಳನ್ನು ರೂಪಿಸಿ ಬೆಂಬಲಿಸುತ್ತಾ ಬಂದಿದೆ. ಆ ಪೈಕಿ ಪ್ರಮುಖವಾದವುಗಳನ್ನು ಕೆಳಗೆ ಸಂಕ್ಷೇಪ್ತವಾಗಿ ವಿವರಿಸಲಾಗಿದೆ.

**1. ಸಂಧಾನ [Negotiation]:** ಪರಸ್ಪರ ಮಾತುಕತೆಯ ಮೂಲಕ ರಾಷ್ಟ್ರಗಳು ತಮ್ಮ ನಡುವಿನ ವಿವಾದ ಕುರಿತಂತೆ ಒಪ್ಪಂದಕ್ಕೆ ಮುಂದಾಗುವುದೇ ಸಂಧಾನ. ಸಂಧಾನವು ರಾಷ್ಟ್ರಗಳ ನಡುವಿನ ತಂಟೆ ಅಥವಾ ವಿವಾದಗಳನ್ನು ಇತ್ಯರ್ಥಗೊಳಿಸುವ ಸಾಂಪ್ರದಾಯಿಕ ವಿಧಾನವಾಗಿದೆ. ಸಾಮಾನ್ಯವಾಗಿ ವಿವಾದಗ್ರಸ್ತ ರಾಷ್ಟ್ರಗಳು ತಮ್ಮ ರಾಯಭಾರಿಯ ಮೂಲಕ ಸಂಧಾನಗಳನ್ನು ನಿರ್ವಹಿಸುತ್ತವೆ. ಅಗತ್ಯವಿದ್ದರೆ ಸಂಧಾನದ ಚರ್ಚೆಯಲ್ಲಿ ವಿದೇಶಾಂಗ ಮಂತ್ರಿಗಳು ಭಾಗವಹಿಸಿ ಅಂತಿಮ ರೂಪುರೇಷೆಯನ್ನು ಸಂಧಾನಕ್ಕೆ ಒದಗಿಸುತ್ತಾರೆ. ಕೆಲವೊಮ್ಮೆ ಮಹತ್ವದ ಸಂಧಾನಗಳಲ್ಲಿ ರಾಷ್ಟ್ರಗಳ ಮುಖ್ಯಸ್ಥರೇ ಸಂಧಾನಗಳಲ್ಲಿ ಪಾಲ್ಗೊಳ್ಳುವರು. ಉದಾ: 2001 ರಲ್ಲಿ ಭಾರತದ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಮತ್ತು ಪಾಕಿಸ್ತಾನದ ಅಧ್ಯಕ್ಷ ಫರ್ವೇಜ್ ಮುಶಾರಫ್ ನಡುವೆ ಏರ್ಪಟ್ಟ ಸಂಧಾನ ಅಥವಾ ಆಗ್ರಾ ಶೃಂಗಸಭೆ. ರಾಷ್ಟ್ರಗಳ ನಡುವಿನ ಸಾಮಾನ್ಯ ವಿವಾದಗಳು ಮಾತ್ರ ಸಂಧಾನಗಳ ಮೂಲಕ ಇತ್ಯರ್ಥಗೊಂಡರೆ ಗಂಭೀರ ವಿವಾದಗಳು ಸಂಧಾನದ ಮೂಲಕ ಬಗೆಹರಿಯುವುದು ಕಷ್ಟಕರ. ಒಟ್ಟಾರೆ ಸಂಧಾನವು ರಾಷ್ಟ್ರಗಳ ನಡುವಿನ ವಿವಾದಗಳ ಶಾಂತಿಯುತ ಇತ್ಯರ್ಥದ ಸುಲಭ ವಿಧಾನವೆನಿಸಿದೆ. ಇದರ ಪರಿಣಾಮಗಳು ಕೆಳಗಿನಂತಿರುತ್ತವೆ.

ಅ. ಎರಡೂ ರಾಷ್ಟ್ರಗಳ ನಡುವೆ ಸಹಮತ ಮೂಡಿ ವಿವಾದ ಕೊನೆಗೊಳ್ಳಬಹುದು. ಉದಾ: 1974 ರಲ್ಲಿ ಭಾರತ ಹಾಗೂ ಶ್ರೀಲಂಕಾ ತಮ್ಮ ನಡುವಿನ ಜಲ ಗಡಿಯ ವಿವಾದ ಕೊನೆಗೊಳಿಸಿದುದು.



ಆ. ಮಾತುಕತೆಯ ವೇಳೆಯಲ್ಲಿ ಎರಡೂ ರಾಷ್ಟ್ರಗಳ ನಡುವೆ ಸಹಮತ ಮೂಡದೇ ಸಂಧಾನ ಮುರಿದು ಬಿದ್ದು ವಿವಾದ ಮುಂದುವರೆಯಬಹುದು.

ಇ. ಸಂಧಾನದಿಂದ ಒಪ್ಪಂದ ಏರ್ಪಡದಿದ್ದರೂ ವಿವಾದದ ತೀವ್ರತೆ ವಿವಾದಗ್ರಸ್ತ ರಾಷ್ಟ್ರಗಳಿಗೆ ಮನವರಿಕೆಯಾಗಬಹುದು.

ಈ. ಅಂತರ್‌ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯ ವಿಶಾಲ ದೃಷ್ಟಿಕೋನದಲ್ಲಿ ವಿವಾದಗ್ರಸ್ತ ರಾಷ್ಟ್ರವೊಂದು ತನ್ನ ಹಕ್ಕುಗಳನ್ನು ಬದಿಗಿಟ್ಟು ಸಂಧಾನಕ್ಕೆ ಸಮ್ಮತಿ ಸೂಚಿಸುವ ಮೂಲಕ ವಿವಾದ ಕೊನೆಗೊಳಿಸಬಹುದು.

**2. ಮಧ್ಯಸ್ಥಿಕೆ [Mediation]:** ಎರಡು ರಾಷ್ಟ್ರಗಳ ನಡುವಿನ ಗಂಭೀರ ವಿವಾದವನ್ನು ಪರಿಹರಿಸಲು ಮೂರನೇ ರಾಷ್ಟ್ರ ಪ್ರಯತ್ನಿಸುವುದೇ ಮಧ್ಯಸ್ಥಿಕೆ. ಸಾಮಾನ್ಯವಾಗಿ ವಿವಾದಗ್ರಸ್ತ ರಾಷ್ಟ್ರಗಳು ಪರಸ್ಪರ ಸಮ್ಮತಿಸುವ ಮೂರನೇ ರಾಷ್ಟ್ರವು ಮಧ್ಯಸ್ಥಿಕೆ ವಹಿಸಿ ವಿವಾದದ ಇತ್ಯರ್ಥಕ್ಕೆ ಶ್ರಮಿಸುತ್ತದೆ. ವಿವಾದ ತಲೆದೋರಿರುವ ರಾಷ್ಟ್ರಗಳು ಮಧ್ಯಸ್ಥಿಕೆ ವಹಿಸುವ ರಾಷ್ಟ್ರದಲ್ಲಿ ನಂಬಿಕೆ ಹೊಂದಿದ್ದು ಅದರ ಸೂಚನೆಯನ್ನು ಪಾಲಿಸಲು ಸಿದ್ಧವಾಗಿರುತ್ತವೆ. ಪ್ರಪಂಚದ ಶಕ್ತಿಶಾಲಿ ಅಥವಾ ಶಾಂತಿಪ್ರಿಯ ರಾಷ್ಟ್ರವು ಮಧ್ಯಸ್ಥಿಕೆಗೆ ಮುಂದಾಗುತ್ತದೆ. ಉದಾ: 1905 ರಲ್ಲಿ ರಷ್ಯಾ ಮತ್ತು ಜಪಾನ್ ಯುದ್ಧವು ಅಮೇರಿಕಾದ ಅಧ್ಯಕ್ಷರ ಮಧ್ಯಸ್ಥಿಕೆಯಿಂದ ಮತ್ತು 1966 ರಲ್ಲಿ ಭಾರತ ಹಾಗೂ ಪಾಕಿಸ್ತಾನಗಳ ನಡುವಿನ ಯುದ್ಧ ರಷ್ಯಾದ ಪ್ರಧಾನಿಯವರ ಮಧ್ಯಸ್ಥಿಕೆಯಿಂದ ಸ್ಥಗಿತಗೊಂಡಿದುದು. 1945 ರ ಬಳಿಕ ವಿಶ್ವ ಸಂಸ್ಥೆಯು ರಾಷ್ಟ್ರಗಳ ನಡುವಿನ ವಿವಿಧ ವಿವಾದಗಳನ್ನು ಇತ್ಯರ್ಥಗೊಳಿಸಲು ತನ್ನ ಉತ್ತಮ ಬಾಂಧವ್ಯ ಸಮಿತಿಯ (Good Offices Commity) ಮೂಲಕ ಸಾಕಷ್ಟು ಮಧ್ಯಸ್ಥಿಕೆಯನ್ನು ನಿರ್ವಹಿಸಿದೆ. ಇಸ್ರೇಲ್ ಹಾಗೂ ಅರಬ್ ನಡುವಿನ ವಿವಾದ, ಮಧ್ಯ ಪ್ರಾಚ್ಯ ವಿವಾದ, ಕಾಶ್ಮೀರ ವಿವಾದ, ಬರ್ಲಿನ್ ವಿವಾದಗಳ ವೇಳೆಯಲ್ಲಿ ಮಧ್ಯಸ್ಥಿಕೆಯ ವಿಧಾನವು ಪ್ರಮುಖ ಪಾತ್ರವನ್ನು ನಿರ್ವಹಿಸುವ ಮೂಲಕ ಅಂತರ್‌ರಾಷ್ಟ್ರೀಯ ಶಾಂತಿಗೆ ಕಾರಣವಾಗಿದೆ.

**3. ವಿಚಾರಣೆ [Enquiry]:** ವಿವಾದಕ್ಕೆ ಕಾರಣವಾದ ಘಟನೆಯನ್ನು ಆಳವಾಗಿ ಪರಿಶೀಲಿಸಿ ಸ್ಪಷ್ಟೀಕರಣದೊಡನೆ ಸೂಕ್ತ ಶಿಫಾರಸ್ಸು ಮಾಡುವ ಪ್ರಕ್ರಿಯೆಯೇ ವಿಚಾರಣೆ. ರಾಷ್ಟ್ರಗಳ ನಡುವಿನ ವಿವಾದವೊಂದನ್ನು ಆಳವಾಗಿ ಅಭ್ಯಸಿಸಿ ಸೂಕ್ತವಾದ ಶಿಫಾರಸ್ಸು ನೀಡಲು ವಿಚಾರಣಾ ಆಯೋಗವನ್ನು ಸ್ಥಾಪಿಸಲಾಗುತ್ತದೆ. ಪರಸ್ಪರ ಸಮ್ಮತಿಸಿ ವಿವಾದಗ್ರಸ್ತ ರಾಷ್ಟ್ರಗಳು ಈ ಆಯೋಗದ ರಚನೆಗೆ ಮುಂದಾಗಿರುವುದರಿಂದ ಅದರ ಸಲಹೆಗಳನ್ನು ಸಹಜವಾಗಿ ಒಪ್ಪಿಕೊಂಡು ವಿವಾದಗಳಿಗೆ ತೆರೆ ಎಳೆಯುತ್ತವೆ. ವಿವಾದಗಳ ಶಾಂತಿಯುತ ಇತ್ಯರ್ಥಕ್ಕೆ ಕಾರಣವಾಗುವ ವಿಚಾರಣೆಯ ವಿಧಾನವನ್ನು 1899 ರ ಪ್ರಥಮ ಹಾಗೂ 1907 ರ ದ್ವಿತೀಯ ಹೇಗ್ ಶಾಂತಿ ಸಮ್ಮೇಳನಗಳು ಬೆಂಬಲಿಸಿದ್ದವು. ಸಾಮಾನ್ಯವಾಗಿ ತಾಂತ್ರಿಕ

ಅಂಶಗಳನ್ನು ಮೈಗೂಡಿಸಿಕೊಂಡ ವಿವಾದಗಳನ್ನು ಪರಿಹರಿಸಲು ವಿಚಾರಣಾ ವಿಧಾನ ಸಹಕಾರಿಯಾಗುತ್ತದೆ. ಉದಾ: 1904 ರಲ್ಲಿ ಉತ್ತರ ಸಮುದ್ರದಲ್ಲಿ ರಷ್ಯಾವು ಬ್ರಿಟನ್ನಿನ ಎಂಟು ಹಡಗುಗಳನ್ನು ನಾಶಗೊಳಿಸಿದಾಗ ಅವುಗಳ ನಡುವೆ ವಿವಾದ ತಲೆದೋರಿದಾಗ ವಿಚಾರಣಾ ಆಯೋಗವನ್ನು ರಚಿಸಿ ಅದರ ಶಿಫಾರಸ್ಸಿನಂತೆ ರಷ್ಯಾ ತಪ್ಪೊಪ್ಪಿಕೊಂಡು ಬ್ರಿಟನ್ನಿಗೆ ನಷ್ಟ ಭರಿಸುವ ಮೂಲಕ ವಿವಾದ ಇತ್ಯರ್ಥಗೊಂಡಿದುದು..

**4. ರಾಜಿ ಒಪ್ಪಂದ [Conciliation]:** ಎರಡು ರಾಷ್ಟ್ರಗಳ ನಡುವಿನ ವಿವಾದವನ್ನು ಸೂಕ್ತ ವಿಚಾರಣೆಯ ಮೂಲಕ ಇತ್ಯರ್ಥಗೊಳಿಸಲು ಸಮಿತಿಯೊಂದು ಶ್ರಮಿಸುವುದನ್ನು ರಾಜಿ ಒಪ್ಪಂದವೆನ್ನಲಾಗುತ್ತದೆ. ಈ ವಿಧಾನವು ಮಧ್ಯಸ್ಥಿಕೆಯನ್ನು ಹೋಲುವುದಾದರೂ ಮಧ್ಯಸ್ತಿಕೆಯಲ್ಲಿ ಒಬ್ಬನೇ ವ್ಯಕ್ತಿ ಪ್ರಧಾನ ಪಾತ್ರ ನಿರ್ವಹಿಸಿದರೆ ರಾಜಿ ಒಪ್ಪಂದದಲ್ಲಿ ಹಲವು ಸದಸ್ಯರ ಸಮಿತಿ ಮಹತ್ವದ ಪಾತ್ರ ನಿರ್ವಹಿಸುತ್ತದೆ. ಮೊದಲ ವಿಶ್ವ ಸಮರದ ಬಳಿಕ ಸ್ಥಾಪನೆಗೊಂಡಿದ್ದ ರಾಷ್ಟ್ರಗಳ ಸಂಘ ಮತ್ತು ಎರಡನೇ ವಿಶ್ವ ಸಮರದ ನಂತರ ಜಾರಿಗೊಂಡಿರುವ ವಿಶ್ವ ಸಂಸ್ಥೆಗಳು ರಾಜಿ ಒಪ್ಪಂದದ ಮೂಲಕ ಹಲವು ಜಾಗತಿಕ ಶಾಂತಿಗೆ ಧಕ್ಕೆಯುಂಟು ಮಾಡಬಹುದಾಗಿದ್ದ ವಿವಾದಗಳನ್ನು ಪರಿಹರಿಸಲು ಶ್ರಮಿಸಿವೆ.

**5. ನ್ಯಾಯ ಪಂಚಾಯಿತಿ [Arbitration]:** ವಿವಾದಗ್ರಸ್ತ ರಾಷ್ಟ್ರಗಳು ಮೂರನೇ ಪಕ್ಷವೊಂದರ ಸಲಹೆ ಅಥವಾ ನಿರ್ಧಾರಗಳ ನೆರವಿನಿಂದ ತಮ್ಮ ವಿವಾದಗಳನ್ನು ಪರಿಹರಿಸಿಕೊಳ್ಳಲು ಮುಂದಾಗುವುದನ್ನು ನ್ಯಾಯ ಪಂಚಾಯಿತಿ ಪ್ರತಿನಿಧಿಸುತ್ತದೆ. ಅಂತರ್‌ರಾಷ್ಟ್ರೀಯ ಕಾನೂನು ಆಯೋಗವು ಕಾನೂನಾತ್ಮಕ ತಳಹದಿಯುಳ್ಳ ನಿರ್ಧಾರಗಳ ನೆರವಿನಿಂದ ರಾಷ್ಟ್ರಗಳು ತಮ್ಮ ವಿವಾದಗಳನ್ನು ಇತ್ಯರ್ಥಗೊಳಿಸಿಕೊಳ್ಳುವ ಪ್ರಕ್ರಿಯೆಯೇ ನ್ಯಾಯ ಪಂಚಾಯಿತಿ ಎಂದು ವಿವರಿಸಿದೆ. ಪರಸ್ಪರ ಒಪ್ಪಿದ ನ್ಯಾಯಾಧೀಶರ ಮೂಲಕ ರಾಷ್ಟ್ರಗಳು ತಮ್ಮ ವಿವಾದಗಳನ್ನು ಅಂತರ್‌ರಾಷ್ಟ್ರೀಯ ಕಾನೂನುಗಳನ್ನಾಧರಿಸಿ ಇತ್ಯರ್ಥಗೊಳಿಸಿಕೊಳ್ಳಲು ಮುಂದಾಗುವುದು ನ್ಯಾಯ ಪಂಚಾಯಿತಿ ಎನಿಸಿಕೊಳ್ಳುತ್ತದೆ. ಉದಾ: ಭಾರತ ಹಾಗೂ ಪಾಕಿಸ್ತಾನಗಳ ನಡುವಿನ ಕಚ್ ವಿವಾದವನ್ನು ನ್ಯಾಯ ಪಂಚಾಯಿತಿ ಮೂಲಕ ಬಗೆ ಹರಿಸಿದುದು. ನ್ಯಾಯ ಪಂಚಾಯಿತಿಯ ನಿರ್ಧಾರಗಳು ವಿವಾದಗ್ರಸ್ತ ರಾಷ್ಟ್ರಗಳಿಗೆ ಲಾಭ ಅಥವಾ ನಷ್ಟ ಉಂಟು ಮಾಡಿದರೂ ಅವುಗಳು ಅದರ ನಿರ್ಧಾರಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಇಂಟರ್‌ನ್ಯಾಷನಲ್ ಚೇಂಬರ್ ಆಫ್ ಕಾಮರ್ಸ್, ಲಂಡನ್ ಕೋರ್ಟ್ ಆಫ್ ಇಂಟರ್‌ನ್ಯಾಷನಲ್ ಆರ್ಬಿಟ್ರೇಶನ್, ಸಿಂಗಪೂರ್ ಇಂಟರ್‌ನ್ಯಾಷನಲ್ ಆರ್ಬಿಟ್ರೇಶನ್ ನಿಯಮಾವಳಿಗಳನ್ನು ಆಧರಿಸಿರುವ ನ್ಯಾಯ ಪಂಚಾಯಿತಿಗಳ ನಿರ್ಣಯಗಳು ರಾಷ್ಟ್ರಗಳಿಗೆ ಬಂಧನಕಾರಿಯಾಗಿದ್ದುದು ಗಮನಾರ್ಹ. ಸಾಮಾನ್ಯವಾಗಿ ಈ ಕೆಳಗಿನ ಲಕ್ಷಣಗಳಿಂದ ಕೂಡಿರುವ ಪರಿಕಲ್ಪನೆಯಾಗಿದೆ.

ಅ. ನ್ಯಾಯ ಪಂಚಾಯಿತಿಯು ತನ್ನ ರಚನೆಗೆ ಕಾರಣವಾದ ವಿವಾದವನ್ನು ಕುರಿತಂತೆ ಮಾತ್ರ ನಿರ್ಧಾರ ಪ್ರಕಟಿಸುತ್ತದೆ.



ಆ. ನ್ಯಾಯ ಪಂಚಾಯಿತಿಯ ಕಾರ್ಯ ವ್ಯಾಪ್ತಿಯು ವಿವಾದಗ್ರಸ್ತ ರಾಷ್ಟ್ರಗಳ ನಿರ್ಣಯವನ್ನು ಅವಲಂಬಿಸಿರುತ್ತದೆ.

ಇ. ನ್ಯಾಯ ಪಂಚಾಯಿತಿಯು ಸ್ಥಾಪಿತ ನಿಯಮಾವಳಿಗಳನ್ವಯ ತನ್ನ ನಿರ್ಧಾರಗಳನ್ನು ಪ್ರಕಟಿಸಬೇಕಾಗುತ್ತದೆ.

**6. ನ್ಯಾಯ ನಿರ್ಣಯ [Judicial Settlement]:** ಅಂತರ್‌ರಾಷ್ಟ್ರೀಯ ನ್ಯಾಯಾಲಯದ ಮೂಲಕ ಅದರ ನಿರ್ಣಯಗಳಿಗೆ ವಿಧೇಯವಾಗಿ ತಮ್ಮ ವಿವಾದಗಳನ್ನು ರಾಷ್ಟ್ರಗಳು ಇತ್ಯರ್ಥಗೊಳಿಸಿಕೊಳ್ಳಲು ಮುಂದಾಗುವುದು ನ್ಯಾಯ ನಿರ್ಣಯ ವಿಧಾನವೆನಿಸಿದೆ. ರಾಷ್ಟ್ರಗಳ ಸಂಘದ ಪ್ರಣಾಳಿಕೆಯ ಸೆಕ್ಷನ್ 14 ರಾಷ್ಟ್ರಗಳ ನಡುವಿನ ವಿವಾದಗಳನ್ನು ಪರಿಹರಿಸಲು ಅಂತರ್‌ರಾಷ್ಟ್ರೀಯ ನ್ಯಾಯಾಲಯವನ್ನು ರಚಿಸಿತ್ತು. 1939 ರ ವೇಳೆಗೆ 79 ವಿವಾದಗಳನ್ನು ಇತ್ಯರ್ಥಗೊಳಿಸಿದ ನ್ಯಾಯಾಲಯವು ಎರಡನೇ ವಿಶ್ವ ಸಮರದ ಸಮಯದಲ್ಲಿ ನಿಶ್ಕ್ರೀಯವಾಗಿತ್ತು. ಮುಂದೆ 1945 ರಲ್ಲಿ ವಿಶ್ವ ಸಂಸ್ಥೆಯ ಪ್ರಧಾನ ಅಂಗವಾಗಿ ಅಂತರ್‌ರಾಷ್ಟ್ರೀಯ ನ್ಯಾಯಾಲಯವು ಸ್ಥಾನ ಪಡೆಯಿತು. ಅಂತರ್‌ರಾಷ್ಟ್ರೀಯ ವಿವಾದಗಳ ಶಾಂತಿಯುತ ಇತ್ಯರ್ಥಕ್ಕೆ ತನ್ನದೇಯಾದ ಕೊಡುಗೆಯನ್ನು ನ್ಯಾಯ ನಿರ್ಣಯ ವಿಧಾನವು ಇಂದಿಗೂ ನೀಡುತ್ತಿದೆ. ಉದಾ: ಕುಲಭೂಷಣ್ ಜಾಧವ್ ಎಂಬ ನೌಕಾಪಡೆಯ ಅಧಿಕಾರಿಗೆ ಪಾಕಿಸ್ತಾನದ ಮಿಲಿಟರಿ ನ್ಯಾಯಾಲಯ ಗಲ್ಲು ಶಿಕ್ಷೆ ನೀಡಿದ್ದುದನ್ನು ಕುರಿತಾದ ಭಾರತ ಹಾಗೂ ಪಾಕಿಸ್ತಾನಗಳ ನಡುವಿನ ವಿವಾದವನ್ನು ಅಂತರ್‌ರಾಷ್ಟ್ರೀಯ ನ್ಯಾಯಾಲಯವು 2019 ರಲ್ಲಿ ಇತ್ಯರ್ಥಗೊಳಿಸಿದುದು. ನೆದರ್‌ಲ್ಯಾಂಡಿನ ಹೇಗ್ ನಗರದಲ್ಲಿರುವ ಅಂತರ್‌ರಾಷ್ಟ್ರೀಯ ನ್ಯಾಯಾಲಯದ ನ್ಯಾಯ ನಿರ್ಣಯ ವಿಧಾನವು ಈ ಕೆಳಗಿನ ವಿಶೇಷತೆಯನ್ನು ಮೈಗೂಡಿಸಿಕೊಂಡಿದೆ.

ಅ. ಪರಸ್ಪರ ಸಮ್ಮತಿಸಿ ಪ್ರಕರಣ ದಾಖಲಿಸುವ ಸಾರ್ವಭೌಮ ರಾಷ್ಟ್ರಗಳ ನಡುವಿನ ವಿವಾದಗಳನ್ನು ಮಾತ್ರ ನಿರ್ಣಯಿಸುವುದು.

ಆ. ಅಂತರ್‌ರಾಷ್ಟ್ರೀಯ ಕಾನೂನುಗಳ ಬೆಳಕಿನಲ್ಲಿ ವಿವಾದಗಳನ್ನು ಇತ್ಯರ್ಥಗೊಳಿಸುವುದು.

ಇ. ವಿವಾದಗ್ರಸ್ತ ಪಕ್ಷಗಳಿಗೆ ಪ್ರಕರಣ ಇತ್ಯರ್ಥಗೊಳಿಸಿಕೊಳ್ಳಲು ಮುಕ್ತ ಅವಕಾಶ, ಪ್ರಕರಣದಿಂದ ಹಿಂದೆ ಸರಿಯಲು ಆಸ್ಪದ ಅಥವಾ ನಿರ್ಣಯಗಳಿಗೆ ಸಮ್ಮತಿಸುವ ಅವಕಾಶವನ್ನು ಒದಗಿಸಿದುದು.

ಈ ಮೇಲೆ ಪ್ರಸ್ತಾಪಿಸಲಾಗಿರುವ ವಿವಾದಗಳ ಶಾಂತಿಯುತ ಪರಿಹಾರದ ವಿಧಾನಗಳ ಪೈಕಿ ಕೊನೆಯ ಎರಡು ವಿಧಾನಗಳು ಕಡ್ಡಾಯ ಸ್ವರೂಪದೊಡನೆ ರಾಷ್ಟ್ರಗಳಿಗೆ

ಬಂಧನಕಾರಿಯಾದರೆ ಉಳಿದವು ಐಚ್ಛಿಕ ಸ್ವರೂಪದೊಡನೆ ರಾಷ್ಟ್ರಗಳಿಗೆ ಬಂಧನಕಾರಿಯಾಗಿಲ್ಲ ಎಂಬುದು ಗಮನಾರ್ಹ ಸಂಗತಿ. ಆಸಕ್ತಿದಾಯಕ ಅಂಶವೇನೆಂದರೆ, ಮೇಲಿನ ವಿಧಾನಗಳೊಡನೆ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ ಮತ್ತು ಭದ್ರತಾ ಸಮಿತಿಯ ನಿಲುವುಗಳು ವಿವಾದಗಳ ಶಾಂತಿಯುತ ಪರಿಹಾರಕ್ಕೆ ಅಗಾಧ ಕಾಣಿಕೆ ನೀಡುವ ಮೂಲಕ ವಿಶ್ವ ಸಂಸ್ಥೆಯ ಕಾರ್ಯಾಚರಣೆಯೂ ಸಹ ವಿವಾದಗಳ ಶಾಂತಿಯುತ ಪರಿಹಾರದ ಸಾಧನವೆನಿಸಿದೆ.

## [II.] ಸಂಘರ್ಷ ಪರಿಹಾರದ ಸಿದ್ಧಾಂತಗಳು

## [Theories of Conflict Resolution]:

ಅಂತರ್‌ರಾಷ್ಟ್ರೀಯ ಸಮುದಾಯವು ಹಲವು ರಾಷ್ಟ್ರಗಳಿಂದ ಕೂಡಿರುವ ವ್ಯವಸ್ಥೆ. ಈ ಸಮುದಾಯದ ಭಾಗವಾಗಿರುವ ಸಾರ್ವಭೌಮ ರಾಷ್ಟ್ರಗಳ ನಡುವೆ ಪರಸ್ಪರ ಸಹಕಾರಯುತ ಅಥವಾ ಸಂಘರ್ಷಮಯ ಸಂಬಂಧಗಳು ಕಂಡು ಬರುತ್ತವೆ. ರಾಷ್ಟ್ರಗಳ ನಡುವಿನ ಸಹಕಾರಯುತ ಸಂಬಂಧಗಳು ಪ್ರಪಂಚದ ವಿವಿಧ ರಾಷ್ಟ್ರಗಳ ಪರಸ್ಪರ ಪ್ರಗತಿಗೆ ಕಾರಣವಾಗುತ್ತವೆ. ಆದರೆ, ರಾಷ್ಟ್ರಗಳು ಹೊಂದಿರುವ ಸಂಘರ್ಷಮಯ ಸಂಬಂಧಗಳು ಅಭದ್ರತೆ, ಅಶಾಂತಿ, ಸಂಶಯಗಳನ್ನು ಅಂತರ್‌ರಾಷ್ಟ್ರೀಯ ಸಮುದಾಯದಲ್ಲಿ ಬೆಳೆಸುವ ಮೂಲಕ ಅಂತರ್‌ರಾಷ್ಟ್ರೀಯ ವ್ಯವಸ್ಥೆಯನ್ನು ಧಕ್ಕೆಗೊಳಪಡಿಸುತ್ತವೆ. ಈ ಹಿನ್ನೆಲೆಯಲ್ಲಿ ರಾಷ್ಟ್ರಗಳ ನಡುವಿನ ಸಂಘರ್ಷಗಳ ಅಧ್ಯಯನವು ಮಹತ್ವ ಪಡೆದುಕೊಂಡು ಸಂಘರ್ಷ ಪರಿಹಾರದ ಹಲವು ಸಿದ್ಧಾಂತಗಳು ಅಂತರ್‌ರಾಷ್ಟ್ರೀಯ ಸಂಬಂಧಗಳಲ್ಲಿ ಪ್ರತಿಪಾದಿಸಲ್ಪಟ್ಟಿವೆ. ಆದ್ದರಿಂದ ಸಂಘರ್ಷದ ಅರ್ಥ ಮತ್ತು ಸಂಘರ್ಷ ಪರಿಹಾರದ ಪ್ರಮುಖ ಸಿದ್ಧಾಂತಗಳನ್ನು ಕೆಳಗೆ ಸಂಕ್ಷೇಪ್ತವಾಗಿ ಚರ್ಚಿಸಲಾಗಿದೆ.

### [A.] ಸಂಘರ್ಷದ ಅರ್ಥ [Meaning of Conflict]:

ಸಂಘರ್ಷವು ಪದಶಃ ಎರಡು ಪಕ್ಷಗಳ ನಡುವಿನ ಯುದ್ಧ, ಕ್ರಾಂತಿ ಅಥವಾ ಹೋರಾಟವನ್ನು ಪ್ರತಿನಿಧಿಸುತ್ತದೆ. ಸರಳಾರ್ಥದಲ್ಲಿ ರಾಷ್ಟ್ರಗಳು ತಮ್ಮ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ಶಕ್ತಿಯನ್ನು ಅಂದರೆ ಶಸ್ತ್ರಾಸ್ತ್ರಗಳನ್ನು ಬಳಸಲು ಮುಂದಾಗುವುದನ್ನು ಸಂಘರ್ಷ ಎನ್ನಬಹುದು. ಏಕರೂಪದ ಗುರಿ, ಅಗತ್ಯ, ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ಮುಂದಾದ ರಾಷ್ಟ್ರಗಳ ನಡುವಿನ ವಿರೋಧಾತ್ಮಕ ನಿಲುವುಗಳಲ್ಲಿ ಸಂಘರ್ಷ ಕಂಡು ಬರುತ್ತದೆ. ವಿಶಾಲಾರ್ಥದಲ್ಲಿ ಅಂತರ್‌ರಾಷ್ಟ್ರೀಯ ಸಮುದಾಯದಲ್ಲಿನ ರಾಷ್ಟ್ರಗಳು ಪರಸ್ಪರರ ಪ್ರಾದೇಶಿಕ, ಸೈದ್ಧಾಂತಿಕ, ಸಾಂಸ್ಕೃತಿಕ, ಸೈನಿಕ ಹಿತಾಸಕ್ತಿಗಳನ್ನು ಸಂರಕ್ಷಿಸಿಕೊಳ್ಳಲು ಶಾಂತಿಯುತ ಮಾರ್ಗಗಳಿಂದ ಸಾಧ್ಯವಾಗದಿದ್ದಾಗ ಶಕ್ತಿಯನ್ನು



ಬಳಸಲು ಮುಂದಾಗುವುದೇ ಸಂಘರ್ಷವೆನಿಸುತ್ತದೆ. ಸಂಘರ್ಷವು ರಾಷ್ಟ್ರಗಳೊಳಗಿನ ಆಂತರಿಕ ಸಂಘರ್ಷ ಮತ್ತು ಇತರ ರಾಷ್ಟ್ರಗಳ ಜೊತೆಗಿನ ಬಾಹ್ಯ ಸಂಘರ್ಷ ಎಂಬ ಎರಡು ಆಯಾಮಗಳನ್ನು ಹೊಂದಿರುತ್ತದೆ. ರಾಷ್ಟ್ರಗಳ ನಡುವಿನ ಸಂಘರ್ಷಕ್ಕೆ ವೈವಿಧ್ಯಮಯ ಅಂಶಗಳು ಪ್ರಭಾವ ಬೀರಿರುತ್ತವೆ. ಆದ್ದರಿಂದ ಜಾನ್ ಡಬ್ಲ್ಯೂ. ಬರ್ಟನ್ ರಾಷ್ಟ್ರಗಳ ನಡುವಿನ ಭೌತಿಕ ಮತ್ತು ಅಭೌತಿಕ ಹಿತಾಸಕ್ತಿಗಳಿಂದಾಗಿ ಸಂಘರ್ಷಗಳು ಜನ್ಮತಾಳುತ್ತವೆ ಎಂಬುದಾಗಿ ಅಭಿಪ್ರಾಯಪಟ್ಟಿರುವರು.

### [B.] ಸಂಘರ್ಷ ಪರಿಹಾರದ ಸಿದ್ಧಾಂತಗಳು

### [Theories of Conflict Resolution:

ಸಂಘರ್ಷವು ಅಂತರ್‌ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ನಾಶಗೊಳಿಸುವ ಮೂಲಾಂಶ. ಹೀಗಾಗಿ ರಾಷ್ಟ್ರಗಳ ನಡುವಿನ ಸಂಘರ್ಷ ಪರಿಹಾರಕ್ಕೆ ವಿವಿಧ ವಿಧಾನಗಳನ್ನು ಕಂಡುಕೊಳ್ಳಲಾಯಿತು. ಮುಖ್ಯವಾಗಿ ಸಂಘರ್ಷಗಳ ಪರಿಹಾರ ವಿಧಾನಗಳನ್ನು ಶಾಂತಿಯುತ ವಿಧಾನ ಮತ್ತು ಶಕ್ತಿ ಪ್ರಯೋಗದ ವಿಧಾನಗಳೆಂದು ವರ್ಗೀಕರಿಸಲಾಗುತ್ತದೆ. ಸಂಘರ್ಷ ಪರಿಹಾರಕ್ಕಾಗಿ ಅಂತರ್‌ರಾಷ್ಟ್ರೀಯ ಸಂಘಟನೆಯಾದ ವಿಶ್ವಸಂಸ್ಥೆ, ವಿವಿಧ ಪ್ರಾದೇಶಿಕ ಸಂಸ್ಥೆಗಳು ಮತ್ತು ಜಾಗತಿಕ ನಾಯಕರು ಕಾಲಾನುಕ್ರಮದಲ್ಲಿ ಶಾಂತಿಯುತ ವಿಧಾನಗಳ ಮೂಲಕ ಪ್ರಯತ್ನಿಸುತ್ತಾ ಬಂದಿರುವರು. ಇದರೊಡನೆ ಸಂಘರ್ಷಗಳ ಪರಿಹಾರವನ್ನು ಕುರಿತಂತೆ ಅಂತರ್‌ರಾಷ್ಟ್ರೀಯ ಸಂಬಂಧಗಳ ತಜ್ಞರು ಚಿಂತನೆಗೆ ಮುಂದಾದರು. ಫಲವಾಗಿ ಸಂಘರ್ಷ ಪರಿಹಾರ ಕುರಿತಂತೆ ಹಲವು ಸಿದ್ಧಾಂತಗಳು ಪ್ರತಿಪಾದನೆಗೊಂಡವು. ಈ ಕೆಳಗೆ ಸಂಘರ್ಷ ಪರಿಹಾರ ಕುರಿತಾದ ಪ್ರಧಾನ ಸಿದ್ಧಾಂತಗಳ ಸಂಕ್ಷೇಪ್ತ ವಿವರಣೆಯನ್ನು ನೀಡಲಾಗಿದೆ.

**1. ಉದಾರವಾದಿ ಸಿದ್ಧಾಂತ [Liberal Theory]:** ವ್ಯಕ್ತಿ ಸ್ವಾತಂತ್ರ್ಯ, ಸಮಾನ ಉಪಚಾರ, ಮುಕ್ತ ಚರ್ಚೆ ಮುಂತಾದವುಗಳು ಉದಾರವಾದದ ತತ್ವಗಳಾಗಿವೆ. ಈ ಉದಾರವಾದಿ ತಳಹದಿಯಲ್ಲಿ ಮೊದಲ ವಿಶ್ವ ಸಮರದ ಕೊನೆಯಲ್ಲಿ ಅಂತರ್‌ರಾಷ್ಟ್ರೀಯ ಸಂಘರ್ಷದ ನಿವಾರಣೆಗೆ ವುಡ್ರೊ ವಿಲ್ಸನ್ 14 ಅಂಶಗಳನ್ನು ಪ್ರತಿಪಾದಿಸಿದರು. ಆದರೆ, ಎರಡನೇ ಮಹಾ ಯುದ್ಧದ ಆರಂಭ ಹಾಗೂ ನಂತರದ ಶೀತಲ ಸಮರದಿಂದಾಗಿ ಉದಾರವಾದಿ ಸಂಘರ್ಷ ಪರಿಹಾರ ಸಿದ್ಧಾಂತ ಜನಪ್ರಿಯವಾಗಲಿಲ್ಲ. 1990 ರ ಬಳಿಕ ಅಂತರ್‌ರಾಷ್ಟ್ರೀಯ ಕಾನೂನುಗಳ ಅಳವಡಿಕೆ, ಶಸ್ತ್ರ ನಿಯಂತ್ರಣಕ್ಕೆ ಒಲವು, ಪ್ರಜಾಪ್ರಭುತ್ವದ ಹರಡುವಿಕೆಗಳಿಂದಾಗಿ ಉದಾರವಾದಿ ಸಂಘರ್ಷ ಪರಿಹಾರ ಸಿದ್ಧಾಂತವು ಮನ್ನಣೆ ಪಡೆದುಕೊಂಡಿತು. ವುಡ್ರೊ ವಿಲ್ಸನ್, ಬರ್ಟ್‌ರಾಂಡ್ ರಜಲ್,ಅಲ್ಡಸ್ ಹಕ್ಸ್ಲಿ ಮುಂತಾದವರ ವಿಚಾರಗಳಲ್ಲಿ ಉದಾರವಾದಿ ಸಂಘರ್ಷ ಪರಿಹಾರ ಸಿದ್ಧಾಂತ ಪ್ರತಿಫಲನಗೊಂಡಿದೆ.

ಗಮನಾರ್ಹ ಅಂಶವೇನೆಂದರೆ, ಮಾನವ ಸ್ವಭಾವ ಉತ್ತಮವಾದ್ದರಿಂದ ಪ್ರಜಾಸತ್ತಾತ್ಮಕ ರಾಷ್ಟ್ರಗಳ ನಿಲುವು ಅಥವಾ ವರ್ತನೆಗಳೂ ಸಹ ಸಮಂಜಸತೆಯಿಂದ ಕೂಡಿರುತ್ತವೆ ಎಂದು ಉದಾರವಾದಿ ಸಿದ್ಧಾಂತವು ಪ್ರತಿಪಾದಿಸುತ್ತದೆ. ಜೊತೆಗೆ ಯುದ್ಧ, ಹಿಂಸೆ, ಅಸಮಾನತೆಗಳನ್ನು ಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನಗಳ ನೆರವಿನಿಂದ ಹೋಗಲಾಡಿಸಲು ಸಲಹೆಯನ್ನು ಈ ಸಿದ್ಧಾಂತ ಒದಗಿಸುತ್ತದೆ. ಮುಂದುವರಿದು, ಸಂಘರ್ಷ ತಲೆದೋರಿದ ರಾಷ್ಟ್ರಗಳಿಗೆ ಸಮಾನ ಗೌರವ ನೀಡಿ ಶಾಂತಿಯುತ ಪರಿಹಾರ ಸೂತ್ರವನ್ನು ಕಂಡುಕೊಳ್ಳಲು ಒತ್ತಾಯಿಸುತ್ತದೆ. ನಿಷ್ಪಕ್ಷಪಾತ, ನಿಯಮಾಧಾರಿತ, ನ್ಯಾಯ ಸಮ್ಮತ ಅಂತರ್‌ರಾಷ್ಟ್ರೀಯ ಸಂಘಟನೆಗಳ ಬೆಳಕಿನಲ್ಲಿ ಸಂಘರ್ಷಗಳ ಪರಿಹಾರವನ್ನು ಕಂಡುಕೊಳ್ಳಲು ಉದಾರವಾದಿ ಸಿದ್ಧಾಂತವು ಸೂಚಿಸುತ್ತದೆ. ವಾಸ್ತವವಾದಿಗಳ ನಿಲುವುಗಳನ್ನು ಸಂಘರ್ಷ ಪರಿಹಾರ ಕುರಿತಂತೆ ಟೀಕಿಸುವ ಉದಾರವಾದಿಗಳು ಪ್ರಜಾಸತ್ತಾತ್ಮಕ ತತ್ವಗಳ ನೆರವಿನಿಂದ ರಾಷ್ಟ್ರಗಳ ನಡುವೆ ಸಹಕಾರಯುತ ಸಂಬಂಧ ಬೆಸೆದು ಸಂಘರ್ಷಗಳನ್ನು ನಿರ್ಮೂಲನೆಗೊಳಿಸಲು ಆಶಿಸುತ್ತಾರೆ.

**2. ವಾಸ್ತವವಾದಿ ಸಿದ್ಧಾಂತ [Realist Theory]:** ಎರಡನೇ ವಿಶ್ವ ಸಮರದ ನಂತರದಲ್ಲಿ ಕಾಣಿಸಿಕೊಂಡ ವಾಸ್ತವವಾದ ಸಿದ್ಧಾಂತವು ಸಾಂಪ್ರದಾಯಿಕ ವಾಸ್ತವವಾದ, ನವ ವಾಸ್ತವವಾದ ಹಾಗೂ ನವ ಸಾಂಪ್ರದಾಯಿಕ ವಾಸ್ತವವಾದವೆಂಬ ಆಯಾಮವುಳ್ಳ ಸಿದ್ಧಾಂತ. ಸಾಂಪ್ರದಾಯಿಕ ವಾಸ್ತವವಾದಿ ಚಿಂತಕರಾದ ಮಾರ್ಗೆಂಥೊ, ಥಾಮ್ಸನ್, ಕೆನೆತ್ ವಾಲ್ಜ್ ಮಾನವ ಸ್ವಭಾವತಃ ಸ್ವಾರ್ಥಿ ಮತ್ತು ಆಕ್ರಮಣಕಾರಿ ಎಂಬುದನ್ನು ಪ್ರತಿಪಾದಿಸುವ ಮೂಲಕ ರಾಷ್ಟ್ರಗಳಿಗೂ ಅದನ್ನು ಅನ್ವಯಿಸಿ ಜರ್ಮನಿಯ ಹಿಟ್ಲರ್, ಇಟಲಿಯ ಮುಸಲೋನಿ, ಇರಾಕಿನ ಸದ್ದಾಮ್ ಹುಸೇನರನ್ನು ನಿದರ್ಶನವಾಗಿ ನೀಡಿರುವರು. ನವ ವಾಸ್ತವವಾದವು ಅಂತರ್‌ರಾಷ್ಟ್ರೀಯ ವ್ಯವಸ್ಥೆಯಲ್ಲಿನ ಶಕ್ತಿಗೆ ಮಹತ್ವ ನೀಡುತ್ತಾ ಅಂತರ್ ರಾಷ್ಟ್ರೀಯ ಸಮುದಾಯದ ಸಾರ್ವಭೌಮಾಧಿಕಾರದ ಕೊರತೆಯನ್ನು ಬಿಚ್ಚಿಡುತ್ತದೆ. ರಾಷ್ಟ್ರಗಳನ್ನು ನಿಯಂತ್ರಿಸುವ ಅಧಿಕಾರದ ಕೊರತೆಯಿಂದಾಗಿ ರಾಷ್ಟ್ರಗಳು ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು, ಇತರ ರಾಷ್ಟ್ರಗಳ ಶಕ್ತಿಯ ಹೆಚ್ಚಳದಿಂದ ಅಭದ್ರತೆಗೆ ಒಳಗಾಗುವ ರಾಷ್ಟ್ರಗಳು ತಮ್ಮ ಶಕ್ತಿ ಹೆಚ್ಚಿಸಿಕೊಳ್ಳಲು, ರಾಷ್ಟ್ರಗಳ ಮೈತ್ರಿಕೂಟ ರಚನೆಗೊಳ್ಳಲು ಸಾಧ್ಯವಾಗಿ ಸಂಘರ್ಷದ ಪರಿಹಾರ ಕಠಿಣವೆಂದು ಪ್ರತಿಪಾದಿಸುತ್ತದೆ. ಜೊತೆಗೆ ವಾಸ್ತವವಾದಿ ಸಿದ್ಧಾಂತವು ಅಂತರ್ ರಾಷ್ಟ್ರೀಯ ರಾಜಕೀಯವನ್ನು ಶಕ್ತಿಗಾಗಿ ನಡೆಯುವ ನಿರಂತರ ಹೋರಾಟವೆನ್ನುವ ಮೂಲಕ ಸಂಘರ್ಷದ ತೀವ್ರತೆಯನ್ನು ಪ್ರತಿಪಾದಿಸುತ್ತದೆ.

ಗಮನಾರ್ಹ ಅಂಶವೇನೆಂದರೆ, ರಾಷ್ಟ್ರಗಳ ನಡುವಿನ ಶಕ್ತಿಯ ಹೆಚ್ಚಳವೇ ಅವುಗಳ ಸಂಘರ್ಷವನ್ನು ಪರಿಹರಿಸಲು ನೆರವಾಗಬಲ್ಲದೆಂಬ ಅಂಶವನ್ನೂ ಕೆಲ ವಾಸ್ತವವಾದಿಗಳು ಒಪ್ಪಿಕೊಳ್ಳುತ್ತಾರೆ. ಅಂತೆಯೇ ಏಕರೂಪದ ಸಂಸ್ಕೃತಿ, ಧರ್ಮ, ಹಿತಾಸಕ್ತಿಯುಳ್ಳ ರಾಷ್ಟ್ರಗಳ



ನಡುವೆ ಶಕ್ತಿ ಯಾವುದೇ ಪ್ರಮಾಣದಲ್ಲಿರಲಿ ಸಂಘರ್ಷದ ಬದಲು ಸಹಕಾರ ಏರ್ಪಡುವುದನ್ನು ವಾಸ್ತವವಾದಿಗಳು ಕಡೆಗಣಿಸಿದ್ದಾರೆ. ಮುಂದುವರಿದು, ಯಾವುದೇ ದೊಡ್ಡ ಸಂಘರ್ಷಕ್ಕೆ ಅವಕಾಶವಿಲ್ಲದೇ ಶೀತಲ ಸಮರ ಅಂತ್ಯವಾಗಿದುದು ವಾಸ್ತವವಾದಿ ಸಿದ್ಧಾಂತದ ಪ್ರಸ್ತುತತೆಯನ್ನು ಕ್ಷೀಣಿಸಿದೆ.

**3. ಮಾರ್ಕ್ಸ್‌ವಾದಿ ಸಿದ್ಧಾಂತ [Marxist Theory]:** ಕಾರ್ಲ್‌ಮಾರ್ಕ್ಸ್ ಹಾಗೂ ಎಂಜೆಲ್ಸ್ ಬರಹಗಳಲ್ಲಿ ಮೂಡಿ ಬಂದ ಚಿಂತನೆಗಳೇ ಸಮತಾವಾದ ಅಥವ ಮಾರ್ಕ್ಸ್‌ವಾದ. ಮಾರ್ಕ್ಸ್‌ವಾದದಂತೆ ರಾಷ್ಟ್ರಗಳು ಬಂಡವಾಳಶಾಹಿ ವರ್ಗದ ಕೈಯಲ್ಲಿನ ಒಂದು ಸಾಧನ. ಜಗತ್ತು ಆರ್ಥಿಕವಾಗಿ ಬಲಶಾಲಿಯಾದ ರಾಷ್ಟ್ರಗಳನ್ನು ಬೆಂಬಲಿಸುತ್ತದೆ. ಸಾಮಾನ್ಯವಾಗಿ ಬಂಡವಾಳಶಾಹಿ ರಾಷ್ಟ್ರಗಳು ತಮ್ಮ ಆರ್ಥಿಕ ಬಲದಿಂದ ದುರ್ಬಲ ಅಥವಾ ತಮ್ಮ ಎದುರಾಳಿ ರಾಷ್ಟ್ರಗಳನ್ನು ನಿಯಂತ್ರಣಗೊಳಿಸಲು ಮುಂದಾಗುತ್ತವೆ. ಅಂತರ್‌ರಾಷ್ಟ್ರೀಯ ಸಮುದಾಯದಲ್ಲಿ ಉಳ್ಳವರು ಹಾಗೂ ಇಲ್ಲದವರೆಂಬ ಎರಡು ವರ್ಗದ ರಾಷ್ಟ್ರಗಳ ಅಸ್ತಿತ್ವ ಕಂಡು ಬರುತ್ತದೆ. ಈ ಮಾರ್ಕ್ಸ್‌ವಾದಿ ಮೂಲಾಂಶಗಳ ನೆಲೆಗಟ್ಟಿನಲ್ಲಿ ರಾಷ್ಟ್ರಗಳ ನಡುವಿನ ಸಂಘರ್ಷ ಪರಿಹಾರ ಕುರಿತಂತೆ ಮಾರ್ಕ್ಸ್‌ವಾದಿಗಳು ತಮ್ಮ ವಿಚಾರವನ್ನು ಪ್ರತಿಪಾದಿಸಿದ್ದಾರೆ.

ಗಮನಾರ್ಹ ಅಂಶವೇನೆಂದರೆ, ಜಗತ್ತಿನ ಎಲ್ಲ ರಾಷ್ಟ್ರಗಳ ನಡುವೆ ಸಂಪತ್ತು ಸಮಾನವಾಗಿ ಹಂಚಿಕೆಯಾದರೆ ಸಂಘರ್ಷ ಸಹಜವಾಗಿ ನಿರ್ಮೂಲನೆಗೊಳ್ಳುವುದೆಂಬುದು ಮಾರ್ಕ್ಸ್‌ವಾದದ ತಿರುಳು. ಮುಂದುವರಿದು, ಸಾಮೂಹಿಕ ಕಾರ್ಯಾಚರಣೆಯು ರಾಷ್ಟ್ರಗಳ ನಡುವಿನ ಸಂಘರ್ಷದ ತೀವ್ರತೆಯನ್ನು ಹೋಗಲಾಡಿಸಬಹುದೆಂಬುದು ಈ ಸಿದ್ಧಾಂತದ ಆಶಯ. ಇದರೊಡನೆ ಮುಂದುವರಿದ ಅಥವಾ ಹಿಂದುಳಿದ, ಬಂಡವಾಳಶಾಹಿ ಅಥವಾ ಸಮಾಜವಾದಿ, ಪ್ರಬಲ ಅಥವಾ ದುರ್ಬಲ ಇತ್ಯಾದಿ ರಾಷ್ಟ್ರಗಳ ವರ್ಗಗಳು ಮಾಯವಾದರೆ ಪ್ರಪಂಚದಲ್ಲಿ ಸಂಘರ್ಷ ಪರಿಹಾರಗೊಳ್ಳುವುದೆಂಬುದು ಮಾರ್ಕ್ಸ್‌ವಾದದ ನಿಲುವು.

ಈ ಮೇಲೆ ಪ್ರಸ್ತಾಪಿಸಲಾಗಿರುವ ಸಂಘರ್ಷ ಪರಿಹಾರ ಸಿದ್ಧಾಂತಗಳಲ್ಲದೇ ಜೈವಿಕ ಮತ್ತು ಆರ್ಥಿಕ ತಳಹದಿಯುಳ್ಳ ಸಿದ್ಧಾಂತಗಳೂ ಚಿಂತಕರಿಂದ ಪ್ರತಿಪಾದಿಸಲ್ಪಟ್ಟಿದುದು ಗಮನಾರ್ಹ. ವಿವಾದಗಳ ಶಾಂತಿಯುತ ಇತ್ಯರ್ಥದ ಅಸಾಧ್ಯತೆಯನ್ನು ಮತ್ತು ಸಂಘರ್ಷ ಪರಿಹಾರದ ಮಾರ್ಗೋಪಾಯಗಳನ್ನು ಮನವರಿಕೆ ಮಾಡಿಕೊಳ್ಳಲು ಈ ವಿವಿಧ ಸಿದ್ಧಾಂತಗಳ ಅರಿವು ನಮಗೆ ಸಹಕಾರಿಯಾಗುತ್ತದೆ.

## ಮಾದರಿ ಪ್ರಶ್ನೆಗಳು [Model Questions]:

[A.] ಎರಡು ಅಂಕದ ಪ್ರಶ್ನೆಗಳು:

1. ವಿವಾದಗಳ ಶಾಂತಿಯುತ ಇತ್ಯರ್ಥ ಎಂದರೇನು?
2. ವಿವಾದಗಳ ಶಾಂತಿಯುತ ಇತ್ಯರ್ಥದ ಮೂರು ವಿಧಾನಗಳನ್ನು ಬರೆಯಿರಿ.
3. ಸಂಧಾನದ ಪರಿಣಾಮಗಳಾವುವು?
4. ಮಧ್ಯಸ್ಥಿಕೆ ಎಂದರೇನು? ಉದಾಹರಣೆ ನೀಡಿ.
5. ರಾಜಿ ಪಂಚಾಯಿತಿಯ ಅರ್ಥವನ್ನು ತಿಳಿಸಿರಿ.
6. ರಾಷ್ಟ್ರಗಳಿಗೆ ಬಂಧನಕಾರಿಯಾದ ವಿವಾದಗಳ ಶಾಂತಿಯುತ ಪರಿಹಾರ ವಿಧಾನಗಳನ್ನು ಹೆಸರಿಸಿರಿ.
7. ಸಂಘರ್ಷ ಎಂದರೇನು?
8. ಸಂಘರ್ಷ ಪರಿಹಾರ ಕುರಿತಾದ ಮೂರು ಸಿದ್ಧಾಂತಗಳನ್ನು ಹೆಸರಿಸಿರಿ.
9. ಸಂಘರ್ಷ ಪರಿಹಾರದ ಉದಾರವಾದಿ ಸಿದ್ಧಾಂತದ ತಿರುಳೇನು?
10. ಸಂಘರ್ಷ ಪರಿಹಾರ ಕುರಿತಾದ ವಾಸ್ತವವಾದಿ ಸಿದ್ಧಾಂತದ ಪ್ರಕಾರಗಳಾವುವು?
11. ಸಂಘರ್ಷ ಪರಿಹಾರ ಕುರಿತಂತೆ ಮಾರ್ಕ್ಸ್‌ವಾದಿ ಸಿದ್ಧಾಂತದ ನಿಲುವುಗಳಾವುವು?

[B.]

1. ವಿವಾದಗಳ ಶಾಂತಿಯುತ ಇತ್ಯರ್ಥದ ವಿಧಾನಗಳನ್ನು ಚರ್ಚಿಸಿರಿ.
2. ಸಂಘರ್ಷ ಪರಿಹಾರ ಸಿದ್ಧಾಂತಗಳನ್ನು ವಿವರಿಸಿರಿ.

[C.] ಹತ್ತು ಅಂಕದ ಪ್ರಶ್ನೆಗಳು:

1. ವಿವಾದಗಳ ಶಾಂತಿಯುತ ಇತ್ಯರ್ಥ ಎಂದರೇನು? ಅದರ ವಿಧಾನಗಳನ್ನು ವಿವರಿಸಿರಿ.
2. ಸಂಘರ್ಷ ಎಂದರೇನು? ಸಂಘರ್ಷ ಪರಿಹಾರ ಸಿದ್ಧಾಂತಗಳನ್ನು ಪರಿಶೀಲಿಸಿರಿ.



ಅಧ್ಯಾಯ 12:

# ಜಾಗತಿಕ ವ್ಯವಸ್ಥೆ

## [WORLD SYSTEM]

### ಪ್ರಸ್ತಾವನೆ [Introduction]:

ರಾಜ್ಯಶಾಸ್ತ್ರದ ಶಾಖೆಯಾಗಿದ್ದ ಅಂತರ್‌ರಾಷ್ಟ್ರೀಯ ಸಂಬಂಧಗಳು ಎಂಬ ಶೀರ್ಷಿಕೆಯ ಅಧ್ಯಯನವು ಕಾಲಾನುಕ್ರಮದಲ್ಲಿ ತನ್ನ ವ್ಯಾಪ್ತಿ ಮತ್ತು ಮಹತ್ವವನ್ನು ಹೆಚ್ಚಿಸಿಕೊಳ್ಳುತ್ತಾ ಬಂದಿದೆ. ಫಲವಾಗಿ ಅಂತರ್‌ರಾಷ್ಟ್ರೀಯ ಸಂಬಂಧಗಳ ಚಿಂತಕರು ಜಾಗತಿಕವಾಗಿ ಪ್ರಭಾವ ಬೀರಬಲ್ಲ ರಾಷ್ಟ್ರಗಳ ವಿವಿಧ ವಿದ್ಯಮಾನಗಳನ್ನು ಆಳವಾಗಿ ಅಧ್ಯಯಿಸಲು ಮುಂದಾದರು. ಈ ನಿಟ್ಟಿನಲ್ಲಿ ಶ್ರಮಿಸುತ್ತಿರುವ ಚಿಂತಕರು ಶಕ್ತಿಯ ಕೇಂದ್ರವನ್ನು ಆಧರಿಸಿದ ಜಾಗತಿಕ ವ್ಯವಸ್ಥೆಯನ್ನು ಮನವರಿಕೆ ಮಾಡಿಕೊಳ್ಳಲು ಪ್ರಯತ್ನಿಸಿದರು. ಈ ವೇಳೆಯಲ್ಲಿ ಜಾಗತಿಕವಾಗಿ ಶಕ್ತಿಯ ಹಂಚಿಕೆ ಅಥವಾ ಚಲಾವಣೆಯನ್ನು ಆಧರಿಸಿದ ಧ್ರುವೀಯತೆಯ ಸಿದ್ಧಾಂತಗಳು ಪ್ರತಿಪಾದಿಸಲ್ಪಟ್ಟವು.

ರಾಷ್ಟ್ರೀಯ, ಪ್ರಾದೇಶಿಕ ಅಥವಾ ಜಾಗತಿಕವಾಗಿ ಶಕ್ತಿ ಅಥವಾ ಪ್ರಭಾವಗಳ ಹಂಚಿಕೆಯನ್ನು ಧ್ರುವಿಯತೆ ಎನ್ನಲಾಗುತ್ತದೆ. ಧ್ರುವೀಯತೆಯು ನಿರ್ದಿಷ್ಟ ಕಾಲಾವಧಿಯ ಅಂತರರಾಷ್ಟ್ರೀಯ ವ್ಯವಸ್ಥೆಯ ಸ್ವರೂಪವನ್ನು ಪ್ರತಿನಿಧಿಸುತ್ತದೆ. ಜಾಗತಿಕ ವ್ಯವಸ್ಥೆಯನ್ನು ಅಂತರರಾಷ್ಟ್ರೀಯ ಸಂಬಂಧಗಳ ಚಿಂತಕರು ಮೂರು ಧ್ರುವಿಯತೆಗಳಾಗಿ ವಿಂಗಡಿಸಿದ್ದಾರೆ. ಅವುಗಳೆಂದರೆ ಏಕ ಧ್ರುವಿಯ ವ್ಯವಸ್ಥೆ, ದ್ವಿ ಧ್ರುವಿಯ ವ್ಯವಸ್ಥೆ ಹಾಗೂ ಬಹು ಧ್ರುವಿಯ ವ್ಯವಸ್ಥೆ. ಜಗತ್ತಿನ ರಾಷ್ಟ್ರಗಳ ನಡುವೆ ಶಕ್ತಿಯ ಹಂಚಿಕೆ ಅಥವಾ ಚಲಾವಣೆಯು ಕಾಲಾನುಕ್ರಮದಲ್ಲಿ ಹೇಗೆ ಬದಲಾಯಿತು ಎಂಬುದನ್ನು ಈ ಧ್ರುವೀಯತೆಯ ಸಿದ್ಧಾಂತಗಳು ಪ್ರತಿಪಾದಿಸುತ್ತವೆ. ಅಂತರ್‌ರಾಷ್ಟ್ರೀಯ ಸಂಬಂಧಗಳ ವಿದ್ಯಾರ್ಥಿಗಳು ಅರಿತುಕೊಳ್ಳಲೇಬೇಕಾದ ಈ ಜಾಗತಿಕ ವ್ಯವಸ್ಥೆಯನ್ನು ಧ್ರುವಿಯತೆಯ ಸಿದ್ಧಾಂತದಲ್ಲಿ ಚಿಂತಕರು ಪ್ರತಿಪಾದಿಸಿರುವ ಮೂರು ಧ್ರುವೀಯ ವ್ಯವಸ್ಥೆಗಳ ನೆರವಿನಿಂದ ಪ್ರಸ್ತುತ ಅಧ್ಯಾಯದಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

### [A.] ಏಕ ಧ್ರುವೀಯ ವ್ಯವಸ್ಥೆ [Unipolar Systom]:

ಅಂತರ್‌ರಾಷ್ಟ್ರೀಯ ರಾಜಕೀಯದಲ್ಲಿ ಕೇವಲ ಒಂದೇ ರಾಷ್ಟ್ರವು ಜಾಗತಿಕವಾಗಿ ಪ್ರಭಾವಶಾಲಿಯಾಗಿರುವುದು ಸರಳಾರ್ಥದಲ್ಲಿ ಏಕ ಧ್ರುವೀಯ ವ್ಯವಸ್ಥೆ ಎನಿಸಿಕೊಳ್ಳುತ್ತದೆ. ಸಾಮಾಜಿಕ, ಆರ್ಥಿಕ, ರಾಜಕೀಯ, ಸೈನಿಕ ಕ್ಷೇತ್ರದಲ್ಲಿ ಪ್ರಭಾವ ಹೊಂದಿರುವ ರಾಷ್ಟ್ರವೊಂದರ ಏಕಮುಖಿ ಶಕ್ತಿಯ ಹಂಚಿಕೆ ಅಥವಾ ಚಲಾವಣೆಯು ವಿಶಾಲಾರ್ಥದಲ್ಲಿ ಏಕ ಧ್ರುವೀಯ ವ್ಯವಸ್ಥೆ ಎನಿಸಿಕೊಳ್ಳುತ್ತದೆ. ಈ ಏಕ ಧ್ರುವಿಯ ವ್ಯವಸ್ಥೆಯಲ್ಲಿ ಒಂದೇ ರಾಷ್ಟ್ರವು ತನ್ನ ಮಿಲಿಟರಿ ಸಾಮರ್ಥ್ಯ, ಆರ್ಥಿಕ ಶಕ್ತಿ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪ್ರಭಾವಗಳ ಮೂಲಕ ಜಾಗತಿಕವಾಗಿ ಶಕ್ತಿಶಾಲಿ ರಾಷ್ಟ್ರವೆನಿಸಿರುತ್ತದೆ. ಜೊತೆಗೆ ಯಾವುದೇ ಇತರ ರಾಷ್ಟ್ರಗಳು ಶಕ್ತಿಶಾಲಿ ರಾಷ್ಟ್ರಕ್ಕೆ ಏಕ ಧ್ರುವಿಯ ವ್ಯವಸ್ಥೆಯಲ್ಲಿ ಪ್ರತಿ ಸ್ಪರ್ಧೆಯನ್ನು ಒಡ್ಡುವ ಸ್ಥಿತಿಯಲ್ಲಿರುವುದಿಲ್ಲ. ಒಟ್ಟಾರೆ ಜಾಗತಿಕವಾಗಿ ಒಂದೇ ಶಕ್ತಿಶಾಲಿ ರಾಷ್ಟ್ರದ ಆಧಿಪತ್ಯವನ್ನು ಏಕ ಧ್ರುವಿಯ ವ್ಯವಸ್ಥೆಯು ಪ್ರತಿಪಾದಿಸುತ್ತದೆ.

ಅಮೇರಿಕಾ ಮತ್ತು ಸೋವಿಯತ್ ಒಕ್ಕೂಟದ ನಡುವಿನ ಶೀತಲ ಸಮರವು 1991 ರಲ್ಲಿ ಅಂತ್ಯಗೊಂಡಿತು. ಸೋವಿಯತ್ ಒಕ್ಕೂಟದ ವಿಕಟನೆಯು ಈ ಜಾಗತಿಕ ಬೆಳವಣಿಗೆಗೆ ಪ್ರಧಾನ ಕಾರಣವಾಗಿತ್ತು. ಅದುವರೆಗೆ ಅಮೇರಿಕಾದ ಆಧಿಪತ್ಯಕ್ಕೆ ಸ್ಪರ್ಧೆಯೊಡ್ಡುತ್ತಿದ್ದ ಸೋವಿಯತ್ ಒಕ್ಕೂಟದ ವಿಕಟನೆಯು ಅಮೇರಿಕಾವನ್ನು ಜಾಗತಿಕವಾಗಿ ಏಕೈಕ ಪ್ರಬಲ ರಾಷ್ಟ್ರವನ್ನಾಗಿಸಿತು. ಹೀಗಾಗಿ 1991 ರ ಸೋವಿಯತ್ ಒಕ್ಕೂಟದ ವಿಕಟನೆಯ ಕಾಲವನ್ನು ಅಂತರ್‌ರಾಷ್ಟ್ರೀಯ ಸಂಬಂಧಗಳ ಚಿಂತಕರು ಅಮೇರಿಕಾದ ಏಕ ಧ್ರುವಿಯ ವ್ಯವಸ್ಥೆಯ ಪ್ರಾರಂಭವೆಂದು ಗುರುತಿಸುತ್ತಾರೆ.

1991 ರ ನಂತರದಲ್ಲಿ ಅಮೇರಿಕಾವು ವಾಣಿಜ್ಯ ಮತ್ತು ಸೈನಿಕ ಕ್ಷೇತ್ರದಲ್ಲಿ ಜಗತ್ತಿನ ಪ್ರಬಲ ರಾಷ್ಟ್ರವಾಗಿ ಪರಿಗಣಿಸಲ್ಪಟ್ಟಿತು. ಅಮೇರಿಕಾದ ನಾಣ್ಯವಾದ ಡಾಲರ್ ಜಾಗತಿಕವಾಗಿ ಅತ್ಯಂತ ಪ್ರಭಾವಿ ಮತ್ತು ಸುರಕ್ಷಿತ ನಾಣ್ಯವೆನಿಸಿತು. ಇದರೊಡನೆ ಅಮೇರಿಕಾವು ಆರ್ಥಿಕ ಹಾಗೂ ಸೈನಿಕ ನೆರವುಗಳ ಮೂಲಕ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡು ವಿಶ್ವದ ದೊಡ್ಡಣ್ಣನ ಸ್ಥಾನವನ್ನು ಗಳಿಸಿಕೊಂಡಿತು. ಅಲ್ಲದೇ ಜಾಗತಿಕವಾಗಿ ತನ್ನ ರಾಜಕೀಯ ಪ್ರಭಾವವನ್ನು ಬೀರುವಲ್ಲಿ ಅಮೇರಿಕಾ ಸಫಲವಾಯಿತು. ಹೀಗೆ ಶೀತಲ ಸಮರದ ಅಂತ್ಯದಿಂದ ಅಮೇರಿಕಾದ ರೂಪದಲ್ಲಿ ಜಾಗತಿಕ ವ್ಯವಸ್ಥೆಯು ಏಕ ಧ್ರುವೀಯ ವ್ಯವಸ್ಥೆಯಾಗಿ ಮಾರ್ಪಟ್ಟಿದೆ ಎಂಬುದು ಗಮನಾರ್ಹ.

ಅಂತರ್‌ರಾಷ್ಟ್ರೀಯ ಸಂಬಂಧಗಳ ಚಿಂತಕರಾದ ಜಾನ್ ಐಕೆನ್ಬರಿ ಮತ್ತು ವಿಲಿಯಂ ವೋಲ್‌ಫೋರ್ತ್ ಏಕ ಧ್ರುವಿಯ ವ್ಯವಸ್ಥೆಯು ಜಾಗತಿಕ ಸ್ಥಿರತೆಯನ್ನು ಕಾಪಾಡಬಲ್ಲ ಸಾಧನವೆಂದು ಪ್ರತಿಪಾದಿಸಿರುವರು. ಅವರ ಈ ನಿಲುವಿಗೆ ಏಕ ಧ್ರುವಿಯ ವ್ಯವಸ್ಥೆಯಲ್ಲಿ



ಪ್ರಬಲ ದೇಶಕ್ಕೆ ಸ್ಪರ್ಧೆಯೊಡ್ಡುವ ರಾಷ್ಟ್ರವಿಲ್ಲದಿರುವುದು ಮತ್ತು ಪ್ರಬಲ ರಾಷ್ಟ್ರದ ಹಸ್ತಕ್ಷೇಪದ ಭಯದಿಂದಾಗಿ ಉಳಿದ ರಾಷ್ಟ್ರಗಳು ಪರಸ್ಪರ ಘರ್ಷಣೆಗೆ ಮುಂದಾಗದಿರುವುದು ಪ್ರಧಾನ ಕಾರಣವಾಗಿದ್ದವು. ಆಸಕ್ತಿದಾಯಕ ಅಂಶವೇನೆಂದರೆ, ಅಮೇರಿಕಾವು 1991 ರಿಂದ 2011 ರ ನಡುವಿನ 20 ವರ್ಷಗಳಲ್ಲಿ 13 ವರ್ಷ ಯುದ್ಧದಲ್ಲಿ ನಿರತವಾದ್ದರಿಂದ ಚಿಂತಕರ ಸ್ಥಿರತೆಯ ಅಭಿಪ್ರಾಯವು ಸಮರ್ಪಕವೆನಿಸಲಿಲ್ಲ. ಈ ನಡುವೆ ಅಮೇರಿಕಾವು 2001 ರ ಭಯೋತ್ಪಾದಕ ದಾಳಿಗಳಿಂದ ತನ್ನ ಪ್ರಾಬಲ್ಯವನ್ನು ಕಳೆದುಕೊಳ್ಳುತ್ತಾ ಬಂದು 2011 ರ ವೇಳೆಗೆ ಜಗತ್ತಿನ ಇತರ ದೇಶಗಳು ಪ್ರವರ್ಧಮಾನಕ್ಕೆ ಬಂದವು. ಫಲವಾಗಿ ಚಿಂತಕ ಬಾರಿ ಪೋಜನ್ ಏಕ ಧ್ರುವಿಯ ವ್ಯವಸ್ಥೆ ಅಂತ್ಯವಾಗಿದ್ದು ಜಗತ್ತು ಬಹು ಧ್ರುವಿಯ ವ್ಯವಸ್ಥೆ ಮೈಗೂಡಿಸಿಕೊಳ್ಳುತ್ತಿದೆ ಎಂದು ವಾದಿಸಿದನು.

### [B.] ದ್ವಿ ಧ್ರುವೀಯ ವ್ಯವಸ್ಥೆ [Bipolar Systom]:

ಅಂತರ್‌ರಾಷ್ಟ್ರೀಯ ರಾಜಕೀಯದಲ್ಲಿ ಎರಡು ರಾಷ್ಟ್ರಗಳು ಮಾತ್ರವೇ ಜಾಗತಿಕವಾಗಿ ಪ್ರಭಾವಶಾಲಿಯಾಗಿರುವುದು ಸರಳಾರ್ಥದಲ್ಲಿ ದ್ವಿ ಧ್ರುವೀಯ ವ್ಯವಸ್ಥೆ ಎನಿಸಿಕೊಳ್ಳುತ್ತವೆ. ಸಾಮಾಜಿಕ, ಆರ್ಥಿಕ, ರಾಜಕೀಯ, ಸೈನಿಕ ಕ್ಷೇತ್ರಗಳಲ್ಲಿ ಜಾಗತಿಕವಾಗಿ ಪ್ರಭಾವ ಹೊಂದಿರುವ ರಾಷ್ಟ್ರಗಳೆರಡರ ನಡುವಿನ ಶಕ್ತಿಯ ಹಂಚಿಕೆ ಅಥವಾ ಚಲಾವಣೆಯು ವಿಶಾಲಾರ್ಥದಲ್ಲಿ ದ್ವಿ ಧ್ರುವಿಯ ವ್ಯವಸ್ಥೆ ಎನಿಸಿಕೊಳ್ಳುತ್ತದೆ. ಈ ದ್ವಿ ಧ್ರುವೀಯ ವ್ಯವಸ್ಥೆಯಲ್ಲಿನ ಎರಡು ರಾಷ್ಟ್ರಗಳು ಜಾಗತಿಕ ಶ್ರೇಷ್ಠತೆ ಹೊಂದಲು ಪರಸ್ಪರ ಸ್ಪರ್ಧಿಸುತ್ತಿದ್ದು ವಿರೋಧಾತ್ಮಕ ನಿಲುವುಗಳಿಗೆ ಅಂಟಿಕೊಂಡಿರುತ್ತವೆ. ದ್ವಿ ಧ್ರುವಿಯ ವ್ಯವಸ್ಥೆಯಲ್ಲಿನ ಎರಡು ಪ್ರಬಲ ರಾಷ್ಟ್ರಗಳ ನಡುವೆ ಸಾಮಾನ್ಯವಾಗಿ ಸಹಕಾರದ ಬದಲು ಪೈಪೋಟಿ ಕಂಡು ಬರುತ್ತದೆ. ಇಲ್ಲಿ ಅಂತರ್ ರಾಷ್ಟ್ರೀಯ ರಾಜಕಾರಣದಲ್ಲಿ ತಮ್ಮ ಆಧಿಪತ್ಯ ಸ್ಥಾಪಿಸಲು ಅಥವಾ ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ನಿರಂತರವಾಗಿ ರಾಷ್ಟ್ರಗಳು ಹವಣಿಸುತ್ತಿರುತ್ತವೆ.

ಅಂತರ್‌ರಾಷ್ಟ್ರೀಯ ಸಂಬಂಧಗಳ ಇತಿಹಾಸದಲ್ಲಿ ಶೀತಲ ಸಮರಕ್ಕೆ ಕಾರಣವಾದ 1947 ರಿಂದ 1991 ರವರೆಗಿನ ಕಾಲಾವಧಿಯನ್ನು ದ್ವಿ ಧ್ರುವಿಯ ವ್ಯವಸ್ಥೆಯ ಉತ್ತಮ ನಿದರ್ಶನವೆಂದು ಪರಿಗಣಿಸಲಾಗಿದೆ. ಈ ಅವಧಿಯಲ್ಲಿ ಸೋವಿಯತ್ ಒಕ್ಕೂಟ ಮತ್ತು ಅಮೇರಿಕಾಗಳು ಜಗತ್ತಿನ ಪ್ರಬಲ ರಾಷ್ಟ್ರಗಳಾಗಿ ಗುರುತಿಸಿಕೊಂಡವು. ಇವೆರಡರ ನಡುವೆ ಸೈದ್ಧಾಂತಿಕ ಮತ್ತು ಸೈನಿಕ ಪ್ರಭಾವಕ್ಕಾಗಿ ಸ್ಪರ್ಧೆ ಏರ್ಪಟ್ಟಿತು. ಫಲವಾಗಿ ಜಗತ್ತು ಸಮಾಜವಾದಿ ಮತ್ತು ಬಂಡವಾಳಶಾಹಿ ಧ್ರುವಗಳಾಗಿ ಪರಿಗಣಿಸಲ್ಪಟ್ಟಿತಲ್ಲದೇ ನ್ಯಾಟೊ ಮತ್ತು ವಾರ್ಸಾ ಕೂಟಗಳಲ್ಲಿ ವಿಶ್ವದ ರಾಷ್ಟ್ರಗಳು ಧ್ರುವೀಕರಣಗೊಂಡವು. 20 ನೇ ಶತಮಾನದ ಸುಮಾರು ನಾಲ್ಕು ದಶಕಗಳವರೆಗೆ ಪ್ರಪಂಚ ಸೋವಿಯತ್ ಒಕ್ಕೂಟ ಮತ್ತು ಅಮೇರಿಕಾಗಳ ಶಕ್ತಿ ಬಣಗಳ ದ್ವಿ ಧ್ರುವಿಯ ವ್ಯವಸ್ಥೆಗೆ ಒಳಪಟ್ಟಿದುದು ಗಮನಾರ್ಹ.

ಇದರೊಡನೆ 1914 ರಿಂದ 1918 ರವರೆಗೆ ಜರುಗಿದ ಮೊದಲ ವಿಶ್ವ ಸಮರ ಮತ್ತು 1939 ರಿಂದ 1945 ರವರೆಗೆ ಜರುಗಿದ ಎರಡನೇ ವಿಶ್ವ ಸಮರಗಳ ವೇಳೆಯಲ್ಲಿಯೂ ಜಗತ್ತಿನ ರಾಷ್ಟ್ರಗಳು ಎರಡು ಪ್ರತಿಸ್ಪರ್ಧಿ ಬಣವಾಗಿ ಹೋರಾಡಿದುದು ದ್ವಿ ಧ್ರುವಿಯ ವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆ.

ಅಂತರ್‌ರಾಷ್ಟ್ರೀಯ ಸಂಬಂಧಗಳ ಪ್ರಮುಖ ಚಿಂತಕರಾದ ಕೆನೆತ್ ವಾಲ್ಟ್ ಮತ್ತು ಜಾನ್ ಮಿರ್‌ಶೈಮರ್ ಜಾಗತಿಕ ವ್ಯವಸ್ಥೆಗೆ ದ್ವಿ ಧ್ರುವಿಯ ವ್ಯವಸ್ಥೆಯು ಸ್ಥಿರತೆಯನ್ನು ಒದಗಿಸುವುದೆಂದು ಅಭಿಪ್ರಾಯಪಟ್ಟಿರುವರು. ಅವರ ಈ ನಿಲುವಿಗೆ ದ್ವಿ ಧ್ರುವಿಯ ವ್ಯವಸ್ಥೆಯಲ್ಲಿ ಪ್ರಬಲ ರಾಷ್ಟ್ರಗಳು ಪರಸ್ಪರ ಶಕ್ತಿಯನ್ನು ಬಳಸದಂತೆ ನಿಯಂತ್ರಿಸುವುದು ಮತ್ತು ಯುದ್ಧದ ಭೀತಿಯನ್ನು ತಡೆಯಲು ಆಸ್ಪದವಿದುದು ಪ್ರಧಾನ ಕಾರಣವಾಗಿದ್ದವು. ಈ ಮಧ್ಯ 1991 ರಲ್ಲಿ ಸೋವಿಯತ್ ಒಕ್ಕೂಟ ವಿಕಟನೆಗೊಂಡು ಅದರ ಕೆಲ ರಾಜ್ಯಗಳು ಸ್ವತಂತ್ರಗೊಂಡು ಬಂಡವಾಳಶಾಹಿ ಸಿದ್ಧಾಂತ ಅಳವಡಿಸಿಕೊಂಡ ಪರಿಣಾಮ ದ್ವಿ ಧ್ರುವಿಯ ವ್ಯವಸ್ಥೆಗೆ ಕಾರಣವಾಗಿದ್ದ ಸಮಾಜವಾದಿ ಬಣ ಅಥವಾ ವಾರ್ಸಾ ಮೈತ್ರಿಕೂಟ ದುರ್ಬಲಗೊಂಡಿತು. ಪರಿಣಾಮ ಅಮೇರಿಕಾಕ್ಕೆ ಸ್ಪರ್ಧೆಯೊಡ್ಡುವ ಅನ್ಯ ಪ್ರಬಲ ರಾಷ್ಟ್ರವಿರದೇ ಜಗತ್ತು ದ್ವಿ ಧ್ರುವಿಯ ವ್ಯವಸ್ಥೆಯಿಂದ ಏಕ ಧ್ರುವಿಯ ವ್ಯವಸ್ಥೆಯಾಗಿ ಪರಿವರ್ತನೆಗೊಂಡಿತು.

## [C.] ಬಹು ಧ್ರುವೀಯ ವ್ಯವಸ್ಥೆ [Multy Polar Systom]:

ಎರಡಕ್ಕಿಂತ ಹೆಚ್ಚಿನ ರಾಷ್ಟ್ರಗಳಲ್ಲಿ ಶಕ್ತಿಯು ಸಮಾನವಾಗಿ ಹಂಚಿಕೆಯಾಗಿದ್ದು ಅವುಗಳು ಆರ್ಥಿಕತೆ, ಸಂಸ್ಕೃತಿ, ಸೈನಿಕ ಕ್ಷೇತ್ರಗಳಲ್ಲಿ ಜಾಗತಿಕವಾಗಿ ಪ್ರಭಾವ ಹೊಂದಿರುವುದನ್ನು ಬಹು ಧ್ರುವಿಯ ವ್ಯವಸ್ಥೆ ಎನ್ನಬಹುದಾಗಿದೆ. ಈ ಬಗೆಯ ಜಾಗತಿಕ ವ್ಯವಸ್ಥೆಯಲ್ಲಿ ಯಾವುದೇ ಒಂದು ಅಥವಾ ಎರಡು ನಿರ್ದಿಷ್ಟ ರಾಷ್ಟ್ರಗಳು ಪ್ರಬಲ ರಾಷ್ಟ್ರವೆನಿಸಿಕೊಂಡಿರದೇ ಹಲವು ಸಮಾನ ಸಾಮರ್ಥ್ಯವುಳ್ಳ ರಾಷ್ಟ್ರಗಳು ತಮ್ಮ ಪ್ರಭಾವವನ್ನು ಬೀರುತ್ತಿರುತ್ತವೆ. ಗಮನಾರ್ಹ ಅಂಶವೇನೆಂದರೆ, ಬಹು ಧ್ರುವಿಯ ವ್ಯವಸ್ಥೆಯಲ್ಲಿ ಅಸ್ತಿತ್ವದಲ್ಲಿರುವ ಅಸಂಖ್ಯಾ ಶಕ್ತಿಶಾಲಿ ರಾಷ್ಟ್ರಗಳನ್ನು ನಿಯಂತ್ರಿಸುವ ಕೇಂದ್ರೀಕೃತ ರಾಷ್ಟ್ರವಿರುವುದಿಲ್ಲ. ಜೊತೆಗೆ ಜಾಗತಿಕ ಶಕ್ತಿಯು ವಿಶ್ವದ ಬೇರೆ ಬೇರೆ ಸ್ಥಳ ಹಾಗೂ ಪ್ರದೇಶದಲ್ಲಿ ವಿಭಜನೆಗೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ ಬಹು ಧ್ರುವೀಯ ವ್ಯವಸ್ಥೆಯನ್ನು ಧ್ರುವೀಕರಣವಿಲ್ಲದ ವ್ಯವಸ್ಥೆ ಎಂದೂ ಕರೆಯಲಾಗುತ್ತದೆ. ಫಲವಾಗಿ ಏಕ ಧ್ರುವಿಯ ಮತ್ತು ದ್ವಿ ಧ್ರುವೀಯ ಜಾಗತಿಕ ವ್ಯವಸ್ಥೆಯಷ್ಟು ಬಹು ಧ್ರುವಿಯ ವ್ಯವಸ್ಥೆ ಚರ್ಚೆಗೊಳಗಾಗಲಿಲ್ಲ.

ಪ್ರಸ್ತುತ ಅಮೇರಿಕಾದೊಡನೆ ಸಿ. ಐ. ಎಸ್. ರಷ್ಯಾ, ಚೀನಾ, ಭಾರತ, ಜಪಾನ್ ಮುಂತಾದ ದೇಶಗಳಲ್ಲಿ ಜಾಗತಿಕ ಶಕ್ತಿ ನೆಲೆಸಿದ್ದು ಈ ಕಾಲಾವಧಿಯು ಅಂದರೆ 2011 ರ



ಈಚೆಗಿನ ಕಾಲವು ಜಾಗತಿಕ ವ್ಯವಸ್ಥೆಯ ಬಹು ಧ್ರುವೀಯ ವ್ಯವಸ್ಥೆಗೆ ನಿದರ್ಶನವೆಂದು ಚಿಂತಕರು ಅಭಿಪ್ರಾಯಪಡುತ್ತಾರೆ. ಗಮನಾರ್ಹ ಅಂಶವೇನೆಂದರೆ, ಕೆಲ ಚಿಂತಕರು ಶೀತಲ ಸಮರದ ಕಾಲಾವಧಿಯಲ್ಲಿಯೇ ಜಗತ್ತು ಬಹು ಧ್ರುವೀಯತ್ತ ಧಾಪುಗಾಲು ಹಾಕಿತೆಂದು ವಾದಿಸಿದ್ದಾರೆ. ಈ ನಡುವೆ ಕಾರ್ಲ್ ಡ್ಯೂಚ್ ಮತ್ತು ಡೆವಿಡ್ ಸಿಂಗರ್ ಬಹು ಧ್ರುವಿಯ ವ್ಯವಸ್ಥೆಯು ಅತ್ಯಂತ ಸ್ಥಿರವಾದ ಜಾಗತಿಕ ವ್ಯವಸ್ಥೆ ಎಂಬುದಾಗಿ ಅಭಿಪ್ರಾಯಪಟ್ಟಿರುವರು.

ಈ ಮೇಲೆ ಶಕ್ತಿಯ ಚಲಾವಣೆಯನ್ನು ಆಧರಿಸಿದ ಮೂರು ಬಗೆಯ ಜಾಗತಿಕ ವ್ಯವಸ್ಥೆಗಳನ್ನು ಸಂಕ್ಷೇಪ್ತವಾಗಿ ಚರ್ಚಿಸಲು ಪ್ರಯತ್ನಿಸಲಾಗಿದೆ. ಒಂದೇ ರಾಷ್ಟ್ರವು ಜಾಗತಿಕವಾಗಿ ಶಕ್ತಿಯನ್ನು ಚಲಾಯಿಸುವ ಏಕ ಧ್ರುವೀಯ, ಎರಡೇ ಪ್ರಬಲ ರಾಷ್ಟ್ರಗಳು ಶಕ್ತಿಯನ್ನು ಚಲಾಯಿಸುವ ದ್ವಿ ಧ್ರುವೀಯ ಮತ್ತು ಅನೇಕ ರಾಷ್ಟ್ರಗಳು ಶಕ್ತಿಯನ್ನು ಚಲಾಯಿಸುವ ಬಹು ಧ್ರುವೀಯ ವ್ಯವಸ್ಥೆಗಳನ್ನು ಅಂತರ್‌ರಾಷ್ಟ್ರೀಯ ಚಿಂತಕರು ಗುರುತಿಸಿ ಅವುಗಳ ಪರಾಮರ್ಶೆಗೆ ಮುಂದಾದುದು ಮೇಲಿನ ವಿವರಣೆಯಿಂದ ಸ್ಪಷ್ಟವಾಗುತ್ತದೆ. ಆದರೆ, ಜಾಗತಿಕ ವ್ಯವಸ್ಥೆಯ ಈ ಧ್ರುವೀಕರಣದ ಸಿದ್ಧಾಂತವು ಪರಿಪೂರ್ಣವಾಗಿಲ್ಲವೆಂಬುದು ಗಮನಾರ್ಹ. ಉದಾ: ದ್ವಿ ಧ್ರುವೀಯ ವ್ಯವಸ್ಥೆಯ ಶೀತಲಸಮರದ ಕಾಲಾವಧಿಯಲ್ಲಿಯೇ ಬಹು ಧ್ರುವೀಯತೆಯ ಪ್ರಸ್ತಾಪ ಮತ್ತು ಸಮಕಾಲೀನ ಬಹು ಧ್ರುವೀಯತೆಯಲ್ಲಿ ಅಮೇರಿಕಾವು ಇಂದಿಗೂ ತನ್ನ ಪ್ರಭಾವವನ್ನು ಉಳಿಸಿಕೊಂಡಿದೆ ಎಂಬ ವಾದ.

## ಮಾದರಿ ಪ್ರಶ್ನೆಗಳು [Model Questions]:

[A.] ಎರಡು ಅಂಕದ ಪ್ರಶ್ನೆಗಳು:

1. ಧ್ರುವೀಯತೆ ಎಂದರೇನು?
2. ಚಿಂತಕರು ಜಾಗತಿಕ ವ್ಯವಸ್ಥೆಯನ್ನು ಎಷ್ಟು ಧ್ರುವೀಯ ವ್ಯವಸ್ಥೆಗಳಾಗಿ ವಿಂಗಡಿಸಿದ್ದಾರೆ? ಅವುಗಳಾವುವು?
3. ಏಕ ಧ್ರುವೀಯ ವ್ಯವಸ್ಥೆ ಎಂದರೇನು?
4. ಜಾಗತಿಕವಾಗಿ ಏಕ ಧ್ರುವೀಯ ವ್ಯವಸ್ಥೆಯ ಪ್ರಾರಂಭ ಮತ್ತು ಅಂತ್ಯವನ್ನು ತಿಳಿಸಿರಿ.
5. ದ್ವಿ ಧ್ರುವೀಯ ವ್ಯವಸ್ಥೆ ಎಂದರೇನು?
6. ದ್ವಿ ಧ್ರುವೀಯ ವ್ಯವಸ್ಥೆಗೆ ಕಾರಣವಾಗಿದ್ದ ರಾಷ್ಟ್ರಗಳನ್ನು ಹೆಸರಿಸಿರಿ.
7. ಜಾಗತಿಕವಾಗಿ ದ್ವಿ ಧ್ರುವೀಯ ವ್ಯವಸ್ಥೆ ಅಂತ್ಯಗೊಳ್ಳಲು ಕಾರಣವೇನು?
8. ಬಹು ಧ್ರುವೀಯ ವ್ಯವಸ್ಥೆ ಎಂದರೇನು?
9. ಬಹು ಧ್ರುವೀಯ ವ್ಯವಸ್ಥೆಯಲ್ಲಿನ ಪ್ರಭಾವಶಾಲಿ ರಾಷ್ಟ್ರಗಳನ್ನು ಹೆಸರಿಸಿರಿ.
10. ಜಾಗತಿಕ ವ್ಯವಸ್ಥೆ ಕುರಿತಾದ ವಿವಿಧ ಧ್ರುವೀಯ ವ್ಯವಸ್ಥೆಗಳು ಅಸ್ಪಷ್ಟವಾದವು. ಹೇಗೆ?

[B.]

1. ಏಕ ಧ್ರುವೀಯ ವ್ಯವಸ್ಥೆಯನ್ನು ಕುರಿತು ಟಿಪ್ಪಣಿ ಬರೆಯಿರಿ.
2. ದ್ವಿ ಧ್ರುವೀಯ ವ್ಯವಸ್ಥೆ ಕುರಿತು ಟಿಪ್ಪಣಿ ಬರೆಯಿರಿ?.
3. ಬಹು ಧ್ರುವೀಯ ವ್ಯವಸ್ಥೆ ಕುರಿತು ಟಿಪ್ಪಣಿ ಬರೆಯಿರಿ.

[C.] ಹತ್ತು ಅಂಕದ ಪ್ರಶ್ನೆಗಳು:

1. ಜಾಗತಿಕ ವ್ಯವಸ್ಥೆಯನ್ನು ಕುರಿತಂತೆ ಪ್ರತಿಪಾದಿಸಲ್ಪಟ್ಟ ಮೂರು ಧ್ರುವೀಯ ವ್ಯವಸ್ಥೆಗಳನ್ನು ಚರ್ಚಿಸಿರಿ.